ಭಾನುವಾರ, ಏಪ್ರಿಲ್ 21, 2024 | ₹ 7.00
www.prajavani.net
Prajavani.net prajavani Prajavani Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಕ್ಕರೆ

ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಪತ್ನಿ ಅಂಜಲಿ ರಾಂಚಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಕಿಯೊಂದಿಗೆ ಕಾಣಿಸಿಕೊಂಡಿದ್ದು ಹೀಗೆ

ಜಾಹೀರಾತು

ತಂಪಾದ ಇಳೆಯಿಂದ ಮಳೆಗಾಲದ ಅನುಭೂತಿ ● ಧಗೆಯಿಂದ ಕಂಗೆಟ್ಟಿದ್ದ ಜನ ನಿಟ್ಟುಸಿರು

ರಾಜ್ಯದ ಎಲ್ಲೆಡೆ ಉಲ್ಲಾಸ ಮೂಡಿಸಿದ ಮಳೆ

1. ಹುಬ್ಬಳ್ಳಿಯಲ್ಲಿ ಶನಿವಾರ ಸುರಿದ ಮಳೆಯಲ್ಲಿಯೇ ನೆನೆಯುತ್ತ ಕಾಲೇಜು ವಿದ್ಯಾರ್ಥಿಗಳು ಸಾಗಿದರು ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ 2. ಕಲಬುರಗಿಯಲ್ಲಿ ಶನಿವಾರ ಸುರಿದ ಮಳೆಯಿಂದ ಜಲಾವೃತವಾದ ರಸ್ತೆಯಲ್ಲಿ ಪೌರಕಾರ್ಮಿಕರೊಬ್ಬರು ಸೈಕಲ್‌ನಲ್ಲಿ ಸಾಗಿದ ದೃಶ್ಯ ಆರ್ಕಿಡ್ ಮಾಲ್ ಬಳಿ ಕಂಡು ಬಂತು —ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಭಾಗಗಳಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಧಾರಾಕಾರ ಮಳೆ ಸುರಿದಿದೆ. ಬಿಸಿಲ ಝಳಕ್ಕೆ ಬೆಂದಿದ್ದ ನೆಲವೂ ಹದವಾಗಿದೆ. ವಿಪರೀತ ಸೆಕೆಯಿಂದ ಬಸವಳಿದ ಜನರು ಕೊಂಚ ನಿರಾಳರಾಗಿದ್ದಾರೆ. ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ, ಮಲೆನಾಡು, ಕರಾವಳಿ ಹಾಗೂ ಮೈಸೂರು ಭಾಗದಲ್ಲೂ ಮಳೆರಾಯ ಅಬ್ಬರಿಸಿದ್ದಾನೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಸೇರಿದಂತೆ ವಿವಿಧೆಡೆ ಶನಿವಾರ ಭಾರಿ ಮಳೆ ಸುರಿಯಿತು. ಹಲವು ದಿನಗಳಿಂದ ಬಿಸಿಲ ಝಳದಿಂದ ಕಂಗೆಟ್ಟಿದ್ದ ಜನರಿಗೆ ಮಳೆರಾಯ ತಂಪೆರೆದಿದ್ದಾನೆ. ಕಲಬುರಗಿ, ಆಳಂದ, ಅಫಜಲಪುರ, ಜೇವರ್ಗಿ, ಯಡ್ರಾಮಿ ತಾಲ್ಲೂಕಿನ ಹಲವೆಡೆ ಅರ್ಧಗಂಟೆಯಿಂದ ಒಂದು ಗಂಟೆಯವರೆಗೆ ಮಳೆ ಸುರಿದಿದ್ದು, ರಸ್ತೆಗಳ ಮೇಲೆ ನೀರು ಹರಿಯಿತು. ಹೊಲಗಳಲ್ಲಿಯೂ ನೀರು ನಿಂತುಕೊಂಡಿದ್ದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಆಳಂದ ಪಟ್ಟಣ, ಪಡಸಾವಳಿ, ಖಜೂರಿ, ನಿಂಬರ್ಗಾ ಗ್ರಾಮಗಳಲ್ಲಿ ಉತ್ತಮ ಮಳೆ ಸುರಿಯಿತು. ಖಜೂರಿ ಬಳಿ ಭಾರಿ ಗಾಳಿಗೆ ಲಾರಿ ಪಲ್ಟಿಯಾಗಿ ರಸ್ತೆ ಮೇಲೆ ಬಿದ್ದಿತ್ತು. ಬಿರುಗಾಳಿಗೆ ಹಲವು ಮರಗಳು ಧರೆಗುರುಳಿವೆ.

ಆಳಂದ ತಾಲೂಕಿನ ನರೋಣಾ ಗ್ರಾಮದಲ್ಲಿ ಹೊಲದಿಂದ ಎತ್ತಿನ ಗಾಡಿಯಲ್ಲಿ ಮನೆಗೆ ಬರುತ್ತಿದ್ದ ಮಹೇಶ ತೆಗ್ಗಿನಮನಿ (12) ಎಂಬ ಬಾಲಕ ಸಿಡಿಲಿನ ಹೊಡೆತಕ್ಕೆ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಯಾದಗಿರಿ ನಗರ ಹಾಗೂ ವಡಗೇರಾದಲ್ಲಿ ಮಳೆಯಾಗಿದೆ. ರಾಯಚೂರು ಜಿಲ್ಲೆಯ ದೇವದುರ್ಗ, ಲಿಂಗಸುಗೂರು ತಾಲ್ಲೂಕಿನ ಗುರುಗುಂಟಾ, ಮಸ್ಕಿ ತಾಲ್ಲೂಕಿನ ಪಾಮನಕಲ್ಲೂರು ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ಬೀದರ್ ನಗರ ಸೇರಿ ಜಿಲ್ಲೆಯ ಹಲವೆಡೆ ಶುಕ್ರವಾರ ರಾತ್ರಿಯಿಡೀ ಗುಡುಗು, ಮಿಂಚು ಸಹಿತ ಉತ್ತಮ ಮಳೆಯಾಗಿದೆ. ಬೀದರ್ ತಾಲ್ಲೂಕಿನ ಜನವಾಡ, ಮರಕಲ್, ಅಲಿಯಂಬರ್, ಚಿಟ್ಟಾ, ಅಮಲಾಪುರ, ಗೋರನಳ್ಳಿ, ಗುನ್ನಳ್ಳಿ, ಶಹಾಪುರ, ಔರಾದ್ ತಾಲ್ಲೂಕಿನ ಚಿಂತಾಕಿ, ವಡಗಾಂವ್, ಭಾಲ್ಕಿ, ಹುಮನಾಬಾದ್, ಹುಲಸೂರ ತಾಲ್ಲೂಕಿನ ಕೆಲವೆಡೆ ಮಳೆಯಾಗಿದೆ.

ಕೊಪ್ಪಳ, ಕುಕನೂರು, ತಾವರಗೇರಾದಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಉತ್ತಮ ಮಳೆ ಸುರಿಯಿತು.

ಶಿವಮೊಗ್ಗ/ದಾವಣಗೆರೆ ವರದಿ: ಶಿವಮೊಗ್ಗ ಸೇರಿ ಜಿಲ್ಲೆಯ ವಿವಿಧೆಡೆ ಶನಿವಾರ ಬೆಳಗಿನ ಜಾವ ಬಿರುಸಿನ ಮಳೆ ಸುರಿಯಿತು.

ಶುಕ್ರವಾರ ಸಂಜೆ ಶುರುವಾಗಿ ರಾತ್ರಿ ಬಿಡುವು ನೀಡಿದ್ದರೂ ಬೆಳಗಿನ ಜಾವ ಮತ್ತೆ ವರುಣ ಆರ್ಭಟಿಸಿದ. ಗುಡುಗು–ಸಿಡಿಲಿನ ಆರ್ಭಟವೂ ಜೋರಾಗಿತ್ತು. ಸಾಗರ ತಾಲ್ಲೂಕಿನ ಆನಂದಪುರ, ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆ ಭಾಗದಲ್ಲಿ ಧಾರಾಕಾರ ಮಳೆ ಸುರಿದಿದೆ.

ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಗುಡುಗು, ಮಿಂಚು ಸಿಡಿಲಿನ ಆರ್ಭಟದೊಂದಿಗೆ ಒಂದು ತಾಸಿಗಿಂತಲೂ ಹೆಚ್ಚು ಕಾಲ ಮಳೆ ಸುರಿಯಿತು.

ಮೈಸೂರು ವರದಿ: ಮೈಸೂರು ಭಾಗದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಶನಿವಾರ ಹಾಗೂ ಹಾಸನ ಜಿಲ್ಲೆಯ ವಿವಿಧೆಡೆ, ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಶುಕ್ರವಾರ ರಾತ್ರಿ ಜೋರು ಮಳೆ ಸುರಿಯಿತು.

ಗುಂಡ್ಲುಪೇಟೆ ಪಟ್ಟಣದ ಸೇರಿದಂತೆ ಬಂಡೀಪುರ ಕಾಡಂಚಿನ ಗ್ರಾಮ ಹಾಗೂ ಹಿಮವದ್ ಗೋಪಾಲಸ್ವಾಮಿ ಬೆಟ್ಟ ವ್ಯಾಪ್ತಿಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆಯಾಯಿತು.

4-5 ತಿಂಗಳಿಂದ ಒಮ್ಮೆಯೂ ಮಳೆ ಬೀಳದೆ ಕೆರೆ-ಕಟ್ಟೆಗಳು ಬತ್ತಿದ್ದು, ಜನ– ಜಾನುವಾರುಗಳು ಕುಡಿಯುವ ನೀರಿಗೂ ತತ್ವಾರ ಪಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈಗ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಬಂಡೀಪುರ, ದೇವರಹಳ್ಳಿ, ಗೋಪಾಲಪುರ, ಗೋಪಾಲಸ್ವಾಮಿ ಬೆಟ್ಟ, ಬೇರಾಂಬಾಡಿ, ಚೆನ್ನಮಲ್ಲಿಪುರ ಭಾಗದಲ್ಲಿ ಮಳೆಯಾಗಿದ್ದು, ಕೃಷಿ ಚಟುವಟಿಕೆಗೆ ವರವಾಗಿದೆ.

ಹಾಸನ ಜಿಲ್ಲಾ ಕೇಂದ್ರ ಸೇರಿದಂತೆ ಹಲವೆಡೆ ಶುಕ್ರವಾರ ರಾತ್ರಿ ಅರ್ಧಗಂಟೆ ಗುಡುಗು ಸಿಡಿಲಿನೊಂದಿಗೆ ಉತ್ತಮ ಮಳೆಯಾಯಿತು. ಹಳೇಬೀಡು, ಸಕಲೇಶಪುರ, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆಯಲ್ಲಿ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ 3 ಮನೆಗಳಿಗೆ ಹಾನಿಯಾಗಿದ್ದು, ಬಹುತೇಕ ಕಡೆಗಳಲ್ಲಿ ವಿದ್ಯುತ್ ಕಂಬ, ಮರಗಳು ನೆಲಕ್ಕೆ ಉರುಳಿವೆ.

ಮಂಗಳೂರು ವರದಿ: ಮಂಗಳೂರು ನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ಧಾರಾಕಾರ ಮಳೆ ಸುರಿಯಿತು. ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲೂ ವರುಣನ ಸಿಂಚನವಾಗಿದೆ. ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿನ ಕಾಂತಾವರ ಗ್ರಾಮದಲ್ಲಿ ಮೂಡುಬಿದಿರೆ ತಾಲ್ಲೂಕು ಪಾಲಡ್ಕದ ನಿತಿನ್ ಪೂಜಾರಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಮೂಲ್ಕಿ, ಮೂಡುಬಿದಿರೆ ಹಾಗೂ ಮಂಗಳೂರು ನಗರದ ಕೆಲವು ಕಡೆ ಎರಡು ತಾಸಿಗೂ ಹೆಚ್ಚು ಕಾಲ ಸುರಿಯಿತು. ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳಲ್ಲಿ ಮೂಲ್ಕಿ ತಾಲ್ಲೂಕಿನ ಕಿಲ್ಪಾಡಿಯಲ್ಲಿ ಗರಿಷ್ಠ (11.3 ಸೆಂ.ಮೀ) ಮಳೆ ದಾಖಲಾಗಿದೆ. ಮಂಗಳೂರು ತಾಲ್ಲೂಕಿನ ಬಾಳದಲ್ಲಿ 11.12 ಸೆಂ.ಮೀ, ಬೆಳ್ತಂಗಡಿ ತಾಲ್ಲೂಕಿನ ಕಾಶಿಪಟ್ಣ ಹಾಗೂ ಮೂಲ್ಕಿ ತಾಲ್ಲೂಕಿನ ಕೆಮ್ರಾಲ್‌ನಲ್ಲಿ ತಲಾ 10.1 ಸೆಂ.ಮೀ ಮಳೆಯಾಗಿದೆ.

ಉಡುಪಿ ಜಿಲ್ಲೆಯ ಹಲವೆಡೆ ಗುಡುಗು ಸಿಡಿಲು ಸಹಿತ ಭಾರಿ ಮಳೆ ಸುರಿಯಿತು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾರಿ ಮಳೆಯಾಗಿದೆ. ಚಿಕ್ಕಮಗಳೂರು ನಗರ, ಆಲ್ದೂರು, ಬಾಳೆಹೊನ್ನೂರು, ಮೂಡಿಗೆರೆ, ಕಳಸ, ಕೊಪ್ಪ, ಶೃಂಗೇರಿ, ಎನ್.ಆರ್.ಪುರ, ತರೀಕೆರೆ, ಬೀರೂರು, ಕಡೂರು, ಅಜ್ಜಂಪುರದಲ್ಲಿ ಹೆಚ್ಚು ಮಳೆಯಾಗಿದೆ. ಕಳಸ ತಾಲ್ಲೂಕಿನ ಕೇಳಬೈಲ್ ಗ್ರಾಮದ ಬಾಬು ಅವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ. ತರೀಕೆರೆ ಸುತ್ತಮುತ್ತ ಅಡಿಕೆ ಮರ, ವಿದ್ಯುತ್ ಕಂಬಗಳು ಉರುಳಿಬಿದ್ದಿವೆ.

ಕಿಕ್ಕೇರಿಯಲ್ಲಿ ಅರ್ಧ ತಾಸಿಗೂ ಹೆಚ್ಚು ಮಳೆಯಾಗಿದೆ. ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಸೇರಿದಂತೆ ಹಲವೆಡೆ ತುಂತುರು ಮಳೆಯಾಗಿದೆ.

ಧಾರವಾಡ, ಬಳ್ಳಾರಿಯಲ್ಲಿ ಭಾರಿ ಮಳೆ

ಹುಬ್ಬಳ್ಳಿ: ಧಾರವಾಡ, ಗದಗ, ಬಳ್ಳಾರಿ, ಹಾವೇರಿ, ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಯಿತು.

ಧಾರವಾಡ ನಗರ ಸೇರಿ ಜಿಲ್ಲೆಯ ಹುಬ್ಬಳ್ಳಿ, ಕಲಘಟಗಿ, ಅಳ್ನಾವರ, ಅಣ್ಣಿಗೇರಿ ಭಾಗದಲ್ಲಿ ಗುಡುಗು, ಮಿಂಚು ಸಹಿತ ಮಳೆಯಾಯಿತು. ಬೆಳಗಾವಿ ನಗರ ಸೇರಿ ಜಿಲ್ಲೆಯ ಹಲವೆಡೆ ಉತ್ತಮ ಮಳೆ ಸುರಿಯಿತು. ಚನ್ನಮ್ಮನ ಕಿತ್ತೂರಿನಲ್ಲಿ ಉತ್ತಮ ಮಳೆಯಾದರೆ, ಬೈಲಹೊಂಗಲ, ಸವದತ್ತಿಯಲ್ಲಿ ತುಂತುರು ಮಳೆಯಾಯಿತು.

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಜೋರು ಮಳೆ ಸುರಿಯಿತು. ಗಾಳಿ–ಮಳೆ ಪರಿಣಾಮ ಕೆಲ ಕಡೆ ಹಾನಿಯಾಗಿದೆ. ಬ್ಯಾಲಹುಣ್ಸಿ, ಬನ್ನಿಮಟ್ಟಿ, ಹೊಸಹಳ್ಳಿ, ಮಾಗಳ, ಅಂಗೂರು, ನಂದಿಗಾವಿ ಇತರೆ ನದಿ ತೀರದ ಗ್ರಾಮಗಳಲ್ಲಿ ಕಟಾವಿಗೆ ಬಂದಿದ್ದ ಭತ್ತದ ಬೆಳೆ ನೆಲಕ್ಕೆ ಒರಗಿದ್ದು, 60-70 ಎಕರೆ ಭತ್ತದ ಬೆಳೆ ನಷ್ಟವಾಗಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಕೇಲೂರು ಗ್ರಾಮದಲ್ಲಿ ಸಿಡಿಲು ಬಡಿದು ಎರಡು ಜಾನುವಾರುಗಳು ಮೃತಪಟ್ಟಿವೆ. ಲಕ್ಷ್ಮೇಶ್ವರ, ರೋಣ, ಮುಳಗುಂದ, ಡಂಬಳ ಭಾಗದಲ್ಲೂ ಜೋರು ಮಳೆಯಾಗಿದೆ. ಕಂದಾಯ ಹಾಗೂ ಪಶು ಸಂಗೋಪನಾ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮುಂಡರಗಿ ತಾಲ್ಲೂಕಿನ ಕಲಕೇರಿ ಗ್ರಾಮದಲ್ಲಿ ಮೂರು ಕುರಿಗಳು ಸಿಡಿಲಿಗೆ ಬಲಿಯಾಗಿವೆ. ಶಿಂಗಟಾಲೂರು, ಶೀರನಹಳ್ಳಿ, ಗಂಗಾಪೂರ ಮೊದಲಾದ ಕಡೆ ಭತ್ತದ ಒಕ್ಕಲು ಮಾಡಿ, ಒಣಗಿಸಲಾಗಿತ್ತು. ಮಳೆಯಿಂದ ಭತ್ತವನ್ನು ರಕ್ಷಿಸಿಕೊಳ್ಳಲು ಕಷ್ಟವಾಯಿತು.

ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಉತ್ತಮ ಮಳೆಯಾಯಿತು. ಭಟ್ಕಳದಿಂದ ಮೂರು ನಾಟಿಕಲ್ ಮೈಲು ದೂರದಲ್ಲಿ ಮೀನುಗಾರಿಕೆಗೆ ತೆರಳಿದ್ದ 'ಮಹಾಗಣಪತಿ' ಹೆಸರಿನ ದೋಣಿಯೊಂದು ಗಾಳಿಯ ಅಬ್ಬರ ಮತ್ತು ಸಮುದ್ರದ ಅಲೆ ಹೊಡೆತಕ್ಕೆ ಸಿಕ್ಕಿ ಮುಳುಗಡೆಯಾಯಿತು. ದೋಣಿಯಲ್ಲಿದ್ದ ಐವರು ಮೀನುಗಾರರನ್ನು ರಕ್ಷಿಸಲಾಗಿದೆ. ಬೆಳಿಗ್ಗೆ 7ರಿಂದ ಮಧ್ಯಾಹ್ನ 2ರವರೆಗೆ ಮಹಾಬಲೇಶ್ವರನ ಗರ್ಭಗುಡಿಯಲ್ಲಿ ನೀರು ನುಗ್ಗಿ, ಆತ್ಮಲಿಂಗ ಜಲಾವೃತವಾಗಿತ್ತು.

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಕೆಲ ಗ್ರಾಮಗಳು ಸೇರಿದಂತೆ ವಿವಿಧೆಡೆ ಮಳೆಯಾಯಿತು. ಶಿಗ್ಗಾವಿ ತಾಲ್ಲೂಕಿನ ಬನ್ನಿಕೊಪ್ಪ ಗ್ರಾಮದಲ್ಲಿ ಶೆಡ್ಡಿನ ಚಾವಣಿಯ ತಗಡುಗಳು ಹಾರಿ ಬಿದ್ದವು. ಅಡಕೆ ಗಿಡಗಳು ನೆಲಕಚ್ಚಿದವು. ಮಡ್ಲಿ ಗ್ರಾಮದಲ್ಲಿ ಮನೆಗಳಿಗೆ ಹಾನಿಯಾದವು.

21 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದಾದ್ಯಂತ ಭಾನುವಾರವೂ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 21 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬಾಗಲಕೋಟೆ ಹಾಗೂ ಬೀದರ್ ಹೊರತುಪಡಿಸಿ ಎಲ್ಲ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ. ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ಹಾವೇರಿ, ಶಿವಮೊಗ್ಗ, ಉಡುಪಿ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಹಾಸನ, ತುಮಕೂರು, ಕೊಡಗು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲ ಸ್ಥಳದಲ್ಲಿ 30–40 ಕಿ.ಮೀ. ವೇಗದಲ್ಲಿ, ಉತ್ತರ ಒಳನಾಡಿನಲ್ಲಿ 40–50 ಕಿ.ಮೀ. ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಇದೇ 24ರವರೆಗೂ ರಾಜ್ಯದ ವಿವಿಧೆಡೆ ಮಳೆ ಮುಂದುವರಿಯುವ ಸಂಭವವಿದೆ ಎಂದು ಇಲಾಖೆ ಹೇಳಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಶನಿವಾರ ಬೆಳಿಗ್ಗೆ 8 ಗಂಟೆಗೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾವಳಿಯ ಹಲವು ಕಡೆ, ದಕ್ಷಿಣ ಒಳನಾಡಿನ ಕೆಲವು ಕಡೆ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಗರಿಷ್ಠ (13 ಸೆಂ.ಮೀ.) ಮಳೆಯಾಗಿದೆ. ಉತ್ತರ ಕನ್ನಡದ ಗೋಕರ್ಣ (10 ಸೆಂ.ಮೀ.), ಮಂಕಿ (8 ಸೆಂ.ಮೀ.), ಚಿಕ್ಕಮಗಳೂರಿನ ಕೊಪ್ಪ (7 ಸೆಂ.ಮೀ.), ಕಮ್ಮರಡಿಯಲ್ಲಿ (7 ಸೆಂ.ಮೀ.) ಹೆಚ್ಚಿನ ಪ್ರಮಾಣದಲ್ಲಿ ಮಳೆ ಸುರಿದಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ನೇಹಾ ಕೊಲೆ; ಮುಂದುವರಿದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಪ್ರಕರಣ ಖಂಡಿಸಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಶನಿವಾರವೂ ಪ್ರತಿಭಟನೆ ಮುಂದುವರೆಯಿತು. 'ಕೊಲೆ ಆರೋಪಿ ಫಯಾಜ್‌ಗೆ ಗಲ್ಲು ಶಿಕ್ಷೆ ವಿಧಿಸಬೇಕು' ಎಂದು ವಿವಿಧ ಸಂಘಟನೆಗಳ ಪ್ರಮುಖರು, ಕಾರ್ಯಕರ್ತರು ಆಗ್ರಹಿಸಿದರು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ ಎರಡನೇ ದಿನವಾದ ಶನಿವಾರ ಕೂಡ ಬಂದ್ ಮುಂದುವರೆಯಿತು. ಬಸ್ ಸಂಚಾರ ಯಥಾಸ್ಥಿತಿ ಇತ್ತು. ಆದರೆ, ವ್ಯಾಪಾರ–ವಹಿವಾಟು ನಡೆಯಲಿಲ್ಲ.

ಹುಬ್ಬಳ್ಳಿಯ ರಾಣಿ ಚನ್ನಮ್ಮ ವೃತ್ತದಲ್ಲಿ ನಡೆದ ಮಠಾಧೀಶರ ಪ್ರತಿಭಟನೆಯಲ್ಲಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, 'ಇಂತಹ ಪ್ರಕರಣಗಳು ನಡೆದಾಗ ತಕ್ಷಣ ತನಿಖೆ ಪೂರ್ಣಗೊಳಿಸಿ, ಅಪರಾಧಿಗೆ ಗಲ್ಲು ಶಿಕ್ಷೆ ವಿಧಿಸುವಂಥ ಕಾನೂನು ಜಾರಿಯಾಗಬೇಕು' ಎಂದರು.

ನಗರದ ವ್ಯಾಪಾರಸ್ಥರು, ಗಣ್ಯವ್ಯಕ್ತಿಗಳ ಒಕ್ಕೂಟ ಸದ್ಭಾವನಾ ಸಮಿತಿ, ಉತ್ತರ ಕರ್ನಾಟಕ ಆಟೊ ಚಾಲಕರ ಸಂಘ, ವೀರಾಪುರ ಓಣಿಯ ಶ್ರೀ ಜಗದ್ಗುರು ರೇಣುಕಾಚಾರ್ಯ ಫೌಂಡೇಷನ್, ಜಯಕರ್ನಾಟಕ ಸಂಘಟನೆ, ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನೇಹಾ ಅವರ ಮನೆಗೆ ಶಿರಹಟ್ಟಿ ಫಕೀರ ಸಿದ್ದರಾಮ ಸ್ವಾಮೀಜಿ, ಕೂಡಲ ಸಂಗಮದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಸಚಿವೆ ಲಕ್ಷ್ಮಿ ಹೆಬ್ಬಾಳಕರ್, ಬಿಜೆಪಿ ಮುಖಂಡರಾದ ಜಗದೀಶ ಶೆಟ್ಟರ್, ಶಂಕರಪಾಟೀಲ ಮುನೇನಕೊಪ್ಪ, ಸೀಮಾ ಮಸೂತಿ, ಚಕ್ರವರ್ತಿ ಸೂಲಿಬೆಲೆ ಭೇಟಿ ನೀಡಿದರು.

ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಶನಿವಾರ ಫಕೀರ ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಮಠಾಧೀಶರು ಫಲಕಗಳನ್ನು ಹಿಡಿದು ವಿದ್ಯಾರ್ಥಿನಿ ನೇಹಾ ಕೊಲೆಯನ್ನು ಖಂಡಿಸಿದರು —ಪ್ರಜಾವಾಣಿ ಚಿತ್ರ

ಗೃಹ ಸಚಿವರ ಮನೆಗೆ ಮುತ್ತಿಗೆಗೆ ಯತ್ನ

ಬೆಂಗಳೂರು: 'ನೇಹಾ ಹತ್ಯೆಯ ಆರೋಪಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡಬೇಕು. ನೊಂದಿರುವ ಪೋಷಕರಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿ ಶನಿವಾರ ಪ್ರತಿಭಟನೆ ನಡೆಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು, ಗೃಹಸಚಿವ ಜಿ.ಪರಮೇಶ್ವರ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಸದಾಶಿವನಗರದಲ್ಲಿರುವ ಗೃಹಸಚಿವರ ಮನೆ ಎದುರು ಬೆಳಿಗ್ಗೆ ಸೇರಿದ್ದ ಪ್ರತಿಭಟನಕಾರರು, 'ನೇಹಾ ಹತ್ಯೆ ಆಕಸ್ಮಿಕ ಎಂದಿರುವ ಗೃಹಸಚಿವರು ತಮ್ಮ ಹೇಳಿಕೆ ಹಿಂಪಡೆದು, ಕುಟುಂಬದವರ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು. 'ಹುಬ್ಬಳ್ಳಿ ಬಿವಿಬಿ ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿನಿ ನೇಹಾ ಹಿರೇಮಠ ಅವರ ಅಮಾನುಷ ಹತ್ಯೆ ನಡೆದಿದೆ. ಇದು ಆಕಸ್ಮಿಕ ಎಂದು ಹೇಳಿ, ಪೋಷಕರಿಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಪ್ರತಿಭಟನಕಾರರು ಹೇಳಿದರು. 'ಹತ್ಯೆ ಪ್ರಕರಣದ ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ತ್ವರಿತ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ, ಆರೋಪಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡಬೇಕು. ನೊಂದ ವಿದ್ಯಾರ್ಥಿನಿ ಕುಟುಂಬಕ್ಕೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನಕಾರರು ವಶಕ್ಕೆ: ಗೃಹ ಸಚಿವರ ಮನೆ ಎದುರು ಸೇರಿದ್ದ ಎಬಿವಿಪಿ ಕಾರ್ಯಕರ್ತರು, ಬ್ಯಾರಿಕೇಡ್‌ಗಳನ್ನು ತಳ್ಳಿ ಮನೆಯ ಗೇಟ್ ತೆರೆದು ಮುತ್ತಿಗೆ ಹಾಕಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು, ಪ್ರತಿಭಟನಕಾರರನ್ನು ವಶಕ್ಕೆ ಪಡೆದು ಸ್ಥಳದಿಂದ ಕರೆದೊಯ್ದರು.

ಇದೇ ಸಂದರ್ಭದಲ್ಲಿ ಪೊಲೀಸರು ಹಾಗೂ ಪ್ರತಿಭಟನಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ವಶಕ್ಕೆ ಪಡೆದಿದ್ದ ಕಾರ್ಯಕರ್ತರನ್ನು ಕೆಲ ಗಂಟೆಗಳ ಬಳಿಕ ಪೊಲೀಸರು ಬಿಟ್ಟು ಕಳುಹಿಸಿದ್ದಾರೆ.

'ಒಂದು ಕೋಮುವನ್ನು ಗುರಿ ಮಾಡಬೇಡಿ'

ಹುಬ್ಬಳ್ಳಿ: 'ನೇಹಾ ಕೊಲೆ ಪ್ರಕರಣದಲ್ಲಿ ಒಂದು ಕೋಮನ್ನು ಗುರಿಯಾಗಿಸಿಕೊಂಡು, ಹೆಸರು ಕೆಡಿಸುವ ಕೆಲಸ ನಡೆದಿದೆ. ಹೆಣ್ಣುಮಕ್ಕಳು ಪ್ರೀತಿ–ಪ್ರೇಮ ಎನ್ನದೆ, ತಂದೆ–ತಾಯಿಯ ಆಸೆ ಈಡೇರಿಸಬೇಕು' ಎಂದು ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಘಟಕದ ಕಾಂಗ್ರೆಸ್ ಅಧ್ಯಕ್ಷ ಅಲ್ತಾಫ್ ಹಳ್ಳೂರ ಹೇಳಿದರು.

ಮುಸ್ಲಿಂ ಸಮುದಾಯದ ಮುಖಂಡರ ನೇತೃತ್ವದಲ್ಲಿ ಶನಿವಾರ ನೇಹಾ ಮನೆಗೆ ಭೇಟಿ ನೀಡಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಂತಕ ಫಯಾಜ್ ಜೊತೆ ಸಮಾಜದ ಯಾರೂ ಇಲ್ಲ. ಸಮಾಜದ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗುವುದು. ಹಂತಕನಿಗೆ ವಿಧಿಸುವ ಶಿಕ್ಷೆ ಇತಿಹಾಸದಲ್ಲಿ ದಾಖಲಾಗಬೇಕು. ಇಂತಹ ಕೃತ್ಯ ಎಸಗಲು ಹೆದರುವಂತಾಗಬೇಕು' ಎಂದರು.

'ಲವ್ ಜಿಹಾದ್ ಅಲ್ಲ'

ಮೈಸೂರು: 'ನೇಹಾ ಕೊಲೆ ಪ್ರಕರಣ ಲವ್ ಜಿಹಾದ್ ಅಲ್ಲ. ಆ ಘಟನೆಯನ್ನು ತೀವ್ರವಾಗಿ ಖಂಡಿಸುತ್ತೇನೆ. ಆರೋಪಿಯನ್ನು ಕೂಡಲೇ ಬಂಧಿಸಿದ್ದೇವೆ. ಗಂಭೀರವಾಗಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಒಂದು ಸಮಾಜದ ಓಲೈಕೆ: ಎಚ್‌ಡಿಕೆ

ಮೈಸೂರು: 'ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಕೊಲೆ ಪ್ರಕರಣದಲ್ಲಿ ಮುಖ್ಯಮಂತ್ರಿ ಹಾಗೂ ಗೃಹಸಚಿವರು ಸಮರ್ಪಕ ಮಾಹಿತಿ ಪಡೆಯದೇ, ಒಂದು ಸಮಾಜದ ಓಲೈಕೆಗಾಗಿ ಏಕಾಏಕಿ ಹೇಳಿಕೆ ನೀಡಿದ್ದಾರೆ. ಈ ಸರ್ಕಾರ ಒಂದು ಸಮಾಜದ ರಕ್ಷಣೆ ಮಾಡಲಷ್ಟೇ ಇದೆಯೇ' ಎಂದು ಮಂಡ್ಯ ಮೈತ್ರಿ ಅಭ್ಯರ್ಥಿ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

'ಮತಬ್ಯಾಂಕ್‌ಗೆ ಒತ್ತು'

ನವದೆಹಲಿ: ವಿದ್ಯಾರ್ಥಿನಿ ಕೊಲೆ ಪ್ರಕರಣದಲ್ಲಿ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಜನರ ದಿಕ್ಕು ತಪ್ಪಿಸುತ್ತಿದೆ. ಮಹಿಳೆಯರ ರಕ್ಷಣೆಗಿಂತ ತನ್ನ ಮತ ಬ್ಯಾಂಕ್ ರಕ್ಷಣೆಗೆ ಆದ್ಯತೆ ನೀಡಿದೆ ಎಂದು ಬಿಜೆಪಿ ಆರೋಪಿಸಿದೆ.

ಜನತೆಯಲ್ಲಿ ಕ್ಷಮೆಯಾಚಿಸಿದ ಫಯಾಜ್ ತಂದೆ, ತಾಯಿ

'ಮಗನಿಗೆ ಕಠಿಣ ಶಿಕ್ಷೆಯಾಗಲಿ'

ಪ್ರಜಾವಾಣಿ ವಾರ್ತೆ

ಮುನವಳ್ಳಿ (ಬೆಳಗಾವಿ ಜಿಲ್ಲೆ)/ ಧಾರವಾಡ: 'ಮಗ ತಪ್ಪು ಮಾಡಿದ್ದಾನೆ. ಆ ಮಗಳನ್ನು ಮರಳಿ ತರಲಾಗದು ಎಂದು ಸಂಕಟವಾಗುತ್ತಿದೆ. ನಮ್ಮದೇ ಮಗಳಿಗೇ ಅನ್ಯಾಯ ಆಗಿದೆ ಎನ್ನುವಷ್ಟು ನೋವಾಗಿದೆ. ಯಾರ ಮಕ್ಕಳಿಗೂ ಇಂಥದ್ದು ಆಗಬಾರದು...'

ಹೀಗೆ ನೋವು ತೋಡಿಕೊಂಡವರು ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಆರೋಪಿ ಫಯಾಜ್ ತಂದೆ ಬಾಬಾಸಾಹೇಬ ಖೊಂಡಾನಾಯಕ್ ಮತ್ತು ತಾಯಿ ಮುಮ್ತಾಜ್ ಬೇಗಂ. ಇಬ್ಬರೂ ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿ, 'ಮಗನ ಪರವಾಗಿ ಕರ್ನಾಟಕದ ಸಮಸ್ತ ಜನರ ಕ್ಷಮೆಯಾಚಿಸುತ್ತೇವೆ' ಎಂದರು. ಇಬ್ಬರೂ ವೃತ್ತಿಯಲ್ಲಿ ಶಿಕ್ಷಕರು.

'ಯಾರೇ ತಪ್ಪು ಮಾಡಿದರೂ ತಕ್ಕ ಶಿಕ್ಷೆ ಆಗಲೇಬೇಕು. ನನ್ನ ಮಗನಿಂದ ನನ್ನೂರು ಮುನವಳ್ಳಿಗೆ ಕೆಟ್ಟ ಹೆಸರು ಬಂತು. ವೈಯಕ್ತಿಕ ಕಾರಣದಿಂದ ಕುಟುಂಬ ನನ್ನೊಂದಿಗೆ ಇಲ್ಲ. ಮಗ ಹಾಗೂ ಮಗಳು ತಾಯಿ ಜತೆಗೆ ಊರಲ್ಲಿದ್ದರೆ, ನಾನು ತೋಟದ ಮನೆಯಲ್ಲಿರುವೆ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿರುವೆ. ಇಂಥ ದುರ್ಘಟನೆ ನಿರೀಕ್ಷಿಸಿರಲಿಲ್ಲ' ಎಂದರು.

'ನೇಹಾ ಅವರ ತಂದೆ ವರ್ಷದ ಹಿಂದೆ ದೂರವಾಣಿ ಕರೆ ಮಾಡಿ, ತಮ್ಮ ಮಗಳಿಗೆ ಫಯಾಜ್ ಕಾಡಿಸುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು. ನೇಹಾ ಜತೆಗೆ ಮದುವೆ ಬೇಡ ಎಂದು ಬುದ್ಧಿವಾದ ಹೇಳಿದ್ದಕ್ಕೆ ಫಯಾಜ್ ನನ್ನಿಂದ ದೂರವಾದ. ಅವನು ಸೇನೆ ಸೇರಿ ದೇಶ ಸೇವೆ ಮಾಡಬೇಕು ಎಂಬುದು ನನ್ನ ಕನಸಾಗಿತ್ತು' ಎಂದರು.

ಧಾರವಾಡದಲ್ಲಿ ಮುಮ್ತಾಜ್ ಬೇಗಂ ಮಾತನಾಡಿ, 'ಫಯಾಜ್ ಮತ್ತು ನೇಹಾ ಇಬ್ಬರೂ ಬಹಳ ಪ್ರೀತಿಸುತ್ತಿದ್ದರು. ಫಯಾಜ್ ಬಾಡಿಬಿಲ್ಡರ್ ಆಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ 'ಬ್ಲ್ಯೂ' ಆದ ಮೇಲೆ ನೇಹಾ ಆತನ ಫೋನ್ ನಂಬರ್ ಪಡೆದು ಪರಸ್ಪರ ಸಂಪರ್ಕದಲ್ಲಿ ಇದ್ದರು. ನೇಹಾ ಪ್ರೀತಿಸುತ್ತಿರುವ ವಿಷಯ ತಿಳಿಸಿದಾಗ, ಆತನಿಗೆ ಅದೆಲ್ಲವೂ ಬೇಡ ಎಂದಿದ್ದೆ' ಎಂದರು.

'ನೇಹಾ ಪೋಷಕರಿಗೆ ಆಗಿರುವಷ್ಟು ದುಃಖ ನನಗೂ ಆಗಿದೆ. ನನ್ನ ಮಗ ಮಾಡಿದ್ದು ತಪ್ಪು. ನೇಹಾ ನನ್ನ ಮಗಳಿದ್ದಂತೆ, ನನ್ನ ಮಗಳು ಬೇರೆಯಲ್ಲ, ಆಕೆ ಬೇರೆಯಲ್ಲ. ಮಗ ಮಾಡಿದ ತಪ್ಪಿಗೆ ಈ ನೆಲದ ಕಾನೂನಿನಂತೆ ಶಿಕ್ಷೆ ಆಗಬೇಕು' ಎಂದರು.

'ನ್ಯಾಯ ಸಿಗದಿದ್ದರೆ ಆತ್ಮಹತ್ಯೆ'

ಹುಬ್ಬಳ್ಳಿ: 'ಮಗಳು ನೇಹಾ ಕೊಲೆ ಪ್ರಕರಣದ ತನಿಖೆಯನ್ನು ಆಡಳಿತ ಪಕ್ಷದ ನಾಯಕರೇ ಷಡ್ಯಂತ್ರ ನಡೆಸಿ ದಾರಿ ತಪ್ಪಿಸುತ್ತಿದ್ದಾರೆ. ನನ್ನ ಜೊತೆಗಿನ ಸ್ಥಳೀಯ ನಾಯಕರು ಮತ್ತು ರಾಜಕೀಯ ಗುರುಗಳೇ ಗೃಹಸಚಿವರಿಗೆ ಸುಳ್ಳು ಮಾಹಿತಿ ನೀಡಿದ್ದಾರೆ' ಎಂದು ಮೃತ ನೇಹಾ ತಂದೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಕಾಂಗ್ರೆಸ್ ಸದಸ್ಯ ನಿರಂಜನಯ್ಯ ಹಿರೇಮಠ ಆರೋಪಿಸಿದರು.

'ಮಗಳ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ನಾಲ್ವರ ಹೆಸರನ್ನು ಪೊಲೀಸ್ ಕಮಿಷನರ್‌ಗೆ ಹೇಳಿದ್ದೆ. ಆದರೆ, ಅವರನ್ನು ಇನ್ನೂ ಬಂಧಿಸಲಾಗಿಲ್ಲ. ನ್ಯಾಯ ಸಿಗದಿದ್ದರೆ ರಾಜ್ಯಪಾಲರು, ಮುಖ್ಯಮಂತ್ರಿ, ಗೃಹಸಚಿವರಿಗೆ ಪತ್ರ ಬರೆದು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ. ಲಕ್ಷ್ಮಿ ಹೆಬ್ಬಾಳಕರ ಹೊರತುಪಡಿಸಿದರೆ, ಇತರೆ ಕಾಂಗ್ರೆಸ್ ನಾಯಕರು ಸಾಂತ್ವನ ಹೇಳಿಲ್ಲ' ಎಂದು ತಿಳಿಸಿದರು.

'ಫಯಾಜ್ ಮತ್ತು ಮಗಳ ಹೆಸರಲ್ಲಿ ಇನ್‌ಸ್ಟಾಗ್ರಾಂ ಖಾತೆ ತೆರೆದು, ಮಗಳ ಫೋಟೊಗಳನ್ನು ಎಡಿಟ್ ಮಾಡಿ ಹರಿ ಬಿಡುತ್ತಿದ್ದಾರೆ. ಆರೋಪಿ ಜೈಲಿನಲ್ಲಿದ್ದಾಗ ಮೊಬೈಲ್ ಹೇಗೆ ಬಳಸಲು ಸಾಧ್ಯ? ನಕಲಿ ಖಾತೆ ಸೃಷ್ಟಿಸಿ ಮಗಳ ಮರ್ಯಾದೆ ತೆಗೆಯುತ್ತಿದ್ದಾರೆ. ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದೇನೆ' ಎಂದರು.

ನೇಹಾ ತಾಯಿ ಗೀತಾ ಹಿರೇಮಠ ಮಾತನಾಡಿ, 'ನೇಹಾ ಯಾರನ್ನೂ ಪ್ರೀತಿಸಿಲ್ಲ. ಅವಳು ಅಂತಹ ಹೊಲಸು ಕೆಲಸ ಮಾಡಿಲ್ಲ. ಫಯಾಜ್, ಮಗಳ ಸಹಪಾಠಿಯಾಗಿದ್ದ. ಪ್ರೀತಿಸು ಎಂದು ಹಿಂದೆ ಬಿದ್ದಿರುವ ವಿಷಯ ತಿಳಿಸಿದ್ದಳು' ಎಂದು ಹೇಳಿದರು.

ನೇಹಾ ಕೊಲೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ, ದೇಶದ್ರೋಹಿಗಳಿಗೆ, ಕೊಲೆಗಡುಕರಿಗೆ ಶಕ್ತಿ ತುಂಬುವಂತಿದೆ
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಹೆಣ್ಣು ಮಕ್ಕಳಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಯುವತಿಯರ ಕೊಲೆ, ಅವರ ಮೇಲೆ ಅತ್ಯಾಚಾರ, ಆಸಿಡ್ ದಾಳಿ ಹೆಚ್ಚಿವೆ
ಶರಣ್ ಪಂಪ್‌ವೆಲ್
ವಿಎಚ್‌ಪಿ ಪ್ರಾಂತ ಸಹ ಕಾರ್ಯದರ್ಶಿ

ನೇಹಾ ಹಿರೇಮಠ ಅವರನ್ನು ಕೊಲೆ ಮಾಡಿದ ಆರೋಪಿಯನ್ನು ಗಲ್ಲಿಗೇರಿಸಬೇಕು. ಈ ಹೇಯ ಪ್ರಕರಣದ ವಿಚಾರಣೆಗೆ ತ್ವರಿತ ನ್ಯಾಯಾಲಯ ಸ್ಥಾಪಿಸಬೇಕು
ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಶಿವರಾಜ್‌ಕುಮಾರ್, ರಿಷಬ್, ರಚಿತಾ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯ ಬಿವಿಬಿ ಕಾಲೇಜು ವಿದ್ಯಾರ್ಥಿನಿ ನೇಹಾ ಹಿರೇಮಠ ಕೊಲೆ ಘಟನೆಯನ್ನು ನಟರಾದ ಶಿವರಾಜ್‌ಕುಮಾರ್, ರಿಷಬ್ ಶೆಟ್ಟಿ, ಧ್ರುವ ಸರ್ಜಾ ಮತ್ತು ನಟಿ ರಚಿತಾ ರಾಮ್ ಖಂಡಿಸಿದ್ದಾರೆ.

'ಈ ರೀತಿಯ ಅಮಾನುಷ ಘಟನೆಗಳು ಮತ್ತೆಂದೂ ಮರುಕಳಿಸದಿರಲಿ. ಮಗಳನ್ನು ಕಳೆದುಕೊಂಡ ಆ ತಂದೆ, ತಾಯಿಯ ಆಕ್ರಂದನ ನೋಡಲಾಗದು. ನಮ್ಮ ಸರ್ಕಾರ ಆದಷ್ಟು ಬೇಗ ನೇಹಾ ಹಿರೇಮಠ್‌ಗೆ ನ್ಯಾಯ ದೊರಕುವಂತೆ ಮಾಡಲಿ' ಎಂದು ಶಿವರಾಜ್‌ಕುಮಾರ್ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ಸಹೋದರಿ ನೇಹಾ ಹಿರೇಮಠ್‌ರ ಹತ್ಯೆ ಅತ್ಯಂತ ಹೀನ ಕೃತ್ಯ. ಕ್ಯಾಂಪಸ್‌ನಲ್ಲಿನ ಹತ್ಯೆ ನಿಜಕ್ಕೂ ಆತಂಕ ಮೂಡಿಸುತ್ತದೆ. ಸರ್ಕಾರ ಶೀಘ್ರದಲ್ಲೇ ತ್ವರಿತಗತಿ ನ್ಯಾಯಾಲಯದಲ್ಲಿ ಈ ಕೇಸ್ ತೀರ್ಪು ಬರಲು ವರ್ಗಾಯಿಸಬೇಕು ಹಾಗೂ ಇದನ್ನು ಎಲ್ಲಾ ಆಯಮದಲ್ಲೂ ತನಿಖೆ ನಡೆಸಿ ಅಪರಾಧಿಗೆ ಅತ್ಯುಗ್ರ ಶಿಕ್ಷೆ ನೀಡುವಂತಾಗಬೇಕು' ಎಂದು ಧ್ರುವ ಸರ್ಜಾ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ರಾಜಕೀಯ ಆಯಾಮದಲ್ಲಿ ಈ ವಿಷಯವನ್ನು ತರಬೇಡಿ. ಆಗಿರೋದು ಅನ್ಯಾಯ. ಈಗ ನ್ಯಾಯ ಬೇಕಾಗಿದೆ ಅಷ್ಟೇ. ಈ ರೀತಿಯ ಕೃತ್ಯ ಮಾಡುವವರನ್ನು ಗಲ್ಲಿಗೇರಿಸುವ ಬದಲು ಅವರನ್ನು ಜನಸಾಮಾನ್ಯರ ಕೈಗೆ ಒಪ್ಪಿಸಿ' ಎಂದು ಇನ್‌ಸ್ಟಾಗ್ರಾಂನಲ್ಲಿ ರಚಿತಾ ಪೋಸ್ಟ್ ಮಾಡಿದ್ದಾರೆ.

ರಿಷಬ್ ಶೆಟ್ಟಿ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದು, 'ನೇಹಾ ಹಿರೇಮಠ ಅವರ ಕೊಲೆ ಘಟನೆ ಅಮಾನವೀಯವಾಗಿದೆ. ಇಂತಹ ಘಟನೆ ಮರುಕಳಿಸದಂತೆ ಕಾನೂನು ಕ್ರಮಗಳನ್ನು ತಪ್ಪಿತಸ್ಥರ ಮೇಲೆ ಕೈಗೊಳ್ಳಬೇಕೆಂದು ವಿನಂತಿಸುತ್ತಾ, ನೇಹಾ ಅವರ ಕುಟುಂಬಕ್ಕೆ ಈ ದುಃಖ ಭರಿಸುವ ಶಕ್ತಿ ದೇವರು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. #JusticeForNeha' ಎಂದು ಉಲ್ಲೇಖಿಸಿದ್ದಾರೆ.

ಮೊಪೆಡ್‌ನಲ್ಲಿ ಶವ ಹೊತ್ತು ಜಿಲ್ಲಾಧಿಕಾರಿ ಕಚೇರಿಗೆ ತಂದರು

ಪ್ರಜಾವಾಣಿ ವಾರ್ತೆ

ಮೈಸೂರು: 'ಮಗನ ಶವ ಸಂಸ್ಕಾರಕ್ಕೆ ಊರಿನ ಮುಖಂಡರು ಅವಕಾಶ ನೀಡಿಲ್ಲ' ಎಂದು ಆರೋಪಿಸಿ ಪೋಷಕರು 'ಟಿವಿಎಸ್ ಮೊಪೆಡ್' ಹಿಂಭಾಗ ತರಕಾರಿ ಮಾರುವ ಬುಟ್ಟಿಯಲ್ಲಿ ಮಗುವಿನ ಶವವಿರಿಸಿ ಶನಿವಾರ ಜಿಲ್ಲಾಧಿಕಾರಿ ಕಚೇರಿಗೆ ಬಂದು ನೆರವು ಕೋರಿದರು.

ನಂಜನಗೂಡು ತಾಲ್ಲೂಕಿನ ಕುರಿ ಹುಂಡಿ ಗ್ರಾಮದ ನಿವಾಸಿ, ತರಕಾರಿ ವ್ಯಾಪಾರಿ ಕುಳ್ಳನಾಯ್ಕ ಅವರ ಅಂಗವಿಕಲ ಪುತ್ರ ಮಹದೇಶ (15) ಅನಾರೋಗ್ಯದಿಂದ ಶನಿವಾರ ಮೃತಪಟ್ಟಿದ್ದ. ಊರಿನ ಸಂಪ್ರದಾಯದಂತೆ ಶವಸಂಸ್ಕಾರಕ್ಕೆ ಯಜಮಾನರಾದ ಪಾಪನಾಯ್ಕ ಅವರನ್ನು ಪೋಷಕರು ಆಹ್ವಾನಿಸದಿದ್ದರಿಂದ ಊರಿನವರು ಯಾರೂ ಬಂದಿರಲಿಲ್ಲ.

ಹೀಗಾಗಿ ಕುಳ್ಳನಾಯ್ಕ ಅವರು ತಮ್ಮ ಪತ್ನಿ ಹಾಗೂ ಇನ್ನೊಬ್ಬ ಮಗನನ್ನು ಮೊಪೆಡ್ ಮುಂಭಾಗದಲ್ಲಿ ಕೂರಿಸಿಕೊಂಡು, ಹಿಂಭಾಗದ ಬುಟ್ಟಿಯಲ್ಲಿ ಮಗನ ಶವವಿಟ್ಟುಕೊಂಡು ಜಿಲ್ಲಾಧಿಕಾರಿ ಕಚೇರಿಗೆ ಬಂದು ನ್ಯಾಯಕ್ಕಾಗಿ ಆಗ್ರಹಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಸಿ.ಶಿವರಾಜು ಸಮಸ್ಯೆ ಆಲಿಸಿದರು. ಊರಿನಲ್ಲಿ ಶವಸಂಸ್ಕಾರಕ್ಕೆ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನಂತರ, ಗ್ರಾಮದಲ್ಲಿ ಕಂದಾಯ ನಿರೀಕ್ಷಕ ಮಹೇಶ್ ಹಾಗೂ ಕೆರೆಹುಂಡಿ ಗ್ರಾಮ ಪಂಚಾಯಿತಿ ಪಿಡಿಒ, ಮುಖಂಡರ ಸಭೆ ನಡೆಸಿದರು. 'ಕುಳ್ಳನಾಯ್ಕ 20 ವರ್ಷದಿಂದ ಊರಿನ ಯಾವುದೇ ಸಮಾರಂಭಗಳಲ್ಲಿ ಭಾಗವಹಿಸಿಲ್ಲ. ಮೃತಪಟ್ಟಿರುವ ಬಗ್ಗೆಯೂ ನಮಗೆ ತಿಳಿಸಿಲ್ಲ' ಎಂದು ಮುಖಂಡರು ದೂರಿದರು. ಕೊನೆಯಲ್ಲಿ ಆತ ತಪ್ಪೊಪ್ಪಿಕೊಂಡ ಬಳಿಕ ಸಂಜೆ ಅಧಿಕಾರಿಗಳ ಸಮ್ಮುಖದಲ್ಲಿ ಶವಸಂಸ್ಕಾರ ನಡೆಸಲಾಯಿತು.

ಭಾನುವಾರ, ಏಪ್ರಿಲ್ 21, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 111 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಗ್ರಾಮಸ್ಥರೇ ಕಾಪಿಟ್ಟುಕೊಂಡ ಕಾಡಿದು...ಅಲ್ಲಿನ ಮರಗಳ ಜೊತೆಗೆ ಪ್ರತಿಯೊಬ್ಬರಿಗೂ ಭಾವನಾತ್ಮಕ ನಂಟಿದೆ

ಮಸ್ಕ್ ಭಾರತ ಭೇಟಿ ಮುಂದಕ್ಕೆ 14
ನೌಕಾಪಡೆಯಿಂದ ಬೃಹತ್ ಸಮರಾಭ್ಯಾಸ 7
ಕಾಂಗ್ರೆಸ್‌ನಿಂದ 'ಚೊಂಬು' ಪ್ರತಿಭಟನೆ 4
ದತ್ತಾಂಶ ಸೋರಿಕೆ: ಸಿಜೆಐ ಕಳವಳ 7

ಕೆಇಎ ಆಟ: ವಿದ್ಯಾರ್ಥಿಗಳ ಸಂಕಟ

ಪಠ್ಯಕ್ಕೆ ಹೊರತಾದ ಪ್ರಶ್ನೆಗಳು • ಪಿಯು ಪಠ್ಯ ಪರಿಷ್ಕರಣೆ ಮಾಹಿತಿಯೇ ಇಲ್ಲ • ಸಮನ್ವಯ ಸಭೆ ನಡೆದಿಲ್ಲ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದಿದ್ದ ಸಿಇಟಿಯಲ್ಲಿ ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಸೇರುವಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನಿರ್ಲಕ್ಷ್ಯ ಕಾರಣವಾಗಿರುವುದು ಅನಾವರಣಗೊಂಡಿದೆ.

ಏ.18 ಮತ್ತು 19ರಂದು ಜೀವ ವಿಜ್ಞಾನ, ಗಣಿತ, ಭೌತವಿಜ್ಞಾನ ಹಾಗೂ ರಸಾಯನ ವಿಜ್ಞಾನ ವಿಷಯಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲಾಗಿತ್ತು. ನಾಲ್ಕು ವಿಷಯಗಳಿಂದ ಒಟ್ಟು 59 ಪ್ರಶ್ನೆಗಳು 2022-24ನೇ ಸಾಲಿನ (ಪ್ರಥಮ ಹಾಗೂ ದ್ವಿತೀಯ ಪಿಯು) ಪಠ್ಯಕ್ರಮದ ಹೊರತಾಗಿದ್ದವು. ಪಠ್ಯಕ್ಕೆ ಹೊರತಾದ ಪ್ರಶ್ನೆಗಳಿಂದಾಗಿ ಹಲವು ವಿದ್ಯಾರ್ಥಿಗಳು ವಿಚಲಿತರಾಗಿದ್ದರು. ಕೆಲವರು ಅರ್ಥವಾಗದ ಪ್ರಶ್ನೆಗಳನ್ನು ಬಿಡಿಸಲು ಸಮಯ ವ್ಯರ್ಥಮಾಡಿಕೊಂಡು ಪರದಾಡಿದ್ದರು. ಒತ್ತಡಕ್ಕೂ ಒಳಗಾಗಿದ್ದರು.

15ನೇ ಪುಟ ನೋಡಿ

ಎಷ್ಟು ಮಕ್ಕಳ ಭವಿಷ್ಯಕ್ಕೆ ತೂಗುಗತ್ತಿ?

3.49 ಲಕ್ಷ ಸಿಇಟಿಗೆ ನೋಂದಣಿ ಮಾಡಿಕೊಂಡವರು

3.21 ಲಕ್ಷ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು

ವಿಷಯ	ಪಠ್ಯಕ್ಕೆ ಹೊರತಾದ ಪ್ರಶ್ನೆಗಳು
ಜೀವ ವಿಜ್ಞಾನ	13
ಗಣಿತ	16
ಭೌತ ವಿಜ್ಞಾನ	9
ರಸಾಯನ ವಿಜ್ಞಾನ	21

1.11 ಲಕ್ಷ ಲಭ್ಯವಿರುವ ಎಂಜಿನಿಯರಿಂಗ್ ಸೀಟುಗಳು
- 53,248 ಸರ್ಕಾರಿ ಕೋಟಾ
- 25,171 ಕಾಮೆಡ್–ಕೆ ಸೀಟುಗಳು
- 33,463 ಆಡಳಿತ ಮಂಡಳಿ ಕೋಟಾ

30 ಸಾವಿರ, ಎಂಜಿನಿಯರಿಂಗ್ ಹೊರತಾದ ಕೋರ್ಸ್‌ಗಳು

ಪರಿಹಾರವೇ ಕಗ್ಗಂಟು!

ಪಠ್ಯಕ್ಕೆ ಹೊರತಾದ ಪ್ರಶ್ನೆಗಳ ಕುರಿತು ವಿದ್ಯಾರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಿದ ನಂತರ ವಿಷಯ ತಜ್ಞರ ಸಮಿತಿ ರಚಿಸಲಾಗುತ್ತದೆ. ಅವರು ನೀಡುವ ವರದಿ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕೆಇಎ ಹೇಳಿದೆ. ಆದರೆ, ಅಷ್ಟೂ ಪ್ರಶ್ನೆಗಳಿಗೆ ಕೃಪಾಂಕ ನೀಡಬಹುದು. ಹಾಗೆ ನೀಡಿದರೆ ಪ್ರತಿಭಾವಂತರಿಗೆ ಅನ್ಯಾಯವಾಗುತ್ತದೆ. ಮರು ಪರೀಕ್ಷೆ ನಡೆಸಿದರೆ ವಿದ್ಯಾರ್ಥಿಗಳಿಗೆ ಮೊದಲಿನ ಉತ್ಸಾಹ ಕಷ್ಟ. ಪಿಯು ಅಂಕಗಳನ್ನಷ್ಟೇ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸಿದರೆ ಸಿಇಟಿ ಉದ್ದೇಶ, ಮಾಡಿದ ಖರ್ಚು ವ್ಯರ್ಥವಾಗುತ್ತದೆ. ಒಟ್ಟಿನಲ್ಲಿ ಪರಿಹಾರವೂ ಕಗ್ಗಂಟಾಗಲಿದೆ ಎನ್ನುವುದು ಉಪನ್ಯಾಸಕರ ಅನಿಸಿಕೆ.

ಸಿಇಟಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ ಏ.27ರ ಸಂಜೆ 5.30ರ ಒಳಗೆ ಸಲ್ಲಿಸಬಹುದು. ತಜ್ಞರ ಸಮಿತಿಯು ಪರಿಶೀಲಿಸಿ, ಸೂಕ್ತ ಪರಿಹಾರ ಒದಗಿಸಲಿದೆ. ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗಬಾರದು

ಎಸ್. ರಮ್ಯಾ
ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಮೂರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಮುಖ್ಯಮಂತ್ರಿ ಅಥವಾ ಸಚಿವರು ಅವರಿಗೆ ಆತ್ಮವಿಶ್ವಾಸ ತುಂಬುವ ಮಾತು ಆಡಿಲ್ಲ

ಅರುಣ್ ಶಹಾಪುರ
ವಿಧಾನ ಪರಿಷತ್ ಮಾಜಿ ಸದಸ್ಯ

'ಕಾಂಗ್ರೆಸ್ ನೀತಿಯಿಂದ ಬೀದಿಗಳಲ್ಲಿ ಸ್ಫೋಟ'

ರಾಜ್ಯದಲ್ಲಿ ಪ್ರಧಾನಿ ಬಿರುಸಿನ ಪ್ರಚಾರ • ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರದ ನೀತಿಗಳು ಅತ್ಯಂತ ಅಪಾಯಕಾರಿಯಾಗಿವೆ. ಇದರಿಂದಾಗಿ ಇಲ್ಲಿನ ಬೀದಿಗಳಲ್ಲಿ ಬಾಂಬ್ ಸ್ಫೋಟವಾಗುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಲೋಕಸಭಾ ಚುನಾವಣಾ ಪ್ರಚಾರಕ್ಕಾಗಿ ಎರಡನೇ ಬಾರಿ ರಾಜ್ಯ ಪ್ರವಾಸ ಕೈಗೊಂಡಿದ್ದ ಅವರು, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರಿನಲ್ಲಿ ಶನಿವಾರ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು. ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್‌ನ ಕೇಂದ್ರ ನಾಯಕರನ್ನು ಗುರಿಯಾಗಿಸಿ ಟೀಕಾಪ್ರಹಾರ ನಡೆಸಿದರು. ತಮ್ಮನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್ ಮತ್ತು 'ಇಂಡಿ' ಮೈತ್ರಿಕೂಟದ ನಾಯಕರ ಜತೆ ವಿದೇಶಿ ಶಕ್ತಿಗಳು ಸೇರಿಕೊಂಡು ಸಂಚು ನಡೆಸುತ್ತಿವೆ ಎಂದು ದೂಷಿಸಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ವಿಜಯ ಸಂಕಲ್ಪ ಸಮಾವೇಶದಲ್ಲಿ, ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೆಲವು ಪ್ರಕರಣಗಳನ್ನು ತಳಕು ಹಾಕಿ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ನೇರ ಆರೋಪ ಮಾಡಿದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವು ಯಾವ ವಿಚಾರ ಮತ್ತು ಮಾನಸಿಕತೆಯನ್ನು ಪ್ರೋತ್ಸಾಹಿಸುತ್ತಿದೆಯೋ ಅವು ಅತ್ಯಂತ ಅಪಾಯಕಾರಿಯಾಗಿವೆ. ನಮ್ಮ ಹೆಣ್ಣು ಮಕ್ಕಳ ಮೇಲೆ ಹಲ್ಲೆಗಳಾಗುತ್ತಿವೆ. ಮಾರುಕಟ್ಟೆಗಳಲ್ಲಿ ಬಾಂಬ್ ಇಡಲಾಗುತ್ತಿದೆ. ಭಜನೆ ಮಾಡುವವರ ಮೇಲೆ ಹಲ್ಲೆಗಳಾಗುತ್ತಿವೆ. ಭಜನೆ, ಕೀರ್ತನೆ ಕೇಳುವವರ ಮೇಲೂ ದಾಳಿಗಳಾಗುತ್ತಿವೆ. ಈ ಎಲ್ಲದಕ್ಕೂ ಕಾಂಗ್ರೆಸ್ ಸರ್ಕಾರದ ಧೋರಣೆಗಳೇ ಕಾರಣ' ಎಂದರು.

'ಕರ್ನಾಟಕದ ಕಾಂಗ್ರೆಸ್ ಸರ್ಕಾರವು ಯಾವ ರೀತಿಯ ಮಾನಸಿಕತೆಯನ್ನು ಪ್ರೋತ್ಸಾಹಿಸುತ್ತಿದೆ ಎಂಬುದನ್ನು ಗಮನಿಸಬೇಕಿದೆ. ಇವು ಸಾಮಾನ್ಯ ಘಟನೆಗಳಲ್ಲ. ಬೆಂಗಳೂರು ಮತ್ತು ಕರ್ನಾಟಕದ ಸಹೋದರರು ಕಾಂಗ್ರೆಸ್ ಬಗ್ಗೆ ಬಹಳ ಎಚ್ಚರದಿಂದ ಇರಬೇಕು' ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ಮತ್ತು 'ಇಂಡಿ' ಮೈತ್ರಿಕೂಟ ಯುವಜನರು, ಬಡವರು, ಮಧ್ಯಮವರ್ಗ, ರೈತರ ವಿರೋಧಿ ಎಂದು ಪ್ರಧಾನಿ ಟೀಕಿಸಿದರು.

ಲೋಕಸಭಾ ಚುನಾವಣೆ ಅಂಗವಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಬಿಜೆಪಿಯ ವಿಜಯ ಸಂಕಲ್ಪ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು – ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

'ಬಿಜೆಪಿ ರೈತ ವಿರೋಧಿ'

ಬೆಂಗಳೂರು: 'ರೈತ ವಿರೋಧಿ ಧೋರಣೆ ಇಟ್ಟುಕೊಂಡ ನೀವು ಚುನಾವಣೆ ಸಮಯದಲ್ಲಿ ಮಾತ್ರ ಹಾಜರಾಗಿ ರೈತರ ಪರ ಪ್ರೀತಿ, ಕಾಳಜಿಯ ಮಳೆ ಸುರಿಸಿದರೆ ರಾಜ್ಯದ ರೈತರು ನಿಮ್ಮನ್ನು ನಂಬುತ್ತಾರೆ ಎಂದುಕೊಂಡಿದ್ದೀರಾ' ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

'ನಿಮ್ಮ ಬಿಜೆಪಿ ಹುಟ್ಟಿನಿಂದಲೇ ರೈತ ವಿರೋಧಿ. ಬಂಡವಾಳಿಗರು, ಉದ್ಯಮಿಗಳು ಮತ್ತು ವರ್ತಕರ ಪಕ್ಷ. ನೀವು ಪ್ರಧಾನಿಯಾದ 10 ವರ್ಷಗಳಲ್ಲಿ ರಾಜ್ಯದ ರೈತರಿಗೆ ನೀಡಿರುವ ಕೊಡುಗೆ ಏನು? ಕಾವೇರಿ-ಕೃಷ್ಣಾ ನದಿನೀರು ಹಂಚಿಕೆಯಲ್ಲಿ ದ್ರೋಹ, ಮಹದಾಯಿ-ಮೇಕೆದಾಟು ಯೋಜನೆಗಳಲ್ಲಿ ಮೋಸ, ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ನೀಡುವ ಭರವಸೆ ನೀಡಿ ವಂಚನೆ ಇದೇನಾ ಕಿಸಾನ್ ಸಮ್ಮಾನ್' ಎಂದಿದ್ದಾರೆ.

ಒಳನೋಟ

6

ಬೂದಿ ಹಾರುತಿದೆ ಜೀವ ಹಿಂಡುತಿದೆ

ಕೊಪ್ಪಳ: ಕಪ್ಪು ದೂಳಿನ ಹೊಡೆತಕ್ಕೆ ಸಿಲುಕಿ ಕೊಪ್ಪಳ ತಾಲ್ಲೂಕಿನ ಚಿಕ್ಕಬಗನಾಳ, ಕಾಸನಕಂಡಿ, ಹಾಲವರ್ತಿ, ಲಾಚನಕೆರೆ, ಕರ್ಕಿಹಳ್ಳಿ, ಹ್ಯಾಟಿ ಹಾಗೂ ಮುಂಡರಗಿ ಗ್ರಾಮಗಳು ನಲುಗಿ ಹೋಗಿವೆ.

ಕೆಎಎಸ್ ಪೂರ್ವಭಾವಿ ಪರೀಕ್ಷೆ ಜುಲೈ 27ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಎಸ್ ಸೇರಿದಂತೆ ಗೆಜೆಟೆಡ್ ಪ್ರೊಬೇಷನರಿಯ 384 ಹುದ್ದೆಗಳ ಭರ್ತಿಗೆ ಪೂರ್ವಭಾವಿ ಪರೀಕ್ಷೆಯನ್ನು ಜುಲೈ 7ರ ಬದಲು ಜುಲೈ 27ಕ್ಕೆ ನಡೆಸಲು ಕರ್ನಾಟಕ ಲೋಕಸೇವಾ ಆಯೋಗ ನಿರ್ಧರಿಸಿದೆ.

ಪೂರ್ವಭಾವಿ ಪರೀಕ್ಷೆಯನ್ನು ಮೇ 5ರಂದು ನಡೆಸಲು ಮೊದಲು ತೀರ್ಮಾನಿಸಲಾಗಿತ್ತು. ಲೋಕಸಭೆ ಚುನಾವಣೆ ಘೋಷಣೆಯಾದ ಕಾರಣ ನಂತರ ಜುಲೈ 7ಕ್ಕೆ ಮುಂದೂಡಲಾಗಿತ್ತು. ಆದರೆ, ಜುಲೈ 7ರಂದು ಕೇಂದ್ರ ಲೋಕಸೇವಾ ಆಯೋಗದ ಇಪಿಎಫ್‌ಒ ಪರೀಕ್ಷೆ ನಿಗದಿಯಾಗಿರುವುದರಿಂದ ಗೆಜೆಟೆಡ್ ಪ್ರೊಬೇಷನರಿಯ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡುವಂತೆ ಕೆಪಿಎಸ್‌ಸಿಗೆ ಹಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದರು.

'ಅಭ್ಯರ್ಥಿಗಳ ಮನವಿಯನ್ನು ಪರಿಗಣಿಸಿ ಪರೀಕ್ಷೆ ಮುಂದೂಡಲಾಗಿದೆ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ರಾಕೇಶ್ ಕುಮಾರ್ ತಿಳಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಾನಸಿಕ ಸಮಸ್ಯೆ, ಒತ್ತಡ ನಿವಾರಣೆ: ಉಚಿತ ಸಲಹೆ

ಬೆಂಗಳೂರು: ಮಾನಸಿಕ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರು ಉಚಿತವಾಗಿ 'ಟೆಲಿ ಮನಸ್' ಸಹಾಯವಾಣಿ ಮೂಲಕ ಸಲಹೆ ಪಡೆಯಬಹುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಏಪ್ರಿಲ್ ಅನ್ನು ಒತ್ತಡ ನಿವಾರಣೆ ಜಾಗೃತಿ ತಿಂಗಳಾಗಿ ಆಚರಿಸಲಾಗುತ್ತಿದೆ. ಯಾವುದೇ ಸಮಯ, ಸಂದರ್ಭದಲ್ಲಿ ವ್ಯಕ್ತಿಯು ಒತ್ತಡಕ್ಕೆ ಒಳಗಾಗಬಹುದು. ಒತ್ತಡವನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಬಗ್ಗೆ ಜಾಗೃತಿ ಮೂಡಬೇಕಿದೆ. 'ಟೆಲಿ ಮನಸ್' ಮೂಲಕ 20 ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ' ಎಂದು ಇಲಾಖೆ ಹೇಳಿದೆ.

'ವ್ಯಥೆ, ಕೌಟುಂಬಿಕ ಸಮಸ್ಯೆ, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆತ್ಮಹತ್ಯೆಯ ಚಿಂತನೆ, ಮಾದಕ ವಸ್ತುಗಳ ಸೇವನೆಯ ವ್ಯಸನ, ಜ್ಞಾಪಕ ಶಕ್ತಿ ಸಮಸ್ಯೆ, ಆರ್ಥಿಕ ಒತ್ತಡ ಸೇರಿ ಇತರೆ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರೂ ಶುಲ್ಕರಹಿತ ದೂರವಾಣಿ ಸಂಖ್ಯೆಗೆ ಕರೆ ಮಾಡಿ ಸಲಹೆ ಪಡೆಯಬಹುದು' ಎಂದು ತಿಳಿಸಿದೆ. ಟೆಲಿ ಮನಸ್ ಸಹಾಯವಾಣಿ ಸಂಖ್ಯೆ: 14416.

ಹಸಿ ಕರಗ ಇಂದು ರಾತ್ರಿ

ಬೆಂಗಳೂರು: ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ 'ಬೆಂಗಳೂರು ಕರಗ' ಶಕ್ತ್ಯುತ್ಸವದ ಸಿದ್ಧತೆ ಸಡಗರದಿಂದ ನಡೆಯುತ್ತಿದ್ದು, ಏಪ್ರಿಲ್ 21ರ ಭಾನುವಾರ ರಾತ್ರಿ 3 ಗಂಟೆಗೆ ಹಸಿ ಕರಗ ಉತ್ಸವ ನಡೆಯಲಿದೆ.

ಸಂಪಂಗಿ ಕೆರೆ ಅಂಗಳದಲ್ಲಿರುವ ಶಕ್ತಿ ಪೀಠದಲ್ಲಿ ಹಸಿ ಕರಗ ಪೂಜೆ ನಡೆಯಲಿದೆ. ಅಲ್ಲಿಂದ ಮೆರವಣಿಗೆ ಆರಂಭವಾಗಿ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸಾಗಲಿದೆ. ದ್ರೌಪದಿ ಕರಗ ಶಕ್ತ್ಯೋತ್ಸವ (ಹೂವಿನ ಕರಗ) ಹಾಗೂ ಧರ್ಮರಾಯಸ್ವಾಮಿ ರಥೋತ್ಸವ ಏಪ್ರಿಲ್ 23ರ ರಾತ್ರಿ ನಡೆಯಲಿದೆ ಎಂದು ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಸತೀಶ್ ತಿಳಿಸಿದರು.

ಇಸ್ಕಾನ್: ಇಂದಿನಿಂದ ಮೇ 3ರವರೆಗೆ ಬ್ರಹ್ಮೋತ್ಸವ

ಬೆಂಗಳೂರು: ರಜತ ಮಹೋತ್ಸವ ಸಂಭ್ರಮದಲ್ಲಿರುವ, ರಾಜಾಜಿನಗರದಲ್ಲಿರುವ ಇಸ್ಕಾನ್ ರಾಧಾ–ಕೃಷ್ಣ ದೇಗುಲದಲ್ಲಿ ಇದೇ 21ರಿಂದ ಮೇ 3ರವರೆಗೆ ಬ್ರಹ್ಮೋತ್ಸವ ನಡೆಯಲಿದೆ.

ಬ್ರಹ್ಮೋತ್ಸವದಲ್ಲಿ ಪ್ರತಿನಿತ್ಯ ಸಂಜೆ 5.30ರಿಂದ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ವಿಶಿಷ್ಟ ಆಚರಣೆಯನ್ನು 12 ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ಪ್ರತಿನಿತ್ಯ ರಾಧಾ–ಕೃಷ್ಣರಿಗೆ ವಿವಿಧ ಬಗೆಯ ಅಲಂಕಾರ ಮಾಡಲಾಗುತ್ತದೆ ಎಂದು ಇಸ್ಕಾನ್ ಬೆಂಗಳೂರಿನ ಅಧ್ಯಕ್ಷ ಮಧು ಪಂಡಿತ್ ದಾಸ ತಿಳಿಸಿದ್ದಾರೆ.

'ಗರುಡ ಲಾಂಛನದ ಧ್ವಜಾರೋಹಣದೊಂದಿಗೆ ಭಾನುವಾರ ಉತ್ಸವ ಪ್ರಾರಂಭವಾಗಲಿದೆ. 13 ದಿನಗಳು ಮಹಾ ಕುಂಭಾಭಿಷೇಕ ಸೇರಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆ' ಎಂದು ಹೇಳಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

"WANTED PREP & Primary Teachers for a School near K.R.Puram & Whitefield. Call or WhatsApp Resume: 70222 55677"

WANTED TEACHERS, Nursery, Primary and High-school classes for including all the subjects Computer. 'SRI VIDYA KENDRA' Peenya 1st stage Bengaluru-58 Phone: 9900708182, 28398833, 41179155

Amruthaya CENTRAL SCHOOL

The upcoming School near **Bagaluru Main Road, Bengaluru North** is looking for Teaching & Non-Teaching Staff to execute the most scientifically and technologically driven academic system.

I. PRE-SCHOOL TEACHERS
Minimum 5 years of experience in preschool teaching. *Trained Montessorians are preferred.*

II. PRIMARY TEACHERS
English, Kannada, Hindi, Science/EVS, Mathematics, Social Studies. Graduation+B.Ed with a Minimum 5-Years of experience in reputed CBSE schools are preferred

III. PRINCIPAL
A Post-Graduate + B.Ed with a minimum of 3 years of experience as Principal/Vice-Principal in reputed CBSE Schools

IV. COUNSELLOR
A Graduate in Psychology or Diploma in Child Psychology with a minimum 3-Years of experience in school/children counselling

V. EXTRA-CURRICULAR TEACHING STAFF
PET -B.P.Ed with minimum 5-Years of experience MUSIC INSTRUCTOR – Music Graduate with exceptional vocal skills ART & CRAFT – Fine Arts Graduate with creative drawing skills

VI. STAFF NURSE
B.Sc. Nursing with a minimum 5-Years of experience

Send your resumes to amruthaya.central@gmail.com (or) Call: 8147112665 / 7899532665

E.C.I.I. REQUIRES Qualified, Experienced English TEACHERS for Primary, Middle School. Email Bio Data immediately: eciibangalore2003@gmail.com

Domestic Helpers / Housekeeping

NEED HOUSE maid for cooking, salary will provided upto 30000 per month, send details to whatsup 6362402890

Multiple Vacancy

WANTED OFFICE Executive With Computer Knowledge Male/ Female & Office Boy, Lady Cook, Family Driver. Accommodation Provided at 7th Sector HSR Layout. 9035394144

BHARATH EDUCATION SOCIETY ®
B.E.S. DEGREE COLLEGE
IV Block, Jayanagar, Bengaluru - 560011
Recognised by UGC. Affiliated to Bengaluru City University.
Reaccredited B++ by NAAC.
080 - 2663 7295 / 94488 48416
Email: besddcol@yahoo.co.in
Website: www.besinstitutions.edu.in
www.besdegreecollege.in

Sri S.T. Somashekhar, Hon. President, Bharath Education Society, MLA, Yashwantpur Constituency, Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES



Sri B.L. Lakkegowda, Founder, B.E.S Institutions

PROGRAMMES OFFERED FOR : 2024-25
B.Com | B.B.A. | B.C.A.
B.A. HEP | HES | HEK

Languages Offered: English, Kannada, Hindi & Sanskrit
As per Bengaluru City University Syllabus

B.E.S. EVENING DEGREE COLLEGE
080-26638415 / 94800 69705 E-mail: besedceve@gmail.com
Reaccredited B by NAAC.
PROGRAMMES OFFERED FOR : 2024-25
B.Com | B.A. HEP | HES | HEK

Sri. Nirmal Kumar K.R., President, Bharath Education Society | Prof N.S. Vijaya, Vice President, Bharath Education Society | Sri M. Krishna Das, Secretary, Bharath Education Society | Prof N. Ashok Kumar, Principal, BES Degree College | Dr. K.S. Gopalakrishna, Principal, BES Evening Degree College

HOSTEL FACILITY AVAILABLE FOR GIRLS

BES-24512

NAAC Accredited College
COMMUNITY CENTRE ®
COMMUNITY INSTITUTE OF COMMERCE AND MANAGEMENT STUDIES
Approved by AICTE, New Delhi, Affiliated to Bengaluru City University
Recognized by Government of Karnataka
B+ NAAC

Hearty Congratulations

Ms. RADHIKA

7th RANK Secured 94.55% [4917/5200] in BCA of 2020-2023 Batch, Bengaluru City University
BCU provisional rank list

Shri K M Nagaraj, Chairman | Shri Chikkaiah, Secretary | Dr. Dharmendra Kumar T P, Principal
MANAGEMENT & STAFF MEMBERS

NARGUND GROUP OF INSTITUTIONS

ADMISSION OPEN
+91 8026720604 | +91 9886201746
+91 7019425622 | +91 9448270604
office@nargund.edu.in
www.nargund.edu.in
2nd main, Dattatreyanagar, BSK 3rd stage, Bangalore-85

BANGALORE CAMPUS
Nargund College of Pharmacy — B. Pharm | D. Pharm | Pharm. D, M. Pharm | Ph. D
Nargund College of Physiotherapy — Bachelor of Physiotherapy
Nargund Independent PU College — PCMB | HEBA

KOPPAL CAMPUS
Dr. Gurachar Nargund College of Pharmacy — B. PHARM | D. PHARM
Bheemajja PU College — PCMB | HEBA

TEACHERS WANTED
Gurukula International Residential School
CBSE - Doddaballapur
KG Teachers with NTT
TGT - English, Maths IT, Hindi, PE
*Excellent English Language skills needed.
WALK-IN INTERVIEW : on 29-04-2024 Monday
email resume to: principalgurukuladbpur@gmail.com
Phone : 7760485151 9606008625, 7760455151

CRESCENT HIGH SCHOOL#28, Sultan Road, Banagalore-02 Contact: 9071120120 7019929814 Qualified Teachers are Required to teach in Pre-Primary, Primary Middle & High School (All Subjects Including Art & Craft, Computer & PET (Male & Female teachers).and PUC (Commerce-HEBA) Candidates with experience and fluency in English may apply to Chairman, Enclosing Bio-data,& photostat copies of the testimonials within 10 days by Email: mmacrescent@gmail.com

MASTERCRAFT ENGINEERS PVT LTD
We need the following professionals to meet our growing needs of our Injection mould making and Molding business units.
ASSISTANT MANAGER/ FINANCE & ADMIN:
Candidate with 5 Years experience in TDS/GST/ESI/PF/PTAX returns will be preferred.
ACCOUNTS ASSISTANT :
Candidate with 1-2 Yrs Experience in accounts department.
MARKETING/BUSINESS DEVELOPMENT/ SALES-
Asst Manager- 3-5 Yrs Experience
MARKETING/ BUSINESS DEVELOPMENT/SALES- Executives
- Fresh Graduates/ Diploma/ BE degree holders
- 1-2 Yrs of marketing & sales experience

Apply in details with passport size photograph, super scribing the envelop for the post applied for:
DGM Finance & Admin
MASTERCRAFT ENGINEERS PVT LTD
Plot No.126 & 127, 4th phase, Bommasandra Industrial Area, BANGALORE -560099

Award of Ph.D

SRI M.N. GRURUDATH, Asst.Professor, SJR College for Women

Has been awarded Ph.D. Degree from University of Mysore in Management Science for the thesis on "Factors Influencing Consumer Adoption of Electric Vehicles - An Empirical study in Bengaluru city". Under the guidance of Dr. N.Meena Rani, Xavier Institute of Management and Entrepreneurship, Bengaluru.

neev MATTRESS Brand Stores: Basavangudi : Next to KFC, Vani Vilas Road Rajajinagar: Off Dr Rajkumar Road, Near IOC Petrol Station
Call to Book: 7338021446 | 9686681034 | www.neevmattress.com

WANTED QUALIFIED LADY TEACHERS for Nursery, Lower Primary and High School (to teach English, Science, Maths and Hindi) Lady DTP Operator who can handle Accounts. Contact:- Max Muller English High School, No. 173/1, 3rd Main, H.V.R.Layout, Magadi Main Road, Bangalore-79. Ph: 23284559, 23285559. info@maxmullerhighschool.com

ST.CHARLES HIGH SCHOOL#1086 1st Block,3rd Stage Adarsha Layout, Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium Teachers for Nursery, Primary,and High School to teach all the Subjects including Computer,CP.Ed and Drawing. Qualification required: NTT,TCH, D.Ed,B.Sc B.Ed,BA B.Ed.

HOLY ANGEL'S High School Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A/M.Sc.,M.Ed, N.T.T, CP.Ed. Only English medium candidates need to apply.

REQUIRED EXPERIENCED Female Academic Supervisor having 5 years experience as a Teacher. Also Primary Teacher for Social Science & Computer Science. Contact Max Muller Public School, Mahalakshmi Layout, B'lore-96. Ph: 23376049/23376050. E-mail: maxmullerpublicschool.mlayout@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Accounts & Finance

LADY ACCOUNTS CLERKS
Job involves Accountany Work in Tally, Bank Reconciliation, MS Excel Work. **Salary:** Rs.18000 less ESI Deduction. Freshers can also apply.
Job Timing: **9AM - 5.30PM. Mon-Sat.**
Walk-in Interview with Resume and other relevant documents **on any weekday between 10 AM and 5.30 PM -**
PAN OFFICE SYSTEMS PVT. LTD
5, 1st A Cross, Bismilla Nagar, Bannerghatta Road Cross, Bengaluru - 560029

WANTED JUNIOR programmer for govt office on Outsourcing Basis- Diploma in computer science/ Bsc/ Msc/ BCA/ MCA/ BE in computer science and Computer training in Basic and Nudi software, certificate issued from any Govt. Recognized institute. Call: 9148983520

COMPUTER OPERATOR for reputed pharmaceutical company. Preferably in and around Tavarekere-Nelamangala road. PH: 9148006935, 9611969322

Hospital & Medical Jobs

A DOCTOR With MBBS Wanted Immediately For Private Practice, For More Details Please Contact: 9972280981

General

WANTED EXPERIENCED person to handle stores. Must maintain records manually and computerised. Applicants staying in South Bangalore preferred. Apply to email-id rollondg@rollonbearings.com

'TOP MNC Com. Licensed By Central Govt. RETIRED/VRS Persons 2nd Career Opportunity Age above 45 Years 35K to 40K PM. 7019215243/ 9886641282.'

Manager

WE ARE Hiring Recruitment MANAGER having experience in Security & Facility Management Companies for its Corporate office in Bangalore. Post warrantees to travel extensively in North Eastern Parts of India for recruiting the Candidates. Interested Candidates Contact Director at 9900596738

Marketing & Sales

SECURITY AGENCY Require Experienced Field Officer, Marketing Manager/Operations, Tally Clerk, Personnel Driver. Bangalore Ph:080-23437474 23437797 Mob:8892073262

Security & Detectives

ALL TIME ALERT SECURITY SERVICES, Basavangudi, Bangalore -560004. Required FIELD OFFICER- 3 years experience, DRIVER- 2 years experience. Area: Electricity and Bangalore City. Mobile: 9739530301, 9538530301, 080-41632211

SENTINEL SECURITY Reputed security agency looking for AREA MANAGERS/ FIELD OFFICERS, Salary-34,000/- Take home. Contact- 8904458613.

WANTED FIELD Officer's in following Area's: Yelahanka (9880732605) Bommsandra (9880732606) Haroballi (9880799244) Whitefield (9880732600)

WANTED EX-CRPF/ BSF/ Police Person to work as Security Officer in Thanisandra Main Road, Bangalore. Interested Candidate can Contact: 9900596738

Wanted

STORE MANAGER (Computer Knowledge) / Helper Required at Lalbagh, Bengaluru. Contact 91541-69263 or 70193-98454

OPENING FOR SECURITY FIELD OFFICERS, Experience a must. Competitive salary and benefits. Contact-8884000162, 9972416899.

Part-Time Jobs

PART TIME/FULL Time job Opportunity for Retired/Housewives from Reputed MNC in Bangalore. Call: 9206187228, 9916485500

AUTOMOTIVE

Four Wheelers Selling

Others

MG EV for Sale Nov 23 Model Run 300 km Expecting 8 Lakhs Call 9341371412

Toyota

VEHICLE KA42 N0792- TOYOTA ETIOS; Total Loss Car NIA, Bangalore, invites quotations on as it is where it is basis Inspection @ Mohan: 9164913824 OR LUMIERE Surveyors: 8746969694

EDUCATIONAL

Coaching Classes

"SET up IIT/JEE & NEET Coaching Center. Low Investment/ High returns. Call/ WhatsApp: 9740577844"

School

"ATTN SCHOOL-OWNERS". Improve ADMISSIONS. Set up IIT/JEE & NEET Coaching from Grade-6. Low Investment. Call/WhatsAPP: 7022255677

MATRIMONIAL

Matrimonial Bureaus

BRAHMINS BRIDES/ Bridegrooms/ NRIs/ Second Marriages. Call SHASTRY for Personalised/ Confidential Services 9141669641 (FREE REGISTRATION)

Brides Wanted

Muslim

MUSLIM BOY 28 Years /5'10'/ Affluent Family Resident of Bangalore M.Tech posted in Bangalore 70 LPA is looking for a match (080-69072053)

MUSLIM BOY 1992 Born /5'9'/M.S in Computer Science/ Working with USA Company posted in (Caledonia) is looking for a suitable match (080-69072053)

Grooms Wanted

Muslim

MUSLIM BEAUTIFUL girl 22Yrs/ 5'3' / (From a Rich Family of Bangalore) is looking for a match (080-69072053)

PERSONAL

Change of Name

CHANGE OF NAME
I, **R.N. RAVISH RAO / RAVISHA R.N,** R/at # 27, 1st Cross, Kerekodi Main Road, D-Souza Nagar, Hosakerehalli, Bangalore- 560085, have changed my name to **HEMANT RAVISHA GURUNARASIMHA (Hemant Ravisha G)** vide affidavit dt:20/04/2024 before notary M. Rajendra, Bangalore.Henceforth I shall be called as **HEMANT RAVISHA GURUNARASIMHA** only

I,RADHIKA S JOSHI D/o Sanjeev Shamaji Joshi R/o #303,Shri Narahari Krishna Residency Channasandra,Vara Gardens, Rajarajeshwarinagar, Bangalore-560098 have Changed my name from Radhika to Radhika S Joshi vide affidavit dated 20.04.2024 sworn before Notary S.R. Thulasikrishna, Bengaluru

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

DH DECCAN HERALD **Classifieds** More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com BOOK NOW
For more details contact:
+91 9731810277 | +91 9886213331
+91 9901641752 | 080- 45557163/164
*Conditions apply

MORE **Classifieds** IN SUPPLEMENT

5 ಲಕ್ಷ ನಲ್ಲಿಗಳಿಗೆ ಏರಿಯೇಟರ್ ಅಳವಡಿಕೆ ● ಅನ್ಯ ಉದ್ದೇಶಕ್ಕೆ ನೀರು ಬಳಕೆ– 450 ಜನರಿಗೆ ದಂಡ

'ಜಲಮಿತ್ರ'ರಾಗಲು 9 ಸಾವಿರ ಮಂದಿಗೆ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರು ಉಳಿತಾಯ, ಸಮರ್ಪಕ ಬಳಕೆ ಹಾಗೂ ಜಲಮಂಡಳಿ ವತಿಯಿಂದ ಕೈಗೊಳ್ಳಲಾಗುವ ಜನಜಾಗೃತಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ 'ಜಲಮಿತ್ರ'ರಿಗೆ ಪ್ರಮಾಣ ಪತ್ರ ನೀಡಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ಹೇಳಿದರು.

'ಜಲಮಿತ್ರ'ರಿಗಾಗಿ ಶನಿವಾರ ಆಯೋಜಿಸಲಾಗಿದ್ದ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಸ್ವಯಂ-ಪ್ರೇರಿತರಾಗಿ 'ಜಲಮಿತ್ರ'ರಾಗಲು 30 ದಿನಗಳಲ್ಲಿ ಸುಮಾರು ಒಂಬತ್ತು ಸಾವಿರ ಜನರು ಮುಂದಾಗಿದ್ದಾರೆ' ಎಂದರು.

'ದೂರದ ಕಾವೇರಿ ನದಿಯಿಂದ ನಗರಕ್ಕೆ ಸರಬರಾಜಾಗುವ ನೀರಿನ ಸದ್ಬಳಕೆ ಆಗುವುದು ಬಹಳ ಮುಖ್ಯ. ಪೋಲಾಗುವ ಪ್ರತಿ 1,000 ಲೀಟರ್ ನೀರಿನಿಂದ ಬೆಂಗಳೂರು ಜಲಮಂಡಳಿಗೆ ಸುಮಾರು ₹50 ನಷ್ಟವಾಗುತ್ತದೆ. ಇದರ ಅರಿವು ನಾಗರಿಕರಿಗೆ ಇರಬೇಕು. ಪಂಚಸೂತ್ರ ಸೇರಿದಂತೆ ಜಲಸಂರಕ್ಷಣೆಯ ಮಾಹಿತಿಯನ್ನು 'ಜಲಮಿತ್ರ'ರು ಸಾರ್ವಜನಿಕರಿಗೆ ತಲುಪಿಸಲಿದ್ದಾರೆ. ಸಮೃದ್ಧ ಬೆಂಗಳೂರಿನ ಗುರಿಯನ್ನಿಟ್ಟುಕೊಂಡಿರುವ 'ಜಲಮಿತ್ರ'ರು ನಮ್ಮ ಜಲಮಂಡಳಿಯ ರಾಯಭಾರಿಗಳು' ಎಂದರು.

ನಗರದಲ್ಲಿ ಈವರೆಗೆ ಐದು ಲಕ್ಷ ನಲ್ಲಿಗಳಿಗೆ ಏರಿಯೇಟರ್‌ಗಳನ್ನು ಅಳವಡಿಸಲಾಗಿದೆ. ಇದರ ಅಳವಡಿಕೆಗೆ ಏಪ್ರಿಲ್ 30ರವರೆಗೆ ಗಡುವು ನೀಡಲಾಗಿದೆ. ಕಾವೇರಿ ನೀರನ್ನು ಅನ್ಯ ಉದ್ದೇಶಕ್ಕೆ ಬಳಸಿದ 450 ಜನರಿಗೆ ದಂಡ ವಿಧಿಸಲಾಗಿದೆ ಎಂದು ತಿಳಿಸಿದರು.

ತರಬೇತಿ ಕಾರ್ಯಕ್ರಮದಲ್ಲಿ 'ಜಲಮಿತ್ರ'ರಿಗೆ ಅಧ್ಯಕ್ಷ ಡಾ. ವಿ.ರಾಮ್‌ಪ್ರಸಾತ್ ಮನೋಹರ್ ಅವರು ಸಸಿಗಳನ್ನು ನೀಡಿ ಶುಭಹಾರೈಸಿದರು

'1200 ಅಡಿ ಕೊರೆದರೂ ನೀರಿಲ್ಲ'

'ನಗರದಲ್ಲಿ ಈ ಮೊದಲು 400 ಅಡಿ ಕೊರೆದರೆ ನೀರು ಸಿಗುತ್ತಿತ್ತು. ಇದೀಗ 1200 ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ನಾವೆಲ್ಲರೂ ಸೇರಿ ಮಳೆನೀರು ಇಂಗಿಸಲಿಕ್ಕೆ ಮುಂದಾಗಬೇಕು' ಎಂದು ಜಲಮಂಡಳಿ ಅಧ್ಯಕ್ಷರು ಹೇಳಿದರು.

ಅಂತರ್ಜಲ ಮಟ್ಟ ಸುಧಾರಿಸಲು 15 ದಿನಗಳಲ್ಲಿ 15 ಕೆರೆಗಳನ್ನು ಸಂಸ್ಕರಿಸಿದ ನೀರಿನಿಂದ ತುಂಬಿಸಲಾಗಿದೆ. ವರ್ಷದಲ್ಲಿ 200 ಕೆರೆಗಳನ್ನು ತುಂಬಿಸುವ ಗುರಿ ಇದೆ. ಇದಕ್ಕೆ ಜಲಮಿತ್ರರ ಸಹಕಾರ ಅಗತ್ಯ ಎಂದರು.

ಬೆಂಗಳೂರಿನಲ್ಲಿ ಉದ್ಭವಿಸಿದ್ದ ನೀರಿನ ಸಮಸ್ಯೆಯನ್ನು 45 ದಿನಗಳಲ್ಲಿ ಶೇ 80ರಷ್ಟು ಬಗೆಹರಿಸಿದ್ದೇವೆ. ಇನ್ನೂ ಕೆಲಕಡೆ ಸಮಸ್ಯೆಗಳಿದ್ದು ಅವುಗಳನ್ನು ಬಗೆಹರಿಸಲು ಮಂಡಳಿ ಕಾರ್ಯಪ್ರವೃತ್ತವಾಗಿದೆ ಎಂದು ಹೇಳಿದರು.

ನಗರದಲ್ಲಿ ತುಂತುರು ಮಳೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಶನಿವಾರ ಸಂಜೆ ತುಂತುರು ಮಳೆಯಾಗಿದೆ.

ಹಂಪಿನಗರ, ಕೆಂಗೇರಿ, ಹೆಮ್ಮಿಗೆಪುರ, ವಾಜರಹಳ್ಳಿ, ಗೊಟ್ಟಿಗೆರೆ, ಬಿಳೇಕಹಳ್ಳಿ, ಕುಮಾರಸ್ವಾಮಿ ಲೇಔಟ್, ಬಿಟಿಎಂ ಲೇಔಟ್, ಸಿಂಗಸಂದ್ರ, ಎಚ್‌.ಎಸ್‌.ಆರ್‌. ಲೇಔಟ್, ಬೆಳ್ಳಂದೂರು ಸಹಿತ ವಿವಿಧೆಡೆ ಐದರಿಂದ ಹತ್ತು ನಿಮಿಷಗಳ ವರೆಗೆ ಮಳೆಯಾಗಿದೆ. 0.5 ಮಿಲಿ ಮೀಟರ್‌ನಿಂದ 3 ಮಿಲಿಮೀಟರ್ ನಷ್ಟು ಮಳೆ ದಾಖಲಾಗಿದೆ.

ಅಕ್ರಮ ಕೊಳವೆಬಾವಿ: 36 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅನುಮತಿ ಇಲ್ಲದೆ ಕೊಳವೆಬಾವಿ ಕೊರೆಯಿಸಿದ ಸಂಬಂಧ 36 ಪ್ರಕರಣಗಳು ದಾಖಲಾಗಿದ್ದು, ಪೊಲೀಸ್ ಠಾಣೆಯಲ್ಲಿ ಜಲಮಂಡಳಿ ದೂರು ದಾಖಲಿಸಿದೆ.

ನಗರದಲ್ಲಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಕೊಳವೆಬಾವಿ ಕೊರೆಯಿಸುವುದನ್ನು ನಿರ್ಬಂಧಿಸಲಾಗಿದೆ. ಇಷ್ಟಾದರೂ ಹಲವೆಡೆ ಕೊರೆಸಲಾಗುತ್ತಿದೆ. ನಾಗರಿಕರ ದೂರಿನ ಆಧಾರದಲ್ಲಿ ಜಲಮಂಡಳಿ ಅಧಿಕಾರಿಗಳು ಸ್ಥಳಪರಿಶೀಲಿಸಿ ಕ್ರಮಜರುಗಿಸುತ್ತಿದ್ದಾರೆ.

ವೀರಭದ್ರನಗರ, ಅಂಬರ್ ಲೇಔಟ್, ಸೀಗೇಹಳ್ಳಿ, ದೊಡ್ಡಕನ್ನೇಲಿ, ಜುನ್ನಸಂದ್ರ, ಕುಕ್ಸ್ ಟೌನ್, ನ್ಯೂ ಪಾಟರಿ ಟೌನ್, ಆರ್‌ಎಂವಿ 2ನೇ ಘಟ್ಟ, ಮಾಗಡಿ ರಸ್ತೆ, ಮಹಾಗಣಪತಿನಗರ, ಗವಿಪುರ ಹೌಸಿಂಗ್ ಸೊಸೈಟಿ, ಕೃಷ್ಣ ಗಾರ್ಡನ್, ಕೋಣನಕುಂಟೆ, ಅರೆಹಳ್ಳಿ, ಹನುಮನಬೆಟ್ಟ, ನಾಯ್ಡು ಲೇಔಟ್, ಪೂರ್ಣಪ್ರಜ್ಞ ಲೇಔಟ್‌ಗಳಲ್ಲಿ ಅನುಮತಿ ಇಲ್ಲದೆ ಕೊಳವೆಬಾವಿ ಕೊರೆಯಲಾಗಿದೆ. ಆಯಾ ಮಾಲೀಕರು ಹಾಗೂ ಸಂಸ್ಥೆಗಳ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದರು.

ಅವೈಜ್ಞಾನಿಕವಾಗಿ ಕೊಳವೆಬಾವಿಗಳನ್ನು ಕೊರೆಯುತ್ತಿರುವುದು ಮತ್ತು ಅನುಮತಿ ಪಡೆಯದೆ ಕೊಳವೆಬಾವಿ ಕೊರೆಸಲಾಗುತ್ತಿದೆ. ವೈಯಕ್ತಿಕ ಅಥವಾ ಇನ್ನಿತರೆ ಬಳಕೆಗೆ ಕೊಳವೆಬಾವಿಗಳನ್ನು ಕೊರೆಯುವ ಮುನ್ನ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮ ಹಾಗೂ ನಿಯಂತ್ರಣ) ಕಾಯ್ದೆಯಂತೆ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಅನುಮತಿ ಪಡೆಯದಿದ್ದರೆ ಕಾಯ್ದೆಯಂತೆ ರಿಗ್ ಪಡೆಯಲು ನೀಡಿರುವ ಅನುಮತಿಯನ್ನು ರದ್ದುಪಡಿಸಿ, ಕಾನೂನುಕ್ರಮ ಕೈಗೊಳ್ಳಲಾಗುತ್ತದೆ. ಕೊಳವೆಬಾವಿ ಕೊರೆಸುವ ಮಾಲೀಕರ ವಿರುದ್ಧ ನಿಯಮ ಉಲ್ಲಂಘನೆ ದೂರು ದಾಖಲಿಸಿ, ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಆದೇಶದಲ್ಲಿ ತಿಳಿಸಿದ್ದರು.

ಮಾರ್ಚ್ 15ರಿಂದ ಈ ಆದೇಶ ಜಾರಿಗೆ ಬಂದಿದೆ. ಕೊಳವೆಬಾವಿ ಕೊರೆಯಿಸಲು ಅನುಮತಿಗೆ ಅರ್ಜಿ ಸಲ್ಲಿಸಬಹುದು. ಅಗತ್ಯ ಹಾಗೂ ತಜ್ಞರ ವರದಿ ಆಧರಿಸಿ, ಸಂಬಂಧಪಟ್ಟವರಿಂದ ಸ್ಥಳ ಪರಿಶೀಲಿಸಿ ನಿಯಮಾನುಸಾರ ಅನುಮತಿ ನೀಡಲಾಗುವುದು. ಅನುಮತಿ ಇಲ್ಲದೆ ಕೊಳವೆಬಾವಿ ಕೊರೆಯುವುದು ಕಂಡುಬಂದರೆ ನಾಗರಿಕರು 1916ಗೆ ಕರೆ ಮಾಡಿ ತಿಳಿಸಬಹುದು ಜಲಮಂಡಳಿ ತಿಳಿಸಿದೆ.

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. Cable_Meggering_SBC_Div
ದಿನಾಂಕ: 15.04.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಎರಡು ವರ್ಷಗಳ ಕಾಲ ಬೆಂಗಳೂರು ವಿಭಾಗದಲ್ಲಿ ವಾರ್ಷಿಕ ಕೇಬಲ್ ಮೆಗ್ಗರಿಂಗ್ ಚಟುವಟಿಕೆಯ ಹೊರಗುತ್ತಿಗೆ.	ರೂ. 1,79,70,456/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06-05-2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು

PUB/29/AAV/PRB/SWR/2024-25

South Western Railway-SWR SWRRLY SWRRLY

ನೈಋತ್ಯ ರೈಲ್ವೆ G20

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. E-GSU-ELE-2024-25-OT-6 ದಿನಾಂಕ: 15.04.2024

ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
ಅಮೃತ್ ಭಾರತ್ ಯೋಜನೆಯಡಿ ಬಂಗಾರಪೇಟೆ, ಮಾಲೂರು ಮತ್ತು ಕುಪ್ಪಂ ನಿಲ್ದಾಣಗಳ ಆಧುನೀಕರಣ – ಉಪ ನಿಲ್ದಾಣ ಒದಗಿಸುವುದು	ರೂ. 3,33,39,530.22/-

ಟೆಂಡರ್ ಸೂಚನೆ ಸಂ. E-GSU-ELE-2024-25-OT-7 ದಿನಾಂಕ: 15.04.2024

ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
ಅಮೃತ್ ಭಾರತ್ ಯೋಜನೆಯಡಿ ಹೊಸೂರು ಮತ್ತು ಧರ್ಮಪುರಿ ನಿಲ್ದಾಣಗಳ ಆಧುನೀಕರಣ – ಉಪ ನಿಲ್ದಾಣ ಒದಗಿಸುವುದು	ರೂ. 2,37,65,212.94/-

ಮೇಲಿನ ಎರಡೂ ಟೆಂಡರ್‌ಗಳಿಗೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08-05-2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಜಿಎಸ್‌ಯು ಬೆಂಗಳೂರು

PUB/26/AAV/PRB/SWR/2024-25

South Western Railway-SWR SWRRLY SWRRLY

ಮಹಿಳೆ ಹತ್ಯೆ, ಆಭರಣ ದರೋಡೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಮನೆಯೊಂದರಲ್ಲಿ ಎಂ.ಶೋಭಾ (48) ಎಂಬುವವರನ್ನು ಹತ್ಯೆ ಮಾಡಿ ಚಿನ್ನಾಭರಣ ದೋಚಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

ಶೋಭಾ

'ಗಣೇಶನಗರದ ಶೋಭಾ, ವಾಹನ ಚಾಲನಾ ತರಬೇತಿ ಶಾಲೆ ನಡೆಸುತ್ತಿದ್ದರು. ಎರಡನೇ ಮಗಳ ಜತೆ ವಾಸವಿದ್ದರು. ಮಗಳು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶೋಭಾ ಅವರ ಮಾಂಗಲ್ಯಸರ, ಚಿನ್ನದ ಸರ, ಮೊಬೈಲ್ ದೋಚಿರುವ ದುಷ್ಕರ್ಮಿಗಳು, ಮನೆ ಎದುರು ಕಾರಿನ ಸಮೇತ ಪರಾರಿ ಆಗಿದ್ದಾರೆ. ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ಇದೆ. ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ತಿಳಿಸಿದರು.

'ಶೋಭಾ ಹಾಗೂ ಎರಡನೇ ಮಗಳು ಹರ್ಷಿತಾ ಮಾತ್ರ ಮನೆಯಲ್ಲಿ ವಾಸವಿದ್ದರು. ಶೋಭಾ ಅವರ ಪತಿ ಹಾಗೂ ಮೊದಲ ಮಗಳು ಪ್ರತ್ಯೇಕವಾಗಿ ನೆಲೆಸಿದ್ದಾರೆ. ಹರ್ಷಿತಾ ಅವರಿಗೆ ಏಪ್ರಿಲ್ 4ರಂದು ಮದುವೆಯಾಗಿತ್ತು.'

'ಮದುವೆಯ ಸಂಪ್ರದಾಯಗಳು ನಡೆಯುತ್ತಿರುವುದರಿಂದ ಹರ್ಷಿತಾ ತಾಯಿಯ ಮನೆಯಲ್ಲಿದ್ದರು. ಏಪ್ರಿಲ್ 18ರಂದು ಜೆ.ಪಿ. ನಗರದಲ್ಲಿರುವ ಪತಿ ಮನೆಗೆ ಹೋಗಿದ್ದರು. ಮರುದಿನ ತಾಯಿ ಶೋಭಾಗೆ ಕರೆ ಮಾಡಿದ್ದರು. ಆದರೆ, ಕರೆ ಸ್ವೀಕರಿಸಲಿಲ್ಲ. ಗಾಬರಿಗೊಂಡು ಅಕ್ಕ ಹಾಗೂ ಸಂಬಂಧಿಕರಿಗೆ ವಿಷಯ ತಿಳಿಸಿದ್ದರು. ಅಕ್ಕ ಮನೆಗೆ ಹೋದಾಗ, ಬೆಡ್ ಮೇಲೆ ಶೋಭಾ ಮೃತದೇಹ ಕಂಡಿತ್ತು' ಎಂದರು.

'ಶೋಭಾ ಮೈ ಮೇಲೆ ಚಿನ್ನಾಭರಣ ಹಾಗೂ ಮನೆ ಎದುರು ಕಾರು ಇರಲಿಲ್ಲ. ಶೋಭಾ ಅವರನ್ನು ಯಾರೋ ಕೊಲೆಗೈದು ಚಿನ್ನಾಭರಣ–ಕಾರು ದೋಚಿರುವುದಾಗಿ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗ ಆಸ್ಪತ್ರೆಗೆ ಸಾಗಿಸಲಾಗಿದೆ. ಮನೆಯ ಅಕ್ಕ–ಪಕ್ಕದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗುತ್ತಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

ರೌಡಿಗಳ ಬಂಧನ

ಬೆಂಗಳೂರು: ಇಬ್ಬರು ರೌಡಿ ಶೀಟರ್‌ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ಬಂದೂಕುಗಳನ್ನು ಜಪ್ತಿ ಮಾಡಿದ್ದಾರೆ. ಅವರ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಪ್ರಕರಣವನ್ನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹಸ್ತಾಂತರಿಸಿದ್ದಾರೆ. ಬಂಧಿತರಿಂದ 3 ಬಂದೂಕು ವಶಪಡಿಸಿಕೊಳ್ಳಲಾಗಿದೆ.

ಕೆಂಗೇರಿ ಆರ್.ಎಸ್.ಸುನೀಲ್ ಅಲಿಯಾಸ್ ಸಿಲಿಂಡರ್ ಸುನೀಲ್ ಹಾಗೂ ಈತನ ಸಹಚರ ಅವಿನಾಶ್ ಬಂಧಿತರು. ಸುನಿಲ್ ವಿರುದ್ಧ ಕೆಂಗೇರಿ ಠಾಣೆ ಸೇರಿದಂತೆ ವಿವಿಧ ಠಾಣೆಗಳಲ್ಲಿ ಒಟ್ಟು 12 ಪ್ರಕರಣಗಳು ದಾಖಲಾಗಿವೆ. ಈತನ ಸಹಚರ ಅವಿನಾಶ್ ವಿರುದ್ಧ 3 ಪ್ರಕರಣಗಳಿವೆ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿನಿ ಹತ್ಯೆ ಆರೋಪಿ ರಕ್ಷಣೆ: ಜೆಡಿಎಸ್ ಟೀಕೆ

ಬೆಂಗಳೂರು: ಪ್ರೀತಿ ನಿರಾಕರಿಸಿದ ಕಾಲೇಜು ವಿದ್ಯಾರ್ಥಿನಿಯನ್ನು ಹತ್ಯೆ ಮಾಡಿದ ಆರೋಪಿಯನ್ನು ರಕ್ಷಣೆ ಮಾಡಲು ಕಾಣದ ಕೈಗಳು ಪ್ರಯತ್ನಿಸುತ್ತಿವೆ ಎಂದು ಜೆಡಿಎಸ್ ಆರೋಪಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ನೀಡಿರುವ ಪಕ್ಷ, ಈ ಘಟನೆ ಆಘಾತಕಾರಿ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಳಿ ತಪ್ಪಿದೆ. ಕಾಂಗ್ರೆಸ್ ಅಧಿಕಾರ ತುಷ್ಟೀಕರಣದಿಂದ ಅಪರಾಧ ಮನೋಭಾವದ ಕಿಡಿಗೇಡಿಗಳಿಗೆ ಅಭಿಮಾನ ಸಿಕ್ಕಂತೆ ಆಗಿದೆ. ಕೆಲವರಿಗೆ ಈ ನೆಲದ ಕಾನೂನು ಅನ್ವಯ ಆಗುತ್ತಿಲ್ಲ ಎಂಬ ಅನುಮಾನ ಕಾಡುತ್ತಿದೆ ಎಂದು ಟೀಕಿಸಿದೆ.

ಪ್ರೀತಿ ನಿರಾಕರಿಸಿದ ಕಾರಣಕ್ಕೆ ಜೀವ ತೆಗೆದ ಆರೋಪಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದೆ.

ಸೊಂಟದಲ್ಲಿ ರಿವಾಲ್ವರ್ ಪ್ರಕರಣ ಪಿಎಸ್‌ಐ ಸೇರಿ ನಾಲ್ವರು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡು ರಿಯಾಜ್ ಅಹಮ್ಮದ್ ಎಂಬಾತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೂವಿನ ಹಾರ ಹಾಕಿ ಸನ್ಮಾನಿಸಿದ್ದ ಪ್ರಕರಣದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಸೇರಿ ನಾಲ್ವರು ಪೊಲೀಸರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಪರ ಮತಯಾಚಿಸಲು ಸಿದ್ದಾಪುರ ಠಾಣೆ ವ್ಯಾಪ್ತಿಯ ಪ್ರದೇಶದಲ್ಲಿ ಏಪ್ರಿಲ್ 8ರಂದು ಮುಖ್ಯಮಂತ್ರಿಯವರು ರೋಡ್ ಶೋ ನಡೆಸಿದ್ದರು. ಇದೇ ಸಂದರ್ಭದಲ್ಲಿ ರಿಯಾಜ್ ಅಹಮ್ಮದ್, ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡು ತೆರೆದ ವಾಹನ ಏರಿ ಸನ್ಮಾನಿಸಿದ್ದರು.

ಭದ್ರತಾ ಲೋಪ ಉಂಟಾಗಿದ್ದ ಬಗ್ಗೆ ತನಿಖೆ ನಡೆಸುವಂತೆ ಕಮಿಷನರ್ ಆದೇಶ ಹೊರಡಿಸಿದ್ದರು. ಪ್ರಾಥಮಿಕ ತನಿಖೆ ನಡೆಸಿದ್ದ ದಕ್ಷಿಣ ವಿಭಾಗದ ಡಿಸಿಪಿ ಹಾಗೂ ಹೆಚ್ಚುವರಿ ಪೊಲೀಸ್ ಕಮಿಷನರ್ ಅವರು ಇತ್ತೀಚೆಗೆ ವರದಿ ಸಲ್ಲಿಸಿದ್ದರು.

ವರದಿ ಪರಿಶೀಲಿಸಿದ್ದ ಕಮಿಷನರ್ ಬಿ. ದಯಾನಂದ್, ಸಿದ್ದಾಪುರ ಠಾಣೆಯ ಪಿಎಸ್‌ಐ ಮೆಹಬೂಬ್ ಹುಡ್ಡ, ಹೆಡ್ ಕಾನ್‌ಸ್ಟೆಬಲ್ ಮಂಜು ನಾಯಕ್, ಕಾನ್‌ಸ್ಟೆಬಲ್ ಸಚಿನ್ ಹಾಗೂ ಎಎಸ್‌ಐಯೊಬ್ಬರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿದ್ದ ತೆರೆದ ವಾಹನದ ಸುತ್ತಲೂ ಪಿಎಸ್‌ಐ ಮೆಹಬೂಬ್ ಹಾಗೂ ಇತರರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಮುಖ್ಯಮಂತ್ರಿ ಅವರ ಬಳಿ ಹೋಗುವವರನ್ನು ತಪಾಸಣೆ ನಡೆಸುವ ಜವಾಬ್ದಾರಿಯೂ ಇವರದ್ದಾಗಿತ್ತು. ರಿಯಾಜ್ ಅಹಮ್ಮದ್ ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡು ಮುಖ್ಯಮಂತ್ರಿ ಬಳಿ ಹೋಗುವಾಗ ಯಾರೊಬ್ಬರೂ ತಡೆದಿರಲಿಲ್ಲವೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಿಸಿಬಿ ಇನ್‌ಸ್ಪೆಕ್ಟರ್ ಅಮಾನತು

ಜ್ಯೋತಿರ್ಲಿಂಗ

ಬೆಂಗಳೂರು: ರೌಡಿಯೊಬ್ಬನಿಂದ ಹಣ ಪಡೆದಿದ್ದ ಆರೋಪದಡಿ ಸಿಸಿಬಿ ರೌಡಿ ನಿಗ್ರಹ ದಳದ ಇನ್‌ಸ್ಪೆಕ್ಟರ್ ಜ್ಯೋತಿರ್ಲಿಂಗ ಹೊನಕಟ್ಟಿ ಅವರನ್ನು ಸೇವೆಯಿಂದ ಅಮಾನತು ಮಾಡಿ ಕಮಿಷನರ್ ಬಿ.ದಯಾನಂದ್ ಅವರು ಆದೇಶ ಹೊರಡಿಸಿದ್ದಾರೆ.

'ಮಾರತ್ತಹಳ್ಳಿ ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿರುವ ರೋಹಿತ್ ಎಂಬಾತನಿಂದ ಇನ್‌ಸ್ಪೆಕ್ಟರ್ ಹಣ ಪಡೆದಿದ್ದ ಬಗ್ಗೆ ವ್ಯಕ್ತಿಯೊಬ್ಬರು ಮಾಹಿತಿ ನೀಡಿದ್ದರು. ವಿಚಾರಣೆ ನಡೆಸಿದ್ದ ಹಿರಿಯ ಅಧಿಕಾರಿಗಳು ಕಮಿಷನರ್ ಅವರಿಗೆ ವರದಿ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರೌಡಿಗಳ ಮನೆಗಳ ಮೇಲೆ ಪೊಲೀಸರು ಇತ್ತೀಚೆಗೆ ದಾಳಿ ಮಾಡಿದ್ದರು. ಹಲವು ರೌಡಿಗಳ ಮೇಲೆ ನಿಗಾ ವಹಿಸಲಾಗಿದೆ. ಜ್ಯೋತಿರ್ಲಿಂಗ ಅವರಿಗೂ ರೌಡಿಗಳ ಮೇಲೆ ನಿಗಾ ಇರಿಸಲು ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದರು.'

'ರೌಡಿ ರೋಹಿತ್‌ನ ವಿಚಾರಣೆ ನಡೆಸಿದ್ದ ಜ್ಯೋತಿರ್ಲಿಂಗ, ಯುಪಿಐ ಮೂಲಕ ಹಣ ಪಡೆದಿರುವ ಆರೋಪವಿದೆ. ಪರಿಶೀಲಿಸಿದಾಗ, ಪುರಾವೆಗಳು ಸಿಕ್ಕಿವೆ. ಹೀಗಾಗಿ, ಇನ್‌ಸ್ಪೆಕ್ಟರ್‌ರನ್ನು ಅಮಾನತುಮಾಡಿ, ಇಲಾಖೆ ವಿಚಾರಣೆಗೂ ಆದೇಶಿಸಲಾಗಿದೆ' ಎಂದು ತಿಳಿಸಿವೆ.

'ರೋಹಿತ್, ಕೊಲೆ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದಿದ್ದ. ಕಾಡುಬೀಸನಹಳ್ಳಿಯಲ್ಲಿ ನೆಲೆಸಿದ್ದ, ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಇನ್‌ಸ್ಪೆಕ್ಟರ್‌ಗೆ ಹಣ ನೀಡಿರುವ ಬಗ್ಗೆ ಈತನಿಂದಲೂ ಹೇಳಿಕೆ ಪಡೆಯಬೇಕಿದೆ' ಎಂದು ಹೇಳಿವೆ.

ಎಂಜಿನಿಯರ್ ಸಾವು

ಹೊಳಲ್ಕೆರೆ: ತಾಲ್ಲೂಕಿನ ಹನುಮಂತ ದೇವರ ಕಣಿವೆಯಲ್ಲಿ ಶನಿವಾರ ಕಾರು ಪಲ್ಟಿಯಾಗಿ ಬೆಂಗಳೂರಿನ ಎಂಜಿನಿಯರ್ ಮಂಜುನಾಥ್ (36) ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಸುಚೇತ್ ಹಾಗೂ ಸತೀಶ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗೆಳೆಯರು ಎರಡು ಕಾರುಗಳಲ್ಲಿ ಶಿವಮೊಗ್ಗದ ಕಡೆಗೆ ಪ್ರವಾಸ ಹೊರಟಿದ್ದರು. ಕಣಿವೆ ತಿರುವಿನಲ್ಲಿ ಕಾರು ಚಾಲಕನ ನಿಯಂತ್ರಣ ತಪ್ಪಿದೆ.

ತೈಲ ಸೋರಿಕೆ: ಸಂಚಾರಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೆಬ್ಬಾಳ ಮೇಲ್ಸೇತುವೆ, ಡೌನ್ ರ‍್ಯಾಂಪ್ ಹಾಗೂ ನೃಪತುಂಗ ರಸ್ತೆಗೆ ಹೊಂದಿಕೊಂಡಿರುವ ಕಾರ್ಪೊರೇಷನ್ ವೃತ್ತದಲ್ಲಿ ತೈಲ ಸೋರಿಕೆಯಾಗಿದ್ದರಿಂದ ಶನಿವಾರ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ತೈಲ ಸಾಗಣೆ ಟ್ಯಾಂಕರ್‌ವೊಂದು ಮಧ್ಯಾಹ್ನ ಮೇಲ್ಸೇತುವೆಯಲ್ಲಿ ಹೊರಟಿತ್ತು. ಇದೇ ಟ್ಯಾಂಕರ್‌ನಿಂದ ತೈಲ ಸೋರಿಕೆಯಾಗುತ್ತಿತ್ತು. ಇದನ್ನು ಗಮನಿಸದ ಚಾಲಕ, ಟ್ಯಾಂಕರ್ ಚಲಾಯಿಸಿಕೊಂಡು ಡೌನ್ ರ‍್ಯಾಂಪ್‌ನಲ್ಲಿ ಮುಂದಕ್ಕೆ ಸಾಗಿ ರಸ್ತೆಯಲ್ಲಿ ಹೊರಟಿದ್ದರು.

ಇದರಿಂದಾಗಿ ಮೇಲ್ಸೇತುವೆ, ಡೌನ್ ರ‍್ಯಾಂಪ್ ಹಾಗೂ ನಾಗವಾರ– ಬಿಇಎಲ್ ವೃತ್ತದ ರಸ್ತೆಯಲ್ಲಿ ತೈಲ ಚೆಲ್ಲಿತ್ತು. ಇದೇ ಮಾರ್ಗವಾಗಿ ಅತೀ ವೇಗದಲ್ಲಿ ಹೊರಟಿದ್ದ ಸವಾರರು, ದ್ವಿಚಕ್ರ ವಾಹನಗಳ ಸಮೇತ ರಸ್ತೆಯಲ್ಲಿ ಉರುಳಿಬಿದ್ದರು. ಅದನ್ನು ನೋಡಿದ ಉಳಿದ ಸವಾರರು, ದ್ವಿಚಕ್ರ ವಾಹನಗಳನ್ನು ನಿಧಾನಗತಿಯಲ್ಲಿ ಚಲಾಯಿಸಿಕೊಂಡು ಮುಂದಕ್ಕೆ ಹೋದರು.

ಸ್ಥಳಕ್ಕೆ ಬಂದ ಸಂಚಾರ ಪೊಲೀಸರು, ತೈಲ ಚೆಲ್ಲಿದ್ದ ರಸ್ತೆಯಲ್ಲಿ ಮಣ್ಣು ಎರಚಿದರು. ನಂತರ, ಸಾರ್ವಜನಿಕರ ವಾಹನಗಳು ನಿಧಾನಗತಿಯಲ್ಲಿ ಮುಂದಕ್ಕೆ ಸಾಗಿದವು.

ಹೆಬ್ಬಾಳ ಮೇಲ್ಸೇತುವೆ ತೈಲ ಸೋರಿಕೆಯಾಗಿದ್ದ ಜಾಗದಲ್ಲಿ ಪೊಲೀಸರು ಮಣ್ಣು ಹಾಕಿದ್ದರು

ಇದರಿಂದಾಗಿ ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಯಿತು.

ಬಳ್ಳಾರಿ ರಸ್ತೆಯ ಅರಮನೆ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಕಾರ್ಯಕ್ರಮವಿತ್ತು. ಇದಕ್ಕೂ ಮುನ್ನವೇ ರಸ್ತೆಯಲ್ಲಿ ತೈಲ ಸೋರಿಕೆಯಾಗಿತ್ತು. ಸಂಚಾರ ಪೊಲೀಸರು, ತ್ವರಿತವಾಗಿ ಕ್ರಮ ಕೈಗೊಂಡು ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು. ಪೊಲೀಸರು, ರಸ್ತೆಗೆ ಮಣ್ಣು ಹಾಕಿ ವಾಹನಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ಸಂಕ್ಷಿಪ್ತ ಸುದ್ದಿ

'ದೀರ್ಘಾಯು ಭಾರತ': ಐಐಎಸ್‌ಸಿ

ಬೆಂಗಳೂರು: ಭಾರತೀಯ ವಿಜ್ಞಾನ ಸಂಸ್ಥೆಯು 'ದೀರ್ಘಾಯು ಭಾರತ ಉಪಕ್ರಮ' ಯೋಜನೆಯನ್ನು ಘೋಷಿಸಿದೆ. 'ಯೋಜನೆಯಡಿ ದೀರ್ಘಾವಧಿಯಲ್ಲಿ ಮಾನವನ ಆರೋಗ್ಯ ವೃದ್ಧಿಸುವುದು, ಆರೋಗ್ಯ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಬೃಹತ್ ಪ್ರಮಾಣದಲ್ಲಿ ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲಾಗುವುದು' ಎಂದು ತಿಳಿಸಿದೆ

ಈ ಯೋಜನೆಯಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ವಿವಿಧ ವಿಭಾಗಗಳು, ಉದ್ಯಮಗಳು, ವೈದ್ಯರು, ದಾನಿಗಳು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳು ಇರಲಿದ್ದಾರೆ. ಕ್ಲಿನಿಕಲ್ ಅಧ್ಯಯನ, ಮೂಲಭೂತ ಮತ್ತು ಅನ್ವಯಿಕ ಸಂಶೋಧನೆಯ ಮೂಲಕ ವಯಸ್ಸಾಗುವಿಕೆಯನ್ನು ಅರ್ಥೈಸಿಕೊಳ್ಳಲಾಗುವುದು. ವ್ಯಕ್ತಿಯ ಜೀವನದ ಗುಣಮಟ್ಟ ಹೆಚ್ಚಿಸಲು ಪರಿಹಾರ ಕ್ರಮಗಳನ್ನು ರೂಪಿಸಲಾಗುವುದು. ಯೋಜನೆಗೆ ಪ್ರಶಾಂತ್ ಪ್ರಕಾಶ್ ಸಹ ಸ್ಥಾಪಕತ್ವದ ಏಸೆಲ್ ಇಂಡಿಯಾ ಆರಂಭಿಕ ದೇಣಿಗೆ ನೀಡಿದೆ.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಈ ಕುರಿತು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಶಾಂತ್ ಪ್ರಕಾಶ್, 'ವಯಸ್ಸಾಗುವಿಕೆ ಅನಿವಾರ್ಯ ವಿಧಿ ಲಿಖಿತ ಎಂಬ ಭಾವನೆ ದಟ್ಟವಾಗಿದೆ. ವೃದ್ಧಾಪ್ಯದ ಸಂಕೀರ್ಣಗಳನ್ನು ಅಧ್ಯಯನ ಮಾಡಿದಂತೆ ವೈವಿಧ್ಯ ಅಂಶಗಳು ಅದನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ' ಎಂದು ಹೇಳಿದರು.

'ವಿಶೇಷವಾಗಿ ಜೀವನಶೈಲಿ, ಸಂಸ್ಕೃತಿ, ವಂಶವಾಹಿ, ಪರಿಸರಗಳು ಕಾರಣವಾಗುತ್ತವೆ. ವಯಸ್ಸಾಗುವಿಕೆಗೆ ಸಂಬಂಧಿಸಿದಂತೆ ಈಗ ನಡೆಯುತ್ತಿರುವ ಸಂಶೋಧನೆಗಳು ಏನೇನೂ ಸಾಲದು. ವಿವಿಧ ಕ್ಷೇತ್ರಗಳ ತಜ್ಞರನ್ನು ತೊಡಗಿಸಿಕೊಳ್ಳಬೇಕಾಗಿದೆ' ಎಂದು ಹೇಳಿದರು.

ಟಿಕೆಟ್ ರಹಿತ ಪ್ರಯಾಣ ₹ 7,65 ಲಕ್ಷ ದಂಡ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮಾರ್ಚ್ ತಿಂಗಳಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 3,840 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಮಾರ್ಚ್ ತಿಂಗಳಲ್ಲಿ 17,900 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 3,840 ಮಂದಿ ಪತ್ತೆಯಾಗಿದ್ದರು. ಅವರಿಂದ ₹ 7,65,090 ದಂಡ ವಸೂಲಿ ಮಾಡಲಾಯಿತು. ಕರ್ತವ್ಯ ಲೋಪವೆಸಗಿದ ಕಾರಣಕ್ಕಾಗಿ ಸಂಸ್ಥೆಯ 1,101 ನಿರ್ವಾಹಕರ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 530 ಪುರುಷ ಪ್ರಯಾಣಿಕರಿಗೆ ₹ 53,000 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

PUBLIC NOTICE

TAKE NOTICE that under the instructions of our client, **Scania Commercial Vehicles India Private Limited,** this notice is being issued to the public at large to inform as follows:

Our client had executed the following with the Karnataka Industrial Area Development Board:

(I) Lease cum sale agreement dated March 07, 2012, with respect to the 25 Acre Land bearing Plot Nos. 63 part 64, 65, 66, 88 to 97, situated at Achhatanahalli Village, Narasapura Hobli, Kolar Taluk, Karnataka State and registered on March 20, 2012, as Document No. KLR-1-06917/2011-12 in Book-I stored in CD No. KLRD 92 in the office of the Senior Sub-Registrar Kolar; and

(ii) Lease cum sale agreement dated October 12, 2012, with respect to the 10 Acres Land bearing 10 Acres land parcel bearing Plot Nos. 84 to 87 and 61, 62 part, 63P, situated at Achhatanahalli Village, Narasapura Hobli, Kolar Taluk, Karnataka State and registered on October 18, 2012, as Document No. KLR-1-05961/2012-13 in Book-I stored in CD No. KLRD106 in the office of the Senior Sub-Registrar Kolar.

The above-mentioned original lease cum sale agreements got lost from the factory premises of our client. The loss of the original documents came to our client's current management's attention in July 2021 after changes in managers over the years. Despite best efforts, the original documents cannot be traced. **A loss report was filed with Karnataka State Police, Kolar Police Unit on 17 January 2022. Lost report No. 0137630/2022 was issued in this regard.** Hence, this notice is being issued calling the public that if anyone has found the above-mentioned original lease cum sale agreements, please handover the same to the below mentioned address.

Date: April 21, 2024
Bangalore

Mary Julie John
J. Sagar Associates
Advocates & Solicitors
Level 3, Prestige Obelisk, 3,
Kasturba Road, Bangalore - 560 001

ನೈಋತ್ಯ ರೈಲ್ವೆ G20

ಟೆಂಡರ್ ಸೂಚನೆ ಸಂ. CAO/CN/BNC/EPC/77/2023
ದಿನಾಂಕ: 13-10-2023 ಕ್ಕೆ ತಿದ್ದುಪಡಿ-4

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬಾಗಲಕೋಟ–ಕುಡಚಿ ಹೊಸ ಮಾರ್ಗ ಯೋಜನೆಯಡಿ (142 ಕಿಮೀ) ಸಿಗ್ನಲ್ ಮತ್ತು ದೂರಸಂಪರ್ಕ ಮತ್ತು ಎಲೆಕ್ಟ್ರಿಕಲ್ ವರ್ಕ್ಸ್ ಸೇರಿದಂತೆ ಜಗದಾಳ (ಹೊರತುಪಡಿಸಿ) ಮತ್ತು ಸುಟ್ಟಟ್ಟಿ (ಹೊರತುಪಡಿಸಿ) ನಡುವೆ 28.5 ಕಿಮೀ ಉದ್ದದ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ BGK-KUD-EPC-02)	ರೂ. 423,36,92,709/-

ಅಸ್ತಿತ್ವದಲ್ಲಿರುವ ಕೊನೆಯ ದಿನಾಂಕ: 30-04-2024, 15:00 ಗಂಟೆಯವರೆಗೆ

ಪರಿಷ್ಕೃತ ಕೊನೆಯ ದಿನಾಂಕ: 14-06-2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/27/AAV/PRB/SWR/2024-25

South Western Railway-SWR SWRRLY SWRRLY

PUBLIC NOTICE

My client intends to enter into a Joint Development Agreement with respect to the property mentioned in the **Schedule** hereunder with its Owner, **Shri. H. R. Chandrashekhar ("Owner").** The Owner represents and warrants that he is the absolute Owner of the Schedule Property and that he has neither conveyed nor has entered into any Agreement of Sale/Development Agreement/ Memorandum of Understanding nor has entered into any sort of arrangement with any person/s for sale/transfer/development of the Schedule Property. The Owner further represents that he has not encumbered, mortgaged, created any charge or lien on the Schedule Property in any manner and apart from him there are no other person/s, firm/s or company/s having any sort of right, title or claim over the Schedule Property. Any person/s having objection/s or claim/s, shall with documentary evidence, lodge their objection(s)/claim(s) **within Fifteen (15) days** from the date of this Notice with the undersigned, failing which, my client shall proceed with the above-mentioned transaction.

SCHEDULE

All that piece and parcel of the immovable property bearing Sy. No. 102 (earlier part of Sy. No. 80) of Shettigere Village, Jala Hobli, Yelahanka Taluk, Bengaluru North, measuring 10 Acres, duly converted for commercial purposes vide order bearing **No. ALN/(NA)/JALA:S.R:11/05-06** dated 18-04-2006 issued by the Special Deputy Commissioner, Bengaluru and bounded as under:

East by : Bellary Road;
West by : Land bearing Sy. No. 80;
North by : Land bearing Sy.No.80; &
South by : Karim Silks Factory.

Jayanth M Pattanshetti, Advocate
Jayanth Pattanshetti Associates LLP
No.102, Ground Floor, "Rams Infantry Manor",
No.70, Infantry Road, Bengaluru-560001
Ph.: 080 25593195/41238516

Bengaluru
Date : 19-04-2024

ನಗರದಲ್ಲಿ ಇಂದು

ಮಹಾವೀರ ಜಯಂತಿ, ಮಹಾವೀರ ಭವನದ ಉದ್ಘಾಟನೆ: ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಅಧ್ಯಕ್ಷತೆ: ವಿ.ಪ್ರಶಾಂತ್, ಅತಿಥಿಗಳು: ಕೆ.ಆರ್. ಸಂಧ್ಯಾರೆಡ್ಡಿ, ಕೆ.ಬಿ.ಮುನಿವೆಂಕಟರೆಡ್ಡಿ, ಸ್ವಾತಿ, ಸನ್ಮಾನಿತರು: ಕೌಶಲ್ಯ ಧರಣೇಂದ್ರಯ್ಯ, ವೈ.ಎಸ್. ರಾಜೇಂದ್ರಕುಮಾರ್, ಶಾರದಮ್ಮ, ಆಯೋಜನೆ: ದಿಗಂಬರ ಮಹಾವೀರ ಸಂಘ, ಸ್ಥಳ: ಎಚ್‌ಎಎಲ್ ಜಿನ ಮಂದಿರ, ಕೋನೇನ ಅಗ್ರಹಾರ, ವಿಮಾನಪುರ (ಎಚ್‌ಎಎಲ್), ಬೆಳಿಗ್ಗೆ 10.30

'ಪರಿವ್ರಾಜಕ ಪ್ರಾಣಪ್ರತಿಷ್ಠಾ ಪ್ರಹಸನ' ಪ್ರಜ್ಞಾಹಾಸ್ಯ ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ ಎಲ್. ಬಡಿಗೇರ್, ಆಯೋಜನೆ: ಥೀಮ್ ಗಿಣ ಕಲಾಕೇಂದ್ರ, ಸ್ಥಳ: ಸಂಧ್ಯಾ ಸುರಕ್ಷಾ ವೃದ್ಧಾಶ್ರಮ ಆಡುಗೋಡಿ, ಬೆಳಿಗ್ಗೆ 10.30

ಜೋಗಿ ಅವರ 'ಭಗ್ನಪ್ರೇಮಿಯ ಅಪೂರ್ಣ ಡೈರಿ' ಪುಸ್ತಕ ಬಿಡುಗಡೆ: ಅತಿಥಿಗಳು: ರವಿ ಹೆಗಡೆ, ವಿಶ್ವೇಶ್ವರ ಭಟ್, ಸುದರ್ಶನ ಚನ್ನಂಗಿಹಳ್ಳಿ, ಗೋಪಾಲಕೃಷ್ಣ ಕುಂಟಿನಿ, ಎ.ಸತೀಶ್, ಅರುಣ್ ಸಾಗರ್, ಆಯೋಜನೆ: ಸಾವಣ್ಣ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ವಾರ್ಷಿಕೋತ್ಸವ, ವಿಶೇಷ ಸಂಚಿಕೆ ಹಾಗೂ ಪುಸ್ತಕಗಳ ಬಿಡುಗಡೆ: ಅಧ್ಯಕ್ಷತೆ: ಎನ್. ಸತ್ಯಪ್ರಕಾಶ್, ಬೈರಮಂಗಲ ರಾಮೇಗೌಡ, ಶ್ರೀಧರ ರಾಯಸಂ, ದೊಡ್ಡರಂಗೇಗೌಡ, ಬೆಮೆಲ್ ಸೆಲ್ವಕುಮಾರ್, ರಾಂ.ಕೆ. ಹನುಮಂತಯ್ಯ, ಆಯೋಜನೆ: ಅಕ್ಷರ ಐಸಿರಿ, ಸ್ಥಳ: ಬಸವೇಶ್ವರನಗರ ಹಿರಿಯ ನಾಗರಿಕರ ವೇದಿಕೆ, ಬಸವೇಶ್ವರನಗರ, ಬೆಳಿಗ್ಗೆ 11

ಸಮರ್ಪಣ ದಿನ: ಪ್ರವಚನ: ಜೆ. ಗೀತಾರೆಡ್ಡಿ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಸಂಜೆ 4ರಿಂದ

ಬಿ.ಕೆ.ಶ್ರೀರಾಮಯ್ಯ, ಹೀರೆಗೌಡರ್ ಅವರ ಸಾರ್ವಜನಿಕ ದತ್ತಿ ಉಪನ್ಯಾಸ: 'ಹೃದಯ ಚಿಕಿತ್ಸೆ–ಪಕ್ಷಿನೋಟ' ಕುರಿತು ಉಪನ್ಯಾಸ: ಡಾ. ವೇಣುಗೋಪಾಲರಾಮ ರಾವ್, 'ಕುತ್ತಿಗೆ ಮತ್ತು ಬೆನ್ನು ನೋವು–ಕಾರಣಗಳು ಮತ್ತು ಪರಿಹಾರದ ಚಿಕಿತ್ಸೆ' ಕುರಿತು ಉಪನ್ಯಾಸ: ಡಾ.ಯದು ಕೆ.ಎಲ್., ಆಯೋಜನೆ ಮತ್ತು ಸ್ಥಳ: ಭಾರತೀಯ ವೈದ್ಯಕೀಯ ಸಂಘ, ಐಎಂಎ ಸಭಾಂಗಣ, ಚಾಮರಾಜಪೇಟೆ, ಸಂಜೆ 4.30

ಬೆಂಗಳೂರು ಕರಗೋತ್ಸವ: 'ಹಸಿ ಕರಗ' ರಾತ್ರಿ 3ಕ್ಕೆ, ದೇವರ ನಾಮ–ಭಜನೆ: ಸೌಂದರ್ಯ ಲಹರಿ ಮಹಿಳಾ ಸಂಘ, ಸಾಂಸ್ಕೃತಿಕ ಕಾರ್ಯಕ್ರಮಗಳು: ದೀಪಾ ಭಟ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 5ರಿಂದ

'ಡಾ. ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ' ಪ್ರದಾನ: ನಾಗರಾಜ್ ಕೋಟೆ, ಉದ್ಘಾಟನೆ: ವಿ. ಮನೋಹರ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಅಭಿಮಾನಿ ಪುರಸ್ಕೃತರು: ರಾಜು ಸಿ. ಚಾಮರಾಜಪೇಟೆ, ಬಿ.ಎಸ್. ಜಯರಾಮರಾಜು, ವಿ. ರಾಮದಾಸ್, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ರಾಮನವಮಿ ಸಂಗೀತೋತ್ಸವ–2024: ಎಸ್‌ವಿಎನ್ ರಾವ್ ಶತಮಾನೋತ್ಸವ ಪ್ರಶಸ್ತಿ ಪ್ರದಾನ ಕಾರ್ಯಕ್ರಮ, ವಿಶೇಷ ಕರ್ನಾಟಕ–ಹಿಂದೂಸ್ತಾನಿ ಜುಗಲ್‌ಬಂದಿ

ಸಂಗೀತ ಕಛೇರಿ: ಜಯತೀರ್ಥ ಮೇವುಂಡಿ, ಸಂದೀಪ್ ನಾರಾಯಣ, ಮತ್ತೂರು ಶ್ರೀನಿಧಿ, ಮಿಲಿಂದ್ ಕುಲಕರ್ಣಿ, ಸಾಯಿ ಗಿರಿಧರ್, ಇಶಾನ್ ಘೋಷ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ಜಯತೀರ್ಥ ಮೇವುಂಡಿ

ಶ್ರೀರಾಮೋತ್ಸವ: 'ಶ್ರೀನಿವಾಸ ಕಲ್ಯಾಣ' ನೃತ್ಯ ರೂಪಕ: ಪ್ರಸ್ತುತಿ: ಜಯಲಕ್ಷ್ಮಿ ಜಿತೇಂದ್ರ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಜಯರಾಮ ಸೇವಾ ಮಂಡಳಿ, 1ನೇ ಮುಖ್ಯರಸ್ತೆ, 8ನೇ ಬಡಾವಣೆ, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬೇಸಿಗೆ ರಜೆ: ಬೆಂಗಳೂರು–ಬೀದರ್ ನಡುವೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಬೇಸಿಗೆ ರಜೆಯಲ್ಲಿ ಪ್ರಯಾಣಿಕರ ದಟ್ಟಣೆ ನಿರ್ವಹಿಸಲು ಬೆಂಗಳೂರು–ಬೀದರ್ ನಡುವೆ ಎರಡು ವಿಶೇಷ ರೈಲುಗಳನ್ನು ಓಡಿಸಲು ದಕ್ಷಿಣ ಮಧ್ಯ ರೈಲ್ವೆ ನಿರ್ಧರಿಸಿದೆ.

ಒಂದು ರೈಲು ಏಪ್ರಿಲ್ 21ರಿಂದ ಮೇ 13ರ ತನಕ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಹಾಗೂ ಬೀದರ್ ನಡುವೆ ವಾರಕ್ಕೆ ಎರಡು ದಿನ ಸಂಚರಿಸಲಿದೆ. ಮತ್ತೊಂದು ರೈಲು ಏ.26ರಿಂದ ಜೂನ್ 14ರ ಅವಧಿಯಲ್ಲಿ ವಾರಕ್ಕೆ ಒಮ್ಮೆ ಸಂಚರಿಸಲಿದೆ.

06589 ಸಂಖ್ಯೆಯ ರೈಲು ಭಾನುವಾರ ಹಾಗೂ ಮಂಗಳವಾರ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರಾತ್ರಿ 11 ಗಂಟೆಗೆ ಹೊರಟು, ಮರುದಿನ ಮಧಾಹ್ನ 12 ಗಂಟೆಗೆ ಬೀದರ್ ತಲುಪಲಿದೆ. 06590 ಸಂಖ್ಯೆಯ ರೈಲು ಸೋಮವಾರ ಹಾಗೂ ಬುಧವಾರ ಬೀದರ್‌ನಿಂದ ಮಧ್ಯಾಹ್ನ 2.10ಕ್ಕೆ ಹೊರಟು, ಮರುದಿನ ನಸುಕಿನ 4.15ಕ್ಕೆ ಬೆಂಗಳೂರು ತಲುಪಲಿದೆ.

06597 ಸಂಖ್ಯೆಯ ರೈಲು ಪ್ರತಿ ಶುಕ್ರವಾರ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರಾತ್ರಿ 11 ಗಂಟೆಗೆ ಹೊರಟು ಮರುದಿನ ಮಧಾಹ್ನ 12 ಗಂಟೆಗೆ ಬೀದರ್ ತಲುಪಲಿದೆ. 06598 ಸಂಖ್ಯೆಯ ರೈಲು ಪ್ರತಿ ಶನಿವಾರ ಬೀದರ್‌ನಿಂದ ಮಧ್ಯಾಹ್ನ 2.10ಕ್ಕೆ ಹೊರಟು, ಮರುದಿನ ನಸುಕಿನ 4.15ಕ್ಕೆ ಬೆಂಗಳೂರು ತಲುಪಲಿದೆ ಎಂದು ದಕ್ಷಿಣ ಮಧ್ಯ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.

ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ಕರ್ನಾಟಕಕ್ಕೆ ಅನ್ಯಾಯ ಮಾಡಿದೆ: ಆರೋಪ

ಕಾಂಗ್ರೆಸ್‌ನಿಂದ 'ಚೊಂಬು' ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ' ಎಂದು ಆರೋಪಿಸಿ ಚೊಂಬು ಹಿಡಿದು ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಅರಮನೆ ಮೈದಾನಕ್ಕೆ ಮೋದಿ ಬರುತ್ತಿದ್ದರಿಂದ ಕಾರಣಕ್ಕೆ ಮೇಕ್ರಿ ವೃತ್ತದ ಬಳಿ ಶನಿವಾರ ಬೆಳಿಗ್ಗೆ ಚೊಂಬು ಹಿಡಿದುಕೊಂಡು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ತಕ್ಷಣ ಚೊಂಬು ಕಸಿದುಕೊಂಡ ಪೊಲೀಸರು, ಪ್ರತಿಭಟನಾ ನಿರತರನ್ನು ವಶಕ್ಕೆ ಪಡೆದರು.

ಈ ವೇಳೆ ಮಾತನಾಡಿದ ಸುರ್ಜೇವಾಲ, 'ಬರ ಪರಿಹಾರ, ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಲ್ಲಿ ಅನುದಾನ ನೀಡಬೇಕಿದ್ದ ಕೇಂದ್ರ ಸರ್ಕಾರ ರಾಜ್ಯಕ್ಕೆ ಚೊಂಬು ನೀಡಿದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಚೊಂಬು ಸರ್ಕಾರ. ಕಳೆದ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾಗಿದ್ದ ಸಂಸದರು ರಾಜ್ಯಕ್ಕೆ ಬರೀ ಚೊಂಬು ನೀಡಿಯೇ ಶಕ್ತರಾಗಿದ್ದಾರೆ' ಎಂದು ಕಿಡಿಕಾರಿದರು.

ಸಚಿವರಾದ ಕೃಷ್ಣ ಬೈರೇಗೌಡ, ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು, ಶಾಸಕ ರಿಜ್ವಾನ್ ಅರ್ಷದ್ ಸೇರಿದಂತೆ ಪಕ್ಷದ ಹಲವು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಗರದ ಭೂಪಸಂದ್ರದ ಬಸ್ ನಿಲ್ದಾಣದ ಬಳಿ ಪಕ್ಷದ ಕಾರ್ಯಕರ್ತರ ಜೊತೆ ಚೊಂಬು ಹಿಡಿದು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ವಿ. ರಾಜೀವ್ ಗೌಡ ಪ್ರತಿಭಟನೆ ನಡೆಸಿದರು. 'ಅತಿ ಹೆಚ್ಚು ತೆರಿಗೆ ಪಾವತಿಸುವ ಕರ್ನಾಟಕಕ್ಕೆ ನರೇಂದ್ರ ಮೋದಿ ಸರ್ಕಾರ ಶೂನ್ಯ ಕೊಡುಗೆ ನೀಡುವ ಮೂಲಕ ಜನಸಾಮಾನ್ಯರ ಕೈಗೆ ಖಾಲಿ ಚೊಂಬು ಕೊಟ್ಟಿದೆ' ಎಂದು ಅವರು ವ್ಯಂಗ್ಯವಾಡಿದರು.

'ಬರ ಪರಿಹಾರ ವಿಚಾರದಲ್ಲಿ ಮೋದಿ ನಮಗೆ ಮೋಸ ಮಾಡಿದ್ದಾರೆ. ಅಷ್ಟೇ ಏಕೆ, ಅಧಿಕಾರಕ್ಕೆ ಬರುವ ಅತಿಯಾಸೆಯಿಂದ ಎಲ್ಲರ ಖಾತೆಗೆ ₹ 15 ಲಕ್ಷ ಹಾಕುತ್ತೇವೆ ಎಂದು ಅವರು ಹೇಳಿದ್ದು ದೊಡ್ಡ ಮೋಸ. ಚೊಂಬುಗಳನ್ನಷ್ಟೆ ನೀಡಿರುವ ಬಿಜೆಪಿಗೆ ಲೋಕಸಭಾ ಚುನಾವಣೆಯಲ್ಲಿ ಕನ್ನಡಿಗರು ಅದೇ ಚೊಂಬು ನೀಡಿ ಮನೆಗೆ ಕಳುಹಿಸಲಿದ್ದಾರೆ' ಎಂದು ವಾಗ್ದಾಳಿ ನಡೆಸಿದರು. ಸಚಿವ ಬೈರತಿ ಸುರೇಶ್, ಕಾಂಗ್ರೆಸ್ ವಕ್ತಾರ ಎ.ಎನ್. ನಟರಾಜ್ ಗೌಡ ಇದ್ದರು.

ಗಾಂಧಿನಗರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಚೊಂಬು ಹಿಡಿದು ಮೈಸೂರು ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಮೇಕ್ರಿ ವೃತ್ತದ ಬಳಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಚೊಂಬು ಹಿಡಿದು ಶನಿವಾರ ಪ್ರತಿಭಟನೆ ನಡೆಸಿದರು. ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್, ಶಾಸಕ ರಿಜ್ವಾನ್ ಅರ್ಷದ್ ಪಾಲ್ಗೊಂಡಿದ್ದರು

ಮೋದಿಗೆ ಚೊಂಬು ತೋರಿಸಲು ಯತ್ನ

ಅರಮನೆ ಮೈದಾನದಲ್ಲಿ ಶನಿವಾರ ಸಂಜೆ ನಡೆದ ಬಿಜೆಪಿ–ಜೆಡಿಎಸ್ ಪಕ್ಷದ 'ವಿಜಯ ಸಂಕಲ್ಪ' ಸಮಾವೇಶದಲ್ಲಿ ಭಾಗವಹಿಸಲು ಬಂದ ಪ್ರಧಾನಿ ಮೋದಿಯವರಿಗೆ ಚೊಂಬು ತೋರಿಸಲು ಯತ್ನಿಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮದ್ ನಲಪಾಡ್ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಮೋದಿ ತೆರಳುವ ಮೇಕ್ರಿ ವೃತ್ತಕ್ಕೆ ಅರ್ಧಗಂಟೆ ಮೊದಲೇ ನಲಪಾಡ್ ಮತ್ತು ಎಂಟು ಮಂದಿ ಬಂದಿದ್ದರು. ಚೊಂಬು ಹಿಡಿದಿದ್ದ ಕೈಗಳನ್ನು ಬೆನ್ನ ಹಿಂದೆ ಹಿಡಿದಿದ್ದ ರಸ್ತೆಗಳಿದ್ದ ಮೋದಿ ಬರುವ ಹಾದಿಯಲ್ಲಿ ನಡೆಯತೊಡಗಿದ್ದರು. ಪೊಲೀಸರು, ನಲಪಾಡ್ ಮತ್ತು ಸ್ನೇಹಿತರನ್ನು ವಶಕ್ಕೆ ಪಡೆದು, ನಂತರ ಬಿಟ್ಟು ಕಳಿಸಿದರು. ಕಮಿಷನರ್ ಆದೇಶ ಉಲ್ಲಂಘನೆ ಆರೋಪದಡಿ ಇವರ ವಿರುದ್ಧ ನ್ಯಾಯಾಲಯಕ್ಕೆ ಪೊಲೀಸರು ವರದಿ ಸಲ್ಲಿಸಲಿದ್ದಾರೆ.

ಮೇಕ್ರಿ ವೃತ್ತದ ಬಳಿ ಚೊಂಬು ತೋರಿಸಿ ಪ್ರತಿಭಟನೆ ನಡೆಸಿದ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮದ್ ನಲಪಾಡ್ ಮತ್ತು ಬೆಂಬಲಿಗರನ್ನು ಪೊಲೀಸರು ವಶಕ್ಕೆ ಪಡೆದರು

'ಖಾಲಿ ಚೊಂಬನ್ನು ಅಕ್ಷಯ ಪಾತ್ರೆ ಮಾಡಿದ ಮೋದಿ'

ಚಿಕ್ಕಬಳ್ಳಾಪುರ: ಹತ್ತು ವರ್ಷದ ಆಡಳಿತದಲ್ಲಿ ರಾಷ್ಟ್ರದ ಸಂಪತ್ತು ಲೂಟಿ ಮಾಡಿದ ಕಾಂಗ್ರೆಸ್ ಸರ್ಕಾರ ಬೊಕ್ಕಸ ಬರಿದು ಮಾಡಿ 2014ರಲ್ಲಿ ನರೇಂದ್ರ ಮೋದಿ ಅವರ ಕೈಗೆ ಖಾಲಿ ಚೊಂಬು ಕೊಟ್ಟಿತ್ತು. ಮುಂದಿನ ಹತ್ತು ವರ್ಷಗಳಲ್ಲಿ ತಮ್ಮ ಆಡಳಿತದಲ್ಲಿ ಪ್ರಧಾನಿ ನರೇಂದ್ರ ಮೋದಿ ಆ ಖಾಲಿ ಚೊಂಬನ್ನು ತುಂಬಿ ಅಕ್ಷಯ ಪಾತ್ರೆ ಮಾಡಿದರು ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಬಣ್ಣಿಸಿದ್ದಾರೆ.

ದೇವೇಗೌಡ

ಆ ಅಕ್ಷಯ ಪಾತ್ರೆ ಮೂಲಕ ಬಡವರು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು, ಸಣ್ಣ ಸಮಾಜದವರನ್ನು ಮೇಲೆತ್ತಿದ ಮಹಾನುಭಾವ ನರೇಂದ್ರ ಮೋದಿ. ಇಂತಹವರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಿದ್ದಾರೆ. ಇವರಿಗೆ ನಾಚಿಕೆ ಆಗಬೇಕು. ಇದು ಕ್ಷುಲ್ಲಕ ರಾಜಕಾರಣ ಎಂದು ಕಿಡಿಕಾರಿದರು.

ತಾಲ್ಲೂಕಿನ ಚೊಕ್ಕಹಳ್ಳಿ ಬಳಿ ಶನಿವಾರ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಜ್ಯಕ್ಕೆ ಬರೀ ಚೊಂಬು ನೀಡಿತು ಎಂದು ಮುಖ್ಯಮಂತ್ರಿ ಜಾಹೀರಾತು ನೀಡಿದ್ದಾರೆ. ಆದರೆ, ಮೋದಿ ಕೈಗೆ ಚೊಂಬು ನೀಡಿದ್ದು ಯುಪಿಎ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂದರು.

> ಕಾಂಗ್ರೆಸ್ ಕೊಟ್ಟ ಖಾಲಿ ಚೊಂಬನ್ನು ಮೋದಿ ಏನು ಅಕ್ಷಯ ಪಾತ್ರೆ ಮಾಡಿದ್ದಾರೆಂಬುದನ್ನು ಎಚ್.ಡಿ.ದೇವೇಗೌಡರು ಬಿಡಿಸಿ ಹೇಳಲಿ. ಯಾರ ಹೊಟ್ಟೆ, ಜೇಬು ತುಂಬಿತೆಂದು ಹೇಳಲಿ
>
> **ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ, (ಕೆ.ಆರ್.ಪೇಟೆ ಪ್ರಚಾರ ಸಭೆಯಲ್ಲಿ)

2004ರಿಂದ 2014ರವರೆಗೆ ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದರು. ಸೋನಿಯಾ ಗಾಂಧಿ ಯುಪಿಎ ಅಧ್ಯಕ್ಷೆ ಆಗಿದ್ದರು. ಆಗ '2ಜಿ' ತರಂಗಾಂತರ ಹಗರಣ, ಕಲ್ಲಿದ್ದಲು ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟದ ಹಗರಣ ಸೇರಿದಂತೆ ಹಲವು ಹಗರಣಗಳ ಮೂಲಕ ಕಾಂಗ್ರೆಸ್ ವ್ಯಾಪಕ ಭ್ರಷ್ಟಾಚಾರ ನಡೆಸಿತು ಎಂದು ತರಾಟೆಗೆ ತೆಗೆದುಕೊಂಡರು.

ರಾಜ್ಯಕ್ಕೆ ಖಾಲಿ ಚೊಂಬು ಕೊಟ್ಟಿರುವ ಮೋದಿ: ಸಿದ್ದರಾಮಯ್ಯ

ಮೈಸೂರು: 'ಪ್ರಧಾನಿ ನರೇಂದ್ರ ಮೋದಿ ಕರ್ನಾಟಕಕ್ಕೆ ಖಾಲಿ ಚೊಂಬು ಕೊಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಜೆಪಿ ಸರ್ಕಾರವು ಈ ದೇಶದ ಜನರಿಗೆ ಖಾಲಿ ಚೊಂಬು ಕೊಟ್ಟಿದೆ. ಅದನ್ನೇ ನಾವು ಜಾಹೀರಾತು ಕೊಟ್ಟಿದ್ದೇವೆ' ಎಂದು ಹೇಳಿದರು.

'ಮೋದಿ ಜನರಿಗೆ ₹ 15 ಲಕ್ಷ ಕೊಟ್ರಾ? 100 ದಿನಗಳಲ್ಲಿ ವಿದೇಶದಿಂದ ಕಪ್ಪುಹಣ ತಂದು ಎಲ್ಲರ ಖಾತೆಗೂ ಹಾಕುವುದಾಗಿ ಹೇಳಿದ್ರಲ್ಲಾ, ಹಾಕಿದರಾ? ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸಿದರಾ? ರೈತರ ಆದಾಯ ದ್ವಿಗುಣ ಮಾಡಿದರಾ? ಒಳ್ಳೆಯ ದಿನಗಳು ಬಂದ್ವಾ? ಈ ಕಾರಣದಿಂದಲೇ ಖಾಲಿ ಚೊಂಬು ಕೊಟ್ಟಿದ್ದಾರೆಂದು ನಾವು ಹೇಳುತ್ತಿರುವುದು' ಎಂದು ಸಮರ್ಥಿಸಿಕೊಂಡರು.

'ಒಂದು ಆಶ್ವಾಸನೆಯನ್ನೂ ಮೋದಿ ಈಡೇರಿಸಿಲ್ಲ. ಎಚ್.ಡಿ. ಕುಮಾರಸ್ವಾಮಿ ಈಗ ಏನಾದರೂ ಹೇಳಿಕೊಳ್ಳಲಿ. ಆದರೆ, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿಲ್ಲ. ಎಲ್ಲ ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದೇವೆ. ಅಭಿವೃದ್ಧಿ ಕೆಲಸಗಳನ್ನೂ ಮುಂದುವರಿಸುತ್ತಿದ್ದೇವೆ' ಎಂದರು.

ಚೊಂಬು ಹಿಡಿದು ಪ್ರಧಾನಿ ಎದುರು ಭಿಕ್ಷೆ: ಎಚ್‌ಡಿಕೆ

ಮೈಸೂರು: 'ರಾಜ್ಯ ಸರ್ಕಾರವು ಚೊಂಬು ಹಿಡಿದುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಭಿಕ್ಷೆ ಬೇಡುತ್ತಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಇಲ್ಲಿನ ಸುತ್ತೂರು ಮಠದಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಶನಿವಾರ ಭೇಟಿಯಾಗಿ ಆಶೀರ್ವಾದ ಪಡೆದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಸರ್ಕಾರದ ಖಜಾನೆ ಖಾಲಿಯಾಗಿದ್ದು, ದಯವಿಟ್ಟು ತುಂಬಿಸಿಕೊಡಿ ಎಂದು ಮೋದಿ ಬಳಿ ಕೇಳುತ್ತಿದ್ದಾರೆ. ಕೋವಿಡ್ ಸಂಕಷ್ಟದಲ್ಲೂ ಖಜಾನೆ ಸುಭಿಕ್ಷವಾಗಿತ್ತು. ಕಾಂಗ್ರೆಸ್‌ನ ಅಪಪ್ರಚಾರದ ನಡುವೆಯೂ ಬಿಜೆಪಿಯವರು ಉತ್ತಮ ಸ್ಥಿತಿಯಲ್ಲಿಟ್ಟಿದ್ದರು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಖಾಲಿಯಾಗಿದೆ. ಕನ್ನಡಿಗರ ಕೈಗೆ ಖಾಲಿ ಚೊಂಬು ಕೊಟ್ಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಜನ ಕಟ್ಟಿದ ತೆರಿಗೆ ಹಣವನ್ನೆಲ್ಲಾ ಸಂಪೂರ್ಣ ನುಂಗಿದ್ದೇವೆ. ಭಿಕ್ಷೆ ಬೇಡುವ ಪರಿಸ್ಥಿತಿಗೆ ಬಂದಿದ್ದೇವೆ ಎನ್ನುವ ಚಿಹ್ನೆಯನ್ನು ಅವರು ತೋರಿಸಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ಕೆಫೆ ಬಾಂಬ್ ಸ್ಫೋಟ ಪ್ರಕರಣ ಕಸ್ಟಡಿ ಅವಧಿ ನಾಳೆ ಮುಕ್ತಾಯ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲಾಗಿರುವ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮದ್ ತಾಹಾ ಕಸ್ಟಡಿ ಅವಧಿ ಏಪ್ರಿಲ್ 22ರಂದು ಮುಕ್ತಾಯವಾಗಲಿದ್ದು, ಅವರಿಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳು, ಮುಸಾವೀರ್, ತಾಹಾನನ್ನು ಏಪ್ರಿಲ್ 12ರಂದು ಬಂಧಿಸಿದ್ದರು. ಅವರಿಬ್ಬರನ್ನು ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದರು. 'ಇಬ್ಬರೂ ಶಂಕಿತರನ್ನು ಏಪ್ರಿಲ್ 12ರಿಂದ 22ರವರೆಗೆ ಕಸ್ಟಡಿಗೆ ಪಡೆಯಲಾಗಿದೆ. ಇಬ್ಬರನ್ನೂ ರಾಜ್ಯದ ಹಲವು ಸ್ಥಳಗಳಿಗೆ ಕರೆದೊಯ್ದು ಮಹಜರು ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಶಂಕಿತರಿಂದ ಸಾಕಷ್ಟು ಮಾಹಿತಿ ಕಲೆ ಹಾಕಲಾಗಿದ್ದು, ಪುರಾವೆಗಳನ್ನೂ ಸಂಗ್ರಹಿಸಲಾಗಿದೆ. ಇವುಗಳನ್ನು ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ. 'ಬಾಂಬ್ ಸ್ಫೋಟದಲ್ಲಿ ಮುಸಾವೀರ್ ಹಾಗೂ ತಾಹಾ ಪ್ರಮುಖ ಶಂಕಿತರು. ಸ್ಫೋಟದ ಸಂಚಿನಲ್ಲಿ ಹಲವರು ಭಾಗಿಯಾಗಿರುವ ಮಾಹಿತಿ ಈಗಾಗಲೇ ಲಭ್ಯವಾಗಿದೆ. ಈ ಪೈಕಿ ಹಲವರಿಗೆ ನೋಟಿಸ್ ನೀಡಿ ವಿಚಾರಣೆ ಸಹ ನಡೆಸಲಾಗುತ್ತಿದೆ' ಎಂದು ತಿಳಿಸಿವೆ.

ತಮಿಳುನಾಡಿನಲ್ಲಿ ಶೋಧ: 'ಸ್ಫೋಟಕ್ಕೂ ಮುನ್ನ ಮುಸಾವೀರ್ ಹಾಗೂ ತಾಹಾ ತಮಿಳುನಾಡಿನಲ್ಲಿ ಕೆಲ ದಿನ ವಾಸವಿದ್ದರು. ಅದೇ ಸ್ಥಳದಲ್ಲಿ ಅವರು ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದರೆಂಬ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ಪುರಾವೆಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಹುಲಿ ದಾಳಿ: ಮರಿಯಾನೆ ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಊಟಿ ರಸ್ತೆಯಲ್ಲಿ (ರಾಷ್ಟ್ರೀಯ ಹೆದ್ದಾರಿ 181) ಗಂಡು ಮರಿಯಾನೆಯೊಂದು ಶನಿವಾರ ಮೃತಪಟ್ಟಿದೆ.

'ಹುಲಿ ದಾಳಿಯಿಂದ ಮರಿಯಾನೆ ಸತ್ತಿರುವ ಸಾಧ್ಯತೆ ಇದೆ. ದೇಹದಲ್ಲಿ ಪರಚಿದ ಗಾಯಗಳು ಕಂಡು ಬಂದಿದ್ದು, 2–3 ದಿನಗಳ ಹಿಂದೆಯೇ ದಾಳಿ ಮಾಡಿರಬಹುದು' ಎಂದು ಬಂಡೀಪುರದ ಅಧಿಕಾರಿಗಳು ಶಂಕಿಸಿದ್ದಾರೆ. ಬಂಡೀಪುರದಿಂದ ಕೆಕ್ಕನಹಳ್ಳ ಚೆಕ್‌ಪೋಸ್ಟ್ ನಡುವೆ ಹೆದ್ದಾರಿ ಬದಿಯಲ್ಲಿ ಮರಿ ಮೃತಪಟ್ಟಿದೆ. ಮರಿಯಾನೆಗೆ ನಾಲ್ಕು ತಿಂಗಳಾಗಿರಬಹುದು ಎಂದು ಅಂದಾಜಿಸಲಾಗಿದೆ.

ಮರಿಯ ಕಳೇಬರದ ಬಳಿ ತಾಯಾನೆಯು ನಿಂತು ರೋದಿಸುತ್ತಿದ್ದುದರಿಂದ, ಹೆದ್ದಾರಿಯಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ವಾಹನಗಳು ಕಿ.ಮೀ ಗಟ್ಟಲೆ ಸಾಲು ನಿಂತಿದ್ದವು. ಒಂದು ಗಂಟೆ ಕಾಲ ಸಂಚಾರ ಸ್ಥಗಿತಗೊಂಡಿತ್ತು. ನಂತರ ಬಂಡೀಪುರದ ಅಧಿಕಾರಿಗಳು ಮತ್ತು ಸಿಬ್ಬಂದಿ ಸ್ಥಳಕ್ಕೆ ಬಂದು ತಾಯಿ ಆನೆಯನ್ನು ಓಡಿಸಿ, ಮರಿಯಾನೆಯ ಮೃತದೇಹವನ್ನು ತೆರವುಗೊಳಿಸಿದರು.

ಪಿರಿಯಾಪಟ್ಟಣದಲ್ಲಿ ಚುನಾವಣಾ ತರಬೇತಿ ಪಡೆಯುತ್ತಿದ್ದ ಸಿಬ್ಬಂದಿಗೆ ಸಕಾಲದಲ್ಲಿ ಅಂಚೆ ಮತಪತ್ರ ತಲುಪಿಸದ ಕಾರಣ ಸಿಬ್ಬಂದಿ ಆಕ್ರೋಶ ವ್ಯಕ್ತಪಡಿಸಿದರು

ಸಕಾಲದಲ್ಲಿ ತಲುಪದ ಅಂಚೆ ಮತಪತ್ರ:ಆಕ್ರೋಶ

ಪ್ರಜಾವಾಣಿ ವಾರ್ತೆ

ಪಿರಿಯಾಪಟ್ಟಣ(ಮೈಸೂರು ಜಿಲ್ಲೆ): 'ಅಂಚೆ ಮತಪತ್ರಗಳನ್ನು ಸಕಾಲದಲ್ಲಿ ಒದಗಿಸಿಲ್ಲ' ಎಂದು ದೂರಿ, ತರಬೇತಿಗೆ ಹಾಜರಾಗಿದ್ದ ಸಿಬ್ಬಂದಿ ಶನಿವಾರ ಚುನಾವಣಾ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪುಷ್ಪ ವಿದ್ಯಾಸಂಸ್ಥೆಯಲ್ಲಿ ತರಬೇತಿ ಬಳಿಕ ಅಂಚೆ ಮತಪತ್ರಗಳನ್ನು ಒದಗಿಸದೇ ಇದ್ದುದರಿಂದ ಅಸಮಾಧಾನಗೊಂಡ ಸಿಬ್ಬಂದಿ, 'ನಾವು ಕೊಳ್ಳೇಗಾಲ ಹಾಗೂ ದೂರದ ಊರುಗಳಿಂದ ಬಂದಿದ್ದೇವೆ. ಮತಪತ್ರಗಳನ್ನು ನೀಡದೆ ಸತಾಯಿಸುತ್ತಿದ್ದೀರಿ, ನಾಳೆ, ನಾಡಿದ್ದು ಬನ್ನಿ ಎನ್ನುತ್ತಿದ್ದೀರಿ. ಮತ್ತೆ ಬರಲು ಸಾಧ್ಯವಿಲ್ಲ. ನಮ್ಮ ಮತಗಳನ್ನು ಬೇರೆಯವರು ಚಲಾಯಿಸುವುದಿಲ್ಲ ಎಂಬ ಗ್ಯಾರಂಟಿ ಏನು' ಎಂದು ಪ್ರಶ್ನಿಸಿದರು.

ಅದಕ್ಕೆ ಸಮಜಾಯಿಷಿ ನೀಡಿದ ಸಹಾಯಕ ಚುನಾವಣಾ ಅಧಿಕಾರಿ ಜಿ. ಡಿ.ಶೇಖರ್, 'ಮತಪತ್ರಗಳನ್ನು ಸಕಾಲದಲ್ಲಿ ಇಲ್ಲಿಗೆ ತಲುಪಿಲ್ಲ, ನೀವು ಯಾವ ತಾಲ್ಲೂಕು ಕೇಂದ್ರದಲ್ಲಿ ಮತ ಚಲಾಯಿಸುತ್ತೀರಿ ಎಂದು ಲಿಖಿತವಾಗಿ ಬರೆದುಕೊಟ್ಟರೆ, ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಿ ಅಂಚೆ ಮತಪತ್ರಗಳನ್ನು ತಲುಪಿಸಲಾಗುವುದು' ಎಂದು ಸಿಬ್ಬಂದಿಯನ್ನು ಸಮಾಧಾನಪಡಿಸಿದರು.

ಕರ್ನಾಟಕ ಸರ್ಕಾರ
ಅಡ್ವೊಕೇಟ್ ಜನರಲ್‌ರವರ ಕಛೇರಿ, ಉಚ್ಚನ್ಯಾಯಾಲಯ ಕಟ್ಟಡ,
ಬೆಂಗಳೂರು-560001. ದೂರವಾಣಿ ಸಂಖ್ಯೆ: 080-22862583,
E-mail ID: advgen2009@gmail.com
No: F.N-23/AG/EST-1/2023-24 Dt: 16.04.2024

''ನೋಟೀಸ್''

ಶ್ರೀ ಎಂ. ರಾಕೇಶ್ ಬಿನ್ ಲೇಟ್ ಹೆಚ್. ಮುನಿರಾಜು ಸಮೂಹ'ಡಿ' ವೃಂದದ ನೌಕರರಾದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ ನೀವು ಕಾವಲುಗಾರರಾಗಿ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ನೇಮಕಗೊಂಡಿದ್ದು, ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಎಫ್.ಎನ್-01/ಎಜಿ/ಸಿಬ್ಬಂದಿ-1/2023-24, ದಿನಾಂಕ: 15.06.2023ರನ್ವಯ ತಮ್ಮನ್ನು ಅಡ್ವೊಕೇಟ್ ಜನರಲ್‌ರವರ ಕಲಬುರಗಿ ಘಟಕ ಕಚೇರಿಗೆ ವರ್ಗಾವಣೆಗೊಳಿಸಿ, ಈ ಕಚೇರಿಯ ಅಧಿಕೃತ ಜ್ಞಾಪನ ಸಂಖ್ಯೆ:47/ಎ.ಜಿ/ಸಿಬ್ಬಂದಿ-1/2023-24, ದಿನಾಂಕ:16.06.2023 ರಲ್ಲಿ ನಿಮ್ಮನ್ನು ಬೆಂಗಳೂರು ಕೇಂದ್ರ ಕಚೇರಿಯ ಕರ್ತವ್ಯದಿಂದ ಬಿಡುಗಡೆಗೊಳಿಸಿದ ಆದೇಶವನ್ನು ನಿಮಗೆ ಖುದ್ದು ಜಾರಿ ಮಾಡಿದಾಗ, ನೀವು ಅದನ್ನು ಸ್ವೀಕರಿಸಲು ನಿರಾಕರಿಸಿದ ಕಾರಣ, ಸದರಿ ವರ್ಗಾವಣೆ ಆದೇಶವನ್ನು ನೀವು ಕಚೇರಿಗೆ ನೀಡಿರುವ ಮತ್ತು ನಿಮ್ಮ ಸೇವಾ ವಹಿಯಲ್ಲಿನ ವಿಳಾಸಕ್ಕೆ RPAD ಮುಖಾಂತರ ಕಳುಹಿಸಲಾಗಿ, ಸದರಿ ಲಕೋಟೆ ನಿಮಗೆ ಸ್ವೀಕೃತಗೊಂಡಿರುತ್ತದೆ. ಆದರೆ, ನೀವು ದಿನಾಂಕ: 17.06.2023 ರಿಂದ ತಹಲ್ ವರೆಗೂ ವರ್ಗಾವಣೆಗೊಂಡ ಸ್ಥಳದಲ್ಲಿ ವರದಿಮಾಡಿಕೊಂಡಿರುವುದಿಲ್ಲ ಮತ್ತು ಸಕ್ಷಮ ಪ್ರಾಧಿಕಾರದಿಂದ ರಜೆಯನ್ನು ಮಂಜೂರು ಮಾಡಿಸಿಕೊಳ್ಳದೇ ಸರ್ಕಾರಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತೀರಿ. ಈ ಬಗ್ಗೆ ನಿಮ್ಮ ಸೇವಾ ವಹಿಯಲ್ಲಿ ದಾಖಲಾಗಿದ್ದ ಹಾಗೂ ಈ ಕಚೇರಿಯಲ್ಲಿನ ದಾಖಲೆಗಳ ಪ್ರಕಾರ ಲಭ್ಯವಿದ್ದ ವಿಳಾಸಕ್ಕೆ 02 ಬಾರಿ ಕಾರಣ ಕೇಳಿ ನೋಟೀಸ್ ಅನ್ನು RPAD ಮುಖಾಂತರ ಜಾರಿ ಮಾಡಲಾಗಿತ್ತು. ಸದರಿ ಲಕೋಟೆಯನ್ನು ತಾವು ಸ್ವೀಕರಿಸಿದ್ದು, ತಹಲ್‌ವರೆಗೂ ನಿಮ್ಮಿಂದ ಯಾವುದೇ ಉತ್ತರ ಈ ಕಚೇರಿಗೆ ಸ್ವೀಕೃತವಾಗಿರುವುದಿಲ್ಲ. ನಿಮ್ಮ ವಿರುದ್ಧ ಶಿಸ್ತು ಕ್ರಮ ಏಕೆ ಕೈಗೊಳ್ಳಬಾರದು ಎಂಬ ಬಗ್ಗೆ ದಿನಾಂಕ: 24.02.2024 ರಂದು ನಿಮಗೆ ಕಾರಣ ಕೇಳಿ ನೋಟೀಸ್ ಮತ್ತು ಅನುಬಂಧ 01 ರಿಂದ 04ನ್ನು (Charge Memo) ಈ ಕಚೇರಿಯಲ್ಲಿನ ದಾಖಲೆಗಳ ಪ್ರಕಾರ ಲಭ್ಯವಿದ್ದ ವಿಳಾಸಕ್ಕೆ RPAD ಮುಖಾಂತರ ಜಾರಿಮಾಡಲಾಗಿತ್ತು. ಸದರಿ ಲಕೋಟೆಯು ನಿಮ್ಮಿಂದ ಸ್ವೀಕೃತಗೊಂಡಿದ್ದರೂ ಸಹ, ತಾವು ತಹಲ್‌ವರೆಗೂ ಉತ್ತರ ನೀಡಿರುವುದಿಲ್ಲ ಹಾಗೂ ಕಚೇರಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತೀರಿ. ಆದ ಕಾರಣ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಆದೇಶವಾಗಿದ್ದು, ವಿಚಾರಣಾಧಿಕಾರಿಯನ್ನು ಮತ್ತು ಮಂಡನಾಧಿಕಾರಿಯವರನ್ನು ನೇಮಿಸಿ ಮಾನ್ಯ ಅಡ್ವೊಕೇಟ್ ಜನರಲ್‌ರವರು ಆದೇಶಿಸಿರುವುದಾಗಿದೆ. ಆದ್ದರಿಂದ, ಈ ಪ್ರಕಟಣೆಯನ್ನು ಅಂತಿಮ ನೋಟೀಸ್ ಎಂದು ಪರಿಗಣಿಸಿ, ಪತ್ರಿಕೆಯಲ್ಲಿ ಈ ನೋಟೀಸ್ ಪ್ರಕಟಣೆಯಾದ ದಿನಾಂಕದಿಂದ 15 ದಿನಗಳೊಳಗಾಗಿ ನೀವು ಸದರಿ ಇಲಾಖಾ ವಿಚಾರಣೆಗೆ ಹಾಜರಾಗಲು ಮತ್ತು ಇಲಾಖಾ ವಿಚಾರಣೆಯ ದಾಖಲೆ / ಮಾಹಿತಿಯನ್ನು ಪಡೆದುಕೊಳ್ಳಲು ಸೂಚಿಸಿದೆ. ತಪ್ಪಿದಲ್ಲಿ ಕಾನೂನಿನನ್ವಯ ಮುಂದಿನ ಕ್ರಮವನ್ನು ವಿಚಾರಣಾಧಿಕಾರಿಗಳು ಕೈಗೊಳ್ಳುವರು ಎಂದು ನಿಮಗೆ ತಿಳಿಸಲು ಮಾನ್ಯ ಅಡ್ವೊಕೇಟ್ ಜನರಲ್‌ರವರಿಂದ / ಸಕ್ಷಮ ಪ್ರಾಧಿಕಾರಿಯವರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ಸಹಿ/- (ಅಭಿಜಿನ್ ಬಿ., ಕೆ.ಎ.ಎಸ್) ಆಡಳಿತಾಧಿಕಾರಿಗಳು,
ಅಡ್ವೊಕೇಟ್ ಜನರಲ್ ರವರ ಕಛೇರಿ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/29/ಕೆಎಸ್‌ಎಂಸಿಎ/2024-25

63 ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಉಮೇದುವಾರಿಕೆ ಬಯಸಿ ನಾಮಪತ್ರ ಸಲ್ಲಿಸಿದ್ದ 63 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾಗಿವೆ.

ರಾಜ್ಯದಲ್ಲಿ ನಡೆಯುತ್ತಿರುವ ಎರಡನೇ ಹಂತದ 14 ಕ್ಷೇತ್ರಗಳಲ್ಲಿ ಸ್ಪರ್ಧಿಸಲು 335 ಅಭ್ಯರ್ಥಿಗಳು ಒಟ್ಟು 503 ನಾಮಪತ್ರ ಸಲ್ಲಿಸಿದ್ದರು. ಶನಿವಾರ ನಡೆದ ನಾಮಪತ್ರಗಳ ಪರಿಶೀಲನೆಯಲ್ಲಿ 109 ನಾಮಪತ್ರಗಳು ತಿರಸ್ಕೃತವಾಗಿವೆ. 46 ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ನಾಮಪತ್ರ ಸಲ್ಲಿಸಿದ್ದರು. ಕ್ರಮಬದ್ಧವಲ್ಲದ ನಾಮಪತ್ರ ಸಲ್ಲಿಸಿದ್ದ 63 ಅಭ್ಯರ್ಥಿಗಳು ಸ್ಪರ್ಧೆಯ ಅವಕಾಶ ಕಳೆದುಕೊಂಡಿದ್ದಾರೆ.

ನಾಮಪತ್ರ ಹಿಂಪಡೆಯಲು ಏ.22 ಕೊನೆಯ ದಿನ. ಈ ಎಲ್ಲ 14 ಕ್ಷೇತ್ರಗಳಿಗೂ ಮೇ 7ರಂದು ಮತದಾನ ನಡೆಯಲಿದೆ.

ಸಿದ್ದೇಶ್ವರ ನಾಮಪತ್ರ ಅಮಾನ್ಯ

ದಾವಣಗೆರೆ: ಸಂಸದ ಜಿ.ಎಂ. ಸಿದ್ದೇಶ್ವರ ಅವರು ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಬದಲಿ ಅಭ್ಯರ್ಥಿಯಾಗಿ ಸಲ್ಲಿಸಿದ್ದ ನಾಮಪತ್ರ ತಿರಸ್ಕೃತಗೊಂಡಿದೆ.

ಬಿಜೆಪಿಯ ಅಧಿಕೃತ ಅಭ್ಯರ್ಥಿಯಾಗಿ ಸಿದ್ದೇಶ್ವರ ಅವರ ಪತ್ನಿ ಜಿ.ಎಸ್. ಗಾಯತ್ರಿ ಉಮೇದುವಾರಿಕೆ ಸಲ್ಲಿಸಿದ್ದರು. ಅದು ಸ್ವೀಕೃತಗೊಂಡಿದೆ. ಈಗಾಗಲೇ 4 ಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಸಿದ್ದೇಶ್ವರ ಅವರು ಶುಕ್ರವಾರ ಬಿಜೆಪಿಯ ಬದಲಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು.

ಶನಿವಾರ ನಾಮಪತ್ರಗಳ ಪರಿಶೀಲನೆ ನಡೆದಿದೆ. ಜಿ.ಎಂ. ಸಿದ್ದೇಶ್ವರ ಸೇರಿ ಏಳು ಅಭ್ಯರ್ಥಿಗಳ ಉಮೇದುವಾರಿಕೆ ತಿರಸ್ಕೃತಗೊಂಡಿವೆ. ಇದಕ್ಕೆ ಕಾರಣವಾದ ಅಂಶಗಳಲ್ಲಿ 'ಬದಲಿ ಅಭ್ಯರ್ಥಿ' ಎಂದು ನಮೂದಿಸಲಾಗಿದೆ.

ಗಾಯತ್ರಿ ಹೆಸರಿನ ಮತ್ತೊಬ್ಬರು ನಾಮಪತ್ರ: ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಜಗಳೂರು ತಾಲ್ಲೂಕಿನ ಗೋಡೆ ಗ್ರಾಮದ ಜಿ.ಎಂ. ಗಾಯತ್ರಿ ಎಂಬುವವರು ನಾಮಪತ್ರ ಸಲ್ಲಿಸಿದ್ದು, ಅದು ಸ್ವೀಕೃತಗೊಂಡಿದೆ. ಇವರ ಪತಿಯ ಹೆಸರು ಜಿ.ಎಂ.ಸಿದ್ದೇಶಿ.

ಬಿ.ವಿ.ನಾಯಕ ನಾಮಪತ್ರ ಅಸಿಂಧು

ರಾಯಚೂರು: ಮಾಜಿ ಸಂಸದ ಬಿ.ವಿ.ನಾಯಕ ಬೆಂಬಲಿಗರು ಬಿ.ವಿ.ನಾಯಕ ಹೆಸರಲ್ಲಿ ಬಿಜೆಪಿಯಿಂದ ಸಲ್ಲಿಸಿದ್ದ ನಾಮಪತ್ರ ಶನಿವಾರ ತಿರಸ್ಕೃತಗೊಂಡಿದೆ.

ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ ಅವರಿಗೆ ಬಿಜೆಪಿಯ ಅಧಿಕೃತ 'ಬಿ' ಫಾರ್ಮ್ ಕೊಟ್ಟಿದ್ದರೂ ಬಿ.ವಿ. ನಾಯಕ ಕಟ್ಟಾ ಬೆಂಬಲಿಗ ಮಲ್ಲಿಕಾರ್ಜುನ ಅವರು ನಾಮಪತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎಂದು ಉಲ್ಲೇಖಿಸಿ ನಾಮಪತ್ರ ಸಲ್ಲಿಸಿದ್ದರು.

'ಸೂಚಕ ಮಲ್ಲಿಕಾರ್ಜುನ ಅವರು ನನ್ನ ಸೂಚನೆಯ ಮೇರೆಗೇ ಬಿಜೆಪಿ ಅಭ್ಯರ್ಥಿಯೆಂದು ಉಲ್ಲೇಖಿಸಿ ನನ್ನ ಹೆಸರಲ್ಲಿ ನಾಮಪತ್ರ ಸಲ್ಲಿಸಿದ್ದಾರೆ' ಎಂದು ಬಿ.ವಿ.ನಾಯಕ ಹೇಳಿದ್ದರು. 'ಬಿ' ಫಾರ್ಮ್ ಲಗತ್ತಿಸದ ಕಾರಣ ನಾಮಪತ್ರ ತಿರಸ್ಕೃತಗೊಂಡಿದೆ.

ಜಾತಿ ಪ್ರಮಾಣಪತ್ರ ವಿವಾದ: 22ಕ್ಕೆ ವಿಚಾರಣೆ ಬಿಜೆಪಿ ಅಭ್ಯರ್ಥಿ ರಾಜಾ ಅಮರೇಶ್ವರ ನಾಯಕ ಅವರ ಜಾತಿ ಪ್ರಮಾಣಪತ್ರ ವಿವಾದಕ್ಕೆ ಸಂಬಂಧಿಸಿದ ಅರ್ಜಿಯನ್ನು ಶುಕ್ರವಾರ ಪರಿಶೀಲಿಸಿದ ಹೈಕೋರ್ಟ್‌ನ ಕಲಬುರಗಿ ಪೀಠವು, ಏಪ್ರಿಲ್ 22ಕ್ಕೆ ವಿಚಾರಣೆಯನ್ನು ಮುಂದೂಡಿದೆ.

ನಕ್ಸಲ್ ಚಟುವಟಿಕೆ ಶಂಕೆ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ತುಮರಿ (ಶಿವಮೊಗ್ಗ ಜಿಲ್ಲೆ): ನಕ್ಸಲ್ ಚಟುವಟಿಕೆಯ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಸಾಗರ ತಾಲ್ಲೂಕಿನ ಎಸ್.ಎಸ್. ಭೋಗ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರಾಠಿ ಹಾಗೂ ಮುರಳ್ಳಿ ಗ್ರಾಮಗಳಿಗೆ ನಕ್ಸಲ್ ನಿಗ್ರಹ ಪಡೆಯ ತಂಡವೊಂದು ಶನಿವಾರ ಬೆಳಿಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ತಂಡವು ಮೂವರು ಶಂಕಿತರನ್ನು ವಶಕ್ಕೆ ಪಡೆದು ಕರೆದೊಯ್ದಿರುವುದಾಗಿ ಗ್ರಾಮಸ್ಥರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ. ಆದರೆ ಪೊಲೀಸರು ಇದನ್ನು ಖಚಿತಪಡಿಸಿಲ್ಲ. ಮರಾಠಿ ಹಾಗೂ ಮುರಳ್ಳಿ ಗ್ರಾಮಗಳು ಮೂಕಾಂಬಿಕಾ ಅಭಯಾರಣ್ಯಕ್ಕೆ ಹೊಂದಿಕೊಂಡಂತಿವೆ. ಗಡಿಯಂಚಿನ ಈ ಗ್ರಾಮಗಳಲ್ಲಿ ಈಚೆಗೆ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಿದ್ದರು. ಈ ಹಿನ್ನೆಲೆಯಲ್ಲಿ ತಂಡ ಭೇಟಿ ನೀಡಿ ಗ್ರಾಮಸ್ಥರಿಂದ ಮಾಹಿತಿ ಕಲೆ ಹಾಕಿದೆ.

'ಲೋಕಸಭಾ ಚುನಾವಣೆ ವೇಳೆಯೇ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದಿರುವುದರಿಂದ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ. ಸಮೀಪದ ನಾಗೋಡಿ ಚೆಕ್‌ಪೋಸ್ಟ್‌ನಲ್ಲಿ ಸಮರ್ಪಕ ತಪಾಸಣೆ ನಡೆಯುತ್ತಿಲ್ಲ' ಎಂದು ಗ್ರಾಮದ ಶಶಿ ಜೈನ್ ದೂರಿದ್ದಾರೆ. 'ಚುನಾವಣೆ ಮುಗಿಯುವವರೆಗೂ ಗ್ರಾಮದಲ್ಲಿ ರಾತ್ರಿಯ ವೇಳೆ ಹೆಚ್ಚುವರಿ ಗಸ್ತು ನಡೆಸಬೇಕು. ಅನುಮಾನಾಸ್ಪದ ವಾಹನಗಳು ಹಾಗೂ ವ್ಯಕ್ತಿಗಳ ಮೇಲೆ ನಿಗಾ ಇಡಬೇಕು' ಎಂದು ಮಹಿಳೆಯರು ಆಗ್ರಹಿಸಿದ್ದಾರೆ.

ವಿಜಯೇಂದ್ರ, ಶಿವಕುಮಾರ್ ವಿರುದ್ಧ ಪ್ರತ್ಯೇಕ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮು ಸೌಹಾರ್ದತೆಗೆ ಧಕ್ಕೆ ತರಲು ಯತ್ನಿಸಿದ ಆರೋಪದಡಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹಾಗೂ ಮತದಾರರಿಗೆ ಬೆದರಿಕೆಯೊಡ್ಡಿದ್ದ ಆರೋಪದಡಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ವಿಚಕ್ಷಣಾ ದಳದ ಅಧಿಕಾರಿ ಅರ್ಜುನ್ ನೀಡಿರುವ ದೂರು ಆಧರಿಸಿ ವಿಜಯೇಂದ್ರ ವಿರುದ್ಧ ಮಲ್ಲೇಶ್ವರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಡಿ.ಕೆ. ಶಿವಕುಮಾರ್ ವಿರುದ್ಧ ಆರ್.ಎಂ.ಸಿ ಯಾರ್ಡ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಪೋಸ್ಟ್: 'ಸಾಮಾಜಿಕ ಮಾಧ್ಯಮಗಳಲ್ಲಿ 'ಬಿಜೆಪಿ4ಕರ್ನಾಟಕ' ಖಾತೆ ಇದೆ. 'ಪಾ'ಕೈ'ಸ್ತಾನ್ ಸರ್ಕಾರದಿಂದ ತಾಲಿಬಾನ್ ಮಾದರಿ ಜಾತಿ', ಲವ್ ಜಿಹಾದ್‌ಗೆ ಒಪ್ಪದಿದ್ದರೆ ಕೊಲೆ, ಕನ್ನಡ ಮಾತನಾಡಿದರೆ ನಟಿ ಕುಟುಂಬದ ಮೇಲೆ ಹಲ್ಲೆ' ಸೇರಿದಂತೆ ಹಲವು ಪೋಸ್ಟ್‌ಗಳನ್ನು ಖಾತೆಯಲ್ಲಿ ಪ್ರಕಟಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರಚಾರದ ವೇಳೆ ಬೆದರಿಕೆ: 'ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಪರ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದದಲ್ಲಿ ಡಿ.ಕೆ. ಶಿವಕುಮಾರ್ ಪ್ರಚಾರ ನಡೆಸಿದ್ದರು. 'ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 2,510 ಮನೆಗಳಿವೆ. 6,424 ಮತದಾರರಿದ್ದಾರೆ. ನಿಮಗೆ ಸ್ವಾಧೀನ ಪ್ರಮಾಣ ಪತ್ರ(ಒಸಿ) ಹಸ್ತಾಂತರವಾಗಿಲ್ಲ. ಕಾವೇರಿ ನೀರು ಸಂಪರ್ಕ ಸಿಕ್ಕಿಲ್ಲ. ಎರಡನ್ನೂ ನಾನು ನಿಮಗೆ ಕೊಡುತ್ತೇನೆ. ನೀವು ನನಗೆ ಏನು ಕೊಡುತ್ತೀರಿ ? ನಿಮ್ಮ ಅಕ್ಕಪಕ್ಕದ 2–3 ಬೂತ್‌ಗಳಲ್ಲಿ ನಮ್ಮ ಪರ ಮತಗಳಿವೆ. ಉಳಿದಿರುವುದು ನಿಮ್ಮ ಬೂತ್ ಮಾತ್ರ. ಈಗ ಹೇಳಿ ಹಕ್ಕು ಪತ್ರ ಹಾಗೂ ಕಾವೇರಿ ನೀರು ಬೇಕಾ ? ಬೇಡವಾ?' ಎಂದು ಶಿವಕುಮಾರ್ ಪ್ರಶ್ನಿಸಿದ್ದರು ಎನ್ನಲಾಗಿತ್ತು. ಇದರ ವಿಡಿಯೊ ಸಮೇತ ಬಿಜೆಪಿಯವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು.

ಕುಮಾರಸ್ವಾಮಿ ವಿರುದ್ಧ ಪ್ರಕರಣ

ತುಮಕೂರು: ಚುನಾವಣೆ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಡಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಮತ್ತು ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆಯಡಿ ಗುಬ್ಬಿ ಪೊಲೀಸ್ ಠಾಣೆಯಲ್ಲಿ ಶನಿವಾರ ಪ್ರಕರಣ ದಾಖಲಾಗಿದೆ.

ಏ.14ರಂದು ಗುಬ್ಬಿ ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕುಮಾರಸ್ವಾಮಿ ಅವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರನ್ನು ಟೀಕಿಸಿ, 'ಡಿ.ಕೆ.ಸುರೇಶ್ ಎಲ್ಲಿಂದ ಬಂದಿರುವರು? ಕೊತ್ವಾಲ್ ರಾಮಚಂದ್ರ ಗರಡಿಯಿಂದ ಬಂದವರು. ದೇಶ ಮತ್ತು ರಾಜ್ಯವನ್ನು ಉಳಿಸುತ್ತಾರಾ? ಹಣದ ದಾಹಕ್ಕೆ ಏನು ಬೇಕಾದರೂ ಮಾಡುತ್ತಾರೆ' ಎಂದಿದ್ದರು.

ಈ ಸಭೆಯಲ್ಲಿ ಹಾಜರಿದ್ದ ಚುನಾವಣೆಯ ಎಫ್‌ಎಸ್‌ಟಿ ತಂಡದ ಅಧಿಕಾರಿ ಡಿ.ಎಚ್.ಮಹೇಶ್ ನೀಡಿದ ದೂರು ನೀಡಿದ್ದರು. ದೂರು ದಾಖಲಿಸಿಕೊಳ್ಳಲು ನಿರ್ದೇಶನ ನೀಡುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಕೋರ್ಟ್ ಆದೇಶದ ಮೇರೆಗೆ ದೂರು ದಾಖಲಿಸಿಕೊಳ್ಳಲಾಗಿದೆ.

ಕುರಾನ್ ಪಠಿಸದೇ ದೇವರಿಗೆ ಪ್ರಾರ್ಥನೆ ಸಲ್ಲಿಸಿದ ದೊಡ್ಡಮೇದೂರಿನ ಖಾದ್ರಿ

ವೈಭವದ ಚನ್ನಕೇಶವ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಚನ್ನಕೇಶವಸ್ವಾಮಿ ಬ್ರಹ್ಮ ರಥೋತ್ಸವವು ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಈ ಬಾರಿಯೂ ದೊಡ್ಡಮೇದೂರು ಗ್ರಾಮದ ಖಾಜಿ ಸೈಯ್ಯದ್ ಸಜ್ಜಾದ್ ಬಾಷಾ ಖಾದ್ರಿಯವರು, ಕುರಾನ್ ಪಠಿಸದೇ, ಉರ್ದುವಿನಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸಿದರು.

ಸಂಪ್ರದಾಯದಂತೆ ರಥದ ಮುಂಭಾಗದಲ್ಲಿ ಖಾದ್ರಿಯವರು ಕುರಾನ್ ಪಠಿಸಿದ ನಂತರ, ರಥೋತ್ಸವಕ್ಕೆ ಚಾಲನೆ ನೀಡಲಾಗುತ್ತಿತ್ತು. ಕಳೆದ ವರ್ಷ ವಿಶ್ವ ಹಿಂದೂ ಪರಿಷತ್‌ನಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಕುರಾನ್ ಪಠಿಸಿರಲಿಲ್ಲ.

ಈ ಬಾರಿಯೂ ದಿವ್ಯ ಬ್ರಹ್ಮ ರಥೋತ್ಸವ ಪ್ರಾರಂಭಕ್ಕೂ ಮುನ್ನ ದೇಗುಲದ ಒಳ ಆವರಣದ ಕಲ್ಯಾಣಿ ಸಮೀಪದ ನೆಲಹಾಸಿನ ಮೇಲೆ ನಿಂತು ಖಾದ್ರಿಯವರು ಪ್ರಾರ್ಥನೆ ಸಲ್ಲಿಸಿದರು.

ರಥೋತ್ಸವಕ್ಕೂ ಮುನ್ನ ಖಾಜಿ ಸೈಯ್ಯದ್ ಸಜ್ಜಾದ್ ಬಾಷಾ ಖಾದ್ರಿ ದೇಗುಲದ ಆವರಣದಲ್ಲಿ ದೇವರಿಗೆ ಪ್ರಾರ್ಥನೆ ಸಲ್ಲಿಸಿದರು

ಶನಿವಾರ ಬೆಳಿಗ್ಗೆ ಚನ್ನಕೇಶವ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇಗುಲದ ಅಷ್ಟ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ದೇಗುಲದ ಮುಂಭಾಗದಲ್ಲಿರುವ ಬಾವಿಕಟ್ಟೆ ಸಮೀಪ ಉತ್ಸವ ಮೂರ್ತಿಯನ್ನು ಕುಳ್ಳಿರಿಸಿ ವಿಶೇಷ ಪೂಜೆ ಸಲ್ಲಿಸಿದ ಅರ್ಚಕರು ವೇದ ಘೋಷಗಳನ್ನು ಮೊಳಗಿಸಿದರು.

ನಂತರ ಮೂರ್ತಿಯನ್ನು ರಥದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಿಸಿ ರಥದದಲ್ಲಿ ಕುಳ್ಳಿರಿಸಲಾಯಿತು. ಬೆಳಿಗ್ಗೆ 10.45 ರಿಂದ 11.15 ರವರೆಗೆ ರಥೋತ್ಸವ ನಡೆಯಿತು.

ಹಾಸನ ಜಿಲ್ಲೆಯ ಬೇಲೂರಿನ ಚನ್ನಕೇಶವ ಸ್ವಾಮಿ ರಥೋತ್ಸವವು ಶನಿವಾರ ವಿಜೃಂಭಣೆಯಿಂದ ನಡೆಯಿತು

70 ವರ್ಷಗಳ ಹಿಂದೆ,

ಒಂದು ಕಂಪನಿಯು ರಾಷ್ಟ್ರದ ರಕ್ಷಣೆಗಾಗಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಹೊರಟಿತು.

ಇಂದು, ಅದು ಭಾರತದ ರಕ್ಷಣಾ ವ್ಯವಸ್ಥೆಯ ಭವಿಷ್ಯವನ್ನು ರೂಪಿಸುತ್ತಿದೆ.

ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS

QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿ.ಇ.ಎಲ್) ತನ್ನ 70 ವರ್ಷಗಳ ಶ್ರೇಷ್ಠತೆಯ ಕಾರ್ಯಾಚರಣೆಯನ್ನು ಆಚರಿಸಲು ಹೆಮ್ಮೆಪಡುತ್ತದೆ. ನವರತ್ನ ರಕ್ಷಣಾ ಸಾರ್ವಜನಿಕ ವಲಯದ ಉದ್ಯಮವಾಗಿ, ಬಿ.ಇ.ಎಲ್ ಭಾರತದ ರಕ್ಷಣಾ ಪಡೆಗಳಿಗೆ ವಿಶ್ವಾಸಾರ್ಹ ತಂತ್ರಜ್ಞಾನ ಪಾಲುದಾರನಾಗಿದೆ. ರಕ್ಷಣಾ ವಲಯವನ್ನು ತನ್ನ ಪ್ರಮುಖ ಕಾರ್ಯಕ್ಷೇತ್ರವಾಗಿ ಉಳಿಸಿಕೊಂಡಿದ್ದರೂ, ಬಿ.ಇ.ಎಲ್ ನಾಗರಿಕ ವಿಮಾನಯಾನ, ಸೌರಶಕ್ತಿ, ರೈಲ್ವೆ ಮತ್ತು ಮೆಟ್ರೋ ವ್ಯವಸ್ಥೆಗಳು, ನೆಟ್‌ವರ್ಕ್ ಮತ್ತು ಸೈಬರ್ ಭದ್ರತೆ, ಹೋಮ್‌ಲ್ಯಾಂಡ್ ಸೆಕ್ಯುರಿಟಿ, ಸ್ಮಾರ್ಟ್ ಸಿಟಿ ಯೋಜನೆಗಳು, ವೈದ್ಯಕೀಯ ಎಲೆಕ್ಟ್ರಾನಿಕ್ಸ್ ಮತ್ತು ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ವೈವಿಧ್ಯ ಕ್ಷೇತ್ರಗಳಲ್ಲಿ ತನ್ನ ಕಾರ್ಯವನ್ನು ವಿಸ್ತರಿಸಿದೆ.

ವಿದ್ಯುನ್ಮಾನ ಮತಯಂತ್ರದೊಂದಿಗೆ ಭಾರತದ ಮತದಾನ ವ್ಯವಸ್ಥೆಯನ್ನು ಆಧುನೀಕರಿಸುವಲ್ಲಿ ಮತ್ತು ವೆಂಟಿಲೇಟರ್‌ಗಳನ್ನು ಪೂರೈಸುವ ಮೂಲಕ ಕೋವಿಡ್–19 ವಿರುದ್ಧದ ಹೋರಾಟವನ್ನು ಬೆಂಬಲಿಸುವಲ್ಲಿ ಸಂಸ್ಥೆಯು ಮಹತ್ವದ ಪಾತ್ರವನ್ನು ವಹಿಸಿದೆ.

ಇಂದು, ಬಿ.ಇ.ಎಲ್ ಬಹು–ವಿಸ್ತೃತ ಶ್ರೇಣಿಯ ಹೈಟೆಕ್ ಉತ್ಪನ್ನಗಳನ್ನು ರಫ್ತು ಮಾಡುವ ಜಾಗತಿಕ ಸಂಸ್ಥೆಯಾಗಿದೆ.

ನಾವು ಈ ಮೈಲಿಗಲ್ಲು ತಲುಪಿದ ಸ್ಮರಣಾರ್ಥದ ವಿಶೇಷ ಸಂದರ್ಭದಲ್ಲಿ, ಬಿ.ಇ.ಎಲ್ ಸಂಸ್ಥೆಯು ತಾಂತ್ರಿಕ ಪ್ರಗತಿಪಥದಲ್ಲಿ ಮುಂಚೂಣಿಯಲ್ಲಿ ಉಳಿಯುವ ಮೂಲಕ ಮತ್ತು ನವೀನ ಆವಿಷ್ಕಾರಗಳ ಮೂಲಕ ಪ್ರಪಂಚದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ನಿರೀಕ್ಷೆಗಳನ್ನು ಮೀರಿ ಸಮರ್ಪಿತವಾಗಿದೆ.

ಮಿಲಿಟರಿ ಸಂವಹನ • ರಾಡಾರ್‌ಗಳು • ನೌಕಾ ವ್ಯವಸ್ಥೆಗಳು • ಸಿ4ಐ ವ್ಯವಸ್ಥೆಗಳು • ಕ್ಷಿಪಣಿ ವ್ಯವಸ್ಥೆಗಳು • ಎಲೆಕ್ಟ್ರಾನಿಕ್ಸ್ ವಾರ್‌ಫೇರ್ • ಏವಿಯಾನಿಕ್ಸ್ • ಎಲೆಕ್ಟ್ರೋ ಆಪ್ಟಿಕ್ಸ್ • ಟ್ಯಾಂಕ್ ಎಲೆಕ್ಟ್ರಾನಿಕ್ಸ್ • ವೆಪನ್ ಸಿಸ್ಟಮ್‌ಗಳು
ಗನ್ ನವೀಕರಣ • ಎಲೆಕ್ಟ್ರಾನಿಕ್ ಫ್ಯೂಜ್‌ಗಳು • ಹೋಮ್‌ಲ್ಯಾಂಡ್ ಸೆಕ್ಯುರಿಟಿ ಮತ್ತು ಸ್ಮಾರ್ಟ್ ಸಿಟಿಗಳು

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

ನೋಂದಾಯಿತ ಮತ್ತು ಪ್ರಧಾನ ಕಚೇರಿ: ಹೊರ ವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045, ಭಾರತ. ದೂ: +91 80 2503 9300/ಫ್ಯಾಕ್ಸ್: +91 80 2503 9291/ಶುಲ್ಕರಹಿತ: 1800 425 0433/www.bel-india.in / **CIN: L32309KA1954GOI000787.**

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ತನಿಖೆ ಅಗತ್ಯ: ಪ್ರಶಾಂತ್ ಭೂಷಣ್ ಪ್ರತಿಪಾದನೆ

ಚುನಾವಣಾ ಬಾಂಡ್ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವತಂತ್ರ ಭಾರತದ ಅತಿದೊಡ್ಡ ಹಗರಣವಾದ ಚುನಾವಣಾ ಬಾಂಡ್ ಕುರಿತು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಕ ತನಿಖೆ ನಡೆಸಬೇಕು' ಎಂದು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಆಗ್ರಹಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚುನಾವಣಾ ಬಾಂಡ್‌ಗಳಿಂದ ಯಾರು ಯಾವ ಪಕ್ಷಕ್ಕೆ ಎಷ್ಟು ದೇಣಿಗೆ ನೀಡಿದ್ದಾರೆ ಎಂಬ ಮಾಹಿತಿ ಸುಲಭವಾಗಿ ಸಿಗುತ್ತಿದೆ ಎಂದು ಆಡಳಿತ ಪಕ್ಷ ಹೇಳುತ್ತಿದೆ. ಆದರೆ, ಯಾರು ಯಾವ ಪಕ್ಷಕ್ಕೆ ಎಷ್ಟು ಕೋಟಿ ದೇಣಿಗೆ ನೀಡುತ್ತಾರೆ ಎಂಬ ಮಾಹಿತಿ ಸಿಗಬಾರದು ಎಂಬ ಉದ್ದೇಶದಿಂದಲೇ ಈ ಯೋಜನೆ ಜಾರಿಗೊಳಿಸಲಾಗಿದೆ. ಆದ್ದರಿಂದ, ಸುಪ್ರೀಂ ಕೋರ್ಟ್ ಈ ಯೋಜನೆಯನ್ನು ಅಸಾಂವಿಧಾನಿಕವೆಂದು ಹೇಳಿದೆ' ಎಂದರು.

ನಗರದ ಗಾಂಧಿಭವನದಲ್ಲಿ ಚುನಾವಣಾ ಬಾಂಡ್‌ಗಳ' ಕುರಿತು ಸಂವಾದ ಕಾರ್ಯಕ್ರಮದಲ್ಲಿ ಎಡದಿಂದ ವಕೀಲೆ ಅಂಜಲಿ ಭಾರದ್ವಾಜ್, ವಕೀಲ ಪ್ರಶಾಂತ್ ಭೂಷಣ್, ಸಾಮಾಜಿಕ ಕಾರ್ಯಕರ್ತ ಆದರ್ಶ್ ಅಯ್ಯರ್ ಭಾಗವಹಿಸಿದರು —ಪ್ರಜಾವಾಣಿ ಚಿತ್ರ

'ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿ ಹಲವು ಕಂಪನಿಗಳು ಸಾಕಷ್ಟು ಅನುಕೂಲಗಳನ್ನು ಪಡೆದುಕೊಂಡಿವೆ. ಹಲವು ಗುತ್ತಿಗೆ ಕಂಪನಿಗಳು ಬಿಜೆಪಿ ಪಕ್ಷಕ್ಕೆ ನೂರಾರು ಕೋಟಿ ದೇಣಿಗೆ ನೀಡಿ, ಕೋಟ್ಯಂತರ ಮೊತ್ತದ ಯೋಜನೆಗಳನ್ನು ಗುತ್ತಿಗೆ ಪಡೆದುಕೊಂಡಿವೆ. ಕೆಲ ಔಷಧ ತಯಾರಕ ಕಂಪನಿಗಳು ತಮಗೆ ಬೇಕಾದ ರೀತಿಯ ನೀತಿಗಳನ್ನು ರೂಪಿಸಲು ಚುನಾವಣಾ ಬಾಂಡ್‌ಗಳ ಮೂಲಕ ನೂರಾರು ಕೋಟಿ ದೇಣಿಗೆ ನೀಡಿವೆ' ಎಂದು ದೂರಿದರು.

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ಬಂಧನಕ್ಕೆ ಕಾರಣಕರ್ತರಾದ ಉದ್ಯಮಿ ಪಿ.ಶರತ್ ಚಂದ್ರ ರೆಡ್ಡಿ ಅವರು ಚುನಾವಣಾ ಬಾಂಡ್ ಮುಖಾಂತರ ಬಿಜೆಪಿಗೆ ₹56.5 ಕೋಟಿ ದೇಣಿಗೆ ನೀಡಿದ್ದಾರೆ. ಶರತ್ ಅವರು ಹೈದರಾಬಾದ್ ಮೂಲದ ಅರಬಿಂದೊ ಫಾರ್ಮಾ ಕಂಪನಿಯ ನಿರ್ದೇಶಕ ಮತ್ತು ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ಕೂಡ. ಅಬಕಾರಿ ನೀತಿ ಹಗರಣ ಸಂಬಂಧ ಶರತ್ ಅವರನ್ನು 2022ರ ನವೆಂಬರ್ 11ರಂದು ಬಂಧಿಸಲಾಗಿತ್ತು' ಎಂದು ಹೇಳಿದರು.

ವಕೀಲ ಹರೀಶ್ ನರಸಪ್ಪ, ಅಂಜಲಿ ಭಾರದ್ವಾಜ್ ಭಾಗವಹಿಸಿದ್ದರು.

'ಅಭ್ಯರ್ಥಿಗಳ ಖರ್ಚು ಸರ್ಕಾರವೇ ಭರಿಸಬೇಕು'

ಬೆಂಗಳೂರು: ಚುನಾವಣೆಗೆ ಸ್ಪರ್ಧಿಸಿ, ನಿರ್ದಿಷ್ಟ ಮತಗಳನ್ನು ಪಡೆಯುವ ಎಲ್ಲ ಅಭ್ಯರ್ಥಿಗಳ ಚುನಾವಣಾ ಖರ್ಚನ್ನು ಸರ್ಕಾರವೇ ಭರಿಸಬೇಕು. ಅದಕ್ಕಾಗಿ ₹3 ಸಾವಿರ ಕೋಟಿ ತೆಗೆದಿಡಬೇಕು ಎಂದು ಪ್ರಶಾಂತ್ ಭೂಷಣ್ ಒತ್ತಾಯಿಸಿದರು.

ಜಾಗೃತ ಕರ್ನಾಟಕ, ಜನಾಧಿಕಾರ ಸಂಘರ್ಷ ಪರಿಷತ್, ಬಹುತ್ವ ಕರ್ನಾಟಕ ಶನಿವಾರ ಹಮ್ಮಿಕೊಂಡಿದ್ದ ಚುನಾವಣಾ ಬಾಂಡ್‌ಗಳ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಪ್ರತಿ ಅಭ್ಯರ್ಥಿ ಚುನಾವಣೆಗೆ ಖರ್ಚು ಮಾಡಲು ನಿಗದಿಪಡಿಸಿದ ಮೊತ್ತ ₹75 ಲಕ್ಷ. ಹಲವರು ಜನಾನುರಾಗಿಗಳಾಗಿದ್ದರೂ, ಖರ್ಚು ಭರಿಸಲು ಸಾಧ್ಯವಾಗದೆ ಚುನಾವಣೆಯಿಂದ ದೂರ ಉಳಿಯುತ್ತಿದ್ದಾರೆ. ಜನರು ಅನಿವಾರ್ಯವಾಗಿ ಕಣದಲ್ಲಿರುವ ಕಡಿಮೆ ದುಷ್ಟರನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ, ಒಳ್ಳೆಯವರು ರಾಜಕೀಯಕ್ಕೆ ಬರಬೇಕಿದೆ ಎಂದರು.

ಚುನಾವಣಾ ಖರ್ಚನ್ನು ಸರ್ಕಾರವೇ ಭರಿಸಿದರೆ ರಾಜಕೀಯ ಪಕ್ಷಗಳ ಸುಲಿಗೆಗೂ ಕಡಿವಾಣ ಹಾಕಬಹುದು. ಪ್ರಸ್ತುತ ಸನ್ನಿವೇಶದಲ್ಲಿ ಅಭ್ಯರ್ಥಿಗಳು ಹಾಗೂ ರಾಜಕೀಯ ಪಕ್ಷಗಳು ಚುನಾವಣಾ ಖರ್ಚುಗಳನ್ನು ಬ್ಯಾಂಕ್ ಖಾತೆಗಳ ಮೂಲಕವೇ ಭರಿಸುವುದನ್ನು ಕಡ್ಡಾಯ ಮಾಡಬೇಕು ಎಂದರು.

ಕರ್ನಾಟಕ ರಾಜ್ಯ ಎಸ್.ಸಿ, ಎಸ್.ಟಿ ಗುತ್ತಿಗೆದಾರರ ಸಂಘ ಹಮ್ಮಿಕೊಂಡಿದ್ದ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲೂ ಪ್ರಶಂತ್ ಭೂಷಣ್ ಚುನಾವಣಾ ಬಾಂಡ್ ಹಗರಣ ಕುರಿತು ಮಾತನಾಡಿದರು. ತ್ರಿಲೋಚನ್ ಶಾಸ್ತ್ರಿ, ಹರೀಶ್ ನರಸಪ್ಪ ಉಪಸ್ಥಿತರಿದ್ದರು.

ಚುನಾವಣಾ ಬಾಂಡ್‌ಗೆ ಅವಕಾಶ ನೀಡಿದರೆ ಕಪ್ಪು ಹಣದ ಹರಿವಿಗೆ ಪ್ರೋತ್ಸಾಹ ನೀಡಿದಂತೆ ಆಗುತ್ತದೆ ಎಂದು ಆರ್‌ಬಿಐ ಸಲಹೆಗೆ ವಿರುದ್ಧವಾಗಿ ಕೇಂದ್ರ ಬಿಜೆಪಿ ಸರ್ಕಾರ ಬಾಂಡ್ ನೀತಿ ರೂಪಿಸಿತ್ತು

ಅಂಜಲಿ ಭಾರದ್ವಾಜ್, ಸಾಮಾಜಿಕ ಕಾರ್ಯಕರ್ತೆ.

ಸುದ್ದಿ 2 ನಿಮಿಷ

ಎಚ್‌ಡಿಕೆ ಮಂಡ್ಯದಲ್ಲಿ ಗೆಲ್ಲಲಿ ನೋಡೋಣ: ಜಮೀರ್ ಸವಾಲು

ಕೋಲಾರ: 'ಲೋಕಸಭೆ ಚುನಾವಣೆಗಾಗಿ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಈಗ ಭ್ರಮೆಯಲ್ಲಿದ್ದಾರೆ' ಎಂದು ಸಚಿವ ಜಮೀರ್ ಅಹಮದ್ ಖಾನ್ ವಾಗ್ದಾಳಿ ನಡೆಸಿದರು.

ಶನಿವಾರ ನಡೆದ ಕಾಂಗ್ರೆಸ್ ಮುಖಂಡರು ಹಾಗೂ ಮುಸ್ಲಿಂ ಸಮುದಾಯದವರ ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮಂಡ್ಯ ಕ್ಷೇತ್ರದಲ್ಲಿ ಕುಮಾರಸ್ವಾಮಿ ಮೊದಲು ಗೆಲ್ಲಲಿ ನೋಡೋಣ. ನಂತರ ಕೇಂದ್ರ ಸಚಿವರಾಗುವ ಮಾತು' ಎಂದರು.

'ಮುಖ್ಯಮಂತ್ರಿ ಆಗಿದ್ದಾಗಲೇ ಮಂಡ್ಯದಲ್ಲಿ ತಮ್ಮ ಮಗನನ್ನು ಗೆಲ್ಲಿಸಿಕೊಳ್ಳಲು ಇವರಿಗೆ ಸಾಧ್ಯವಾಗಲಿಲ್ಲ. ಈಗ ಬಹಳ ಆತ್ಮವಿಶ್ವಾಸದಿಂದ ಇದ್ದಾರೆ' ಎಂದು ವ್ಯಂಗ್ಯವಾಡಿದರು.

'ಚುನಾವಣೆ ಬಳಿಕ ಸಿದ್ದರಾಮಯ್ಯ ಪದಚ್ಯುತಿ'

ಹಾಸನ: 'ಚುನಾವಣೆ ಮುಗಿದ ಬಳಿಕ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಖಾಲಿ ಮಾಡಿಸುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಮೈಸೂರು ಜಿಲ್ಲೆಯ ತಮ್ಮ ಬೀಗರ ಊರಿನಲ್ಲಿ ಹೇಳಿದ್ದಾರೆ' ಎಂದು ಶಾಸಕ ಎಚ್.ಡಿ. ರೇವಣ್ಣ ತಿಳಿಸಿದರು.

ಬೇಲೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಚುನಾವಣೆ ಮುಗಿದ ಮೇಲೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರಲ್ಲ. ಅವರ ಸರ್ಕಾರವೇ ಇರಲ್ಲ. ಇನ್ನೂ ಗ್ಯಾರಂಟಿ ಇರುತ್ತಾ' ಎಂದು ಪ್ರಶ್ನಿಸಿದರು.

'ಮೂರು ಕಡೆ ಜೆಡಿಎಸ್ ಗೆಲ್ಲಲ್ಲ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ, 'ಅವರು ಜೋತಿಷ ಹೇಳುವುದನ್ನು ಯಾವಾಗ ಕಲಿತರು? ಮೊದಲು ರಾಹುಲ್‌ಗಾಂಧಿ ಅವರನ್ನು ಗೆಲ್ಲಿಸಿಕೊಳ್ಳಲಿ' ಎಂದು ಹೇಳಿದರು.

ಅನುರಣಿಸಿದ 'ಮೋದಿ... ಮೋದಿ' ಘೋಷಣೆ • ರಾರಾಜಿಸಿದ ಪ್ರಧಾನಿ ಚಿತ್ರಗಳು

ಮೋದಿ ಬೆಂಬಲಿಗರ ಉತ್ಸಾಹ ಹೆಚ್ಚಿಸಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಶನಿವಾರ ಬಿಜೆಪಿ ಆಯೋಜಿಸಿದ್ದ 'ವಿಕಸಿತ ಭಾರತಕ್ಕೆ ವಿಜಯ ಸಂಕಲ್ಪ ಸಮಾವೇಶ' ಆರಂಭವಾಗುವ ಮುನ್ನ ಐದು ನಿಮಿಷ ಮಳೆ ಸುರಿಯಿತು. 'ಮೋದಿ... ಮೋದಿ..' ಎಂದು ಘೋಷಣೆ ಕೂಗುತ್ತಾ ಪ್ರಧಾನಿಯವರ ಆಗಮನಕ್ಕೆ ಕಾಯುತ್ತಿದ್ದ ಕಾರ್ಯಕರ್ತರಿಗೆ ಮಳೆ ಇನ್ನಷ್ಟು ಹುರುಪು ತುಂಬಿತು.

'ಕಾಂಗ್ರೆಸ್‌ನ 'ಐರನ್ ಲೆಗ್'ನಿಂದಾಗಿ ಮಳೆ ಕೈಕೊಟ್ಟಿತ್ತು. ಬರಗಾಲ ಬಂದಿತ್ತು. ನರೇಂದ್ರ ಮೋದಿಯವರು ಬರುತ್ತಿದ್ದಂತೆ ಮಳೆ ಬಂದಿದೆ. ಇದು ಮೋದಿಯವರ ಕಾಲ್ಗುಣ' ಎಂದು ನಿರೂಪಕರು ಬಣ್ಣಿಸಿ ಕಾರ್ಯಕರ್ತರಿಗೆ ಮತ್ತಷ್ಟು ಉತ್ಸಾಹ ತುಂಬಿದರು.

ಮೋದಿ ಕೈ ಮುಗಿಯುತ್ತಾ ವೇದಿಕೆಗೆ ಬಂದು ಜನರತ್ತ ಕೈ ಬೀಸಿದಾಗ 'ಮೋದಿ.. ಮೋದಿ..' ಕೂಗು, ಶಿಳ್ಳೆ, ಚಪ್ಪಾಳೆಗಳ ಸದ್ದು ಅನುರಣಿಸಿತು. ಕೆಲವರು ಮೋದಿ ಮುಖವಾಡ ಹಾಕಿಕೊಂಡಿದ್ದರೆ ಬಹುತೇಕರ ಕೈಯಲ್ಲಿ ಮೋದಿ ಚಿತ್ರವಿದ್ದ ಫಲಕಗಳಿದ್ದವು. ಬಿಜೆಪಿ ಬಾವುಟಗಳನ್ನು ಬೀಸುತ್ತಾ ಫಲಕಗಳನ್ನು ಪ್ರದರ್ಶಿಸಿದರು.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಕೈಕುಲುಕಿದ ಮೋದಿ ಆರೋಗ್ಯ ವಿಚಾರಿಸಿದರು. 'ಕಿವಿ ಸರಿ ಇದೆಯಾ' ಎಂದು ಸಂಜ್ಞೆ ಮಾಡಿ ಕೇಳಿದರು. ಸಂಸದ ಡಿ.ವಿ.ಸದಾನಂದ ಗೌಡರೊಂದಿಗೆ ಆಪ್ತವಾಗಿ ಮಾತನಾಡಿದರು.

ಅರಮನೆ ಮೈದಾನದಲ್ಲಿ ಶನಿವಾರ ನಡೆದ ಲೋಕಸಭಾ ಚುನಾವಣೆಯ ಬಿಜೆಪಿ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣ ಆಲಿಸಲು ಬಂದಿದ್ದ ಕಾರ್ಯಕರ್ತರು (ಎಡಚಿತ್ರ) 'ನಾನೂ ಮೋದಿ ಪರಿವಾರ' ಎಂದು ಬಿಜೆಪಿ ಕಾರ್ಯಕರ್ತೆಯರು ಫಲಕ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್.

ಬೆಂಗಳೂರು ಉತ್ತರ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ, ಬೆಂಗಳೂರು ಕೇಂದ್ರದ ಅಭ್ಯರ್ಥಿ ಪಿ.ಸಿ. ಮೋಹನ್, ಬೆಂಗಳೂರು ದಕ್ಷಿಣದ ಅಭ್ಯರ್ಥಿ ತೇಜಸ್ವಿ ಸೂರ್ಯ, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ ಅವರ ಹೆಸರನ್ನು ಉಲ್ಲೇಖಿಸಿ ಇವರನ್ನು ಗೆಲ್ಲಿಸಿಕೊಡುವಂತೆ ಮೋದಿಯವರು ಕೋರಿದರು.

'ಕರಗ ಶಾಲು' ಹೊದಿಸಿ ಸನ್ಮಾನ: ನರೇಂದ್ರ ಮೋದಿಯವರಿಗೆ 'ಕರಗ ಶಾಲು' ಹೊದಿಸಿ, ಹತ್ತು ಕೈಗಳ ಮಹಾವಿಷ್ಣುವಿನ ವಿಗ್ರಹ ನೀಡಿ ಬಿಜೆಪಿ ನಾಯಕರು ಸನ್ಮಾನಿಸಿದರು. ಬಳಿಕ ಮಹಿಳೆಯರಿಂದ ಸನ್ಮಾನ ನಡೆಯಿತು.

ಮೋದಿಗಾಗಿ ಬಂದ ಎನ್‌ಆರ್‌ಐ!: 'ಐ ಆ್ಯಮ್ ಎನ್‌ಆರ್‌ಐ, ಕೇಮ್ ಫ್ರಂ ಅಮೆರಿಕ, ಟು ಸಪೋರ್ಟ್ ಮೋದಿ, ವಿ ಲವ್ ಯು' ಎಂದು ಅನಿವಾಸಿ ಭಾರತೀಯನೊಬ್ಬ ದೊಡ್ಡ ಫಲಕ ಹಿಡಿದುಕೊಂಡು ಸಭಾಂಗಣದಲ್ಲಿ ಸುತ್ತಾಡುತ್ತಾ ಗಮನ ಸೆಳೆದರು.

ತಡವಾದ ಜನರಾಗಮನ: ಕಾರ್ಯಕ್ರಮ ಆರಂಭಕ್ಕಿಂತ ಎರಡು ತಾಸು ಮೊದಲೇ ಜನರು ಬರಲಾರಂಭಿಸಿದ್ದರು. ಮುಖ್ಯ ಸಭಾಂಗಣ ತುಂಬಿ ಹೋಗಿತ್ತು. ಮೋದಿ ಅವರು ಸರಿಯಾಗಿ 5 ಗಂಟೆಗೆ ಕಾರ್ಯಕ್ರಮಕ್ಕೆ ಬಂದರೆ, ಮೋದಿ ಭಾಷಣ ಶುರು ಮಾಡಿದ ಮೇಲೂ ಜನರು ಬರುತ್ತಿದ್ದರು. ಅಕ್ಕಪಕ್ಕದಲ್ಲಿ ಹಾಕಿದ್ದ ಕುರ್ಚಿಗಳು ಭರ್ತಿಯಾಗುವ ಹೊತ್ತಿಗೆ ಪ್ರಧಾನಿಯವರ ಅರ್ಧ ಭಾಷಣ ಮುಗಿದಿತ್ತು. ಪಿಂಕ್ ಬಾಕ್ಸ್‌ಗಳ ಮೂಲಕ ಮಹಿಳೆಯರಿಗೆ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡಲಾಗಿತ್ತು.

ಮತ್ತೊಮ್ಮೆ ಮೋದಿ ಸರ್ಕಾರ ಎಂದು ಜನರಿಂದ ಹೇಳಿಸಿದ ನರೇಂದ್ರ ಮೋದಿ ಅವರು, 'ನನಗಾಗಿ ನೀವು ಮನೆ ಮನೆಗೆ ತೆರಳಿ ಮತ ಹಾಕಿಸಬೇಕು' ಎಂದು ಕೋರಿದರು.

ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ , ರಾಜ್ಯಸಭಾ ಸದಸ್ಯ ಜಗ್ಗೇಶ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕರಾದ ಬೈರತಿ ಬಸವರಾಜ, ಸುರೇಶ್ ಕುಮಾರ್, ಡಾ. ಸಿ.ಎನ್. ಅಶ್ವತ್ಥನಾರಾಯಣ, ರವಿ ಸುಬ್ರಮಣ್ಯ, ಮುನಿರತ್ನ, ಸಿ.ಕೆ. ರಾಮಮೂರ್ತಿ, ಸತೀಶ್ ರೆಡ್ಡಿ, ಉದಯ್ ಬಿ. ಗರುಡಾಚಾರ್ ಪಾಲ್ಗೊಂಡಿದ್ದರು.

'ದಿಂಗಾಲೇಶ್ವರ ಶ್ರೀಗೆ ಸ್ಪರ್ಧೆಗಾಗಿ ಪೇಮೆಂಟ್'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎಲ್ಲಿಂದಲೋ ಪೇಮೆಂಟ್ ಆಗಿರುವ ಕಾರಣ ಶಿರಹಟ್ಟಿ ಭಾವೈಕ್ಯ ಪೀಠ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ಪೇಮೆಂಟ್ ಯಾರದ್ದು ಎಂಬುದನ್ನು ಮೇ 7ರ ನಂತರ ತಿಳಿಸುವೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಬಸನಗೌಡ ಪಾಟೀಲ ಯತ್ನಾಳ ಅವರು ಆ (ಪೇಮೆಂಟ್) ಕೆಲಸ ಮಾಡಿದ್ದಾರೆ. ಅದಕ್ಕೆ ಎಲ್ಲರೂ ಮಾಡುತ್ತಾರೆ ಅಂತ ಅವರು ತಿಳಿದುಕೊಂಡಿದ್ದಾರೆ

ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಶಿರಹಟ್ಟಿಯ ಭಾವೈಕ್ಯ ಪೀಠ

'ಮೊದಲೆಲ್ಲ ಸ್ವಾಮೀಜಿ ಅವರನ್ನು ಶಾಸಕ ವಿನಯ ಕುಲಕರ್ಣಿ ಅವರು ಬೇಕಾಬಿಟ್ಟಿ ಬೈಯುತ್ತಿದ್ದರು. ಈಗ ಹೊಗಳುತ್ತಿದ್ದಾರೆ ಎಂದರೆ ಪೇಮೆಂಟ್ ಆಗಿದೆಯೆಂದೇ ಅರ್ಥ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯಪಾಲರು ಎಚ್ಚರಿಕೆ ನೀಡಲಿ: 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಹಲ್ಲೆ, ಕೊಲೆ ನಿರಂತರ ನಡೆದಿವೆ. ಇದರ ಬಗ್ಗೆ ರಾಷ್ಟ್ರಪತಿ ಅವರಿಗೆ ರಾಜ್ಯಪಾಲರು ವರದಿ ಸಲ್ಲಿಸಬೇಕು. ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯೂ ನೀಡಬೇಕು. ಎಚ್ಚರಿಕೆ ನೀಡದಿದ್ದರೆ, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ' ಎಂದರು.

ಚಿತ್ರಾವಳಿ

ವಿಜಯನಗರದ ವಾಸವಿ ಸಮೂಹ ಶಿಕ್ಷಣ ವಿದ್ಯಾಸಂಸ್ಥೆಯ ಕಾಲೇಜು ವಿದ್ಯಾರ್ಥಿಗಳು ಶನಿವಾರ ಮತದಾನದ ಮಹತ್ವ ಮತ್ತು ಕಡ್ಡಾಯವಾಗಿ ಮತದಾನ ಮಾಡುವಂತೆ ಅರಿವು ಮೂಡಲು ಮತದಾನ ಜಾಗೃತಿ ಕಾರ್ಯಕ್ರಮ ನಡೆಸಿದರು

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ವೃಷಭಾವತಿ ನಗರದಲ್ಲಿ ರೋಡ್ ಶೋ ಮೂಲಕ ಮತಯಾಚಿಸಿದರು. ಮಾಜಿ ಶಾಸಕ ನೆ.ಲ. ನರೇಂದ್ರ ಬಾಬು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಕೆ. ಗೋಪಾಲಯ್ಯ ಪಾಲ್ಗೊಂಡಿದ್ದರು



ಲೋಕಸಭಾ ಚುನಾವಣೆಯಲ್ಲಿ ಅಗತ್ಯ ಸೇವೆಗಳಿಗೆ ನಿಯೋಜನೆಗೊಂಡಿರುವ ಅಧಿಕಾರಿಗಳು ಅಂಚೆ ಮತದಾನದ ಮೂಲಕ ಮತ ಚಲಾಯಿಸುವ ಪ್ರಕ್ರಿಯೆ ಶುಕ್ರವಾರದಿಂದ ಆರಂಭವಾಗಿದೆ. ಉತ್ತರ ಲೋಕಸಭಾ ಕ್ಷೇತ್ರದ ಚುನಾವಣೆಗೆ ನಿಯೋಜನೆಗೊಂಡಿರುವ ಸಂಚಾರ ಪೊಲೀಸರು ಬೆಂಗಳೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಂಚೆ ಮತ ಚಲಾಯಿಸಿದರು. ಇನ್ನೂ ಎರಡು ದಿನ ಅಂಚೆ ಮತದಾನ ಇರಲಿದೆ — ಪ್ರಜಾವಾಣಿ ಚಿತ್ರಗಳು

ಎವಿಇಎಸ್: 220 ಮಂದಿ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ವ್ಯಾಪ್ತಿಯಲ್ಲಿರುವ ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಅಗತ್ಯ ಸೇವೆಗಳ ಸಿಬ್ಬಂದಿಯಲ್ಲಿ (ಎವಿಇಎಸ್) 220 ಮಂದಿ ಅಂಚೆ ಮತಕೇಂದ್ರಗಳಲ್ಲಿ ಮತದಾನ ಮಾಡಿದ್ದಾರೆ.

12 ವಿವಿಧ ಇಲಾಖೆಗಳ ಅಗತ್ಯ ಸೇವೆಗಳ ಗೈರು ಮತದಾರರಿಗೆ (ಎವಿಇಎಸ್) ಅಂಚೆ ಮತದಾನದ ವ್ಯವಸ್ಥೆ ಕಲ್ಪಿಸಲಾಗಿದೆ. ಮೂರು ಕ್ಷೇತ್ರಗಳಿಂದ 1,342 ಮಂದಿ ಎವಿಇಎಸ್ ಅಂಚೆ ಮತದಾನಕ್ಕೆ ನೋಂದಾಯಿಸಿಕೊಂಡಿದ್ದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೋಂದಾಯಿಸಿಕೊಂಡಿದ್ದ 464 ಮತದಾರರಲ್ಲಿ, 106 ಮಂದಿ ಶನಿವಾರದವರೆಗೆ ಮತದಾನ ಮಾಡಿದ್ದಾರೆ.

ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ 226ರಲ್ಲಿ 66 ಹಾಗೂ ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ 652ರಲ್ಲಿ 48 ಮಂದಿ ಅಂಚೆ ಮತದಾನ ಮಾಡಿದರು. ಒಟ್ಟಾರೆ ಶೇ 16.39ರಷ್ಟು ಮತದಾನವಾಗಿವೆ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಚುನಾವಣೆ: ಸ್ವಯಂ ಸೇವಕರಿಗೆ ತರಬೇತಿ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಸ್ವಯಂಸೇವಕರಾಗಿ ನಿಯೋಜನೆಗೊಂಡಿರುವ ಎನ್‌ಸಿಸಿ, ಎನ್‌ಎಸ್‌ಎಸ್, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ವಿದ್ಯಾರ್ಥಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಚುನಾವಣಾ ಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಸ್ವಯಂ ಸೇವಕರಿಗಾಗಿ ಹಮ್ಮಿಕೊಂಡಿದ್ದ 'ಸರದಿ ನಿರ್ವಹಣಾ ತರಬೇತಿ'ಗೆ ಚಾಲನೆ ನೀಡಿ ಮಾತನಾಡಿದ ಅವರು, 'ನಗರದಲ್ಲಿ ಸುಮಾರು 1,052 ಮತಗಟ್ಟೆಗಳಿಗೆ ಸ್ವಯಂ ಸೇವಕರನ್ನು ನಿಯೋಜನೆ ಮಾಡಲಾಗುತ್ತಿದೆ. ಸ್ವಯಂ ಸೇವಕರು ಸಾಲಿನ ಸ್ಥಿತಿ ಹಾಗೂ ಪಾರ್ಕಿಂಗ್ ವ್ಯವಸ್ಥೆಯನ್ನು ತಂತ್ರಾಂಶದಲ್ಲಿ ಪ್ರತಿ ಅರ್ಧಗಂಟೆಗೊಮ್ಮೆ ದಾಖಲಿಸಬೇಕು. ಮತಗಟ್ಟೆಗಳಿಗೆ ಬರುವ ಹಿರಿಯ ನಾಗರಿಕರು, ಅಂಗವಿಕಲರು, ಗರ್ಭಿಣಿಯರನ್ನು ಪ್ರತ್ಯೇಕ ಸಾಲಿನಲ್ಲಿ ಕಳುಹಿಸಬೇಕು' ಎಂದರು.

ಪ್ರಶಸ್ತಿ: ಈ ಬಾರಿಯ ಚುನಾವಣೆಯಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುವ 100 ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಉಪಯೋಗವಾಗುವಂತ ಪ್ರಶಸ್ತಿ ವಿತರಣೆ ಮಾಡಲಾಗುವುದು ಎಂದು ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ ತಿಳಿಸಿದರು.

'ವಿಶ್ವನಾಥ್ ಕೋಟೆ ಭೇದಿಸುವುದು ಸುಲಭವಲ್ಲ'

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: 'ಶಾಸಕ ಎಸ್.ಆರ್. ವಿಶ್ವನಾಥ್ ಅವರು ಯಲಹಂಕ ಕ್ಷೇತ್ರದಲ್ಲಿ ಕಟ್ಟಿರುವ ಬಿಜೆಪಿ ಕೋಟೆ ಭೇದಿಸುವುದು ಅಷ್ಟು ಸುಲಭವಲ್ಲ. ಅವರ ಮೇಲೆ ನನಗೆ ವಿಶ್ವಾಸವಿದೆ' ಎಂದು ಚಿಕ್ಕಬಳ್ಳಾಪುರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಡಾ.ಕೆ. ಸುಧಾಕರ್ ಹೇಳಿದರು.

ಮಾದಾವರದ ಬಿಜೆಪಿ ಹಿರಿಯ ಮುಖಂಡ ಗೋವಿಂದಪ್ಪ ಮನೆಯಲ್ಲಿ ದಾಸನಪುರ ಹೋಬಳಿಯ ಚುನಾವಣಾ ಕಾರ್ಯತಂತ್ರ ಸಭೆ ಹಾಗೂ ಉಪಾಹಾರ ಕೂಟದಲ್ಲಿ ಅವರು ಮಾತನಾಡಿದರು.

'ವಿಶ್ವನಾಥ್ ಹಾಗೂ ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಅವೆಲ್ಲಾ ಬರೀ ಕಾಂಗ್ರೆಸ್ ಪಕ್ಷದ ಊಹಾಪೋಹಗಳಷ್ಟೇ. ನಾವು ಒಗ್ಗಟ್ಟಾಗಿದ್ದೇವೆ' ಎಂದರು.

ಶಾಸಕ ಎಸ್.ಆರ್ ವಿಶ್ವನಾಥ್ ಮಾತನಾಡಿ, 'ಯಲಹಂಕ ವಿಧಾನಸಭಾ ಕ್ಷೇತ್ರd ಮತದಾರರು ಗೆಲುವಿನ ರೂವಾರಿಗಳಾಗಬೇಕು. ಈ ದೃಷ್ಟಿಯಿಂದ ಉಳಿದಿರುವ ದಿನಗಳಲ್ಲಿ ಮನೆ ಮನೆಗೂ ಹೋಗಿ ಪ್ರಚಾರ ಮಾಡಲು ತೀರ್ಮಾನಿಸಿದ್ದೇವೆ' ಎಂದರು.

ಮಾದಾವರದ ಬಿಜೆಪಿ ಹಿರಿಯ ಮುಖಂಡ ಗೋವಿಂದಪ್ಪ ಮನೆಯಲ್ಲಿ ದಾಸನಪುರ ಹೋಬಳಿಯ ಚುನಾವಣಾ ಕಾರ್ಯತಂತ್ರ ಸಭೆಯಲ್ಲಿ ಶಾಸಕ ಎಸ್. ಆರ್. ವಿಶ್ವನಾಥ್ ಮತ್ತು ಡಾ. ಕೆ. ಸುಧಾಕರ್ ಭಾಗವಹಿಸಿದ್ದರು

'ಚಿಕ್ಕಬಳ್ಳಾಪುರಕ್ಕೆ ಪ್ರಧಾನಿ ಮೋದಿಯವರು ಹಾಗೂ ಯಲಹಂಕ ನಗರಕ್ಕೆ ಗೃಹಸಚಿವ ಅಮಿತ್ ಶಾ ಅವರ ಕಾರ್ಯಕ್ರಮವಿದೆ. ಎರಡೂ ಕಾರ್ಯಕ್ರಮಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಗುರಿ ಇದೆ' ಎಂದರು.

ಮಾಜಿ ಶಾಸಕರಾದ ಲಕ್ಷ್ಮೀನಾರಾಯಣ, ಶ್ರೀನಿವಾಸ್ ಮೂರ್ತಿ, ಬಿಜೆಪಿ ಮುಖಂಡರಾದ ಗೋವಿಂದಪ್ಪ, ಲಲಿತಮ್ಮ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಈ. ಕೃಷ್ಣಪ್ಪ, ಮಂಡಲ ಅಧ್ಯಕ್ಷ ಹನುಮಯ್ಯ, ಬೆಂಗಳೂರು ಮಹಾನಗರ ಸಹ ಪ್ರಭಾರಿ ಎಸ್.ಎನ್. ರಾಜಣ್ಣ, ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಸತೀಶ್, ಸಂಪತ್ ಸಭೆಯಲ್ಲಿ ಹಾಜರಿದ್ದರು.

'ದೇವೇಗೌಡರಿಂದ ಹತಾಶ ಸ್ಥಿತಿಯ ಪ್ರದರ್ಶನ'

ಬೆಂಗಳೂರು: 'ಲೋಕಸಭಾ ಚುನಾವಣೆ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನಗೊಳ್ಳುತ್ತದೆ ಎನ್ನುವ ಮೂಲಕ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು ರಾಜಕೀಯ ಹತಾಶ ಸ್ಥಿತಿಯನ್ನು ಪ್ರದರ್ಶಿಸಿದ್ದಾರೆ' ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಟೀಕಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಸುನಾಮಿಯಿಂದ ದೇವೇಗೌಡರು ಹೆದರಿದ್ದಾರೆ. ಬಿಜೆಪಿ ಜತೆಗಿನ ಮೈತ್ರಿಯಿಂದ ತಮಗೆ ಆನೆ ಬಲ ಬಂದಿದೆ ಎಂಬ ಭ್ರಮೆಯಲ್ಲಿ ದೃತರಾಷ್ಟ್ರನ ಅಂಧ ಪ್ರೇಮವನ್ನು ವ್ಯಕ್ತಪಡಿಸುತ್ತಿದ್ದಾರೆ' ಎಂದು ಹೇಳಿದ್ದಾರೆ.

'ಮತದಾನ ಜಾಗೃತಿ ಕಾಲ್ನಡಿಗೆ ಜಾಥಾ'ದಲ್ಲಿ ವಿದ್ಯಾರ್ಥಿಗಳು ಭಾಗಿ

'ಮತ ಚಲಾಯಿಸಿ ಪ್ರಜಾಪ್ರಭುತ್ವ ಗೆಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಎಲ್ಲರೂ ಮತ ಚಲಾಯಿಸಿ ಪ್ರಜಾಪ್ರಭುತ್ವವನ್ನು ಗೆಲ್ಲಿಸೋಣ' ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಲಾಲ್‌ಬಾಗ್ ಮುಖ್ಯದ್ವಾರದಿಂದ ಶುಕ್ರವಾರ ಹಮ್ಮಿಕೊಂಡಿದ್ದ 'ಮತದಾನ ಜಾಗೃತಿ ಕಾಲ್ನಡಿಗೆ ಜಾಥಾ' ಉದ್ದೇಶಿಸಿ ಅವರು ಮಾತನಾಡಿದರು.

'ನೀವೆಲ್ಲರೂ ಯುವ ಮತದಾರರಾಗಿದ್ದು, ಹಲವರು ಮೊದಲ ಬಾರಿ ಮತ ಚಲಾಯಿಸುತ್ತಿದ್ದೀರಿ. ಪ್ರಜಾಪ್ರಭುತ್ವಕ್ಕೆ ಉತ್ತಮ ಕೊಡುಗೆ ನೀಡುವ ನಿಟ್ಟಿನಲ್ಲಿ ಎಲ್ಲರೂ ತಪ್ಪದೆ ಮತ ಚಲಾಯಿಸಬೇಕು' ಎಂದರು.

ಬೆಂಗಳೂರಿನಲ್ಲಿ ಕಳೆದ ಚುನಾವಣೆಯಲ್ಲಿ ಶೇ 54ರಷ್ಟು ಮತದಾನವಾಗಿದೆ. ಈ ಬಾರಿಯ ಮತದಾನದ ಪ್ರಮಾಣ ಹೆಚ್ಚಿಸಲು ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಮತದಾನ ಜಾಗೃತಿ ಕಾಲ್ನಡಿಗೆ ಜಾಥಾ'ದಲ್ಲಿ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಅವರೊಂದಿಗೆ ವಿದ್ಯಾರ್ಥಿಗಳು ಭಾಗವಹಿಸಿದ್ದರು

17 ಕಾಲೇಜುಗಳ ವಿದ್ಯಾರ್ಥಿಗಳು ಭಾಗಿ: ಮಹಾರಾಣಿ ಕಾಲೇಜು, ವಿವೇಕಾನಂದ ಪದವಿ ಕಾಲೇಜು, ವಿಜಯ ಕಾಲೇಜು, ಸರ್ಕಾರಿ ಕಲಾ ಕಾಲೇಜು, ಎಸ್.ಎಲ್.ಎನ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಸೇರಿದಂತೆ 17 ವಿವಿಧ ಕಾಲೇಜುಗಳಿಂದ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಲಾಲ್‌ಬಾಗ್‌ನಲ್ಲಿರುವ ವಾಯು ವಿಹಾರ ಮಾರ್ಗದಲ್ಲಿ ಸುಮಾರು 4 ಕಿ.ಮೀ ಕಾಲ್ನಡಿಗೆಯ ಜಾಥಾ ಮೂಲಕ ಸಾಗಿ, ವಾಯುವಿಹಾರಿಗಳಲ್ಲಿ ಏಪ್ರಿಲ್ 26ರಂದು ತಪ್ಪದೆ ಮತದಾನ ಮಾಡುವಂತೆ ಜಾಗೃತಿ ಮೂಡಿಸಲಾಯಿತು.

ವಿದ್ಯಾರ್ಥಿಗಳು 'ಪ್ರಜಾಪ್ರಭುತ್ವಕ್ಕೆ ಮತದಾನ ನೀಡಿ', 'ನನ್ನ ಮತ ದೇಶಕ್ಕೆ ಹಿತ', 'ಚುನಾವಣಾ ಪರ್ವ ದೇಶದ ಗರ್ವ', '26ರಂದು ಮತ ಚಲಾಯಿಸಿ' ಸೇರಿದಂತೆ ಇನ್ನಿತರೆ ಘೋಷಣೆಗಳನ್ನು ಕೂಗುತ್ತಾ ಜಾಥಾ ಸಾಗಿತು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜು, ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಪ್ರತಿಭಾ ಪಾಲ್ಗೊಂಡಿದ್ದರು.

'ಮತಗಟ್ಟೆ: ಸಾಲಿನ ಮಾಹಿತಿಗೆ ಕ್ಯೂ ಸಿಸ್ಟಂ'

ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮತದಾರರ ಅನುಕೂಲಕ್ಕಾಗಿ ಈ ಬಾರಿ ಹೆಚ್ಚು (8,984) ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ರೀತಿಯ ವ್ಯವಸ್ಥೆಗಳೂ ಇವೆ. 'ಕ್ಯೂ ಸಿಸ್ಟಂ' ತಂತ್ರಾಂಶದ ಮೂಲಕ ಮತಗಟ್ಟೆಗಳಲ್ಲಿ ಸರತಿ ಸಾಲು ಎಷ್ಟಿದೆ ಎಂಬುದನ್ನು ಮನೆಯಿಂದಲೇ ನೋಡಿಕೊಂಡು, ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡಬಹುದು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

ಬಳ್ಳಾರಿ ಮುಖ್ಯರಸ್ತೆಯಲ್ಲಿ ಬರುವ 'ಎಲ್ ಆ್ಯಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಸಂಸ್ಥೆ'ಯ ಸಭಾಂಗದಲ್ಲಿ ಹಮ್ಮಿಕೊಂಡಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸುಭದ್ರ ಪ್ರಜಾಪ್ರಭುತ್ವಕ್ಕಾಗಿ ಎಲ್ಲರೂ ಮತದಾನದಲ್ಲಿ ಪಾಲ್ಗೊಂಡು ದೇಶಕ್ಕೆ ಗರ್ವ ತರುವ ಕೆಲಸ ಮಾಡೋಣ. ಬೆಂಗಳೂರಿನಲ್ಲಿ ಮತದಾನ ಹಕ್ಕನ್ನು ಹೊಂದಿಲ್ಲದೇ ಇರುವವರು ಮತದಾನದ ದಿನ ತಮ್ಮ-ತಮ್ಮ ಊರುಗಳಿಗೆ ತೆರಳಿ ತಪ್ಪದೆ ಮತದಾನ ಮಾಡಿ' ಎಂದು ಮನವಿ ಮಾಡಿದರು.

ನೀತಿ ಸಂಹಿತೆ, ಶಾಲಾ–ಕಾಲೇಜುಗಳಿಗೆ ರಜೆಯಿಂದಾಗಿ ರಕ್ತ ಸಂಗ್ರಹ ಕಾರ್ಯಕ್ಕೆ ಹಿನ್ನಡೆ

ರಕ್ತದಾನ ಶಿಬಿರಕ್ಕೂ ತಟ್ಟಿದ ಚುನಾವಣೆ 'ಬಿಸಿ'

• ವರುಣ ಹೆಗಡೆ

ಬೆಂಗಳೂರು: ಚುನಾವಣೆ ಕಾವು, ಬೇಸಿಗೆಯ ತಾಪ ರಕ್ತದಾನ ಶಿಬಿರಗಳಿಗೂ ತಾಕಿದೆ. ಇದರಿಂದಾಗಿ ರಕ್ತನಿಧಿ ಕೇಂದ್ರಗಳಲ್ಲಿ ರಕ್ತ ಸಂಗ್ರಹ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತಿದೆ.

ಏಪ್ರಿಲ್–ಮೇ ತಿಂಗಳಲ್ಲಿ ಶಾಲಾ–ಕಾಲೇಜುಗಳು ರಜೆ ಇರುವುದರಿಂದ ಪ್ರತಿ ವರ್ಷ ಸಾಮಾನ್ಯವಾಗಿ ಈ ಅವಧಿಯಲ್ಲಿ ರಕ್ತದಾನ ಶಿಬಿರಗಳಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿ, ರಕ್ತದ ಬೇಡಿಕೆ ಮತ್ತು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿತ್ತು. ಈ ಬಾರಿ ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿಯಿಂದಾಗಿ ರಾಜಕಾರಣಿಗಳು ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಜನ್ಮದಿನ ಹಾಗೂ ವಿವಿಧ ಸಂದರ್ಭದಲ್ಲಿ ರಕ್ತದಾನ ಶಿಬಿರಗಳನ್ನು ನಡೆಸುತ್ತಿಲ್ಲ. ಸಂಘ–ಸಂಸ್ಥೆಗಳೂ ರಕ್ತದಾನ ಶಿಬಿರಗಳನ್ನು ನಡೆಸಲು ನಿರಾಸಕ್ತಿ ತೋರಿವೆ. ಇದರಿಂದಾಗಿ ರಕ್ತದ ಬೇಡಿಕೆ ಮತ್ತು ಪೂರೈಕೆ ನಡುವೆ ಶೇ 50ರಷ್ಟು ವ್ಯತ್ಯಾಸ ಉಂಟಾಗಿದೆ. ಇದೇ ಪರಿಸ್ಥಿತಿ ಮುಂದುವರಿದಲ್ಲಿ ರಕ್ತದ ಕೊರತೆ ಸಮಸ್ಯೆ ಇನ್ನಷ್ಟು ಗಂಭೀರ ಪಡೆಯುವ ಸಾಧ್ಯತೆಯಿದೆ ಎಂದು ರಕ್ತನಿಧಿ ಕೇಂದ್ರದ ಪ್ರತಿನಿಧಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷವೂ ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾದ ಸಮಯದಲ್ಲೂ ರಕ್ತದ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. 2020 ಮತ್ತು 2021ರಲ್ಲಿ ಕೋವಿಡ್ ಕಾರಣ ರಕ್ತದಾನ ಶಿಬಿರಗಳು ಅಷ್ಟಾಗಿ ನಡೆದಿರಲಿಲ್ಲ. ಈಗಲೂ ಕೆಲ ಕಂಪನಿಗಳ ಐಟಿ–ಬಿಟಿ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಐಟಿ–ಬಿಟಿ ಕಂಪನಿಗಳು ರಕ್ತದಾನ ಶಿಬಿರಗಳನ್ನು ನಡೆಸಲು ಆಸಕ್ತಿ ತೋರುತ್ತಿಲ್ಲ. ಹೀಗಾಗಿ, ರಕ್ತನಿಧಿ ಕೇಂದ್ರಗಳಿಂದ ಆಸ್ಪತ್ರೆಗಳಿಗೆ ರಕ್ತ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಲಭ್ಯತೆ ಆಧಾರ ಪೂರೈಕೆ: ಪ್ರಮುಖ ರಕ್ತನಿಧಿ ಸಂಸ್ಥೆಯಾದ ಭಾರತೀಯ ರೆಡ್ ಕ್ರಾಸ್ ನಗರದ ವಿವಿಧ ಆಸ್ಪತ್ರೆಗಳಿಗೆ ರಕ್ತ ಪೂರೈಕೆ ಮಾಡುತ್ತಿತ್ತು. ಕೆಲ ದಿನಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ರಕ್ತ ಸಂಗ್ರಹವಾಗದಿದ್ದರಿಂದ ಆಸ್ಪತ್ರೆಗಳಿಗೆ ಲಭ್ಯತೆಯ ಆಧಾರದಲ್ಲಿ ಕೇಂದ್ರವು ಒದಗಿಸುತ್ತಿದೆ. ಪ್ರತಿ ತಿಂಗಳು 3 ಸಾವಿರ ಯೂನಿಟ್ ರಕ್ತವನ್ನು ಸಂಗ್ರಹಿಸುತ್ತಿದ್ದ ಸಂಸ್ಥೆ, ಎರಡು ತಿಂಗಳಿಂದ ಅರ್ಧದಷ್ಟು ರಕ್ತವನ್ನು ಮಾತ್ರ ಸಂಗ್ರಹಿಸುತ್ತಿದೆ.

'ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ರಕ್ತದಾನ ಶಿಬಿರಗಳು ಅಷ್ಟಾಗಿ ನಡೆಯುತ್ತಿಲ್ಲ. ಪೂರ್ವ ನಿಗದಿಯಾದ ಶಿಬಿರಗಳನ್ನೂ ಆಯೋಜಕರೇ ರದ್ದು ಮಾಡುತ್ತಿದ್ದಾರೆ. ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಉತ್ತಮ ಪ್ರಮಾಣದಲ್ಲಿ ರಕ್ತ ಸಂಗ್ರಹವಾಗಿತ್ತು. ಸದ್ಯ ಇರುವುದರಲ್ಲೇ ನಿರ್ವಹಣೆ ಮಾಡುತ್ತಿದ್ದೇವೆ. ಬೇಡಿಕೆಯಷ್ಟು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಯುವಜನರು ರಕ್ತದಾನದಂತಹ ಸಮಾಜಸೇವೆಗೆ ಹೆಚ್ಚಿನ ಒಲವು ತೋರಬೇಕು. ತಾವು ರಕ್ತದಾನ ಮಾಡುವುದರೊಂದಿಗೆ ಇತರರನ್ನೂ ರಕ್ತದಾನ ಮಾಡುವಂತೆ ಪ್ರೇರೇಪಿಸಬೇಕು' ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯಶಾಖೆಯ ಪ್ರತಿನಿಧಿಯೊಬ್ಬರು ತಿಳಿಸಿದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಥಲಸ್ಸೇಮಿಯಾ ರೋಗಿಗಳಿಗೆ ಉಚಿತವಾಗಿ ರಕ್ತವನ್ನು ಒದಗಿಸಲಾಗುತ್ತಿದೆ. ರಕ್ತದ ಕೊರತೆ ನೀಗಿಸಲು ಸಂಚಾರಿ ವಾಹನಗಳ ಮೂಲಕವೂ ರಕ್ತ ಸಂಗ್ರಹಿಸಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಥಲಸ್ಸೇಮಿಯಾ ರೋಗಿಗಳಿಗೆ ಸಮಸ್ಯೆ

'ರಕ್ತ ದಾನ ಶಿಬಿರಗಳು ನಡೆಯುತ್ತಿಲ್ಲ. ರಕ್ತ ಸಂಗ್ರಹಿಸಲು ಬಹಳ ಕಷ್ಟ ಪಡುತ್ತಿದ್ದೇವೆ. ನಮ್ಮ ಸಂರಕ್ಷಾ ಥಲಸ್ಸೇಮಿಯಾ ಕೇಂದ್ರದಲ್ಲಿ 416 ಮಕ್ಕಳಿದ್ದಾರೆ. ಅವರಿಗೆ ನಿತ್ಯ 30ರಿಂದ 35 ಯೂನಿಟ್ ರಕ್ತ ಒದಗಿಸಬೇಕಾಗುತ್ತದೆ. ಕಾಯಂ ದಾನಿಗಳನ್ನು ಸಂಪರ್ಕಿಸಿ, ಮನವಿ ಮಾಡಿಕೊಳ್ಳುತ್ತಿದ್ದೇವೆ. ಆದರೂ ಅಗತ್ಯ ಪ್ರಮಾಣದ ರಕ್ತವನ್ನು ಸಂಗ್ರಹಿಸಿ, ಒದಗಿಸುವುದು ಸವಾಲಾಗಿದೆ' ಎಂದು ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಅಧಿಕಾರಿ ರಾಧಾ ತಿಳಿಸಿದರು.

'ರಕ್ತದಾನ ಶಿಬಿರಗಳು ನಡೆದರೂ ದಾನಿಗಳು ಬರುತ್ತಿಲ್ಲ. ಈ ಮೊದಲು ಪ್ರತಿನಿತ್ಯ 80ರಿಂದ 100 ಯೂನಿಟ್ ರಕ್ತವನ್ನು ಆಸ್ಪತ್ರೆಗಳಿಗೆ ಒದಗಿಸುತ್ತಿದ್ದೆವು. ಈಗ ನಮ್ಮಲ್ಲಿನ ಮಕ್ಕಳಿಗೆ ರಕ್ತ ಒದಗಿಸುವುದು ಕಷ್ಟವಾಗಿದೆ. ಆಸ್ಪತ್ರೆಗಳಿಗೆ ರಕ್ತವನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಜನರು ರಕ್ತದಾನದ ಮಹತ್ವ ಅರಿತು, ರಕ್ತದಾನಕ್ಕೆ ಮುಂದೆ ಬರಬೇಕು' ಎಂದು ಹೇಳಿದರು.

ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಸಂಪರ್ಕ ಸಂಖ್ಯೆ: 080 26608870 ಅಥವಾ 9945299369

ಭಾರತೀಯ ರೆಡ್ ಕ್ರಾಸ್ ಕರ್ನಾಟಕ ಶಾಖೆಯ ಸಂಪರ್ಕ ಸಂಖ್ಯೆ: 080 22268435 ಅಥವಾ 9902859859

> **ಶಾಲಾ–ಕಾಲೇಜುಗಳಿಗೆ ರಜೆ ಇರುವುದರಿಂದ ಸಹಜವಾಗಿ ರಕ್ತದಾನ ಶಿಬಿರಕ್ಕೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಜನರು ರಕ್ತದಾನದಂತಹ ಸಮಾಜಸೇವೆಗೆ ಹೆಚ್ಚಿನ ಒಲವು ತೋರಬೇಕು**
> **ಎಚ್.ಎಸ್. ಬಾಲಸುಬ್ರಮಣ್ಯ**
> ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಪ್ರಧಾನ ಕಾರ್ಯದರ್ಶಿ

ಕೋದಂಡರಾಮ ಬ್ರಹ್ಮರಥೋತ್ಸವ



ಪ್ರಜಾವಾಣಿ ವಾರ್ತೆ

ಯಲಹಂಕ: ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಕೋದಂಡ ರಾಮಸ್ವಾಮಿಯ 75ನೇ ವರ್ಷದ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಿಗ್ಗೆಯಿಂದಲೇ ಸ್ವಾಮಿಗೆ ಅಭಿಷೇಕ ಅರ್ಚನೆ, ಮಹಾನಿವೇದನೆ, ಹೋಮ, ಮಹಾಮಂಗಳಾರತಿ ಪೂಜಾಕೈಂಕರ್ಯ ನಡೆಯಿತು. ಬಳಿಕ ಭಕ್ತರು 'ಗೋವಿಂದ–ಗೋವಿಂದ' ಘೋಷಗಳೊಂದಿಗೆ ಸಂಜೆ 4 ಗಂಟೆಗೆ ರಥವನ್ನು ಎಳೆಯಲಾಯಿತು.

ಸುತ್ತಮುತ್ತಲ ಗ್ರಾಮಗಳು, ಬೆಂಗಳೂರು ನಗರ ಸೇರಿ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ಸ್ವಾಮಿಯ ದರ್ಶನ ಪಡೆದರು. ಬಾಳೆಹಣ್ಣು ಮತ್ತು ದವನವನ್ನು ರಥದ ಮೇಲೆ ಎಸೆಯುವ ಮೂಲಕ ಹರಕೆ ತೀರಿಸಿದರು.

ಗ್ರಾಮದೇವತೆಗಳಾದ ದೊಡ್ಡಮ್ಮ ಮತ್ತು ಮಹೇಶ್ವರಮ್ಮ ದೇವಿಗೆ ಇದೇ ವೇಳೆ ವಿಶೇಷಪೂಜೆ ನೆರವೇರಿಸಲಾಯಿತು. ಕೋಸಂಬರಿ, ಪಾನಕ ಮತ್ತು ಮಜ್ಜಿಗೆ ವಿತರಣೆಯ ಜೊತೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

'ರಾಜ್ ಕನ್ನಡ ಸಂಸ್ಕೃತಿಯ ಪ್ರತೀಕ'

ಚಲನಚಿತ್ರ ಕಲಾವಿದ ಉಮೇಶ್ ಸೇರಿ ಐವರಿಗೆ ಕಸಾಪ ದತ್ತಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿವಂಗತ ನಟ ರಾಜಕುಮಾರ್ ಅವರು ಕನ್ನಡ ಸಂಸ್ಕೃತಿಯ ಪ್ರತೀಕದಂತಿದ್ದರು. ತಮ್ಮ ಅಭಿನಯ ಮತ್ತು ಬದುಕಿನ ರೀತಿಯಿಂದ ಮಾದರಿ ಎನಿಸಿಕೊಂಡಿದ್ದರು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಶನಿವಾರ ತಿಳಿಸಿದರು.

ಕಸಾಪ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚಲನಚಿತ್ರ ಕಲಾವಿದ ಎಂ.ಎಸ್.ಉಮೇಶ್ ಅವರಿಗೆ 'ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ', ಬಿ.ನಂಜುಂಡಸ್ವಾಮಿ, ಕವಿತಾ ಮಿಶ್ರಾ, ಮಲ್ಲಿಕಾರ್ಜುನ ಕೆಂಕೆರೆ ಹಾಗೂ ನಿಸರ್ಗ ಸಂಗೀತ ವಿದ್ಯಾಲಯದ ಪರವಾಗಿ ಮಲ್ಲಯ್ಯ ಕೊಮಾರಿ ಅವರಿಗೆ 'ಪ್ರೊ.ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವರು, 'ರಾಜಕುಮಾರ್ ಅವರು ಸಂತ ಶ್ರೇಷ್ಠರಾದ ಕನಕದಾಸ, ಪುರಂದರದಾಸ, ಸರ್ವಜ್ಞ, ತುಕಾರಾಂ, ಕಬೀರ ಅವರ ಪಾತ್ರಗಳಿಗೆ ಜೀವ ತುಂಬಿದ್ದರು. ಇಮ್ಮಡಿ ಪುಲಕೇಶಿ, ಮಯೂರ, ಶ್ರೀಕೃಷ್ಣದೇವರಾಯ ಮೊದಲಾದ ಕನ್ನಡ ನಾಡಿನ ವೀರರನ್ನು ಬೆಳ್ಳಿತೆರೆಯ ಮೂಲಕ ಜೀವಂತವಾಗಿಸಿದರು. ಬಾಂಡ್‌ನಿಂದ ಭಕ್ತನವರೆಗೆ, ಚಮ್ಮಾರನಿಂದ ಚಕ್ರವರ್ತಿಯವರೆಗೆ ಎಲ್ಲ ಪಾತ್ರಗಳನ್ನು ಮಾಡಿ, ಕನ್ನಡ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದರು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ನಂಜುಂಡಸ್ವಾಮಿ, ಕವಿತಾ ಮಿಶ್ರಾ, ಎಂ.ಎಸ್ ಉಮೇಶ್, ಮಲ್ಲಿಕಾರ್ಜುನ ಕೆಂಕೆರೆ ಹಾಗೂ ಮಲ್ಲಯ್ಯ ಕೊಮಾರಿ ಅವರಿಗೆ ಕಸಾಪ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಸಾಪ ಪ್ರಕಟಣಾ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರ ಮೂರ್ತಿ, ಕೋಶಾಧ್ಯಕ್ಷ ಬಿ.ಎಂ.ಪಟೇಲ ಪಾಂಡು, ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು, ಮಹೇಶ ಜೋಶಿ, ನಿರ್ಮಾಪಕ ಎಸ್.ಎ. ಚಿನ್ನೇಗೌಡ, ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗ ಶೆಟ್ಟಿ, ಎಸ್.ರಾಜಶೇಖರ್, ರಮೇಶ್ ಭಟ್ ಪಾಲ್ಗೊಂಡಿದ್ದರು

ಪ್ರಶಸ್ತಿ ಪ್ರದಾನ ಮಾಡಿದ ಚಲನಚಿತ್ರ ನಟ ರಮೇಶ್ ಭಟ್, 'ಇತ್ತೀಚೆಗೆ ಪ್ರಶಸ್ತಿ ಕೂಡ ಮಾರಾಟದ ವಸ್ತುವಾಗಿದೆ. ಇಂತಹ ಸಂದರ್ಭದಲ್ಲಿ ನೈಜ ಸಾಧಕರನ್ನು ಗುರುತಿಸಿ, ಗೌರವಿಸುವುದು ಶ್ಲಾಘನೀಯ' ಎಂದು ತಿಳಿಸಿದರು.

ರಂಗಭೂಮಿ ದಿನಗಳಿಂದಲೂ ತಮಗೆ ದೊರೆತ ರಾಜಕುಮಾರ್ ಅವರ ಒಡನಾಟವನ್ನು ಸ್ಮರಿಸಿಕೊಂಡ ಎಂ.ಎಸ್. ಉಮೇಶ್, 'ಅವರ ಹೆಸರಿನ ಪ್ರಶಸ್ತಿ ದೊರೆತಿರುವುದು ಧನ್ಯತೆಯ ಭಾವವನ್ನು ತಂದಿದೆ' ಎಂದರು.

ಪ್ರೊ.ಎಂ.ಎಚ್.ಮರಿದೇವರು ಪ್ರಶಸ್ತಿ ದಾನಿಗಳ ಪರವಾಗಿ ಮಾತನಾಡಿದ ಎಸ್. ರಾಜಶೇಖರ್, ಪುರಸ್ಕಾರದ ಮಹತ್ವ ವಿವರಿಸಿದರು.

ಮುಂಗಾರು ಆರಂಭ ಹಿನ್ನೆಲೆ ಬಿಬಿಎಂಪಿಯಿಂದ ಮುಂಜಾಗ್ರತಾ ಕ್ರಮ

ಮೇ 3ರವರೆಗೆ 'ಮಾಸಾರ್ಧ ಸ್ವಚ್ಛತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಮಳೆ ಪ್ರಾರಂಭವಾಗುವ ಅವಧಿ ಸಮೀಪಿಸುತ್ತಿರುವುದರಿಂದ ಬಿಬಿಎಂಪಿ ಇದೇ 19ರಿಂದ 'ಮಾಸಾರ್ಧ ಸ್ವಚ್ಛತಾ ಕಾರ್ಯಕ್ರಮ' ಆರಂಭಿಸಿದ್ದು, ಮೇ 3ರವರೆಗೂ ನಡೆಯಲಿದೆ.

ಮಳೆ ಆರಂಭದ ಹಿನ್ನೆಲೆ ರಾಜಕಾಲುವೆಗಳಲ್ಲಿ ಹೂಳೆತ್ತುವುದು, ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳ ಬದಿಯ ಚರಂಡಿ ಸ್ವಚ್ಛತೆ, ವಾರ್ಡ್ ಮಟ್ಟದಲ್ಲಿ ಗುರುತಿಸಲಾಗಿರುವ ಸಂಪರ್ಕ ಚರಂಡಿಗಳಿಂದ ಹೂಳೆತ್ತುವ ಕಾರ್ಯವನ್ನು ಈ ಅವಧಿಯಲ್ಲಿ ಮಾಡಲಾಗುತ್ತದೆ. ಈ ಸ್ವಚ್ಛತಾ ಕಾರ್ಯದ ಜವಾಬ್ದಾರಿ ಯನ್ನು ಮುಖ್ಯ ಎಂಜಿನಿಯರ್‌ಗಳಿಗೆ ವಹಿಸಿ, ಕೈಗೊಂಡ ಕ್ರಮಗಳ ವಿವರವನ್ನು ಪ್ರತಿನಿತ್ಯವೂ ಛಾಯಾಚಿತ್ರಗಳೊಂದಿಗೆ ವರದಿ ಸಲ್ಲಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಯಾರಿಗೆ ಯಾವ ಜವಾಬ್ದಾರಿ?:

ವಲಯ ಮುಖ್ಯ ಎಂಜಿನಿಯರ್: ವಾರ್ಡ್‌ಮಟ್ಟದಲ್ಲಿ ರಾಜಕಾಲುವೆಗಳ ಸಂಪರ್ಕ ಚರಂಡಿ, ಸೂಕ್ಷ್ಮ, ಅತಿಸೂಕ್ಷ್ಮ ಪ್ರದೇಶಗಳಿಂದ ಹೂಳೆತ್ತುವುದು. ರಸ್ತೆ ಬದಿಯಲ್ಲಿ ಶೇಖರಣೆಯಾಗುವ ಘನತ್ಯಾಜ್ಯ ವಿಲೇವಾರಿ ಮಾಡುವುದು. ರಸ್ತೆ ಗುಂಡಿ, ಚರಂಡಿ ದುರಸ್ತಿಪಡಿಸುವುದು.

ರಸ್ತೆ ಮೂಲಸೌಕರ್ಯ ಮುಖ್ಯ ಎಂಜಿನಿಯರ್: ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ಚರಂಡಿ ಸ್ವಚ್ಛತೆ, ಅನುಪಯುಕ್ತ ಕಟ್ಟಡ ತ್ಯಾಜ್ಯ ತೆರವುಗೊಳಿಸುವುದು. ಯಂತ್ರಗಳಿಂದ ರಸ್ತೆ ಕಸ ಗುಡಿಸುವುದು. ಮೇಲ್ಸೇತುವೆ ಮತ್ತು ಕೆಳಸೇತುವೆಗಳಲ್ಲಿ ನೀರು ನಿಲ್ಲುವುದಿಲ್ಲ ಎಂಬ ಪ್ರಮಾಣಪತ್ರ ಸಲ್ಲಿಸುವುದು. ರಸ್ತೆ ಗುಂಡಿಗಳನ್ನು ದುರಸ್ತಿಪಡಿಸುವುದು.

ಬೃಹತ್ ನೀರುಗಾಲುವೆ ಮುಖ್ಯ ಎಂಜಿನಿಯರ್: ರಾಜಕಾಲುವೆಗಳ ನಿರ್ವಹಣೆ. ಸೇತುವೆ ಮತ್ತು ಅಡಿಗಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುವಂತೆ ಸ್ವಚ್ಛಗೊಳಿಸುವುದು. ವಾರ್ಷಿಕ ನಿರ್ವಹಣೆಯ ಗುತ್ತಿಗೆದಾರರು 'ಸರ್ವಸನ್ನದ್ಧರಾಗಿ' ಇರುವಂತೆ ಸೂಚಿಸುವುದು. ನೀರಿನ ಮಟ್ಟದ ಸೆನ್ಸಾರ್ ಕ್ಯಾಮೆರಾಗಳ ಸ್ಥಿತಿ ಬಗ್ಗೆ ವರದಿ ನೀಡುವುದು. ರಾಜಕಾಲುವೆಗಳಿಗೆ ಘನತ್ಯಾಜ್ಯ ಹಾಕುತ್ತಿರುವ ಸ್ಥಳಗಳನ್ನು ಗುರುತಿಸಿ ಘನತ್ಯಾಜ್ಯ ವಿಭಾಗ ಮುಖ್ಯ ಎಂಜಿನಿಯರ್ ಅವರಿಗೆ ತಿಳಿಸುವುದು.

ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್: ಕೆರೆಗಳನ್ನು ಸಂಪರ್ಕಿಸುವ ಹಾಗೂ ಹೊರ ಹೋಗುವ ರಾಜಕಾಲುವೆಗಳನ್ನು ಸ್ವಚ್ಛಗೊಳಿಸುವುದು. ಕೆರೆಗಳಲ್ಲಿ ಶೇಖರಣೆಯಾಗಿರುವ ಮತ್ತು ಶೇಖರಣೆಯಾಗಬಹುದಾದ ನೀರಿನ ಸಾಮರ್ಥ್ಯ, ತೂಬು ನಿರ್ವಹಣೆಯ ವಿವರ ಒದಗಿಸುವುದು. ಕೆರೆಗಳಲ್ಲಿ ಬೆಳೆದಿರುವ ಲಂಟಾನ ಗಿಡಗಳನ್ನು ಸ್ವಚ್ಛಗೊಳಿಸುವುದು.

ಯೋಜನೆ– ಕೇಂದ್ರ ವಿಭಾಗದ ಮುಖ್ಯ ಎಂಜಿನಿಯರ್: ಪ್ರಮುಖ ಪ್ರದೇಶ, ರಸ್ತೆಗಳಲ್ಲಿ ನೀರು ನಿಲ್ಲುವುದನ್ನು ತಡೆಯುವುದು.

ಘನತ್ಯಾಜ್ಯ ಮುಖ್ಯ ಎಂಜಿನಿಯರ್: ಘನತ್ಯಾಜ್ಯ ಸಂಗ್ರಹ, ಸಾಗಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು. ರಾಜಕಾಲುವೆಗಳಿಗೆ ಘನತ್ಯಾಜ್ಯ ಹಾಕುವುದನ್ನು ತಪ್ಪಿಸುವುದು.

ಬಿಬಿಎಂಪಿ ಸಿಬ್ಬಂದಿ ನಗರದ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು

ಸಂಕ್ಷಿಪ್ತ ಸುದ್ದಿ

ಬಾರಿ ಗಾಳಿಗೆ ಉದುರಿದ ಮಾವಿನಕಾಯಿ

ರಾಜರಾಜೇಶ್ವರಿನಗರ: ಶುಕ್ರವಾರ ಸಂಜೆ ಬೀಸಿದ ಬಾರಿ ಗಾಳಿಗೆ ರೈತರಾದ ಎಂ.ಜೈಕುಮಾರ್ ಮತ್ತು ಎಂ.ರಾಜ್ ಕುಮಾರ್ ಅವರ ಮಾವಿನ ತೋಪಿನಲ್ಲಿ ಬೆಳೆದಿದ್ದ ಕಾಯಿಗಳು ಉದುರಿವೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಪಚ್ಚೆಪಾಳ್ಯದ ಪ್ರಗತಿಪರ ರೈತರಾದ ಇವರು, 20 ಎಕರೆಯಲ್ಲಿ ಆಲ್ಫಾನ್ಸೊ, ಬಾದಾಮಿ ತಳಿಯ ಮಾವು ಬೆಳೆಸಿದ್ದಾರೆ. ಈ ಬಾರಿ ತೀವ್ರ ಬರದ ನಡುವೆಯೂ ಉತ್ತಮ ಫಸಲು ಬಂದಿತ್ತು.

'ಗಾಳಿಗೆ ಉದುರಿ ಬಿದ್ದ ಮಾವಿನ ಕಾಯಿಗಳು ನೋಡಿ ನೋವುಂಟಾಗಿದೆ' ಎಂದು ಎಂ. ಜೈಕುಮಾರ್ ಬೇಸರ ವ್ಯಕ್ತಪಡಿಸಿದರು.

ನಾಲ್ವರಿಗೆ ಜೀವಾವಧಿ ಶಿಕ್ಷೆ

ಮಂಗಳೂರು: ಉಳ್ಳಾಲದಲ್ಲಿ 2016ರಲ್ಲಿ ನಡೆದಿದ್ದ ಕೋಮುಗಲಭೆಯ ಸಂದರ್ಭದಲ್ಲಿ ರಾಜೇಶ್ ಕೋಟ್ಯಾನ್ ಅಲಿಯಾಸ್ ರಾಜ (44) ಅವರನ್ನು ಕೊಲೆ ಮಾಡಿದ ಪ್ರಕರಣದಲ್ಲಿ ನಾಲ್ವರು ಅಪರಾಧಿಗಳಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಮತ್ತು ತಲಾ ₹ 25 ಸಾವಿರ ದಂಡ ವಿಧಿಸಿದೆ.

ಉಳ್ಳಾಲ ಆಲದ ಮರದ ಬಳಿಯ ನಿವಾಸಿ, ಚಾಲಕ ಮೊಹಮ್ಮದ್ ಆಸಿಫ್ ಅಲಿಯಾಸ್ ಆಚಿ (23), ಉಳ್ಳಾಲ ಕೋಡಿಯ ನಿವಾಸಿ ಲೋಡರ್ ಮೊಹಮ್ಮದ್ ಸುಹೈಲ್ ಅಲಿಯಾಸ್ ಸುಹೈಲ್ (20), ಕೋಡಿ ಮಸೀದಿಯ ಬಳಿಯ ನಿವಾಸಿ, ಕೂಲಿ ಕಾರ್ಮಿಕ ಅಬ್ದುಲ್ ಮುತಾಲಿಕ್ ಅಲಿಯಾಸ್ ಮುತ್ತು (20), ಉಳ್ಳಾಲ ಬಸ್ತಿಪಡ್ಪು ಮಂಜಿಲ್ ನಿವಾಸಿ, ಕೋಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಅಬ್ದುಲ್ ಅಸ್ವೀರ್ ಅಲಿಯಾಸ್ ಅಚ್ಚು (19) ಶಿಕ್ಷೆಗೆ ಒಳಗಾದ ಅಪರಾಧಿಗಳು.

ದಂಡದ ಮೊತ್ತ ₹ 1.20 ಲಕ್ಷವನ್ನು ಮೃತ ರಾಜೇಶ್ ಕೋಟ್ಯಾನ್ ಅವರ ಪತ್ನಿ ಸವಿತಾ ಅವರಿಗೆ ನೀಡಬೇಕು ಎಂದೂ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಸ್ವಾಮಿ ಎಚ್. ಎಸ್. ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಪಾರ್ಕಿನ್ಸನ್ ರೋಗ: ಸಹಾಯವಾಣಿ

ಬೆಂಗಳೂರು: ಪಾರ್ಕಿನ್ಸನ್ ರೋಗಕ್ಕೆ ಸಂಬಂಧಿಸಿದಂತೆ ಇಲ್ಲಿನ ಆಸ್ಟರ್ ಸಿಎಂಐ ಆಸ್ಪತ್ರೆಯು ಸಹಾಯವಾಣಿ ಪ್ರಾರಂಭಿಸಿದ್ದು, ಈ ಸಹಾಯವಾಣಿ ವಾರದ ಎಲ್ಲ ದಿನ 24 ಗಂಟೆಗಳೂ ಕಾರ್ಯನಿರ್ವಹಿಸಲಿದೆ.

ವಿಶ್ವ ಪಾರ್ಕಿನ್ಸನ್ ದಿನಾಚರಣೆ ಪ್ರಯುಕ್ತ ಈ ಕ್ರಮ ಕೈಗೊಳ್ಳಲಾಗಿದೆ. ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರು 8310107400ಗೆ ಕರೆ ಮಾಡಿ, ವೈದ್ಯಕೀಯ ಸಲಹೆ ಪಡೆಯಬಹುದು. ನರರೋಗ ತಜ್ಞರು ಅಗತ್ಯ ಮಾರ್ಗದರ್ಶನ ಮಾಡುತ್ತಾರೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಎಂಟು 'ಇನ್‌ಸೆಕ್ಟ್ ಕೆಫೆ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಸರ್ಗದ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುವ ದುಂಬಿ–ಕೀಟಗಳ ಸಂರಕ್ಷಣೆಗಾಗಿ 'ಇನ್‌ಸೆಕ್ಟ್ ಕೆಫೆ' ಎಂಬ ಎಂಟು ವಿಶಿಷ್ಟ ಕೀಟ ತಾಣಗಳನ್ನು ಲಾಲ್‌ಬಾಗ್‌ನಲ್ಲಿ ಶುಕ್ರವಾರ ಅನಾವರಣಗೊಳಿಸಲಾಯಿತು.

'ಇವೈ ಗ್ಲೋಬಲ್ ಡೆಲಿವರಿ ಸರ್ವಿಸಸ್ (ಇವೈ ಜಿಡಿಎಸ್), ವಿಭಿನ್ನ ಇಂಡಿಯಾ ಫೌಂಡೇಷನ್‌ನ ಸಹಯೋಗದಲ್ಲಿ ಬೆಂಗಳೂರಿನಲ್ಲಿರುವ ಉದ್ಯಾನಗಳಲ್ಲಿ 21 ಇನ್‌ಸೆಕ್ಟ್ ಕೆಫೆಗಳನ್ನು ನಿರ್ಮಿಸುವ ಉದ್ದೇಶವಿದೆ. ಈಗಾಗಲೇ ಲಾಲ್‌ಬಾಗ್‌ನಲ್ಲಿ ಎಂಟು ಕೀಟ ತಾಣಗಳನ್ನು ನಿರ್ಮಿಸಲಾಗಿದೆ. ಮೇ ತಿಂಗಳಲ್ಲಿ ಕಬ್ಬನ್ ಉದ್ಯಾನದಲ್ಲಿಯೂ ಎಂಟು ಇನ್‌ಸೆಕ್ಟ್ ಕೆಫೆಗಳನ್ನು ಪ್ರಾರಂಭಿಸಲಾಗುವುದು' ಎಂದು ಇವೈ ಜಿಡಿಎಸ್‌ನ ಸಿಎಸ್‌ಆರ್ ವಿಭಾಗದ ನಿರ್ದೇಶಕಿ ರೂಮಿ ಮಲಿಕ್ ಮಿತ್ರಾ ಮಾಹಿತಿ ನೀಡಿದರು.

'ಮರುಬಳಕೆ ಮಾಡಿದ ಮರ, ಮಣ್ಣು ಹಾಗೂ ಬಿದಿರಿನಿಂದ ಇನ್‌ಸೆಕ್ಟ್ ಕೆಫೆಗಳನ್ನು ತಯಾರಿಸಲಾಗಿದೆ. ಇವುಗಳನ್ನು ಪ್ರಮುಖ ಉದ್ಯಾನಗಳಲ್ಲಿ ಸ್ಥಾಪಿಸುವುದರಿಂದ ವಿವಿಧ ಪ್ರಭೇದಗಳ ಕೀಟಗಳಿಗೆ ಸುರಕ್ಷಿತ ತಾಣವಾಗುತ್ತವೆ' ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್, 'ಕೀಟಗಳನ್ನು ಸಂರಕ್ಷಿಸಿ ಪೋಷಿಸುವ ನಿಟ್ಟಿನಲ್ಲಿ ಇನ್‌ಸೆಕ್ಟ್ ಕೆಫೆ ಯೋಜನೆ ಸಹಕಾರಿಯಾಗಿದೆ. ಕೀಟಗಳ ಸಂತಾನೋತ್ಪತ್ತಿ ಮತ್ತು ಉಳಿವಿಗಾಗಿ ಸುರಕ್ಷಿತವಾದ ಗೂಡುಗಳಿಲ್ಲದ ಪರಿಣಾಮ ಅನೇಕ ಕೀಟಗಳು ಅಪಾಯದ ಅಂಚಿನಲ್ಲಿವೆ. ಆದ್ದರಿಂದ, ಇವುಗಳ ಸಂರಕ್ಷಿಸುವುದರ ಜೊತೆಗೆ ಸಾರ್ವಜನಿಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಇನ್‌ಸೆಕ್ಟ್ ಕೆಫೆಗಳನ್ನು ಸಾರ್ವಜನಿಕರು ತಮ್ಮ ಮನೆಗಳಲ್ಲಿರುವ ಖಾಲಿ ಸ್ಥಳಗಳಲ್ಲಿಯೂ ಸ್ಥಾಪಿಸಬಹುದು' ಎಂದು ಸಲಹೆ ನೀಡಿದರು.

ಲಾಲ್‌ಬಾಗ್‌ನಲ್ಲಿ ನೂತನವಾಗಿ ಇನ್‌ಸೆಕ್ಟ್ ಕೆಫೆಗಳನ್ನು ಸ್ಥಾಪಿಸಲಾಯಿತು. (ಎಡದಿಂದ) ಲಾಲ್‌ಬಾಗ್‌ನ ಉಪನಿರ್ದೇಶಕಿ ಜಿ. ಕುಸುಮಾ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ರೂಮಿ ಮಲ್ಲಿಕ್ ಮಿತ್ರಾ ಭಾಗವಹಿಸಿದ್ದರು

ಹಿಮಾಚಲಪ್ರದೇಶದಲ್ಲಿ ಭಾರಿ ಮಳೆ, ಹಿಮಪಾತ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಶನಿವಾರ ಮಳೆ, ಭಾರಿ ಹಿಮಪಾತದಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಪ್ರಮುಖ ಮೂರು ರಾಷ್ಟ್ರೀಯ ಹೆದ್ದಾರಿಗಳು ಮತ್ತು 104 ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮನಾಲಿ-ಕೀಲಾಂಗ್ ಹೆದ್ದಾರಿಯ ಸಿಸ್ಸು ಬಳಿಯ ಸೆಲ್ಫಿ ಪಾಯಿಂಟ್‌ನಲ್ಲಿ ಭಾರಿ ಭೂಕುಸಿತದಿಂದಾಗಿ ಕೀಲಾಂಗ್‌ಗೆ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ಅವರು ಹೇಳಿದರು.

ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರದ ಪ್ರಕಾರ, ಲಾಹೌಲ್ ಮತ್ತು ಸ್ಪಿತಿಯಲ್ಲಿನ 99 ರಸ್ತೆಗಳು ಸೇರಿ 104 ರಸ್ತೆಗಳಲ್ಲಿ ಹಿಮಪಾತದಿಂದಾಗಿ ವಾಹನ ಸಂಚಾರ ಸ್ಥಗಿತಗೊಂಡಿದೆ. ರಾಜ್ಯದ ಪ್ರತ್ಯೇಕ ಸ್ಥಳಗಳಲ್ಲಿ ಏಪ್ರಿಲ್ 22 ಮತ್ತು 23 ರಂದು ಗುಡುಗು ಸಹಿತ ಮಳೆ ಆಗಬಹುದು. 21ರಿಂದ 26 ರವರೆಗೆ ಆರು ದಿನಗಳವರೆಗೆ ಬೆಟ್ಟ ಪ್ರದೇಶಗಳಲ್ಲಿ ಭಾರಿ ಮಳೆ ಮತ್ತು ಹಿಮಪಾತವಾಗಲಿದೆ ಎಂದು ಹವಾಮಾನ ಕೇಂದ್ರ ಮುನ್ಸೂಚನೆ ನೀಡಿದೆ.

ಜಪಾನ್ ನೌಕಾಪಡೆಯ 2 ಹೆಲಿಕಾಪ್ಟರ್ ಪತನ

ಟೋಕಿಯೊ (ಎಪಿ): ಜಪಾನ್ ನೌಕಾಪಡೆಯ ಎರಡು ಹೆಲಿಕಾಪ್ಟರ್‌ಗಳು ಶನಿವಾರ ಪೆಸಿಫಿಕ್ ಸಾಗರದಲ್ಲಿ ಪತನಗೊಂಡಿವೆ. ಈ ಹೆಲಿಕಾಪ್ಟರ್‌ಗಳಲ್ಲಿ ತಲಾ ನಾಲ್ಕರಂತೆ ಒಟ್ಟು ಎಂಟು ಮಂದಿ ಸಿಬ್ಬಂದಿ ಇದ್ದರು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಎರಡು ಎಸ್‌ಎಚ್-60ಕೆ ಹೆಲಿಕಾಪ್ಟರ್‌ಗಳು ರಾತ್ರಿ ತರಬೇತಿ ವೇಳೆ, ಟೋಕಿಯೊದ ದಕ್ಷಿಣ ಪೆಸಿಫಿಕ್ ಮಹಾಸಾಗರದ ತೊರಿಶಿಮಾ ದ್ವೀಪದ ಬಳಿ ತಡವಾಗಿ ಸಂಪರ್ಕ ಕಳೆದುಕೊಂಡಿತು ಎಂದು ರಕ್ಷಣಾ ಸಚಿವ ಮಿನೋರು ಕಿಹರಾ ಸುದ್ದಿಗಾರರಿಗೆ ತಿಳಿಸಿದರು.

ಚಿತ್ರಾವಳಿ

ಗೃಹ ಸಚಿವ ಜಿ.ಪರಮೇಶ್ವರ ಅವರ ಸದಾಶಿವನಗರದಲ್ಲಿರುವ ಮನೆ ಎದುರು ಶನಿವಾರ ಬೆಳಿಗ್ಗೆ ಎಬಿವಿಪಿ ಕಾರ್ಯಕರ್ತರು ಪ್ರತಿಭಟಿಸಿದರು. 'ವಿದ್ಯಾರ್ಥಿನಿ ನೇಹಾ ಹತ್ಯೆ ಆಕಸ್ಮಿಕ ಎಂದಿರುವ ಹೇಳಿಕೆ ಹಿಂಪಡೆದು, ಕುಟುಂಬದವರ ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು

ರಾಮನವಮಿ ಹಬ್ಬದ ಅಂಗವಾಗಿ ಶನಿವಾರ ವಿಜಯನಗರದ ಪತ್ರಿಕಾ ವಿತರಕರ ಬಳಗದ ವತಿಯಿಂದ ಮಜ್ಜಿಗೆ, ಪಾನಕ ಮತ್ತು ಕೋಸಂಬರಿಯನ್ನು ಭಕ್ತಾದಿಗಳಿಗೆ ವಿತರಿಸಲಾಯಿತು

'ಜ್ಞಾನ ಕನ್ನಡದಲ್ಲಿ ಸಿಗುವಂತಾಗಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಅನ್ನದ ಭಾಷೆಯಾಗಲು ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿ ಎಲ್ಲ ಕ್ಷೇತ್ರಗಳ ಜ್ಞಾನ ಕನ್ನಡದಲ್ಲಿ ಸಿಗುವಂತಾಗಬೇಕು' ಎಂದು ಕನ್ನಡ ಪರ ಚಿಂತಕ ರಾ.ನಂ. ಚಂದ್ರಶೇಖರ ತಿಳಿಸಿದರು.

ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ ನಗರದಲ್ಲಿ ಹಮ್ಮಿಕೊಂಡ ಗಣಕಯಂತ್ರದಲ್ಲಿ ಕನ್ನಡ ತಂತ್ರಾಂಶ ಕಲಿಕಾ ತರಗತಿ ಉದ್ಘಾಟನೆ ಹಾಗೂ ಮಾಸದ ಮಾತು ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಕನ್ನಡ ಪ್ರಸ್ತುತವಾಗಬೇಕಾದರೆ ಗಣಕಯಂತ್ರದಲ್ಲಿ ಕನ್ನಡ ಬಳಕೆ ವ್ಯಾಪಕವಾಗಬೇಕು. ಕನ್ನಡದಲ್ಲಿ ಇಂದಿನ ಅಗತ್ಯವಾದ ವಿಜ್ಞಾನ-ತಂತ್ರಜ್ಞಾನದಜ್ಞಾನವೂ ಸೇರಿದಂತೆ ಎಲ್ಲ ವಿಷಯಗಳು ಸಿಗುವಂತಾಗಬೇಕು' ಎಂದು ಹೇಳಿದರು.

ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ, 'ಗಣಕಯಂತ್ರದ ನೆರವಿನಿಂದ ಕನ್ನಡ ಕಲಿತರೆ ನಮ್ಮ ಜ್ಞಾನ ವೃದ್ಧಿಯಾಗುವ ಜತೆಗೆ ನಮ್ಮ ಆತ್ಮವಿಶ್ವಾಸವು ಹೆಚ್ಚಿ, ಸ್ವಾಭಿಮಾನವೂ ಜಾಗೃತವಾಗುತ್ತದೆ' ಎಂದು ತಿಳಿಸಿದರು. ಎಚ್.ಎ.ಎಲ್. ಕಾರ್ಮಿಕ ಸಂಘದ ಅಧ್ಯಕ್ಷ ಮಹೇಶ್ ಅಂಗಡಿ, 'ಕನ್ನಡ ಕೆಲಸಗಳಿಗೆ ಕಾರ್ಮಿಕ ಸಂಘದ ಬೆಂಬಲ ಇರಲಿದೆ. ಆಡಳಿತ ವರ್ಗವು ಕನ್ನಡ ಸಂಘಟನೆಗಳ ಕೆಲಸಗಳಿಗೆ ತಾಯಿ ಸ್ಥಾನದಲ್ಲಿ ನಿಂತು ಪ್ರೋತ್ಸಾಹಿಸಬೇಕು' ಎಂದು ಹೇಳಿದರು.

'ಕನಾಟಕದ ವೀರ ವನಿತೆಯರು' ಎಂಬ ವಿಷಯದ ಬಗ್ಗೆ ಕರ್ನಾಟಕ ಇತಿಹಾಸ ಅಕಾಡೆಮಿ ಕಾರ್ಯದರ್ಶಿ ಸಂಧ್ಯಾ ವಿ. ಉಪನ್ಯಾಸ ನೀಡಿದರು. ಎಚ್.ಎ.ಎಲ್.ವಿನ್ಯಾಸ ಸಂಕೀರ್ಣದ ಮಾನವ ಸಂಪನ್ಮೂಲ ವಿಭಾಗದ ಮಹಾವ್ಯವಸ್ಥಾಪಕ ಎಂ.ಜಿ. ಬಾಲಸುಬ್ರಮಣ್ಯ 'ಗಣಕದಲ್ಲಿ ಕನ್ನಡ ತಂತ್ರಾಂಶ ಕಲಿಕಾ ತರಗತಿ'ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಸಂಧ್ಯಾ ವಿ. ಅವರನ್ನು ಗೌರವಿಸಲಾಯಿತು. ರಾ.ನಂ.ಚಂದ್ರಶೇಖರ, ಜಿ.ಎನ್.ನರಸಿಂಹಮೂರ್ತಿ ಹಾಗೂ ಎಂ.ಜಿ.ಬಾಲಸುಬ್ರಮಣ್ಯ ಪಾಲ್ಗೊಂಡಿದ್ದರು

ಬಸವಕಲ್ಯಾಣ ತಾಲ್ಲೂಕಿನ ಚಿಕ್ಕನಾಗಾಂವ ಬಂಜಾರಾ ತಾಂಡಾದಲ್ಲಿ ಸಂಭ್ರಮ

ಯುಪಿಎಸ್‌ಸಿ: ವಲಸೆ ಕಾರ್ಮಿಕನ ಮಗಳ ಸಾಧನೆ

• ಮಾಣಿಕ ಆರ್.ಭುರೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಜೀವನೋಪಾಯಕ್ಕಾಗಿ ಮುಂಬೈಗೆ ವಲಸೆ ಹೋಗಿ ಬದುಕು ಕಟ್ಟಿಕೊಂಡಿದ್ದ ಕಾರ್ಮಿಕರೊಬ್ಬರ ಮಗಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದು, 492ನೇ ರ‍್ಯಾಂಕ್ ಪಡೆದಿದ್ದಾರೆ.

ತಾಲ್ಲೂಕಿನ ಚಿಕ್ಕನಾಗಾಂವ ಬಂಜಾರ ತಾಂಡಾದಲ್ಲಿ ಈಗ ಸಂಭ್ರಮದ ಹೊನಲು ಹರಿದಿದೆ. ತಾಂಡಾದ ಮೋಹನ ರಾಠೋಡ ಅವರ ಪುತ್ರಿ ಸ್ವಾತಿ ಅವರೀಗ ಯುಪಿಎಸ್‌ಸಿ ಪರೀಕ್ಷೆಯಲ್ಲಿ 492ನೇ ರ‍್ಯಾಂಕ್ ಪಡೆದಿರುವ ಸಾಧಕಿ.

ತಾಂಡಾದಲ್ಲಿ ತಗಡಿನ ಮನೆಯಲ್ಲಿ ವಾಸಿಸುತ್ತಿದ್ದ ಮೋಹನ ರಾಠೋಡ ಅವರಿಗೆ ಅಲ್ಪ ಜಮೀನಿತ್ತು. ಕುಟುಂಬ ನಿರ್ವಹಣೆಗಾಗಿ ಪತ್ನಿ ಲಲಿತಾ ಜೊತೆ ಮುಂಬೈಗೆ ವಲಸೆ ಹೋಗಿ ಕೂಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಸ್ವಾತಿ ಅಲ್ಲಿನ ನಗರಪಾಲಿಕೆಯ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದಿದ್ದರು. ಮುಂದೆ ಕುಟುಂಬ ನಿರ್ವಹಣೆಗಾಗಿ ಮೋಹನ ರಾಠೋಡ ಸೋಲಾಪುರದಲ್ಲಿ ತರಕಾರಿ ವ್ಯಾಪಾರ ಆರಂಭಿಸಿದರು. ಬಳಿಕ ಸ್ವಾತಿ ಅವರು ಭಾರತಿ ವಿದ್ಯಾಪೀಠದಲ್ಲಿ ಪಿಯುಸಿ, ವಸುಂಧರಾ ಕಾಲೇಜಿನಲ್ಲಿ ಬಿಎ ಪದವಿ ಪಡೆದರು. ವಾಲಚಂದ ಕಾಲೇಜಿನಲ್ಲಿ ಎಂ.ಎ(ಭೂಗೋಳಶಾಸ್ತ್ರ) ಶಿಕ್ಷಣ ಪೂರ್ಣಗೊಳಿಸಿದ್ದರು.10 ವರ್ಷಗಳಿಂದ ಸೋಲಾಪುರದಲ್ಲೇ ವಾಸವಿದ್ದಾರೆ.

'5ನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಲಭಿಸಿದೆ. ತಂದೆ–ತಾಯಿಯ ಕಷ್ಟ ನೋಡಿದ್ದ ನಾನು ಉನ್ನತ ಹುದ್ದೆ ಪಡೆದು ಜೀವನದಲ್ಲಿ ಮಹತ್ವದನ್ನು ಸಾಧಿಸಬೇಕು ಎಂಬ ಗುರಿ ಇಟ್ಟುಕೊಂಡು ಅಧ್ಯಯನ ಕೈಗೊಂಡಿದ್ದೆ. ಸ್ನಾನ, ಊಟ, ಕೆಲಕಾಲ ನಿದ್ರೆ ಬಿಟ್ಟರೆ, ಇಡೀ ದಿನ ಓದುವುದೇ ನನ್ನ ಕೆಲಸವಾಗಿತ್ತು. ಆರ್ಥಿಕ ಪರಿಸ್ಥಿತಿ ಉತ್ತಮವಾಗಿರದ ಕಾರಣ ಮನೆಯಲ್ಲೇ ಓದಿದ್ದೇನೆ. ಒಂದು ಬಾರಿ ದೆಹಲಿಗೂ ಹೋಗಿ ಪರೀಕ್ಷೆ ಸಿದ್ಧತೆ ಕುರಿತಾಗಿ ಮಾಹಿತಿ ಪಡೆದುಕೊಂಡು ಬಂದಿದ್ದೆ' ಎಂದು ಸ್ವಾತಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಅಕ್ಕನ ಸಾಧನೆಯಿಂದ ಅಪಾರ ಸಂತಸವಾಗಿದೆ. ನಾವು ಮಹಾರಾಷ್ಟ್ರದಲ್ಲಿ ಶಿಕ್ಷಣ ಪಡೆದರೂ ಕರ್ನಾಟಕ ಮೂಲದವರು ಎಂಬುದನ್ನು ಮರೆಯುವುದಿಲ್ಲ' ಎಂದು ಸ್ವಾತಿಯ ಸಹೋದರ ಗಣೇಶ ರಾಠೋಡ ಹೇಳಿದರು.

'ಸ್ವಾತಿಯ ಕುಟುಂಬದವರು ವರ್ಷದಲ್ಲಿ ಕೆಲ ಬಾರಿ ತಾಂಡಾಕ್ಕೆ ಬಂದು ಹೋಗುತ್ತಾರೆ. ಅವರೆಲ್ಲರ ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಗಳಲ್ಲಿ ಇಲ್ಲಿನ ವಿಳಾಸವೇ ಇದೆ' ಎಂದು ಗ್ರಾಮ ಸಹಾಯಕ ಪೀರಪ್ಪ ಸಜ್ಜನ್ ಮಾಹಿತಿ ನೀಡಿದರು.

ಬಸವಕಲ್ಯಾಣ ತಾಲ್ಲೂಕಿನ ಚಿಕ್ಕನಾಗಾಂವ ಬಂಜಾರಾ ತಾಂಡಾದ ಸ್ವಾತಿ ರಾಠೋಡ ಯು.ಪಿ.ಎಸ್.ಸಿಯಲ್ಲಿ 492ನೇ ರ‍್ಯಾಂಕ್ ಪಡೆದಿದ್ದಕ್ಕಾಗಿ ಅವರ ತಂದೆ ಮೋಹನ ರಾಠೋಡ ಮತ್ತು ತಾಯಿ ಲಲಿತಾ ರಾಠೋಡ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು

> **ಚಿಕ್ಕಂದಿನಿಂದಲೇ ಜಿಲ್ಲಾಧಿಕಾರಿಯಂತಹ ಮಹತ್ವದ ಹುದ್ದೆ ಪಡೆಯಬೇಕು ಎಂಬ ಕನಸಿತ್ತು. ದಿನದಲ್ಲಿ 12 ಗಂಟೆ ಸತತವಾಗಿ ಓದಿರುವುದು ಯಶಸ್ಸು ತಂದುಕೊಟ್ಟಿತು.**
> **ಸ್ವಾತಿ ರಾಠೋಡ**
> ಯು.ಪಿ.ಎಸ್.ಸಿ 492ನೇ ರ‍್ಯಾಂಕ್ ವಿಜೇತೆ

ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ, ಬೀಗತನ ಮಾಡಲೂ ಹಿಂದೇಟು

ಬೂದಿ ಹಾರುತಿದೆ ಜೀವ ಹಿಂಡುತಿದೆ

• ಪ್ರಮೋದ

ಕೊಪ್ಪಳ: 'ಮಗನ ಸಲುವಾಗಿ ಒಂದು ತಿಂಗಳಿಂದ ಆಸ್ಪತ್ರೆಗೆ ಅಲೆದಾಡುವುದೇ ನಿತ್ಯದ ಕೆಲಸವಾಗಿದೆ. ಚಿಕಿತ್ಸೆ ಕೊಡಿಸಿದರೂ ಕೆಮ್ಮು, ಕಫ ಕಡಿಮೆ ಆಗುತ್ತಿಲ್ಲ. ದೂಳಿನ ಹಾವಳಿಗೆ ಜೀವನವೇ ಸಾಕಾಗಿ ಹೋಗಿದೆ. ಬೀಗರು ಕೂಡ ಊರಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ...'

ಜಿಲ್ಲಾ ಕೇಂದ್ರ ಕೊಪ್ಪಳದಿಂದ ಎಂಟು ಕಿ.ಮೀ. ದೂರದಲ್ಲಿರುವ ಅಲ್ಲಾನಗರ ಗ್ರಾಮದಲ್ಲಿ 12 ವರ್ಷಗಳಿಂದ ವಾಸವಾಗಿರುವ ಸಾವಿತ್ರಿ ಚಂದಪ್ಪ ಚವ್ಹಾಣ್ ಅವರ ನೋವಿನ ಮಾತುಗಳು ಇವು. ಇವರ ಮನೆಯ ಸುತ್ತಲೂ ಯಥೇಚ್ಛವಾಗಿ ಕಪ್ಪು ದೂಳು ಉಗುಳುವ ಕಾರ್ಖಾನೆಗಳಿವೆ.

ಉಪಜೀವನಕ್ಕೆಂದು ಮನೆಯ ಮುಂಭಾಗದಲ್ಲಿ ಅವರು ಸಣ್ಣ ಅಂಗಡಿ ನಡೆಸುತ್ತಿದ್ದು, ಮಕ್ಕಳಿಗಾಗಿ ಚಾಕೋಲೆಟ್, ಚಕ್ಕಲಿ, ಬಿಸ್ಕತ್ ಹೀಗೆ ಹಲವು ತಿನಿಸು ಮಾರಾಟ ಮಾಡುತ್ತಾರೆ. ಡಬ್ಬಿಯೊಳಗಿಂದ ಗ್ರಾಹಕರಿಗೆ ತಿನಿಸು ತೆಗೆದುಕೊಡುವಾಗಲೆಲ್ಲ ಅವರ ಕೈಗೆ ಕಪ್ಪು ದೂಳು ಅಡರುತ್ತದೆ. ಸಾಮಗ್ರಿಗಳನ್ನು ಹಾಕಿಟ್ಟ ಪ್ಲಾಸ್ಟಿಕ್ ಡಬ್ಬಿಗಳು, ಚೀಲಗಳು, ತಂಪು ಪಾನೀಯ ಇಟ್ಟಿರುವ ಫ್ರಿಡ್ಜ್ ಎಲ್ಲವೂ ಕಪ್ಪೇ ಕಪ್ಪು.

'ನಿತ್ಯವೂ ದೂಳಾದರೆ ಬದುಕು ಹೇಗೆ ಸಾಗಿಸುತ್ತೀರಿ' ಎಂದು ಮಾತಿಗೆಳೆದಾಗ, 'ಇದೇ ನಮ್ಮ ಬದುಕು. ಅದಕ್ಕಾಗಿಯೇ ಈ ಭಾಗದ ಜನ ಮೇಲಿಂದ ಮೇಲೆ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ನಮ್ಮ ದುಡಿಮೆಯ ಬಹುಪಾಲು ಹಣ ಆಸ್ಪತ್ರೆಗೆ ಖರ್ಚಾಗುತ್ತಿದೆ. ಹೆಣ್ಣು ಕೊಡಲು ಮೀನಮೇಷ ಎಣಿಸುತ್ತಾರೆ' ಎಂದರಲ್ಲದೇ ಕಂಕುಳಲ್ಲಿ ಹೊತ್ತುಕೊಂಡಿದ್ದ ತಮ್ಮ ಒಂಬತ್ತು ತಿಂಗಳ ಮಗನ ಕೈ ತೋರಿಸಿದರು. ಮಗನಿಗೆ ಚಿಕಿತ್ಸೆಗೆಂದು ಕೈಗೆ ಹಾಕಲಾಗಿದ್ದ ಬ್ಯಾಂಡೇಜ್ ಹಾಗೆಯೇ ಇತ್ತು.

ಈ ಗ್ರಾಮದಿಂದ ನಾಲ್ಕೈದು ಕಿ.ಮೀ. ದೂರದಲ್ಲಿರುವ ಹಿರೇಬಗನಾಳ ಗ್ರಾಮದ ಜನರ ಬವಣೆ ಮತ್ತಷ್ಟು ದುರಂತಮಯ. ಗ್ರಾಮದ ಆರಂಭದಲ್ಲಿ ವಾಹನಗಳ ದುರಸ್ತಿ ಗ್ಯಾರೇಜ್ ಬಳಿ ಮಾತಿಗೆ ಸಿಕ್ಕ ದೇವಪ್ಪ ಪತ್ತಾರ ಅವರನ್ನು 'ಕಪ್ಪು ದೂಳಿನ ಹಾವಳಿ ಹೇಗಿದೆ' ಎಂದು ಕೇಳಿದಾಗ, 'ಜೀವನ ಸಾಕು ಎನಿಸಿದವರು ಮಾತ್ರ ನಮ್ಮೂರಿಗೆ ಬರಬೇಕು' ಎಂದು ಹೇಳಿದರು. ಇದು ಅಲ್ಲಿನ ದೂಳುಮಯ ಪರಿಸರ, ಜನರಲ್ಲಿ ಕಾಡುತ್ತಿರುವ ನಿರಂತರ ಅನಾರೋಗ್ಯ, ಅಸಹಾಯಕತೆಗೆ ಸಾಕ್ಷಿಯಂತಿತ್ತು.

ಇವು ಕೆಲವು ಉದಾಹರಣೆಗಳು ಮಾತ್ರ. ಹೀಗೆ ಕಪ್ಪು ದೂಳಿನ ಹೊಡೆತಕ್ಕೆ ಸಿಲುಕಿ ಕೊಪ್ಪಳ ತಾಲ್ಲೂಕಿನ ಚಿಕ್ಕಬಗನಾಳ, ಕಾಸನಕಂಡಿ, ಹಾಲವರ್ತಿ, ಲಾಚನಕೆರೆ, ಕರ್ಕಿಹಳ್ಳಿ, ಹ್ಯಾಟಿ ಹಾಗೂ ಮುಂಡರಗಿ ಗ್ರಾಮಗಳು ನಲುಗಿ ಹೋಗಿವೆ. ಬಹಳಷ್ಟು ಪ್ರಮುಖ ಕಾರ್ಖಾನೆಗಳು ಆಡಳಿತದ ಶಕ್ತಿ ಕೇಂದ್ರ ಕೊಪ್ಪಳ ಜಿಲ್ಲಾಡಳಿತ ಭವನದಿಂದ ಕೇವಲ ನಾಲ್ಕು ಕಿ.ಮೀ. ದೂರದಲ್ಲಿವೆ. ಆರಂಭದಲ್ಲಿ ದೂಳು ಬರುವುದಿಲ್ಲ ಎಂದು ಕೊಪ್ಪಳ ನಗರದ ಜನ ಸುಮ್ಮನಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ನಗರ ಪ್ರದೇಶದಲ್ಲಿಯೂ ಕಪ್ಪು ದೂಳು ಆವರಿಸುತ್ತಿದೆ. ಮನೆಯ ಮೇಲೆ, ಮುಂಭಾಗದ ಮೇಲಿನ ಪ್ರದೇಶವೆಲ್ಲ ಕಪ್ಪಾಗುತ್ತಿದೆ.

ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ರೈತರು ಬೆಳೆ ಕಿತ್ತುವಾಗ ಕೈಗೆ ಅಂಟುವ ಕಪ್ಪುದೂಳು
ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

> **ಸಿಮೆಂಟ್ ಕಾರ್ಖಾನೆಗಳ ಸುತ್ತಲಿನ ದೂಳಿನಿಂದ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕುತ್ತೇವೆ**
> **ಡಾ.ರತಿಕಾಂತ ಸ್ವಾಮಿ,** ಡಿಎಚ್ಒ, ಕಲಬುರಗಿ

> **ಆರ್‌ಟಿಪಿಎಸ್‌ನಲ್ಲಿ ವ್ಯವಸ್ಥಿತವಾಗಿ ಹಾರುಬೂದಿ ಸಂಗ್ರಹ ಮಾಡಲಾಗುತ್ತಿದೆ. ಲಾರಿ ಹಾಗೂ ಟಿಪ್ಪರ್‌ಗಳು ಸರಿಯಾಗಿ ಹೊದಿಕೆ ಹಾಕಿಕೊಂಡು ಸಾಗಬೇಕು. ಈಗಾಗಲೇ ವಾಹನಗಳ ಮಾಲೀಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ**
> **ಪ್ರೇಮಲತಾ,** ಆರ್‌ಟಿಪಿಎಸ್ ಅಧಿಕಾರಿ, ರಾಯಚೂರು

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರ ಪ್ರಶ್ನೆಗೆ ಸರ್ಕಾರ ಕೊಟ್ಟ ಲಿಖಿತ ಉತ್ತರದ ಪ್ರಕಾರ ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ 202 ಕಾರ್ಖಾನೆಗಳಿವೆ. ಕೆಲ ಸ್ಪಾಂಜ್ ಐರನ್ ತಯಾರಿಕಾ ಘಟಕಗಳ ಅವೈಜ್ಞಾನಿಕ ಹೊಗೆ ವಿಲೇವಾರಿಯಿಂದಾಗಿ ಮಾಲಿನ್ಯ ವಾಗುತ್ತಿದೆ. ಈ ಬಗ್ಗೆ ಅನೇಕ ದೂರುಗಳು ಬಂದಿದ್ದು ಷರತ್ತು ಉಲ್ಲಂಘಿಸಿದ 12 ಕೈಗಾರಿಕೆಗಳನ್ನು ಮುಚ್ಚುವಂತೆ ಅಧಿಕಾರಿಗಳು ಆದೇಶ ಮಾಡಿದರೂ ಕಾರ್ಯರೂಪಕ್ಕೆ ಬಂದಿಲ್ಲ.

ಸ್ಪಾಂಜ್ ಐರನ್ ಘಟಕಗಳಿಗೆ ಸಮರ್ಪಕವಾದ ಬಫರ್ ವಲಯ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿದ್ದು, ಇದು ಕೃಷಿಭೂಮಿ ಮೇಲೂ ಪರಿಣಾಮ ಬೀರಿದೆ. ಕಾರ್ಖಾನೆಗಳ ಹತ್ತಿರದಲ್ಲಿಯೇ ಹಲವು ಹಳ್ಳಿಗಳು ಇರುವುದು ಮಾಲಿನ್ಯಕ್ಕೆ ಕಾರಣ ಎನ್ನುವ ಅಂಶವನ್ನು ಖುದ್ದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯೇ ಒಪ್ಪಿಕೊಂಡಿದೆ.

ಆದರೂ ವೈಜ್ಞಾನಿಕವಾಗಿ ಹಾರುಬೂದಿ ವಿಲೇವಾರಿ ಹಾಗೂ ಜನರ ಆರೋಗ್ಯ ಸುರಕ್ಷತೆಗೆ ಸರ್ಕಾರ ಕ್ರಮ ವಹಿಸಿಲ್ಲ. ಕಾರ್ಖಾನೆಗಳಿಗೆ ಬೇಕಾಗುವ ಕಚ್ಚಾವಸ್ತು, ತ್ಯಾಜ್ಯ ಹೀಗೆ ಅನೇಕ ಸಾಮಗ್ರಿ ಸಾಗಿಸಲು ನಿತ್ಯ ನೂರಾರು ಟಿಪ್ಪರ್‌ಗಳು ಓಡಾಡುತ್ತವೆ. ಇವುಗಳ ಭಾರ ತಾಳಲಾಗದೆ ರಸ್ತೆ ಗುಂಡಿಮಯವಾಗಿದ್ದು, ಇದರ ದೂಳಿನಿಂದಲೂ ಸಮಸ್ಯೆ ಬಿಗಡಾಯಿಸಿದೆ ಎಂದು ಇಲ್ಲಿನ ಜನ ಹೇಳುತ್ತಾರೆ.

ಕಾರ್ಖಾನೆಗಳ ಸುತ್ತಲಿನ ಹೊಲಗಳಲ್ಲಿ ಕೃಷಿ ಚಟುವಟಿಕೆ ಮಾಡಲಾಗುತ್ತಿತ್ತು. ಈಗ ಅವುಗಳನ್ನು ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ. ಆದರೆ, ನಿವೇಶನಗಳಿಗೂ ಬೇಡಿಕೆಯಿಲ್ಲ.

'ಈಗಿರುವ ಬಹುತೇಕ ಕಾರ್ಖಾನೆಗಳು ಇತ್ತೀಚೆಗಿನ ಎರಡ್ಮೂರು ದಶಕಗಳ ಹಿಂದೆ ಆರಂಭವಾಗಿವೆ. ಅದಕ್ಕಿಂತಲೂ ಮೊದಲೇ ಗ್ರಾಮಗಳ ಜನ ಹೊಗೆಯುಗುಳುವ ಕಾರ್ಖಾನೆಗಳಿಗೆ ಅವಕಾಶ ಕೊಟ್ಟಿದ್ದು ಯಾಕೆ' ಎನ್ನುವ ಪ್ರಶ್ನೆಯನ್ನು ಅಲ್ಲಾನಗರ, ಹಿರೇಬಗನಾಳ ಹಾಗೂ ಕುಣಿಕೇರಿ ಗ್ರಾಮಗಳ ಯುವಕರ ಮುಂದಿಟ್ಟಾಗ ನಮ್ಮ ಹೆಸರು ಬರೆಯಬೇಡಿ ಎನ್ನುವ ಷರತ್ತಿನೊಂದಿಗೆ ಉತ್ತರ ನೀಡಿದರು.

'ಭೂಮಾಲೀಕರ ನಡುವಿನ ಒಡಕು ಕಾರ್ಖಾನೆಗಳ ಮಾಲೀಕರಿಗೆ ಲಾಭವಾಗಿದೆ. ದೂಳು, ಅನಾರೋಗ್ಯ, ಬೆಳೆ ಹಾಳು ಎಂದು ರೈತರು ದೂರು ಹೇಳಿದಾಗ ಮಾತ್ರ ಕಾರ್ಖಾನೆಯವರು ಒಂದಷ್ಟು ಹಣವನ್ನು ಪರಿಹಾರ ಎನ್ನುವಂತೆ ಕೈಗಿರಿಸಿ ಸುಮ್ಮನಾಗುತ್ತಾರೆ. ಹೀಗೆ ಹಣ ಕೊಡಿಸುವ ದಲ್ಲಾಳಿಗಳು ಕಾರ್ಖಾನೆ ಮತ್ತು ರೈತರ ನಡುವೆ ಕೆಲಸ ಮಾಡುತ್ತಿರುವುದು ಕೂಡ ದೊಡ್ಡ ಸಮಸ್ಯೆಯಾಗಿದೆ. ಕಾರ್ಖಾನೆಗಳಿಂದ ಹೊಲ ಇರುವ ದೂರದ ಆಧಾರದ ಮೇಲೆ ಗ್ರೇಡ್ ಆಧರಿಸಿ ಪರಿಹಾರ ನೀಡುತ್ತಿದ್ದಾರೆ. ಅಲ್ಪ ಹಣದಾಸೆಗೆ ನಾವು ಜೀವವನ್ನೇ ಒತ್ತೆಯಿಟ್ಟಿದ್ದೇವೆ' ಎಂದು ನೋವು ವ್ಯಕ್ತಪಡಿಸಿದರು.

'ಬಹುತೇಕ ಕಾರ್ಖಾನೆಗಳ ಮಾಲೀಕರು ರಾಜಕಾರಣಿಗಳೇ ಇರುವಾಗ ಜನರ ಸಮಸ್ಯೆ ಪರಿಹರಿಸುವವರು ಯಾರು' ಎಂದು ಪ್ರಶ್ನಿಸಿದರು.

ಸಂಘಟನೆಯಲ್ಲಿದ್ದುಕೊಂಡು ಕಾರ್ಖಾನೆಗಳ ವಿರುದ್ಧ ನಿರಂತರ ಹೋರಾಟ ಮಾಡುತ್ತಿರುವ ಇಲ್ಲಿಗೆ ಸಮೀಪದ ವದ್ನಾಳ ಗ್ರಾಮದ ಮಹೇಶ ಅವರ ಹೊಲ ತುಂಗಭದ್ರಾ ನದಿಯ ಹಿನ್ನೀರಿಗೆ ಅರ್ಧ ಕಿ.ಮೀ. ದೂರದಲ್ಲಿದೆ. ಯಥೇಚ್ಛವಾಗಿ ನೀರು ಸಿಗುವ ಕಾರಣ ಕೃಷಿ ಚಟುವಟಿಕೆಗೂ ಅನುಕೂಲ. ಆದರೆ ಬೆಳೆದ ಬೆಳೆ ಮೇಲೆ ದೂಳು ಹರಡುತ್ತಿರುವುದರಿಂದ ಬೆಲೆಯೇ ಇಲ್ಲದಂತಾಗಿದೆ. 'ಕಪ್ಪು ದೂಳಿನ ಹಾವಳಿಯಿಂದ ಜನರಲ್ಲಿ ಉಸಿರಾಟದ ತೊಂದರೆ, ಮೊಣಕಾಲು ನೋವು ವಿಪರೀತವಾಗಿದೆ. ಕಾರ್ಖಾನೆಯವರು ನೀಡುವ ಬಿಡಿಗಾಸಿನ ಪರಿಹಾರ ನಮಗೆ ಬೇಡ. ದೂಳು ನಿಯಂತ್ರಿಸಿದರೆ ನಮ್ಮ ಬದುಕು ಬೆಳೆಯಷ್ಟೇ ಹಸಿರಾಗುತ್ತದೆ' ಎಂದು ಮಹೇಶ ಹೇಳುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿರುವ ಸಮಸ್ಯೆಯು ಕಲಬುರಗಿ ಹಾಗೂ ರಾಯಚೂರು ಜಿಲ್ಲೆಯಲ್ಲಿಯೂ ಇದ್ದು ಜನರ ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಯ ವ್ಯಾಪಕ ಪರಿಣಾಮ ಬೀರುತ್ತಿದೆ.

ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಗ್ರಾಮದಲ್ಲಿ ದೂಳೆಬ್ಬಿಸುತ್ತ ಹೊರಟ ಕೈಗಾರಿಕಾ ವಾಹನಗಳ ಆರ್ಭಟ

ಹಾಳಾಯಿತು ಕೃಷಿಭೂಮಿ, ಬೆಳೆ

ಕೊಪ್ಪಳ, ರಾಯಚೂರು ಮತ್ತು ಕಲಬುರಗಿಯಲ್ಲಿ ವ್ಯಾಪಕ ಹಾರು ಬೂದಿಯ ಹಾವಳಿಯಿಂದಾಗಿ ಕೃಷಿ ಭೂಮಿ ಹಾಳಾಗುತ್ತಿದ್ದು ಬೆಳೆ ಇಳುವರಿ ಹಾಗೂ ಬೆಲೆಯೂ ಇಳಿಕೆಯಾಗುತ್ತಿದೆ.

'ಶಕ್ತಿನಗರ 30 ಕಿ.ಮೀ ವ್ಯಾಪ್ತಿಯಲ್ಲಿ ರೈತರು ಹತ್ತಿ ಹಾಗೂ ತರಕಾರಿ ಬೆಳೆಯುವ ಸ್ಥಿತಿಯಲ್ಲಿ ಇಲ್ಲ. ಬೆಳೆದರೂ ದೂಳಿನಿಂದಾಗಿ ನಷ್ಟ ಅನುಭವಿಸಬೇಕಾಗಿದೆ. ಬೆಳೆಗಳು ಕಪ್ಪಾಗಿ ಬೆಳೆ ಹಾಳಾಗುತ್ತಿದೆ' ಎಂದು ರೈತರ ಹಸಿರು ಸೇನೆ ರಾಯಚೂರು ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ ಹಾಗೂ ರೈತ ಅಂಬಣ್ಣ ಅರಷಣಗಿ ಹೇಳುತ್ತಾರೆ.

ಅಲ್ಲಾನಗರ ಭಾಗದಲ್ಲಿ ಫಸಲು ಕಿತ್ತುವಾಗ ಮೈಕೈಯೆಲ್ಲಾ ಕಪ್ಪುಮಯ. ಬೆಳೆದ ಸಂಕಟಕ್ಕೆ ನೀರಿನಲ್ಲಿ ತೊಳೆದು ಊರಿನ ಸುತ್ತಮುತ್ತಲಿನ ವಾರದ ಸಂತೆಯಲ್ಲಿ ಮಾರಾಟಕ್ಕೆ ಕಳುಹಿಸಿದರೆ ಬೇರೆ ಕಡೆಯಿಂದ ಬಂದ ಬೆಳೆಗೆ ಸಿಗುವುದಕ್ಕಿಂತಲೂ ಶೇ 50ರಷ್ಟು ಕಡಿಮೆ ಬೆಲೆ ಲಭಿಸುತ್ತದೆ. ಆದ್ದರಿಂದ 'ಕಪ್ಪುದೂಳಿನ ಸಂತ್ರಸ್ತ ರೈತರು' ಬೇರೆ ಊರುಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದಾರೆ. ಉಳಿದದ್ದನ್ನು ತೊಳೆದುಕೊಂಡು ತಾವೇ ತಿನ್ನುವ ಪರಿಸ್ಥಿತಿ ಎದುರಾಗಿದೆ.

'ಮರಗಳು, ಬೆಳೆಗಳ ಮೇಲೆ ದೂಳು ಕೂರುವುದರಿಂದ ಎಲೆಗಳಲ್ಲಿ ಪೂರ್ಣಪ್ರಮಾಣದಲ್ಲಿ ದ್ಯುತಿಸಂಶ್ಲೇಷಣೆಯ ಕ್ರಿಯೆ ನಡೆಯುವುದಿಲ್ಲ. ಸಹಜವಾಗಿ ಸಸಿಗಳು ಒಣಗುತ್ತವೆ. ರಾಸಾಯನಿಕ ದೂಳಿನ ಕಣಗಳು ಮಣ್ಣಿನಲ್ಲಿ ಸೇರಿದರೆ ಮಣ್ಣಿನ ಫಲವತ್ತತೆಯ ಮೇಲೆ ಪರಿಣಾಮ ಬೀರುತ್ತದೆ' ಎನ್ನುತ್ತಾರೆ ಕಲಬುರಗಿಯ ಕೃಷಿ ವಿಜ್ಞಾನಿ ರಾಜು ತೆಗ್ಗಳ್ಳಿ.

ಕಪ್ಪು ಬೂದಿ ಕೊಪ್ಪಳ ತಾಲ್ಲೂಕಿನ ಜನರ ಆರೋಗ್ಯದ ಮೇಲೆ ಬೀರುತ್ತಿರುವ ಪರಿಣಾಮದ ಬಗ್ಗೆ ಆರೋಗ್ಯ ಇಲಾಖೆಯವರನ್ನು ಕೇಳಿದಾಗ 'ವರದಿ ತಯಾರಿಸಲಾಗುತ್ತಿದೆ' ಎನ್ನುವ ಉತ್ತರ ನೀಡಿದರು. ಸೇಡಂ ಸಿಮೆಂಟ್ ಕಾರ್ಖಾನೆಗಳ ದೂಳಿನಿಂದ ಬೆಳೆಗಳಿಗೆ ಹಾನಿಯಾಗುತ್ತಿರುವ ಬಗ್ಗೆಯೂ ಕಲಬುರಗಿಯ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ 'ರೈತರು ಈ ಬಗ್ಗೆ ದೂರು ಸಲ್ಲಿಸಿದ್ದಾರೆ. ದೂಳಿನಿಂದ ಬೆಳೆ ಹಾನಿಯ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿ ವರದಿ ನೀಡುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದರು.

ಅಂಟು ರೋಗ: 'ಮರಕ್ಕೆ ಹತ್ತಿದ ರೋಗನಾ ಎಣ್ಣಿ ಹೊಡೆದು ಕಂಟ್ರೋಲ್ ಮಾಡಾಕತ್ತೀವಿ. ಆದ್ರ, 'ಸಿಮೆಂಟಿನ ದೂಳು, ಹೊಗೆ'ಯ ಮುಂದ ನಾವೇ ರೋಗಿಷ್ಠರಾಗಿ ನರಳಾಡ್ತಾ ಕುಂತ್ರೂ ಕಂಪನಿಯರು ನಮ್ಮ ಕಡಿಗಿ ತಿರುಗಿ ನೋಡ್ತಿಲ್ಲ. ಆಫೀಸರ್‌ಗಳು ನಮ್ಮನ ಕಸಕ್ಕಿಂತ ಕಡಿಯಾಗಿ ನೋಡ್ತಾರಿ...' ಎನ್ನುತ್ತಲೇ ದೂಳು ಹಿಡಿದು ನೆಲಕ್ಕ ಬಿದ್ದ ಮಾವಿನ ಮಿಡಿ ಕಾಯಿಗಳನ್ನು ಕೈಗೆತ್ತಿಕೊಂಡ ತೋರಿಸಿದ ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಹಂಗನಳ್ಳಿ ಗ್ರಾಮದ ರೈತ ಶಿವರಾಜ.

'ಐದು ವರ್ಷಗಳಿಂದ ತೋಟ ಮಾಡಿದ್ರೂ ಒಂದು ರೂಪಾಯಿಯೂ ಲಾಭ ಬರುತ್ತಿಲ್ಲ' ಎಂದು ದಿಟ್ಟಿಸುತ್ತಾ ಹೊಲದ ಬದಿಯಲ್ಲಿದ್ದ ಸಿಮೆಂಟ್ ಕಾರ್ಖಾನೆ ನೋಡಿದ ಶಿವರಾಜನ ಕಣ್ಣಾಲಿಗಳಲ್ಲಿ ನೀರು ಬಂದವು. ಕಣ್ಣೀರು ಕಣ್ಣಿನ ಕೆಳಗೆ ಮೆತ್ತಿದ ದೂಳಲ್ಲಿ ಬೇರೆಯುವಾಗಲೇ 'ಅಪ್ಪ, ನನ್ನ ಕೈ ರಟ್ಟಿ ಜಾಸ್ತಿ ತಿಂಡಿಕೊಡ್ಲಾ ಕತ್ಯಾದ್ ಸ್ವಲ್ಪ ತುರಿಸು' ಎನ್ನುತ್ತಾ ಮೈಯಲ್ಲಾ ದೂಳು ಮೆತ್ತಿಕೊಂಡು ಬಂದ 14 ವರ್ಷದ ಮಗ.

ಇವೆಲ್ಲ ಸಿಮೆಂಟ್ ಕಾರ್ಖಾನೆಗಳ ಸುತ್ತಲಿನ ರೈತರ ಜಮೀನಿನಲ್ಲಿ ಕಂಡುಬರುವ ಶೋಚನೀಯ ದೃಶ್ಯಗಳು. ಸೇಡಂ ತಾಲ್ಲೂಕಿನ ಕೋಡ್ಲಾ, ಬೆನಕನಹಳ್ಳಿ, ಹಂಗನಳ್ಳಿ, ಊಡಗಿ, ಮಳಖೇಡ (ನೃಪತುಂಗ ನಗರ), ಚಿತ್ತಾಪುರ ತಾಲ್ಲೂಕಿನ ಸ್ಟೇಷನ್ ತಾಂಡಾ, ಇಟಗಾ, ಮೊಗಲಾ, ಹೂಡಾ, ದಿಗ್ಗಾಂವ, ವಾಡಿ ಪಟ್ಟಣ ಹಾಗೂ ಸುತ್ತಲಿನ ಇಂಗಳಗಿ ಗ್ರಾಮಗಳ ನಿವಾಸಿಗಳ 'ಉಸಿರಲ್ಲಿ ದೂಳು, ಹೊಗೆ' ಆವರಿಸಿಕೊಂಡಿದೆ.

'ಮಳಖೇಡ ಸ್ಟೇಷನ್ ತಾಂಡಾ ಒಂದರಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ 2,410 ಮಂದಿಯಲ್ಲಿ ಕೆಮ್ಮು ಕಾಣಿಸಿಕೊಂಡಿದ್ದರೆ 2,140 ಜನ ಚರ್ಮರೋಗದಿಂದ ಬಳಲುತ್ತಿದ್ದಾರೆ. 107 ಮಂದಿಯಲ್ಲಿ ಧಮ್ಮು, 32 ಮಂದಿಯಲ್ಲಿ ಅಸ್ತಮಾ, 105 ಜನರಲ್ಲಿ ಉಸಿರಾಟ ತೊಂದರೆ, 434 ಮಂದಿ ಇಎನ್‌ಟಿ ಸಮಸ್ಯೆಯಿಂದ ಪರಿತಪಿಸುತ್ತಿದ್ದರೆ 65 ಜನ ಕ್ಷಯರೋಗಕ್ಕೆ (ಟಿಬಿ) ತುತ್ತಾಗಿದ್ದಾರೆ' ಎನ್ನುತ್ತಲೇ ಮಳಖೇಡ ಗ್ರಾಮ ಪಂಚಾಯಿತಿ ಸದಸ್ಯ ಉಮೇಶ ಚವ್ಹಾಣ್ ಅವರು ಪ್ರಾಥಮಿಕ ಆರೋಗ್ಯ ಕೇಂದ್ರದ ಅಂಕಿ-ಅಂಶ ತೋರಿಸಿದರು.

ಗ್ರಾಮಸ್ಥರಿಗೆ ಬೇಗುದಿ: ರಾಜ್ಯಕ್ಕೆ ಬೆಳಕು ನೀಡುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್) ಕಲ್ಲಿದ್ದಲು ಆಧಾರಿತ ವಿದ್ಯುತ್ ಶಕ್ತಿ ಕೇಂದ್ರ ವಾಗಿದ್ದು, ಇಲ್ಲಿಯ ಹಾರುಬೂದಿ ಹಲವು ಸಮಸ್ಯೆಗಳನ್ನು ತಂದೊಡ್ಡಿದೆ. ಕೈಗಾರಿಕೆ ಇಲಾಖೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸದ ಕಾರಣ ಸಮಸ್ಯೆ ಜಟಿಲಗೊಂಡಿದೆ.

ಆರ್‌ಟಿಪಿಎಸ್‌ನ ಹಾರುಬೂದಿ ಮಿಶ್ರಿತ ನೀರು ಹೊಂಡದಲ್ಲಿ ಸಂಗ್ರಹವಾದ ನಂತರ ಅದನ್ನು ಲಾರಿ, ಟಿಪ್ಪರ್ ಮತ್ತು ಟ್ಯಾಂಕರ್‌ಗಳ ಮೂಲಕ ಸಿಮೆಂಟ್ ಫ್ಯಾಕ್ಟರಿಗಳಿಗೆ ಸಾಗಣೆ ಮಾಡಲಾಗುತ್ತದೆ. ಇಟ್ಟಿಗೆ ಭಟ್ಟಿಗಳ ಮಾಲೀಕರೂ ಇದನ್ನು ಇಟ್ಟಿಗೆ ತಯಾರಿಕೆಗೆ ಕೊಂಡೊಯ್ಯುತ್ತಿದ್ದಾರೆ. ಆರ್‌ಟಿಪಿಎಸ್‌ಗೆ ಇದರಿಂದ ಲಾಭವೇ ಇದೆ. ಆದರೆ, ಸುರಕ್ಷತಾ ನಿಯಮಗಳನ್ನು ಬಿಗಿಗೊಳಿಸದ ಕಾರಣ ಶಕ್ತಿನಗರದ ಒಂದನೇ ಮತ್ತು ಎರಡನೇ ಕ್ರಾಸ್ ರಸ್ತೆಗಳಲ್ಲಿರುವ ಗ್ರಾಮಸ್ಥರು ಹಾಗೂ ರೈತರು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

'ಶಾಖೋತ್ಪನ್ನ ಘಟಕಗಳ ಚಿಮಣಿ ಕನಿಷ್ಠ 180 ಮೀಟರ್ ಎತ್ತರ ಇರಬೇಕು. ಆದರೆ, ಆರ್‌ಟಿಪಿಎಸ್‌ನಲ್ಲಿರುವ ಚಿಮಣಿಗಳ ಎತ್ತರ ಕಡಿಮೆ ಇದೆ. ಹೀಗಾಗಿ ಸಹಜವಾಗಿ ಗಾಳಿಯಲ್ಲಿ ಸೇರಿಕೊಳ್ಳುತ್ತಿದೆ. ದೂಳು ಗಾಳಿಯಲ್ಲಿ ತೇಲಿ ಬರುತ್ತದೆ ಎನ್ನುತ್ತಾರೆ' ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಜ್ಞಾನಿ ವೀರೇಶ.

'ಆರ್‌ಟಿಪಿಎಸ್ ಸಮೀಪದಲ್ಲೇ ನಮ್ಮ ಮನೆಗಳು ಇವೆ. ಬೂದಿ ಹಾರಿ ಬಂದು ಮನೆಗಳಿಗೆ ಮೆತ್ತಿಕೊಂಡಿದೆ. ಒಮ್ಮೊಮ್ಮೆ ಮನೆಯೊಳಗೂ ಹಾರಿ ಬರುತ್ತದೆ. ಮನೆಯ ಹೊರಗಡೆ ಬಟ್ಟೆ ಒಣ ಹಾಕುವ ಸ್ಥಿತಿಯಲ್ಲೂ ಇಲ್ಲ. ನಮ್ಮ ಗೋಳು ಕೇಳುವವರೇ ಇಲ್ಲ' ಎಂದು ದೇವಸೂಗೂರಿನ ಯುವತಿ ನವಿತಾ ತಮ್ಮ ಅಳಲು ತೋಡಿಕೊಳ್ಳುತ್ತಾರೆ.

ಖರ್ಚು ಉಳಿಸಲು ಕಾರ್ಖಾನೆಗಳ ಕಸರತ್ತು

ಬಹುತೇಕ ಕಾರ್ಖಾನೆಗಳು ತಮ್ಮಲ್ಲಿನ ಕಪ್ಪು ದೂಳು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ಥಾಯಿವಿದ್ಯುತ್ತಿನ ಅವಕ್ಷೇಪಕ (ಇಎಸ್‌ಪಿ, Electrostatic Precipitators) ಮೊರೆ ಹೋಗುತ್ತವೆ. ಇದನ್ನು ಸ್ಥಾಯಿ ವಿದ್ಯುತ್‌ನ ದೂಳು ಸಂಗ್ರಹಕವೆಂತಲೂ ಕರೆಯುತ್ತಾರೆ.

ಕಬ್ಬಿಣ, ಉಕ್ಕು, ಸ್ಟೀಲ್ ಹಾಗೂ ಇತರೆ ಕಚ್ಚಾ ವಸ್ತುಗಳಿಂದ ಬರುವ ಕಪ್ಪು ದೂಳನ್ನು ಇಎಸ್‌ಪಿ ಸಾಧನ ತಡೆದು ಕಪ್ಪು ಕಚ್ಚಾವಸ್ತು ಸ್ಥಳದಲ್ಲಿಯೇ ಸಂಗ್ರಹವಾಗುವಂತೆ ಮಾಡುತ್ತದೆ. ಪರಿಸರಕ್ಕೆ, ಆರೋಗ್ಯಕ್ಕೆ ಹಾನಿ ಉಂಟು ಮಾಡುವ ದೂಳಿನ ಕಣಗಳನ್ನು ತನ್ನಲ್ಲಿಯೇ ಹಿಡಿದಿಟ್ಟುಕೊಂಡು ಬಳಿಕ ಟಿಪ್ಪರ್‌ಗಳ ಮೂಲಕ ಬೇರೆಡೆ ಸಾಗಿಸಲಾಗುತ್ತದೆ.

ಈ ಯಂತ್ರ ಬಳಕೆ ಮಾಡಿದರೆ ವಿದ್ಯುತ್ ಶುಲ್ಕ ಹಾಗೂ ಯಂತ್ರದ ನಿರ್ವಹಣಾ ವೆಚ್ಚ ಎರಡೂ ಹೆಚ್ಚಾಗುತ್ತದೆ. ಆದ್ದರಿಂದ ಕೊಪ್ಪಳದ ಬಹುತೇಕ ಕಾರ್ಖಾನೆಗಳು ಜನ ಟೀಕಿಸುತ್ತಾರೆ ಎನ್ನುವ ಕಾರಣಕ್ಕೆ ಹಗಲು ಹೊತ್ತಿನಲ್ಲಿ ಯಂತ್ರವನ್ನು ಆನ್ ಮಾಡಿ, ರಾತ್ರಿ ಹೊತ್ತಿನಲ್ಲಿ ಆಫ್ ಮಾಡುತ್ತಾರೆ ಎನ್ನುವ ಆರೋಪವಿದೆ. ಹೀಗಾಗಿ ಹಾರು ಬೂದಿ ಸುತ್ತಲೂ ಹರಡಿ ಮಾಲಿನ್ಯ ಉಂಟು ಮಾಡುತ್ತಿದೆ.

ಕೊಪ್ಪಳ ತಾಲ್ಲೂಕಿನ ಕಾರ್ಖಾನೆಯೊಂದರಲ್ಲಿ ಕಪ್ಪು ಹೊಗೆಯುಗುಳುವ ನೋಟ

ಬೂದಿ ಅಂಶ ಕಡಿಮೆ ಆಗಲು ಬೇಕು 15 ವರ್ಷ

ಭೂಮಿ ಆಳದಲ್ಲಿನ ಖನಿಜಾಂಶಗಳನ್ನು ಭೂಮಿಯ ಮೇಲ್ಮೈಗೆ ತಂದು ಹಾಕುವುದೆಂದರೆ ಒಂದು ರೀತಿಯಲ್ಲಿ ನಿಸರ್ಗಕ್ಕೆ ವಿರುದ್ಧವಾಗಿಯೇ ನಡೆದುಕೊಂಡಂತೆ. ಕಲ್ಲಿದ್ದಲು ಬಳಸಿಕೊಂಡ ನಂತರ ಅದರ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಅಂದಾಗ ಮಾತ್ರ ಅವುಗಳ ದುಷ್ಪರಿಣಾಮ ತಡೆಯಲು ಸಾಧ್ಯವಿದೆ ಎಂದು ಕೃಷಿ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಹಾರುಬೂದಿಯಿಂದಾಗಿ ಕೃಷಿ ಇಳುವರಿ ಕುಸಿತವಾಗುತ್ತಿದೆಯೇ ಎನ್ನುವ ಕುರಿತು ಸುಧೀರ್ಘ ಅಧ್ಯಯನಗಳು ನಡೆದಿವೆ. ಬೆಳೆಗಳ ಮೇಲೆ ನಿರಂತರವಾಗಿ ಹಾರುಬೂದಿ ಹಾಕಿ ಪರೀಕ್ಷಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಹತ್ತಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಬೆಳೆ ಚೆನ್ನಾಗಿ ಬೆಳೆದರೂ ಹಾರುಬೂದಿಯಿಂದಾಗಿ ಅದು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಹತ್ತಿ ಮಾರಾಟವಾಗುವುದಿಲ್ಲ.

ಹಾರುಬೂದಿಯಲ್ಲಿ ಪಾದರಸ, ಅಲುಮಿನಿಯಂ ನಿಕ್ಕಲ್‌ನಂತಹ ಖನಿಜಾಂಶಗಳು ಇರುತ್ತವೆ. ಒಂದು ಎಕರೆಗೆ ಭೂಮಿಗೆ 30ರಿಂದ 40 ಟಿಪ್ಪರ್ ಹಾರುಬೂದಿ ಬಳಸಿ ಭೂಮಿಯ ಫಲವತ್ತತೆ ಹೆಚ್ಚಿಸಬಹುದು. ಆದರೆ, ಹಾರುಬೂದಿ ಖರೀದಿ ಹಾಗೂ ಸಾಗಣೆ ಹೆಚ್ಚು ವೆಚ್ಚದಾಯಕ. ಕಲ್ಲಿದ್ದಲು ಉರಿಸಿದರೂ ಅದರಲ್ಲಿನ ಪಾದರಸ, ಅಲುಮಿನಿಯಂ, ನಿಕ್ಕಲ್ ಬೂದಿಯಲ್ಲಿ ಉಳಿದಿರುತ್ತದೆ. ಅದು ನೀರಿನಲ್ಲೂ ಕರಗುವುದಿಲ್ಲ. ಅದರ ಅಂಶ ಸಂಪೂರ್ಣ ಕಡಿಮೆಯಾಗಲು ಕನಿಷ್ಠ 15 ವರ್ಷವಾದರೂ ಬೇಕು ಎಂದು ಕೃಷಿ ವಿಜ್ಞಾನಿ ಡಾ.ವೀರೇಶ ವಿಶ್ಲೇಷಿಸುತ್ತಾರೆ.

ಆರ್‌ಟಿಪಿಎಸ್‌ನ ಹಾರುಬೂದಿ ಹೊಂಡದಲ್ಲಿ 26 ಸಾವಿರ ದಶಲಕ್ಷ ಕ್ಯೂಬಿಕ್ ಟನ್ ಬೂದಿ ಸಂಗ್ರಹ ಇದೆ. ಸಿಮೆಂಟ್ ಕಂಪನಿಗಳು ಹಾಗೂ ಇಟ್ಟಿಗೆ ಭಟ್ಟಿಗಳು ಸೇರಿ ನಿತ್ಯ 750 ಟನ್ ಬೂದಿ ಖರೀದಿಸುತ್ತವೆ. ಮಾಸಿಕ 22,500 ಟನ್ ಮಾರಾಟವಾಗುತ್ತದೆ.

ಲಾರಿ, ಟಿಪ್ಪರ್ ಮತ್ತು ಟ್ಯಾಂಕರ್ ಸೇರಿ ನಿತ್ಯ ಸುಮಾರು 500 ವಾಹನಗಳು ಸಂಚರಿಸುತ್ತವೆ. ಬೂದಿ ತುಂಬಿದ ವಾಹನಗಳಿಂದ ರಸ್ತೆಯ ಮೇಲೆ ಬೂದಿ ಬೀಳುತ್ತಲೇ ಇದೆ. ಬೂದಿ ತುಂಬಿದ ವಾಹನಗಳ ಮೇಲೆ ತಾಡಪಾಲ್ ಕಟ್ಟಬೇಕು. ಆದರೆ, ವಾಹನಗಳ ಮೇಲೆ ಸರಿಯಾಗಿ ಮುಚ್ಚುವುದೇ ಇಲ್ಲ. ಇದರಿಂದ ದೂಳು ದಟ್ಟ ಅಲೆಯಾಗಿ ಸುತ್ತಮುತ್ತಲ ಪ್ರದೇಶದಲ್ಲಿ ಚದುರುತ್ತಿದೆ. ದೂಳಿನಲ್ಲಿ ರಸ್ತೆ ಹುಡುಕುವ ಸ್ಥಿತಿ ನಿರ್ಮಾಣವಾಗಿದೆ.

ಶಕ್ತಿನಗರದ 25 ಕಿ.ಮೀ ವ್ಯಾಪ್ತಿಯಲ್ಲಿನ ಹಳ್ಳಿಗಳ ಜನ ರಾಯಚೂರಿನ ರೈಸ್ ಮಿಲ್, ಎಪಿಎಂಸಿ, ಸರ್ಕಾರಿ, ಖಾಸಗಿ ಕಚೇರಿ ಕೆಲಸಕ್ಕೆ ಬರುವ ಜನ ನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ. ದೂಳು ವಾಹನ ಸವಾರರ ಕಣ್ಣು, ಮೂಗು, ಕಿವಿಯೊಳಗೆ ಸೇರುತ್ತಿದೆ. ಗಂಟಲಿಗೆ ಇಳಿದು ಶ್ವಾಸಕೋಶಕ್ಕೂ ಹಾನಿ ಉಂಟು ಮಾಡುತ್ತಿದೆ. ನಿಯಮ ಪಾಲಿಸದ ಬೂದಿ ಸಾಗಿಸುವ ವಾಹನಗಳ ವಿರುದ್ಧ ಸಂಚಾರ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿಲ್ಲ. ರಾಯಚೂರಿನ ಆರ್‌ಟಿಪಿಎಸ್, ಕೊಪ್ಪಳದ ಕಾರ್ಖಾನೆಗಳು ರಾಜ್ಯಕ್ಕೆ ಆರ್ಥಿಕ ಶಕ್ತಿ ತುಂಬುತ್ತಿದ್ದರೆ ಸ್ಥಳೀಯ ಜನರಿಗೆ ಶಾಪವಾಗಿದೆ. ಜಿಲ್ಲಾಡಳಿಗಳು ಇದು ನಮ್ಮ ಸಮಸ್ಯೆಯಲ್ಲ ಎನ್ನುವ ಜಾಣನಿದ್ರೆಯಲ್ಲಿ ಕುಳಿತಿದೆ.

ಪೂರಕ ಮಾಹಿತಿ: **ಚಂದ್ರಕಾಂತ ಮಸಾನಿ, ಮಲ್ಲಿಕಾರ್ಜುನ ನಾಲವಾರ**

ಗುಂಡಣ್ಣ

25 ವರ್ಷಗಳ ಹಿಂದೆ — ಬುಧವಾರ, 21-4-1999

● **ಸರ್ಕಾರ ರಚನೆ ಯತ್ನ ಚುರುಕು ವರಿಷ್ಠರ ಜತೆ ಸೋನಿಯಾ ಚರ್ಚೆ**

ನವದೆಹಲಿ, ಏ. 20– ಕಾಂಗ್ರೆಸ್ ನೇತೃತ್ವದಲ್ಲಿ ಸರ್ಕಾರ ರಚನೆಗಾಗಿ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಇಬ್ಬರು ಮಾಜಿ ಪ್ರಧಾನಿಗಳು ಮತ್ತು ಸಿಪಿಎಂ ನಾಯಕ ಜ್ಯೋತಿ ಬಸು ಅವರನ್ನು ಭೇಟಿಯಾಗಿ ಸಹಕಾರ ಕೋರುವ ಮೂಲಕ ಸರ್ಕಾರ ರಚಿಸುವ ತಮ್ಮ ಪ್ರಯತ್ನವನ್ನು ಚುರುಕುಗೊಳಿಸಿದರು.

ಎಐಎಡಿಎಂಕೆ ನಾಯಕಿ ಜಯಲಲಿತಾ ಅವರು, ಜ್ಯೋತಿಬಸು ಅವರು ಪ್ರಧಾನಿ ಸ್ಥಾನಕ್ಕೆ ಒಪ್ಪುವುದಾದರೆ ತಮ್ಮ ಸಂಪೂರ್ಣ ಬೆಂಬಲ ಇದೆ ಎಂಬ ಹೇಳಿಕೆಯಿಂದ ಕಾಂಗ್ರೆಸ್ ವಲಯದಲ್ಲಿ ಕಳವಳ ಉಂಟಾಗಿದೆ.

50 ವರ್ಷಗಳ ಹಿಂದೆ — ಭಾನುವಾರ, 21-4-1974

● **ದ್ವೇಷಗಳಿಲ್ಲದ ಸೃಜನಾತ್ಮಕ ಹೋರಾಟಕ್ಕೆ ಕುವೆಂಪು ಕರೆ**

ಮೈಸೂರು, ಏ. 20– ಯಾರ ಬಗ್ಗೆಯೂ ದ್ವೇಷ-ಅಸೂಯೆಗಳನ್ನು ಇಟ್ಟುಕೊಳ್ಳದೆ ಪುರೋಹಿತಶಾಹಿಯ ವಿರುದ್ಧ ಸೃಜನಾತ್ಮಕವವಾಗಿ ಹೋರಾಟ ನಡೆಸಲು ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕ ಬರಹಗಾರರು ಮತ್ತು ಕಲಾವಿದರ ಒಕ್ಕೂಟದ ವ್ಯವಸ್ಥಾಪಕರಿಗೆ ಇಂದು ಇಲ್ಲಿ ಕರೆ ನೀಡಿದರು.

'ಪುರೋಹಿತ ವರ್ಗ' ಎಂದರೆ ಕೇವಲ ಬ್ರಾಹ್ಮಣರನ್ನು ಕುರಿತು ತಾವು ಹೇಳುತ್ತಿಲ್ಲವೆಂದು ಅವರು ಸ್ಪಷ್ಟಪಡಿಸಿ, ಈ ವರ್ಗದ ಜನ ಮುಸಲ್ಮಾನರು, ಕ್ರೈಸ್ತರು ಮುಂತಾದ ಎಲ್ಲ ಮತಗಳಲ್ಲಿಯೂ ಇದ್ದಾರೆಂದು ವಿವರಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಏಪ್ರಿಲ್ 21, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ತ್ರಯೋದಶಿ ಗಂ. 25-12 ನಕ್ಷತ್ರ ಉತ್ತರಫಲ್ಗುನಿ ಗಂ. 17-08
ಯೋಗ: ವ್ಯಾಘಾತ ಗಂ. 27-44,
ಕರಣ: ಕೌಲವ ಗಂ. 11-59, ಮೇಷ ಮಾಸದ 09 ನೇ ದಿನ,
ಮಳೆನಕ್ಷತ್ರ: ಅಶ್ವಿನಿ 3. ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-17 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 11 ಶವ್ವಾಲ್ ಅದೃಷ್ಟ ಸಂಖ್ಯೆ : 11, 2

ಮೇಷ: ನೀವು ತಲುಪಿದ ಸ್ಥಾನದಲ್ಲಿ ನ್ಯಾಯಯುತವಾಗಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುವ ಯೋಚನೆ ಮಾಡಿ. ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಯೋಗಪಟುಗಳಿಗೆ ಉತ್ತಮ ಅವಕಾಶಗಳು ಬರಲಿವೆ.

ವೃಷಭ: ನಿನ್ನೆ ಮೊನ್ನೆಯಷ್ಟೆ ಇತ್ಯರ್ಥವಾಯಿತು ಎಂದುಕೊಂಡ ಕುಟುಂಬ ಕಲಹವು ಮತ್ತೆ ಹೊಗೆಯಾಡುವ ಸಾಧ್ಯತೆ ಇದೆ. ಸಾಧು ಸಂತರ ಮಾತುಗಳು ನಿಮ್ಮನ್ನು ಇಂದು ಆಕರ್ಷಿಸಲಿವೆ. ಮಕ್ಕಳ ಯೋಗಕ್ಷೇಮವನ್ನು ಮರೆಯಬೇಡಿ.

ಮಿಥುನ: ಉದ್ಯೋಗ ಆಕಾಂಕ್ಷಿಗಳು ನಿಮ್ಮದೇ ಇಷ್ಟ ಕ್ಷೇತ್ರದಲ್ಲಿ ಕೆಲಸ ಪಡೆಯುವುದರಿಂದ ಉತ್ತಮ ಹೆಸರು ಪಡೆಯುವಿರಿ. ಆರೋಗ್ಯದ ಏರುಪೇರುಗಳಾಗುವ ಸಾಧ್ಯತೆ ಇದ್ದು, ಎಚ್ಚರ ವಹಿಸಬೇಕು.

ಕರ್ಕಾಟಕ: ನಿಮ್ಮ ಮೃದು ನಡತೆ ಹಾಗೂ ನಿಮ್ಮ ಸುತ್ತಮುತ್ತಲಿನ ವ್ಯಕ್ತಿಗಳ ಜೊತೆ ಅನ್ಯೋನ್ಯವಾದ ನಡತೆಯಿಂದ ಮನ್ನಣೆ ಗಳಿಸುತ್ತೀರಿ. ಸಹೋದರರ ಜೊತೆ ಉತ್ತಮ ಬಾಂಧವ್ಯ ಮತ್ತು ಸ್ನೇಹ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ.

ಸಿಂಹ: ಕೃಷಿಗೆ ಸಂಬಂಧಿಸಿದ ಆರ್ಥಿಕತೆಯಲ್ಲಿ ಪಡೆದ ಸಾಲ ಹಿಂದಿರುಗಿಸುವ ಶಕ್ತಿ ದೊರಕಲಿದೆ. ಅನೇಕ ಕಾಲದಿಂದ ಕಾಡುತ್ತಿರುವ ದೇಹ ಬಾಧೆ ನಿವಾರಿಸಿಕೊಳ್ಳಲು ವೈದ್ಯರನ್ನು ಬದಲಿಸುವುದು ಉತ್ತಮ.

ಕನ್ಯಾ: ಸಂಗಾತಿಯೊಂದಿಗಿನ ಸಂಬಂಧ ಗಟ್ಟಿ ಮಾಡಿಕೊಳ್ಳಲು ನಿಮ್ಮ ಬಿಡುವಿಲ್ಲದ ಸಮಯದಲ್ಲೂ ಸ್ವಲ್ಪ ಸಮಯ ನೀಡುವ ಪ್ರಯತ್ನ ಮಾಡಿ. ಬಂಧುಗಳಿಂದ ಉಡುಗೊರೆಯ ರೂಪದಲ್ಲಿ ದ್ರವ್ಯ ಲಾಭವಾಗಲಿದೆ.

ತುಲಾ: ನಿಮ್ಮ ಇಂದಿನ ದಿನದಲ್ಲಿ ವೃತ್ತಿಯ ವಿಷಯವಾಗಿ ವಿಶೇಷವಾದ ವ್ಯಕ್ತಿಯೊಬ್ಬರು ಪ್ರಮುಖ ಪಾತ್ರ ವಹಿಸಲಿದ್ದಾರೆ. ಕಚೇರಿ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲೇಬೇಕಾದ ಅನಿವಾರ್ಯತೆ ಎದುರಾಗಲಿದೆ.

ವೃಶ್ಚಿಕ: ಉಚ್ಚ ಸ್ಥಾನದಲ್ಲಿರುವಂತಹ ನೀವು ತಪ್ಪುಗಳನ್ನು ಮಾಡಿದ್ದಲ್ಲಿ, ನಿಮ್ಮನ್ನೇ ಅನುಸರಿಸುವ ಸಹೋದ್ಯೋಗಿಗಳಿಗೆ ನೀವು ಏನೂ ಹೇಳಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕತ್ತಲೆಯಲ್ಲಿ ಸಂಚರಿಸದಿರಿ.

ಧನು: ಸಮಯದ ಗಡುವಿರುವ ಕೆಲಸಗಳನ್ನು ಕಡೆಯ ತನಕ ಉಳಿಸಿಕೊಳ್ಳುವ ಬದಲು ಈಗಲೇ ಮುಗಿಸಿಕೊಳ್ಳುವುದು ಉತ್ತಮ. ವೃದ್ಧರಾದ ತಂದೆಯ ಆರೋಗ್ಯವು ಕ್ಷೀಣಿಸಬಹುದಾದ್ದರಿಂದ ಎಚ್ಚರ ವಹಿಸಬೇಕು.

ಮಕರ: ಇಂದು ವಿವಿಧ ಕಾರ್ಯಗಳ ಜವಾಬ್ದಾರಿಗಳ ಭಾರ ನಿಮ್ಮ ಮೇಲೆಯೇ ಬೀಳುವುದರಿಂದ ಕೆಲಸದ ಒತ್ತಡ ಹೆಚ್ಚಿರುತ್ತದೆ. ಆಸೆಗಳು ಈಡೇರಿ ಸಂಸಾರದಲ್ಲಿ ನೆಮ್ಮದಿ ಕಾಣುವುದರಿಂದಾಗಿ ಮನಸ್ಸು ಉಲ್ಲಾಸವಾಗಿರುತ್ತದೆ.

ಕುಂಭ: ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳವಾಗುವ ಜೊತೆಗೆ ವ್ಯಾವಹಾರಿಕ ಪ್ರಚಾರಗಳು ಸಿಗಲಿದೆ. ಪ್ರಶಾಂತ ವಾತಾವರಣದ ಅಗತ್ಯವು ಇಂದು ನಿಮಗೆ ಇರುವುದರಿಂದ ಉದ್ಯಾನವನಕ್ಕೆ ಭೇಟಿ ನೀಡಿ.

ಮೀನ: ಸಮಾಜದಲ್ಲಿ ಬೆರೆಯುವುದರಿಂದ ಅಥವಾ ಅಕ್ಕ-ಪಕ್ಕದವರ ಜತೆ ಮಾತುಕತೆಯಿಂದ ಉದ್ಯೋಗಕ್ಕೆ ಸಂಬಂಧಿಸಿ ಅನುಕೂಲವಾಗಲಿದೆ. ಪತ್ರಿಕೋದ್ಯಮದವರಿಗೆ ವೃತ್ತಿಯಲ್ಲಿ ನಾಯಕತ್ವ ಹೊಂದುವ ಅವಕಾಶವಿದೆ.

ಪದಬಂಧ 5657 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಗ್ಗೊಲೆಯ ಪ್ರಸಂಗವಿದು (4)
3.ಮಧುರವಾದ ಧ್ವನಿ (4)
5.ಈಕೆ ಗರ್ಭವತಿ (3)
6.ಉದರಕ್ಕೆ ಅಂಟಿರುವ ಎದೆ! (2)
7.ಪತಿಯೊಡನೆ ಬಂದಿರುವವನು ಪಾಪ ಮಾಡಿದವನು (3)
9.ರಸವಿಲ್ಲದ್ದು ಇದು (3)
11.ಆಸ್ಥಾನದಲ್ಲಿರುವ ಜಾಗ (2)
14.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
15.ಕುದುರೆಯ ಬಾಯಿಗೆ ಹಾಕುವ ಉಕ್ಕಿನ ತುಂಡು (4)
16.ಹೆಂಡತಿಯೊಡನಿರುವ ಮನ್ಮಥ (4)

ಮೇಲಿಂದ ಕೆಳಕ್ಕೆ
1.ಕೈಮುಂದಿಟ್ಟು ಮಧ್ಯೆ ಪ್ರವೇಶಿಸುವಿಕೆ! (4)
2.ಲೋಹದ ಅಗಲವಾದ ಪಾತ್ರೆ (3)
3.ಸುಟ್ಟು ಕಪ್ಪಾದುದು (3)
4.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
6.ಕೊನೆಗಿದ್ದ ಚಾರ ಮಾಡಿದ ಶುಶ್ರೂಷೆ (4)
8.ನಿಧಾನವಾಗಿ ನೋಡಿದಾಗ ಕಾಣದಂತಾಗುವಿಕೆ (4)
10.ಸಭೆಯ ಅಧ್ಯಕ್ಷ (4)
11.ಈತ ನೆಲೆಗೊಳಿಸಿದವನು (3)
12.ಸತ್ವ ಇಲ್ಲದೆ (3)
13.ಮರದ ಹತ್ತಿರ ಕಾಣಿಸಿದ ಮೊಸಳೆ (3)



5656ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಅತ್ತೆ 3. ಜಗ 5. ನಿಷ್ಪಕ್ಷಪಾತ 6. ಸಮೀಪ 7. ಗುಳಂಬ 8. ರಾಷ್ಟ್ರೀಕರಣ 9. ಸಮಾಧಿ 10. ಕಟಾಕ್ಷ 13. ದುರಭಿಮಾನ 14. ಗಿಣ್ಣು 15. ಮೂಕ.

ಮೇಲಿಂದ ಕೆಳಕ್ಕೆ:
1. ಅಟ್ಟಹಾಸ 2. ಅಕ್ಷರ 4. ಗಲ್ಲುಗಂಬ 5. ನಿರಪರಾಧಿ 7. ಗುಣಕಥನ 9. ಸಹಭಾಗಿ 11. ಕ್ಷಪಣಿಕ 12. ಸಭಿಕ

ಸುಡೊಕು 6042

	6				8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6041 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರೈತರ ಪ್ರತಿಭಟನೆ 54 ರೈಲುಗಳ ಸಂಚಾರ ರದ್ದು

ಅಂಬಾಲಾ (ಪಿಟಿಐ): ಪಂಜಾಬ್‌ನ ಪಟಿಯಾಲಾ ಜಿಲ್ಲೆಯ ಶಂಭು ರೈಲ್ವೆ ನಿಲ್ದಾಣದಲ್ಲಿ ನಾಲ್ಕನೇ ದಿನವೂ ರೈತರು ಹಳಿಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಿದ್ದರಿಂದ ಅಂಬಾಲಾ–ಅಮೃತಸರ ಮಾರ್ಗದಲ್ಲಿ ಸಂಚರಿಸುವ 54 ರೈಲುಗಳ ಸಂಚಾರವನ್ನು ಶನಿವಾರ ರದ್ದುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತಿಭಟನೆಯಿಂದ ಕಳೆದ 3 ದಿನಗಳಲ್ಲಿ 380 ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದ್ದು, ಪ್ರಯಾಣಿಕರಿಗೆ ಅನಾನುಕೂಲವಾಗಿದೆ ಎಂದಿದ್ದಾರೆ.

ಬಂಧಿತ ರೈತರ ಬಿಡುಗಡೆಗೆ ಆಗ್ರಹಿಸಿ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯ ರಹಿತ) ಹಾಗೂ ಕಿಸಾನ್ ಮಜ್ದೂರ್ ಮೋರ್ಚಾದ (ಕೆಎಂಎಂ) ನೇತೃತ್ವದಲ್ಲಿ ಬುಧವಾರದಿಂದ ರೈತರ ಪ್ರತಿಭಟನೆ ನಡೆದಿದೆ.

ಹರಿಯಾಣ ಪೊಲೀಸರು ಬಂಧಿಸಿರುವ ಮೂವರು ರೈತರನ್ನು ಬಿಡುಗಡೆ ಮಾಡುವ ತನಕ ಪ್ರತಿಭಟನೆ ಮುಂದುವರಿಯಲಿದೆ ಎಂದು ರೈತ ಮುಖಂಡ ಸರವಣ ಸಿಂಗ್ ಪಂಧೇರ ಹೇಳಿದ್ದಾರೆ.

ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಕಾನೂನುಗಳ ಬಗ್ಗೆ 'ಸುಪ್ರೀಂ' ಪ್ರಶಂಸೆ

ದತ್ತಾಂಶ ಸೋರಿಕೆ: ಸಿಜೆಐ ಕಳವಳ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- ಆರೋಪಿ, ಸಂತ್ರಸ್ತರ ಖಾಸಗಿತನ ರಕ್ಷಿಸಬೇಕು: ಸಿಜೆಐ
- ತಜ್ಞರ ಸಾಮರ್ಥ್ಯ ವೃದ್ಧಿಗೆ ಹೆಚ್ಚಿನ ಹೂಡಿಕೆಗೆ ಕರೆ
- ಅಗತ್ಯ ಸುಧಾರಣೆಗಳನ್ನು ತಂದ ಹೊಸ ಕಾನೂನು

ನವದೆಹಲಿ: ನ್ಯಾಯಾಲಯಗಳಲ್ಲಿ ದತ್ತಾಂಶ ಸೋರಿಕೆಯ ಸವಾಲಿನ ಬಗ್ಗೆ, ಅದರಿಂದ ವ್ಯಕ್ತಿಯ ಸುರಕ್ಷತೆಯ ಮೇಲೆ ಪರಿಣಾಮ ಉಂಟಾಗುವ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಕಳವಳ ವ್ಯಕ್ತಪಡಿಸಿದರು.

ಡಿ.ವೈ. ಚಂದ್ರಚೂಡ್

'ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿ ವಿಶ್ವಾಸ ಹೆಚ್ಚಿಸಲು ಹಾಗೂ ವ್ಯವಸ್ಥೆಯಲ್ಲಿ ಒಟ್ಟಾರೆ ದಕ್ಷತೆಯನ್ನು ತರಲು ನಾವು ನಾಗರಿಕರ ಖಾಸಗಿತನವನ್ನು ಕಾಪಾಡುವ ವಿಚಾರದಲ್ಲಿ ವಿಶ್ವಾಸ ಮೂಡಿಸಬೇಕು' ಎಂದು ಅವರು ಹೇಳಿದರು.

'ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿ ಭಾರತದ ಪ್ರಗತಿಯ ಪಥ' ಎಂಬ ವಿಷಯದ ಕುರಿತ ಸಮಾವೇಶದಲ್ಲಿ ಅವರು ಶನಿವಾರ ಮಾತನಾಡಿದರು.

'ನಾವು ನಿರಂತರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು, ಕಾನೂನು ಪ್ರಕ್ರಿಯೆಯ ಡಿಜಿಟಲೀಕರಣದ ಹಂತದಲ್ಲಿ ಹಾಗೂ ಡಿಜಿಟಲ್ ಸಾಕ್ಷಿಗಳನ್ನು ಸೃಷ್ಟಿಸುವ ಸಂದರ್ಭದಲ್ಲಿ ಆರೋಪಿಯ ಹಾಗೂ ಸಂತ್ರಸ್ತರ ಖಾಸಗಿತನವನ್ನು ರಕ್ಷಿಸಬೇಕು' ಎಂದು ಅವರು ಹೇಳಿದರು.

'ಡಿಜಿಟಲ್ ಯುಗದಲ್ಲಿ ವ್ಯಕ್ತಿಗೆ ಸೇರಿದ ದತ್ತಾಂಶ ಮತ್ತು ಸೂಕ್ಷ್ಮ ಮಾಹಿತಿಗೆ ಬಹಳ ಪ್ರಾಮುಖ್ಯತೆ ಇದೆ. ಈ ದತ್ತಾಂಶವು ಬೇರೆ ಯಾವುದಕ್ಕೂ ಸಾಟಿಯಿಲ್ಲದ ದಕ್ಷತೆ ಸಾಧಿಸಲು ನಮಗೆ ಅವಕಾಶ ಕಲ್ಪಿಸಬಲ್ಲದು. ಆದರೆ, ವೈಯಕ್ತಿಕ ದತ್ತಾಂಶವು ನೀಡುವ ಶಕ್ತಿಯು, ಒಂದಿಷ್ಟು ಹೊಣೆಗಾರಿಕೆಗಳನ್ನೂ ನೀಡುತ್ತದೆ. ವ್ಯವಸ್ಥೆಯಲ್ಲಿ ದತ್ತಾಂಶ ಸೋರಿಕೆ ಆಗದಂತೆ ನೋಡಿಕೊಳ್ಳುವ ಹೊಣೆಯನ್ನು ಅದು ನೀಡುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು ವಿವರಿಸಿದರು.

ಹೊಸ ಕಾನೂನುಗಳ ಬಗ್ಗೆ ಶ್ಲಾಘನೆ

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಹೊಸದಾಗಿ ರೂಪಿಸಿರುವ ಕಾನೂನುಗಳು ಸಮಾಜದ ಪಾಲಿಗೆ ಪರಿವರ್ತನೆಯ ಘಟ್ಟವಿದ್ದಂತೆ ಎಂದು ಸಿಜೆಐ ಚಂದ್ರಚೂಡ್ ಅವರು ಪ್ರಶಂಸೆ ವ್ಯಕ್ತಪಡಿಸಿದರು. ಹೊಸ ಕಾನೂನುಗಳನ್ನು ಅನುಷ್ಠಾನಕ್ಕೆ ತರುವವರು ಅದಕ್ಕೆ ಒಗ್ಗಿಕೊಂಡಲ್ಲಿ, ಆ ಕಾನೂನುಗಳು ಯಶಸ್ಸು ಕಾಣಲಿವೆ ಎಂದು ಹೇಳಿದರು.

ಕ್ರಿಮಿನಲ್ ನ್ಯಾಯದಾನಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಇದ್ದ ಕಾನೂನಿನ ಚೌಕಟ್ಟನ್ನು ಈ ಹೊಸ ಕಾನೂನುಗಳು ಹೊಸ ಕಾಲಘಟ್ಟಕ್ಕೆ ತಂದು ನಿಲ್ಲಿಸಿವೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಸಂತ್ರಸ್ತರ ಹಿತವನ್ನು ಕಾಯಲು, ಸಮರ್ಥವಾಗಿ ತನಿಖೆಯನ್ನು ಕೈಗೊಳ್ಳಲು ಹಾಗೂ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲು ತೀರಾ ಅಗತ್ಯವಾಗಿದ್ದ ಸುಧಾರಣೆಗಳನ್ನು ತರಲಾಗಿದೆ ಎಂದು ಅವರು ಹೇಳಿದರು.

'ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಮೂರು ಹೊಸ ಕಾನೂನುಗಳ ಅನುಷ್ಠಾನದ ಕಾರಣದಿಂದಾಗಿ ಭಾರತದ ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯು ಗಣನೀಯ ಬದಲಾವಣೆ ಕಾಣಲಿದೆ... ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳಷ್ಟು ವ್ಯಾಪಕವಾಗಿ ಬೇರೆ ಯಾವ ಕಾನೂನು ಕೂಡ ನಮ್ಮ ಸಮಾಜದ ಮೇಲೆ ಪರಿಣಾಮ ಉಂಟುಮಾಡುವುದಿಲ್ಲ. ಹೀಗಾಗಿ, ಈ ಕಾನೂನುಗಳು ನಮ್ಮ ಸಮಾಜದ ಪಾಲಿಗೆ ಪರಿವರ್ತನೆಯ ಘಟ್ಟದಂತೆ ಇವೆ' ಎಂದು ಅವರು ಹೇಳಿದರು.

ಈ ಕಾನೂನುಗಳನ್ನು ಸಂಸತ್ತು ರೂಪಿಸಿರುವುದು ಭಾರತವು ಬದಲಾವಣೆ ಕಾಣುತ್ತಿದೆ, ಮುಂದಕ್ಕೆ ನಡೆಯುತ್ತಿದೆ, ಸದ್ಯದ ಸವಾಲುಗಳನ್ನು ಎದುರಿಸಲು ಕಾನೂನಿನ ಹೊಸ ಪರಿಕರಗಳು ದೇಶಕ್ಕೆ ಬೇಕಿವೆ ಎಂಬುದರ ಸ್ಪಷ್ಟ ಸೂಚನೆ ಎಂದು ಅವರು ಹೇಳಿದರು.

ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸಮಾರಂಭದಲ್ಲಿ ಹಾಜರಿದ್ದರು.

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ ಜುಲೈ 1ರಿಂದ ಅನುಷ್ಠಾನಕ್ಕೆ ಬರಲಿವೆ. 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯು ತನಿಖಾ ಸಂಸ್ಥೆಗಳು ನಡೆಸುವ ಶೋಧ ಹಾಗೂ ವಶಪಡಿಸಿಕೊಳ್ಳುವ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣ ಮಾಡುವುದನ್ನು ಕಡ್ಡಾಯಗೊಳಿಸಿವೆ. ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಶಿಕ್ಷೆ ವಿಧಿಸಲು ಅವಕಾಶವಿರುವ ಅಪರಾಧಗಳು ನಡೆದ ಸ್ಥಳದಲ್ಲಿ ವಿಧಿವಿಜ್ಞಾನ ತಜ್ಞರು ಇರುವುದನ್ನು ಕಡ್ಡಾಯಗೊಳಿಸಲಾಗಿದೆ. ಶೋಧ ಮತ್ತು ವಶಪಡಿಸಿಕೊಳ್ಳುವ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣವು ಪ್ರಾಸಿಕ್ಯೂಷನ್ ಕಡೆಯವರಿಗೆ ಪ್ರಮುಖ ಅಸ್ತ್ರವಾಗಲಿದೆ. ಹಾಗೆಯೇ ಇದು ನಾಗರಿಕರ ಸ್ವಾತಂತ್ರ್ಯವನ್ನು ಕಾಪಾಡಲು ಕೂಡ ನೆರವಾಗಲಿದೆ' ಎಂದು ಸಿಜೆಐ ಹೇಳಿದರು.

'ನಾವು ನಮ್ಮ ವಿಧಿವಿಜ್ಞಾನ ತಜ್ಞರ ಸಾಮರ್ಥ್ಯ ಹೆಚ್ಚಿಸಲು, ತನಿಖಾಧಿಕಾರಿಗಳಿಗೆ ತರಬೇತಿ ಒದಗಿಸಲು ಹೆಚ್ಚಿನ ಹೂಡಿಕೆ ಮಾಡಬೇಕಾಗಿದೆ. ಹಾಗೆಯೇ, ನಮ್ಮ ನ್ಯಾಯಾಲಯಗಳ ವ್ಯವಸ್ಥೆಯ ಮೇಲೆಯೂ ಹೂಡಿಕೆ ಮಾಡಬೇಕಾಗಿದೆ. ಈ ಹೂಡಿಕೆಗಳನ್ನು ಆದಷ್ಟು ಬೇಗ ಮಾಡಿದಾಗ, ಹೊಸ ಕಾನೂನುಗಳು ಒಳ್ಳೆಯ ಪರಿಣಾಮವನ್ನು ಬೀರುತ್ತವೆ' ಎಂದು ಅವರು ಅಭಿಪ್ರಾಯಪಟ್ಟರು.

ನೌಕಾಪಡೆಯಿಂದ ಸಮರಾಭ್ಯಾಸ

ನವದೆಹಲಿ (ಪಿಟಿಐ): 'ಸವಾಲುಗಳನ್ನು ಎದುರಿಸಲು ತಾನು ಎಷ್ಟರ ಮಟ್ಟಿಗೆ ಸಜ್ಜಾಗಿದ್ದೇನೆ ಎಂಬುದನ್ನು ಅರಿಯುವ ಯತ್ನದ ಭಾಗವಾಗಿ ಪೂರ್ವ ಕರಾವಳಿಯಲ್ಲಿ ದೊಡ್ಡ ಮಟ್ಟದಲ್ಲಿ ಸಮರಾಭ್ಯಾಸ ನಡೆಸಲಾಗಿದೆ' ಎಂದು ಭಾರತೀಯ ನೌಕಾಪಡೆ ಶನಿವಾರ ಹೇಳಿದೆ.

'ಪೂರ್ವಿ ಲೆಹರ್' ಹೆಸರಿನ ಈ ಸಮರಾಭ್ಯಾಸದಲ್ಲಿ ಯುದ್ಧನೌಕೆಗಳು, ಜಲಾಂತರ್ಗಾಮಿಗಳು, ವಿಮಾನಗಳು ಮತ್ತು ನೌಕಾಪಡೆಯ ವಿಶೇಷ ತಂಡಗಳು ಪಾಲ್ಗೊಂಡಿದ್ದವು.

ಹಲವು ಹಂತಗಳಲ್ಲಿ ಅಭ್ಯಾಸ ನಡೆಸಲಾಗಿದೆ. ವಾಸ್ತವಕ್ಕೆ ಹತ್ತಿರವಾದ ಸನ್ನಿವೇಶದಲ್ಲಿ ಎದುರಾಳಿಗಳ ಜೊತೆ ಸೆಣಸಾಟದ ತರಬೇತಿ, ಹಲವು ಬಗೆಯ ಶಸ್ತ್ರಾಸ್ತ್ರಗಳ ಬಳಕೆಯ ಅಭ್ಯಾಸ ನಡೆಸಲಾಗಿದೆ ಎಂದು ನೌಕಾಪಡೆ ಹೇಳಿದೆ.

ನೌಕಾಪಡೆಯ ಪೂರ್ವ ಕಮಾಂಡ್ ಮಾತ್ರವೇ ಅಲ್ಲದೆ ಭಾರತೀಯ ವಾಯುಪಡೆ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ಕಮಾಂಡ್‌ನ ಸಿಬ್ಬಂದಿ, ಕರಾವಳಿ ಕಾವಲು ಪಡೆಯ ಸಿಬ್ಬಂದಿ ಕೂಡ ಸಮರಾಭ್ಯಾಸದಲ್ಲಿ ಭಾಗಿಯಾಗಿದ್ದರು. ಇದು ವಿವಿಧ ವಿಭಾಗಗಳ ಸಿಬ್ಬಂದಿಗಳ ನಡುವೆ ಹೆಚ್ಚಿನ ಪ್ರಮಾಣದ ಸಮನ್ವಯವನ್ನು ತೋರಿಸಿತು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸೌಮ್ಯಾ ಹಂತಕರಿಗೆ ಜಾಮೀನು 'ಸುಪ್ರೀಂ'ನಲ್ಲಿ ಪ್ರಶ್ನಿಸಿದ ತಾಯಿ

ನವದೆಹಲಿ (ಪಿಟಿಐ): ಪತ್ರಕರ್ತೆ ಸೌಮ್ಯಾ ವಿಶ್ವನಾಥನ್ ಕೊಲೆ ಪ್ರಕರಣದ ನಾಲ್ವರು ದೋಷಿಗಳಿಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಪತ್ರಕರ್ತೆಯ ತಾಯಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಪ್ರಮುಖ ಸುದ್ದಿ ವಾಹಿನಿಯೊಂದರಲ್ಲಿ ಪತ್ರಕರ್ತೆಯಾಗಿದ್ದ ಸೌಮ್ಯಾ ಅವರನ್ನು 2008ರ ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು. ಪ್ರಕರಣದಲ್ಲಿ, ರವಿ ಕಪೂರ್, ಅಮಿತ್ ಶುಕ್ಲ, ಬಲ್ಜೀತ್ ಸಿಂಗ್ ಮಲಿಕ್ ಮತ್ತು ಅಜಯ್ ಕುಮಾರ್ ಎಂಬುವವರ ದೋಷ ಸಾಬೀತಾಗಿ, ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಫೆಬ್ರುವರಿ 12ರಂದು ದೆಹಲಿ ಹೈಕೋರ್ಟ್ ನಾಲ್ವರಿಗೂ ಜಾಮೀನು ನೀಡಿದೆ.

ಸೌಮ್ಯಾ ಅವರ ತಾಯಿ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರಿರುವ ನ್ಯಾಯಪೀಠವು ನಡೆಸುವ ಸಾಧ್ಯತೆಯಿದೆ.

ಶಿಕ್ಷೆ ವಜಾಗೊಳಿಸುವಂತೆ ಅಪರಾಧಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, ಅಪರಾಧಿಗಳು 14 ವರ್ಷಗಳಿಂದ ಜೈಲಿನಲ್ಲಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಂಡಿತ್ತು. ಬಿಡುಗಡೆ ಕೋರಿ ಅಪರಾಧಿಗಳು ಸಲ್ಲಿಸಿದ್ದ ಅರ್ಜಿ ಕುರಿತು ಪ್ರತಿಕ್ರಿಯಿಸುವಂತೆ ದೆಹಲಿ ಪೊಲೀಸರಿಗೆ ಜನವರಿ 23ರಂದು ಸೂಚಿಸಿತ್ತು.

ಬಹುದಾ ಯಾತ್ರೆ ಒಡಿಶಾದ ಭುವನೇಶ್ವರದಲ್ಲಿ ಶನಿವಾರ ನಡೆದ ಲಿಂಗರಾಜ ದೇವರ ಬಹುದಾ ಯಾತ್ರೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಜಾರಿ ನಿರ್ದೇಶನಾಲಯದ ವಿರುದ್ಧ ಎಎಪಿ ನಾಯಕ ಸಂಜಯ್ ಸಿಂಗ್ ಆರೋಪ

'ರೆಡ್ಡಿಯಿಂದ ಬಿಜೆಪಿ ಹಣ ಪಡೆದರೂ ಕ್ರಮವಿಲ್ಲ'

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ಶರತ್ ರೆಡ್ಡಿಯಿಂದ ಬಿಜೆಪಿ ₹60 ಕೋಟಿ ಪಡೆದಿದ್ದರೂ ಜಾರಿ ನಿರ್ದೇಶನಾಲಯ (ಇ.ಡಿ) ಇದರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಎಎಪಿ ನಾಯಕ ಸಂಜಯ್ ಸಿಂಗ್, ಶನಿವಾರ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸಂಜಯ್ ಸಿಂಗ್

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಜಯ್ ಅವರು 'ಅಬಕಾರಿ ಹಗರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಮನಿಶ್ ಸಿಸೋಡಿಯಾ, ಎಎಪಿ ನಾಯಕರು ಮತ್ತು ನನ್ನನ್ನು ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ಬಂಧಿಸಲಾಯಿತು' ಎಂದು ಆರೋಪಿಸಿದರು.

'ಇ.ಡಿಯು ತನ್ನ ಚಾರ್ಜ್‌ಶೀಟ್‌ನಲ್ಲಿ ಅಬಕಾರಿ ಹಗರಣದ ಕಿಂಗ್‌ಪಿನ್ ಎಂದು ಕರೆದಿರುವ ಶರತ್ ರೆಡ್ಡಿ, ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ₹60 ಕೋಟಿ ನೀಡಿದ್ದಾರೆ. ಆದರೆ ಇದರ ವಿರುದ್ಧ ಇ.ಡಿ ಯಾರ ವಿರುದ್ಧವೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದರು.

'ಅಬಕಾರಿ ಹಗರಣದಲ್ಲಿ ತಮ್ಮ ಬಂಧನಕ್ಕೂ ಮುನ್ನ ಶರತ್ ರೆಡ್ಡಿ 2022ರಲ್ಲಿ ಬಿಜೆಪಿಗೆ ₹5 ಕೋಟಿ ದೇಣಿಗೆ ನೀಡಿದ್ದರು. ಬಂಧನಕ್ಕೊಳಗಾದ ಬಳಿಕ 2022ರ ನ.15ರಂದು ಬಿಜೆಪಿಗೆ ಮತ್ತೆ ₹5 ಕೋಟಿ ದೇಣಿಗೆ ನೀಡಿದ್ದಾರೆ. ಆರು ತಿಂಗಳ ಬಳಿಕ 2023ರ ಮೇ8 ರಂದು ಜಾಮೀನು ಪಡೆದು ಹೊರಬಂದ ಕೆಲವೇ ದಿನಗಳ ಬಳಿಕ ರೆಡ್ಡಿ ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ₹50 ಕೋಟಿ ನೀಡಿದ್ದಾರೆ. ಮಾ.21ರಂದು ಚುನಾವಣಾ ಬಾಂಡ್‌ಗಳ ವಿವರಗಳು ಬಹಿರಂಗವಾಗಿ, ರೆಡ್ಡಿಯಿಂದ ಬಿಜೆಪಿ ಹಣ ಪಡೆದಿರುವುದು ಬೆಳಕಿಗೆ ಬಂದ ಕೂಡಲೇ ಅರವಿಂದ್ ಕೇಜ್ರಿವಾಲ್ ನಿವಾಸದ ಮೇಲೆ ಇ.ಡಿ ದಾಳಿ ನಡೆಸಿದೆ' ಎಂದು ಸಂಜಯ್ ಅವರು ಆರೋಪಿಸಿದರು.

ಸಂಜಯ್ ಸಿಂಗ್ ಅವರ ಆರೋಪದ ಕುರಿತು ಸದ್ಯ ಶರತ್ ರೆಡ್ಡಿ ಹಾಗೂ ಬಿಜೆಪಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಕೇಜ್ರಿವಾಲರನ್ನು ನಿಧಾನವಾಗಿ ಸಾವಿನ ದವಡೆಗೆ ನೂಕಲಾಗುತ್ತಿದೆ'

'ತಿಹಾರ್ ಜೈಲಿನಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಇನ್ಸುಲಿನ್ ಹಾಗೂ ವೈದ್ಯರೊಂದಿಗೆ ಸಮಾಲೋಚನೆ ನಿರಾಕರಿಸುವ ಮೂಲಕ ಅವರನ್ನು ನಿಧಾನವಾಗಿ ಸಾವಿನ ದವಡೆಗೆ ನೂಕಲಾಗುತ್ತಿದೆ' ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಶನಿವಾರ ಆರೋಪಿಸಿದೆ.

'ಅರವಿಂದ್ ಕೇಜ್ರಿವಾಲ್ ಅವರಿಗೆ ಟೈಪ್–2 ಮಧುಮೇಹ ಇದೆ. ಇನ್ಸುಲಿನ್ ಹಾಗೂ ತಮ್ಮ ಕುಟುಂಬ ವೈದ್ಯರೊಂದಿಗೆ ವಿಡಿಯೊ ಕಾನ್ಫರೆನ್ಸ್‌ಗಾಗಿ ಮನವಿ ಮಾಡುತ್ತಿದ್ದರೂ, ಜೈಲು ಅಧಿಕಾರಿಗಳು ಅವರ ಮನವಿಗಳನ್ನು ತಿರಸ್ಕರಿಸುತ್ತಿದ್ದಾರೆ' ಎಂದು ಪಕ್ಷದ ವಕ್ತಾರ ಸೌರಭ್ ಭಾರದ್ವಾಜ್ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಕೇಜ್ರಿವಾಲ್ ನಿಧಾನವಾಗಿ ಸಾಯುವಂತೆ ಮಾಡಲು ಸಂಚು ನಡೆಯುತ್ತಿದೆ' ಎಂದು ಆರೋಪಿಸಿದ ಅವರು, ಕೇಜ್ರಿವಾಲ್ ಅವರ ರಕ್ತದಲ್ಲಿನ ಸಕ್ಕರೆ ಪ್ರಮಾಣಕ್ಕೆ ಸಂಬಂಧಿಸಿದ ವರದಿಗಳನ್ನು ಉಲ್ಲೇಖಿಸಿದರು.

ಸೌರಭ್ ಭಾರದ್ವಾಜ್

'ಕೇಜ್ರಿವಾಲ್ ಅವರು ಕಳೆದ 20–22 ವರ್ಷಗಳಿಂದ ಮಧುಮೇಹದಿಂದ ಬಳಲುತ್ತಿದ್ದರೂ ಅವರಿಗೆ ಇನ್ಸುಲಿನ್ ಒದಗಿಸುತ್ತಿಲ್ಲ. ಈ ವಿಚಾರದಲ್ಲಿ ತಿಹಾರ್ ಜೈಲು ಆಡಳಿತ, ಬಿಜೆಪಿ, ಕೇಂದ್ರ ಸರ್ಕಾರ ಹಾಗೂ ಲೆಫ್ಟಿನೆಂಟ್ ಗವರ್ನರ್ ನಡೆ ಖಂಡನೀಯ' ಎಂದು ಹೇಳಿದರು.

'ಮೊದಲೇ ಇನ್ಸುಲಿನ್ ತ್ಯಜಿಸಿದ್ದರು'

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ಬಂಧನವಾಗುವ ಕೆಲವು ತಿಂಗಳುಗಳ ಮೊದಲೇ ಇನ್ಸುಲಿನ್ ತೆಗೆದುಕೊಳ್ಳುವುದನ್ನು ಬಿಟ್ಟಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೇಜ್ರಿವಾಲ್ ಅವರು ಈಗ ಮಧುಮೇಹಿಗಳು ತೆಗೆದುಕೊಳ್ಳುವ ಸಾಮಾನ್ಯವಾದ ಔಷಧವನ್ನು ಮಾತ್ರ ಸೇವಿಸುತ್ತಿದ್ದಾರೆ ಎಂದು ಅವರು ತಿಹಾರ್ ಜೈಲಿನ ಅಧಿಕಾರಿಗಳು ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ರವಾನಿಸಿರುವ ವರದಿಯೊಂದನ್ನು ಉಲ್ಲೇಖಿಸಿ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಎಎಪಿ ನಾಯಕಿ ಆತಿಶಿ, ಈ ವರದಿಯು ಬಿಜೆಪಿಯ ಪಿತೂರಿಯನ್ನು ಬಹಿರಂಗಪಡಿಸಿದೆ ಎಂದು ಹೇಳಿದ್ದಾರೆ. 'ಬಿಜೆಪಿಯ ಚಿತಾವಣೆಯಿಂದ, ಕೇಜ್ರಿವಾಲ್ ಅವರನ್ನು ಜೈಲಿನಲ್ಲಿಯೇ ಕೊಲ್ಲಲು ಪಿತೂರಿಯೊಂದು ನಡೆದಿದೆ. ಮುಖ್ಯಮಂತ್ರಿಯವರು 12 ವರ್ಷಗಳಿಂದ ಇನ್ಸುಲಿನ್ ಪಡೆಯುತ್ತಿದ್ದಾರೆ. ಅವರಿಗೆ ಇನ್ಸುಲಿನ್ ನೀಡಲು ತಿಹಾರ್ ಜೈಲಿನ ಅಧಿಕಾರಿಗಳಿಗೆ ಏನು ಸಮಸ್ಯೆ' ಎಂದು ಆತಿಶಿ ಪ್ರಶ್ನಿಸಿದ್ದಾರೆ.

ಜೈಲಿಗೆ ಹೋಗುವ ಮೊದಲು ಕೇಜ್ರಿವಾಲ್ ಅವರು ಪ್ರತಿದಿನ 50 ಯೂನಿಟ್ ಇನ್ಸುಲಿನ್ ತೆಗೆದುಕೊಳ್ಳುತ್ತಿದ್ದರು ಎಂದು ಅವರು ಹೇಳಿದ್ದಾರೆ.

ಮಧುಮೇಹಕ್ಕಾಗಿ ತೆಲಂಗಾಣ ಮೂಲದ ವೈದ್ಯರೊಬ್ಬರಿಂದ ಚಿಕಿತ್ಸೆ ಪಡೆಯುತ್ತಿರುವ ಕೇಜ್ರಿವಾಲ್ ಅವರು ಕೆಲವು ತಿಂಗಳುಗಳ ಹಿಂದೆಯೇ ಇನ್ಸುಲಿನ್ ಪಡೆಯುವುದನ್ನು ನಿಲ್ಲಿಸಿದ್ದರು. ಬಂಧನದ ಸಂದರ್ಭದಲ್ಲಿ ಅವರು ಮಧುಮೇಹ ನಿಯಂತ್ರಣಕ್ಕೆ ಮೆಟ್‌ಫಾರ್ಮಿನ್ ಹೆಸರಿನ ಮಾತ್ರೆ ತೆಗೆದುಕೊಳ್ಳುತ್ತಿದ್ದರು ಎಂದು ತಿಹಾರ್ ಅಧಿಕಾರಿಗಳ ವರದಿ ಉಲ್ಲೇಖಿಸಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸಿಸೋಡಿಯಾ ಜಾಮೀನು ಅರ್ಜಿ: 30ಕ್ಕೆ ತೀರ್ಪು

ನವದೆಹಲಿ (ಪಿಟಿಐ) ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಎಎಪಿ ನಾಯಕ ಹಾಗೂ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನಿಶ್ ಸಿಸೋಡಿಯಾ ಅವರ ಜಾಮೀನು ಅರ್ಜಿಯ ತೀರ್ಪನ್ನು ದೆಹಲಿ ನ್ಯಾಯಾಲಯವು ಏಪ್ರಿಲ್ 30ಕ್ಕೆ ಕಾಯ್ದಿರಿಸಿದೆ.

ಸಿಸೋಡಿಯಾ ವಿರುದ್ಧ ಕೇಂದ್ರೀಯ ತನಿಖಾ ದಳ (ಸಿಬಿಐ) ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದ ಎರಡೂ ಪ್ರಕರಣಗಳಲ್ಲಿ ಸಿಸೋಡಿಯಾ ಅವರು ಮಧ್ಯಂತರ ಜಾಮೀನು ಅರ್ಜಿ ಸಲ್ಲಿಸಿದ್ದರು.

ಸಿಬಿಐ ಮತ್ತು ಇ.ಡಿ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಸಿಸೋಡಿಯಾ ಹಾಗೂ ತನಿಖಾ ಸಂಸ್ಥೆಗಳ ಪರ ವಕೀಲರ ವಾದವನ್ನು ಆಲಿಸಿದ ಬಳಿಕ ತೀರ್ಪನ್ನು ಕಾಯ್ದಿರಿಸಿದರು.

ಪ್ರಸ್ತುತ ರದ್ದಾಗಿರುವ ದೆಹಲಿಯ ಹಿಂದಿನ ಅಬಕಾರಿ ನೀತಿಯಲ್ಲಿ ಅಕ್ರಮ ನಡೆದಿದೆ. ಪರವಾನಗಿ ನೀಡಲು ಆರೋಪಿತ ಅಧಿಕಾರಿಗಳು ಭ್ರಷ್ಟಾಚಾರ ಎಸಗಿದ್ದಾರೆ ಎಂದು ಇ.ಡಿ ಹಾಗೂ ಸಿಬಿಐ ಆರೋಪಿಸಿವೆ.

ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಆರೋಪದಡಿ ಸಿಸೋಡಿಯಾ ಅವರನ್ನು ಕಳೆದ ವರ್ಷ ಫೆ.26ರಂದು ಸಿಬಿಐ ಬಂಧಿಸಿತ್ತು. ಇದೇ ಹಗರಣದ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಮಾರ್ಚ್ 9 ರಂದು ಇ.ಡಿ ಅವರನ್ನು ಬಂಧಿಸಿತು.

ಉತ್ತರ ಪ್ರದೇಶ: 10, 12ನೇ ತರಗತಿ ಪಾಸಾದ ಕೈದಿಗಳು

ಪ್ರಯಾಗ್‌ರಾಜ್ (ಪಿಟಿಐ): ಗಾಜಿಯಾಬಾದ್, ಆಗ್ರಾ ಮತ್ತು ಲಖನೌ ಸೇರಿದಂತೆ ಉತ್ತರ ಪ್ರದೇಶದ 30 ಜಿಲ್ಲೆಗಳ ವಿವಿಧ ಜೈಲುಗಳಲ್ಲಿರುವ 180 ಕೈದಿಗಳು 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಉತ್ತರ ಪ್ರದೇಶ ರಾಜ್ಯ ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಿಕ್ಷಣ ಮಂಡಳಿಯು ಶನಿವಾರ ಫಲಿತಾಂಶ ಪ್ರಕಟಿಸಿದ್ದು, 10 ಮತ್ತು 12ನೇ ತರಗತಿಯಲ್ಲಿ ಕ್ರಮವಾಗಿ ಶೇ 89.55 ಮತ್ತು ಶೇ 82.60ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

10ನೇ ತರಗತಿ ಪರೀಕ್ಷೆಗೆ ಹಾಜರಾದ 91 ಕೈದಿಗಳಲ್ಲಿ 81 ಜನರು ಹಾಗೂ 12ನೇ ತರಗತಿ ಪರೀಕ್ಷೆ ಬರೆದ 105 ಕೈದಿಗಳಲ್ಲಿ 87 ಮಂದಿ ಉತ್ತೀರ್ಣರಾಗಿದ್ದಾರೆ.

12ನೇ ತರಗತಿ ಪರೀಕ್ಷೆ ಬರೆದ ಗಾಜಿಯಾಬಾದ್ ಜೈಲಿನ 21 ಕೈದಿಗಳ ಪೈಕಿ 17 ಮಂದಿ ಉತ್ತೀರ್ಣರಾಗಿದ್ದಾರೆ. ಅದೇ ರೀತಿ ಬುಲಂದ್‌ಶಹರ್ ಜೈಲಿನ 11 ಕೈದಿಗಳ ಪೈಕಿ 10 ಹಾಗೂ ಹಾರ್ದೋಯ್ ಜೈಲಿನ ನಾಲ್ಕು ಮಂದಿ ಕೈದಿಗಳು ತೇರ್ಗಡೆ ಆಗಿದ್ದಾರೆ.

ಮಾಲೆಗಾಂವ್: ಇದೇ 25ರ ಒಳಗೆ ಹಾಜರಾಗಲು ಪ್ರಗ್ಯಾಗೆ ಸೂಚನೆ

ಮುಂಬೈ (ಪಿಟಿಐ): ವೈದ್ಯಕೀಯ ಕಾರಣಗಳಿಂದಾಗಿ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ವೈಯಕ್ತಿಕ ಹಾಜರಾತಿಯಿಂದ ವಿನಾಯಿತಿ ಕೋರಿದ್ದ ಬಿಜೆಪಿ ಸಂಸದೆ ಪ್ರಗ್ಯಾ ಠಾಕೂರ್ ಅವರ ಮನವಿಯನ್ನು ಮುಂಬೈನ ವಿಶೇಷ ನ್ಯಾಯಾಲಯ ಅಂಗೀಕರಿಸಿದೆ. ಆದರೆ ಏ.25ರಂದು ಹಾಜರಾಗಲು ವಿಫಲವಾದರೆ ಅಗತ್ಯ ಆದೇಶ ನೀಡಲಾಗುವುದು ಎಂದು ಎಚ್ಚರಿಸಿದೆ.

ಪ್ರಗ್ಯಾ ಠಾಕೂರ್

2008ರ ಸೆ.29ರಂದು ಮಾಲೆಗಾಂವ್‌ನ ಮಸೀದಿಯೊಂದರ ಬಳಿ ದ್ವಿಚಕ್ರ ವಾಹನಕ್ಕೆ ಕಟ್ಟಿದ್ದ ಸ್ಫೋಟಕವು ಸ್ಫೋಟಗೊಂಡಿದ್ದರಿಂದ ಆರು ಜನರು ಸಾವನ್ನಪ್ಪಿದ್ದರು. ಘಟನೆಯಲ್ಲಿ 100 ಜನ ಗಾಯಗೊಂಡಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಗ್ಯಾ ಅವರು ವಿಚಾರಣೆಗೆ ಹಾಜರಾಗಬೇಕಿತ್ತು. ಶನಿವಾರ ಪ್ರಕರಣದ ವಿಚಾರಣೆ ಪ್ರಕ್ರಿಯೆಯು ಆರಂಭವಾದಾಗ ಪ್ರಗ್ಯಾ, 'ತಾನು ಅನಾರೋಗ್ಯ ಸಮಸ್ಯೆ ಎದುರಿಸುತ್ತಿರುವುದಾಗಿ ತಿಳಿಸಿ ವೈಯಕ್ತಿಕ ಹಾಜರಾತಿಯಿಂದ ವಿನಾಯಿತಿ ನೀಡುವಂತೆ' ಕೋರಿ ತಮ್ಮ ವಕೀಲರ ಮೂಲಕ ಅರ್ಜಿ ಸಲ್ಲಿಸಿದರು.

ಏ.25ರಂದು ನ್ಯಾಯಾಲಯದ ಮುಂದೆ ಹಾಜರಾಗುವ ಭರವಸೆ ಇದೆ ಎಂದು ಮನವಿಯಲ್ಲಿ ಪ್ರಗ್ಯಾ ತಿಳಿಸಿದ್ದಾರೆ. ಆದರೂ ಅವರು ಒದಗಿಸಿರುವ ವೈದ್ಯಕೀಯ ದಾಖಲೆಯಲ್ಲಿ ಪ್ರಗ್ಯಾ ಭೋಪಾಲ್‌ನಿಂದ ಮುಂಬೈಗೆ ಪ್ರಯಾಣಿಸುವುದು ಸಾಧ್ಯವಿಲ್ಲ ಎಂಬುದನ್ನು ನಮೂದಿಸಿಲ್ಲ ಎಂದು ಎನ್‌ಐಎ ಮನವಿಯನ್ನು ವಿರೋಧಿಸಿತು. ಬಳಿಕ ನ್ಯಾಯಾಲಯವು ಏ.25 ಅಥವಾ ಅದರ ಒಳಗಾಗಿ ಹಾಜರಾಗಬೇಕೆಂದು ನಿರ್ದೇಶನ ನೀಡಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ವಿಚಾರಣೆಯಲ್ಲಿ ಪ್ರಗ್ಯಾ ಅವರು ನ್ಯಾಯಾಲಯದಲ್ಲಿ ಹಾಜರಾಗಬೇಕಿತ್ತು. ಆದರೆ, ಅವರ ಆರೋಗ್ಯ ಸ್ಥಿತಿಯ ಕುರಿತು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸಲ್ಲಿಸಿದ ವರದಿಯನ್ನು ಆಧರಿಸಿ ವಿಶೇಷ ಎನ್‌ಐಎ ನ್ಯಾಯಾಧೀಶರಾದ ಎ.ಕೆ ಲಹೋಟಿ ಅವರು ಪ್ರಗ್ಯಾ ಅವರಿಗೆ ವೈಯಕ್ತಿಕ ಹಾಜರಾತಿಯಿಂದ ವಿನಾಯಿತಿ ನೀಡಿದ್ದರು. ಅಲ್ಲದೇ ಏ.20ರಂದು ನ್ಯಾಯಾಲಯದ ಮುಂದೆ ತಪ್ಪದೇ ಹಾಜರಾಗುವಂತೆ ಸೂಚಿಸಿದ್ದರು.

ಸಂಕ್ಷಿಪ್ತ ಸುದ್ದಿ

ಜಮ್ಮು–ಕಾಶ್ಮೀರ: ಉಗ್ರರ ಅಡಗುತಾಣ ಪತ್ತೆ

ಜಮ್ಮು(ಪಿಟಿಐ): ಜಮ್ಮು–ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಶನಿವಾರ ಉಗ್ರರ ಅಡಗುತಾಣವನ್ನು ಪತ್ತೆ ಮಾಡಿ, ದಾಳಿ ನಡೆಸಿದ ಭದ್ರತಾ ಸಿಬ್ಬಂದಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು.

'ಉಗ್ರರು ಅವಿತಿರುವ ಬಗ್ಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಸ್ಥಳದಲ್ಲಿದ್ದ ಸ್ಫೋಟಕಗಳು ಮತ್ತು ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾರ್ಯಾಚರಣೆ ಮುಂದುವರಿದಿದ್ದು, ಹೆಚ್ಚಿನ ಮಾಹಿತಿ ನಿರೀಕ್ಷಿಸುತ್ತಿದ್ದೇವೆ' ಎಂದು ರಿಯಾಸಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಒಡಿಶಾ ದೋಣಿ ದುರಂತ ಸಾವಿನ ಸಂಖ್ಯೆ 8ಕ್ಕೆ ಏರಿಕೆ

ಭುವನೇಶ್ವರ (ಪಿಟಿಐ): ಒಡಿಶಾದ ಝಾರ್ಸುಗುಡ ಜಿಲ್ಲೆಯ ಮಹಾನದಿಯಲ್ಲಿ ಶುಕ್ರವಾರ ದೋಣಿ ಮಗುಚಿಬಿದ್ದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ದೋಣಿ ಮಗುಚಿಬಿದ್ದ ಬೆನ್ನಲ್ಲೇ, ಕಾರ್ಯಾಚರಣೆ ನಡೆಸಿದ್ದ ಒಡಿಶಾದ ವಿಪತ್ತು ಕಾರ್ಯಪಡೆ ಮತ್ತು ಅಗ್ನಿಶಾಮಕದ ದಳದ ಸಿಬ್ಬಂದಿ, ಇಬ್ಬರ ಮೃತದೇಹಗಳನ್ನು ಹೊರತೆಗೆದಿದ್ದರು. ಶನಿವಾರ ಐವರು ಸ್ಕೂಬಾ ಡೈವರ್‌ಗಳ ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ, ನದಿಯ ಹೀರಾಕುಡ್ ಜಲಾಶಯದಿಂದ ಮತ್ತೆ ಮೂವರು ಮಕ್ಕಳು ಮತ್ತು ಮೂವರು ಮಹಿಳೆಯರು ಸೇರಿ ಆರು ಮಂದಿಯ ಮೃತದೇಹಗಳನ್ನು ಹೊರಕ್ಕೆ ತೆಗೆದಿದ್ದು, ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಒಡಿಶಾದ ಬಾರ್ಗಢ ಜಿಲ್ಲೆಯ ಪಥರ್ಸೇನಿ ಕುಡಾ ಎಂಬಲ್ಲಿರುವ ದೇವಸ್ಥಾನಕ್ಕೆ ಭೇಟಿ ನೀಡಿ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ನಡೆದಿತ್ತು. ದೋಣಿಯಲ್ಲಿ 50 ಮಂದಿ ಪ್ರಯಾಣಿಕರಿದ್ದರು. ಈ ಪೈಕಿ 40 ಪ್ರಯಾಣಿಕರನ್ನು ಸ್ಥಳೀಯ ಮೀನುಗಾರರು ಸುರಕ್ಷಿತವಾಗಿ ದಡ ಸೇರಿಸಿದ್ದರು.

ಚೀನಾದ ಕಂಪನಿಗಳಿಗೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನದ ಗುರಿನಿರ್ದೇಶಿತ ಕ್ಷಿಪಣಿ ಯೋಜನೆಗಳಿಗೆ ಅಗತ್ಯವಿರುವ ವಸ್ತುಗಳನ್ನು ಪೂರೈಸುವುದಕ್ಕೆ ಚೀನಾದ ಮೂರು ಕಂಪನಿಗಳು ಹಾಗೂ ಬೆಲಾರುಸ್‌ನ ಒಂದು ಕಂಪನಿಯ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.

ಚೀನಾದ ಷಿಯಾನ್ ಲಾಂಗ್ಡೆ ಟೆಕ್ನಾಲಜಿ ಡೆವಲಪ್‌ಮೆಂಟ್, ತಿಯಾಂಜಿನ್ ಕ್ರಿಯೇಟಿವ್ ಸೋರ್ಸ್ ಇಂಟರ್‌ನ್ಯಾಷನಲ್ ಟ್ರೇಡ್ ಹಾಗೂ ಗ್ರಾನ್‌ಪೆಕ್ಟ್ ಕಂಪನಿ ಲಿಮಿಟೆಡ್, ಬೆಲಾರುಸ್‌ನ ಮಿನ್ಸ್ಕ್ ವೀಲ್ ಟ್ರ್ಯಾಕ್ಟರ್ ಪ್ಲಾಂಟ್ ಕಂಪನಿಯ ಮೇಲೆ ನಿರ್ಬಂಧ ಹೇರಲಾಗಿದೆ.

ಈ ಕಂಪನಿಗಳು ಸಮೂಹನಾಶಕ ಶಸ್ತ್ರಾಸ್ತ್ರಗಳ ಪ್ರಸರಣಕ್ಕೆ ಕೊಡುಗೆ ನೀಡುವಂತಹ ಚಟುವಟಿಕೆಗಳಲ್ಲಿ ತೊಡಗಿವೆ ಎಂದು ಅಮೆರಿಕವು ಹೇಳಿದೆ.

ಪಾಕಿಸ್ತಾನದ ಪಾಲಿಗೆ ನಂಬಿಕಸ್ಥ ಸ್ನೇಹಿತ ಆಗಿರುವ ಚೀನಾ, ಆ ದೇಶಕ್ಕೆ ಶಸ್ತ್ರಾಸ್ತ್ರಗಳು ಹಾಗೂ ರಕ್ಷಣಾ ಉಪಕರಣಗಳನ್ನು ಪೂರೈಸುತ್ತಿದೆ. ಬೆಲಾರುಸ್‌ನ ಕಂಪನಿಯು ಪಾಕಿಸ್ತಾನಕ್ಕೆ, ದೀರ್ಘ ವ್ಯಾಪ್ತಿಯ ಗುರಿನಿರ್ದೇಶಿತ ಕ್ಷಿಪಣಿಗಳ ಯೋಜನೆಗೆ ಅಗತ್ಯವಿರುವ ಚಾಸಿಗಳನ್ನು ಪೂರೈಸಿದೆ.

ಸಂದೇಶ್‌ಖಾಲಿಗೆ ತೆರಳಿದ ಸಿಬಿಐ ತಂಡ

ಕೋಲ್ಕತ್ತ (ಪಿಟಿಐ): ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಭೂಕಬಳಿಕೆ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುವ ಸಲುವಾಗಿ 10 ಸದಸ್ಯರ ಸಿಬಿಐ ತಂಡವು ಪಶ್ಚಿಮ ಬಂಗಾಳದ ಸಂಘರ್ಷಪೀಡಿತ ಸಂದೇಶ್‌ಖಾಲಿಗೆ ಶನಿವಾರ ಭೇಟಿ ನೀಡಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಬಿಐ ತಂಡದ ಒಂದು ಗುಂಪು ಸಂದೇಶ್‌ಖಾಲಿಯ ಸುಂದರಿಖಾಲಿ ಪ್ರದೇಶಕ್ಕೆ ಭೇಟಿ ನೀಡಿ ಸಂತ್ರಸ್ತರ ಜೊತೆ ಚರ್ಚೆ ನಡೆಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿತು. ಮತ್ತೊಂದು ಗುಂಪು ಸಂದೇಶ್‌ಖಾಲಿ ಪೊಲೀಸ್ ಠಾಣೆಗೆ ತೆರಳಿ ತನಿಖೆ ಕುರಿತು ಸ್ಥಳೀಯ ಪೊಲೀಸರಿಂದ ಮಾಹಿತಿ ಪಡೆಯಿತು. ದೌರ್ಜನ್ಯ ಮತ್ತು ಭೂಕಬಳಿಕೆ ಆರೋಪಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ, ಸಮಗ್ರ ವರದಿ ನೀಡುವಂತೆ ಕಳೆದ ವಾರವಷ್ಟೇ ಕಲ್ಕತ್ತಾ ಹೈಕೋರ್ಟ್ ಸಿಬಿಐಗೆ ನಿರ್ದೇಶಿಸಿತ್ತು.

ಜೆಎನ್‌ಯು: ಎಡಸಂಘಟನೆಗಳು ದುರ್ಬಲ– ಕುಲಪತಿ ಶಾಂತಿಶ್ರೀ

ನವದೆಹಲಿ(ಪಿಟಿಐ): 'ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಪ್ರತಿಸ್ಪರ್ಧಿ ರಾಜಕೀಯ ಸಂಘಟನೆಗಳ ಪ್ರಾತಿನಿಧ್ಯ ಹೆಚ್ಚಿದ್ದು, ಎಡಪಕ್ಷಗಳು ದುರ್ಬಲಗೊಂಡಿವೆ. ಚುನಾವಣೆಯಲ್ಲಿ ಸ್ವತಂತ್ರವಾಗಿ ಗೆಲ್ಲಲಾಗದೆ, ಇನ್ನಿತರ ಸಂಘಟನೆಗಳೊಂದಿಗೆ ಕೈಜೋಡಿಸುತ್ತಿವೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಶಾಂತಿಶ್ರೀ ಡಿ. ಪಂಡಿತ್ ಹೇಳಿದ್ದಾರೆ.

'ನಾನು ಈ ಹಿಂದೆ ಇಲ್ಲಿನ ವಿದ್ಯಾರ್ಥಿಯಾಗಿದ್ದಾಗ, ಯಾವುದೇ ರಾಜಕೀಯ ಪಕ್ಷಕ್ಕೆ ಸಂಬಂಧಿಸದ 'ತಟಸ್ಥ ವಿದ್ಯಾರ್ಥಿಗಳ' ಸಂಘಟನೆಯಾದ ಫ್ರೀ ಥಿಂಕರ್ಸ್ ಗುಂಪಿನ ಪ್ರತಿನಿಧಿಯಾಗಿ ಎಡ ಪಕ್ಷಗಳ ವಿರುದ್ಧ ಸ್ಪರ್ಧಿಸುತ್ತಿದ್ದೆ' ಎಂದಿದ್ದಾರೆ.

'ಈಚೆಗಷ್ಟೇ ನಡೆದ ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸುಮಾರು 1,500 ನೋಟಾ ಮತಗಳು ಚಲಾವಣೆಯಾಗಿವೆ. ಇದು ವಿದ್ಯಾರ್ಥಿಗಳು ಎಡ ಅಥವಾ ಬಲದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿಲ್ಲ ಎಂಬುದನ್ನು ಬಿಂಬಿಸಿದೆ' ಎಂದು ಪಿಟಿಐ ಸಂಪಾದಕರಿಗೆ ನೀಡಿದ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

'ಒಂದು ಕಾಲದಲ್ಲಿ ಜೆಎನ್‌ಯು ಕ್ಯಾಂಪಸ್ ಎಡಪಂಥೀಯ ಸಂಘಟನೆಗಳ ಪ್ರಾಬಲ್ಯ ಹೊಂದಿತ್ತು. ಆದರೆ, ಇದೀಗ ಬದಲಾದ ಕಾಲಘಟ್ಟದಲ್ಲಿ ಆರ್‌ಎಸ್‌ಎಸ್‌ನ ಅಂಗಸಂಸ್ಥೆ ಎಬಿವಿಪಿ, ಕಾಂಗ್ರೆಸ್ ಬೆಂಬಲಿತ ಎನ್‌ಎಸ್‌ಯುಐ, ಆರ್‌ಜೆಡಿ ಸೇರಿದಂತೆ ಇನ್ನಿತರೆ ಪಕ್ಷಗಳ ರಾಜಕೀಯ ಸಂಘಟನೆಗಳು ನೆಲೆ ಕಂಡುಕೊಂಡಿವೆ' ಎಂದರು.

'ಅಖಿಲ ಭಾರತ ವಿದ್ಯಾರ್ಥಿ ಸಂಘ (ಎಐಎಸ್‌ಎ), ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಫೆಡೆರೇಷನ್ (ಡಿಎಸ್‌ಎಫ್), ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಹಾಗೂ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್‌ಎಫ್) ಒಳಗೊಂಡ ಎಡಪಂಥೀಯ ಸಂಘಟನೆಗಳ ಒಕ್ಕೂಟವು ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಎಪಿಎಸ್‌ಎ ಜೊತೆ ಚುನಾವಣೆಗೆ ಸ್ಪರ್ಧಿಸಿ, ತನ್ನ ಪ್ರತಿಸ್ಪರ್ಧಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಅಭ್ಯರ್ಥಿಗಳನ್ನು ಸೋಲಿಸಿದೆ' ಎಂದು ಅವರು ಹೇಳಿದರು.

'ವಿದ್ಯಾರ್ಥಿ ಸಂಘಟನೆಯ ಚುಕ್ಕಾಣಿ ಎಬಿವಿಪಿ ತೆಕ್ಕೆಗೆ ಹೋಗುವುದನ್ನು ತಡೆಯಲಿಕ್ಕಾಗಿಯೇ ಎಡಪಂಥೀಯ ಸಂಘಟನೆಗಳು ಒಟ್ಟಾಗಿ ಸ್ಪರ್ಧಿಸಿದ್ದವು. ಕೊನೆಯ ಕ್ಷಣದಲ್ಲಿ ಬಿಎಪಿಎಸ್‌ಎ ಅಭ್ಯರ್ಥಿಯನ್ನು ಬೆಂಬಲಿಸಿದವು. ಈ ಹಿಂದೆ ಎಸ್‌ಎಫ್‌ಐ, ಎಐಎಸ್‌ಎಫ್ ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದವು. ಇದೀಗ ಗೆಲ್ಲಲಿಕ್ಕಾಗಿ ಎಡಪಕ್ಷಗಳು 10–12 ಗುಂಪುಗಳ ಮೈತ್ರಿಯನ್ನು ಹೊಂದಬೇಕಿದೆ. ಕ್ಯಾಂಪಸ್‌ನಲ್ಲಿ ಎಡಪಂಥವು ದುರ್ಬಲಗೊಳ್ಳುತ್ತಿದೆ' ಎಂದು ಶಾಂತಿಶ್ರೀ ಅಭಿಪ್ರಾಯಪಟ್ಟಿದ್ದಾರೆ.

ಮಿದುಳು ಸಂಬಂಧಿ ತೊಂದರೆಗಳು– ಚಿಕಿತ್ಸೆಯ ಗುಣಮಟ್ಟ ಹೆಚ್ಚಿಸುವ ಉದ್ದೇಶ

ರಾಷ್ಟ್ರೀಯ ಕಾರ್ಯಪಡೆ ರಚಿಸಿದ ಕೇಂದ್ರ

ಮುಖ್ಯಾಂಶಗಳು

- ಪ್ರತಿ ವರ್ಷ 90 ಲಕ್ಷ ಜನರು ಮಿದುಳು ತೊಂದರೆಯಿಂದ ಮೃತಪಡುತ್ತಿದ್ದಾರೆ
- ನಗರ ಪ್ರದೇಶಗಳ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಬಾಧಿತರು

ನವದೆಹಲಿ(ಪಿಟಿಐ): ಮಿದುಳಿಗೆ ಸಂಬಂಧಿಸಿದ ತೊಂದರೆಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹಿಡಿದು ಎಲ್ಲ ಹಂತದವರೆಗೆ ಲಭ್ಯವಿರುವ ಚಿಕಿತ್ಸೆಯ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಆರೋಗ್ಯ ಸಚಿವಾಲಯವು 'ರಾಷ್ಟ್ರೀಯ ಮಿದುಳು ಆರೋಗ್ಯ ಕಾರ್ಯಪಡೆ'ಯನ್ನು ರಚಿಸಿದೆ.



ಈ ಕುರಿತು ಸಚಿವಾಲಯ ಪ್ರಕಟಣೆ ಬಿಡುಗಡೆ ಮಾಡಿದೆ. ಮಿದುಳು ತೊಂದರೆಗೆ ಸಂಬಂಧಿಸಿ ಸಾರ್ವತ್ರಿಕವಾಗಿ ಉತ್ತಮ ಚಿಕಿತ್ಸೆ ಒದಗಿಸುವುದು ಇಂದಿನ ತುರ್ತು. ಸಂಭಾವ್ಯ ತೊಂದರೆಯನ್ನು ತಡೆಗಟ್ಟುವುದು, ಲಭ್ಯವಿರುವ ಚಿಕಿತ್ಸೆ ಹಾಗೂ ಮುಂಜಾಗ್ರತಾ ಕ್ರಮಗಳ ಬಗ್ಗೆ ಪ್ರಚಾರ ನಡೆಸುವುದು ಹಾಗೂ ಮಿದುಳಿನ ತೊಂದರೆಯಿಂದ ಗುಣಮುಖರಾದವರ ಪುನರ್ವಸತಿಗೆ ಕ್ರಮ ಕೈಗೊಳ್ಳುವ ಉದ್ದೇಶದಿಂದ ಈ ಕಾರ್ಯಪಡೆ ರಚಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಿದುಳು ಹಾಗೂ ನರವ್ಯೂಹಕ್ಕೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುವವರಿಗೆ ಉತ್ತಮ ಚಿಕಿತ್ಸೆ, ಪುನರ್ವಸತಿಗಾಗಿ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ವಿವಿಧ ವಿಷಯಗಳು ಕುರಿತು ಕಾರ್ಯಪಡೆಯು ಜುಲೈ 15ರ ಒಳಗಾಗಿ ವರದಿ ಸಲ್ಲಿಸಲಿದೆ ಎಂದೂ ಸಚಿವಾಲಯ ತಿಳಿಸಿದೆ.

ಜಾಗತಿಕವಾಗಿ, ಸಾವುಗಳಿಗೆ ಮಿದುಳಿನ ತೊಂದರೆಯೇ ಎರಡನೇ ಪ್ರಮುಖ ಕಾರಣವಾಗಿದ್ದು, ಪ್ರತಿ ವರ್ಷ 90 ಲಕ್ಷದಷ್ಟು ಜನರು ಈ ಸಮಸ್ಯೆಯಿಂದ ಸಾವಿಗೀಡಾಗುತ್ತಿದ್ದಾರೆ ಎಂದು ತಿಳಿಸಿದೆ.

ಭಾರತದಲ್ಲಿ ಕಳೆದ ಮೂರು ದಶಕಗಳಲ್ಲಿ ಕೈಗೊಂಡ ಅಧ್ಯಯನಗಳ ಪ್ರಕಾರ, ಪಾರ್ಶ್ವವಾಯು, ಅಪಸ್ಮಾರ, ತಲೆನೋವು, ಪಾರ್ಕಿನ್‌ಸನ್ಸ್ ಕಾಯಿಲೆ, ಬುದ್ಧಿಮಾಂದ್ಯದಂತಹ ತೊಂದರೆಗಳು ನಗರ ಪ್ರದೇಶದಲ್ಲಿ ವಾಸಿಸುತ್ತಿರುವವರಲ್ಲಿಯೇ ಹೆಚ್ಚಾಗಿ ಕಂಡುಬಂದಿವೆ.

ಸಾಮಾಜಿಕ–ಆರ್ಥಿಕ ಸ್ಥಿತಿ, ವಯೋಮಾನ, ಭೌಗೋಳಿಕತೆ ಹಾಗೂ ಲಿಂಗತ್ವದಂತಹ ಕಾರಣಗಳಿಂದಾಗಿ ಆರೋಗ್ಯಸೇವೆಗೆ ಸಂಬಂಧಿಸಿದ ರಾಷ್ಟ್ರೀಯ ಕಾರ್ಯಕ್ರಮದ ಲಾಭ ಎಲ್ಲರಿಗೂ ಸಿಗುತ್ತಿಲ್ಲ ಎಂದೂ ಸಚಿವಾಲಯ ತಿಳಿಸಿದೆ.

ಕರ್ನಾಟಕ ಉಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು-01

ಹೆಚ್‌ಸಿಸಿ ಸಂ. 03/2024 ದಿನಾಂಕ : 18.04.2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ಅಧೀನ ನ್ಯಾಯಾಲಯಗಳಿಗೆ ಒಟ್ಟು 330 ಸಂಖ್ಯೆಗಳ ಬ್ಯಾಟರಿಗಳನ್ನು ಬೈ ಬ್ಯಾಕ್ ಆಫರ್ (buyback offer)ನಲ್ಲಿ ಖರೀದಿಸಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರನ್ನು e-Procurement Portal ಮೂಲಕ ಆಹ್ವಾನಿಸಲಾಗಿದೆ. ಟೆಂಡರನ್ನು **ದಿನಾಂಕ: 03.05.2024ರ ಸಂಜೆ 4.00 ಗಂಟೆಯೊಳಗೆ** ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in/#/portal/searchTender/live** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

(ಎನ್.ಜಿ. ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ./28/ಕೆಎಸ್‌ಎಂಸಿಎ/2024-25

‘ಕೈ’ ಸರ್ಕಾರಕ್ಕೆ ಭ್ರಷ್ಟಾಚಾರದ್ದೇ ಧ್ಯಾನ

ವಿಜಯ ಸಂಕಲ್ಪ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರಕ್ಕೆ ಭ್ರಷ್ಟಾಚಾರದ್ದೇ ಧ್ಯಾನ. ಜನರ ಸಮಸ್ಯೆಗಳ ಪರಿಹಾರದತ್ತ ಗಮನವೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ನಗರದ ಅರಮನೆ ಮೈದಾನದಲ್ಲಿ ಶನಿವಾರ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ‘ಬೆಂಗಳೂರನ್ನು ಅತ್ಯಂತ ಸುಂದರ ನಗರವನ್ನಾಗಿ ನಿರ್ಮಿಸುವ ಕನಸು ನಾಡಪ್ರಭು ಕೆಂಪೇಗೌಡ ಅವರದ್ದಾಗಿತ್ತು. ‘ಟೆಕ್ ಸಿಟಿ’ (ತಂತ್ರಜ್ಞಾನ ನಗರ) ಆಗಿದ್ದ ಬೆಂಗಳೂರನ್ನು ಕಾಂಗ್ರೆಸ್ ಸರ್ಕಾರವು ಟ್ಯಾಂಕರ್ ಸಿಟಿ ಮಾಡಿದೆ. ಇಡೀ ನಗರ ಈಗ ಟ್ಯಾಂಕರ್ ಮಾಫಿಯಾದ ಕೈಯಲ್ಲಿ ಸಿಲುಕಿದೆ’ ಎಂದರು.

‘ಅಲ್ಪ ಅವಧಿಯಲ್ಲಿ ಇಲ್ಲಿನ ಪರಿಸ್ಥಿತಿ ಬಿಗಡಾಯಿಸಿದೆ. ಕೃಷಿ, ನಗರ ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್‌ನಲ್ಲಿ ಒದಗಿಸುವ ಅನುದಾನ ಕಡಿತ ಮಾಡಲಾಗಿದೆ. ಕೇಂದ್ರ ಸರ್ಕಾರದ ಯೋಜನೆಗಳು ಮಾತ್ರ ಬೆಂಗಳೂರಿನಲ್ಲಿ ವೇಗವಾಗಿ ಅನುಷ್ಠಾನಗೊಳ್ಳುತ್ತಿವೆ’ ಎಂದು ಹೇಳಿದರು.

2014ರ ಮೊದಲು ಬೆಂಗಳೂರಿನಲ್ಲಿ 17 ಕಿ.ಮೀ. ಉದ್ದದ ಮೆಟ್ರೊ ರೈಲು ಮಾರ್ಗ ಇತ್ತು. ಈಗ ಅದು 70 ಕಿ.ಮೀ.ಗೆ ವಿಸ್ತರಿಸಿದೆ. ಹಳದಿ ಮಾರ್ಗವೂ ಶೀಘ್ರದಲ್ಲಿ ಬಳಕೆಗೆ ಲಭ್ಯವಾಗಲಿದೆ. ಉಪನಗರ ರೈಲು ಯೋಜನೆಯು ಬೆಂಗಳೂರಿನ ಸಂಚಾರ ಸಮಸ್ಯೆಗೆ ಪರಿಹಾರ ನೀಡಲಿದೆ. ಇದೆಲ್ಲವೂ ಸಾಧ್ಯವಾಗಿರುವುದು ಹತ್ತು ವರ್ಷಗಳ ಎನ್‌ಡಿಎ ಸರ್ಕಾರದ ಆಡಳಿತದಿಂದ ಎಂದರು.

ಎನ್‌ಡಿಎ ಸರ್ಕಾರವು ಕರ್ನಾಟಕದ ರಾಗಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವಕಾಶ ಕಲ್ಪಿಸುವ ಗುರಿಯನ್ನು ಹೊಂದಿದೆ. ಕೃಷಿಕರ ವಿರೋಧಿಯಾಗಿರುವ ಇಲ್ಲಿನ ಕಾಂಗ್ರೆಸ್ ಸರ್ಕಾರ ರೈತರಿಗೆ ನೀಡುತ್ತಿದ್ದ ₹4,000 ಸಹಾಯಧನಕ್ಕೆ ಕತ್ತರಿ ಹಾಕಿದೆ. ಆದರೆ, ಕೇಂದ್ರ ಸರ್ಕಾರ ಕೃಷಿ ಸಮ್ಮಾನ್ ಯೋಜನೆಯಡಿ ರೈತರಿಗೆ ನೀಡುತ್ತಿರುವ ₹ 6,000 ಪ್ರೋತ್ಸಾಹಧನ ನಿಲ್ಲುವುದಿಲ್ಲ ಎಂದರು.

ಜನರಿಗೆ ಭರಪೂರ ನೆರವು: ಎನ್‌ಡಿಎ ಸರ್ಕಾರದ ಅವಧಿಯಲ್ಲಿ ನಗರ ಪ್ರದೇಶಗಳ ಬಡವರಿಗಾಗಿ ಒಂದು ಕೋಟಿ ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ 84,000 ಮನೆಗಳು ಬೆಂಗಳೂರಿನ ಬಡವರಿಗೆ ದೊರಕಿವೆ. ಮಧ್ಯಮ ವರ್ಗದವರಿಗೆ ಮನೆ ನಿರ್ಮಾಣ ಸಾಲದ ಮೇಲಿನ ಬಡ್ಡಿ ಸಹಾಯಧನ ನೀಡಲಾಗುತ್ತಿದೆ. ಇದರಿಂದ ಮಧ್ಯಮ ವರ್ಗದ ಜನರಿಗೆ ₹ 60,000 ಕೋಟಿ ನೆರವು ದೊರಕಿದೆ ಎಂದು ಮೋದಿ ಹೇಳಿದರು.

ಎನ್‌ಡಿಎ ಅಧಿಕಾರಕ್ಕೆ ಬರುವ ಮುನ್ನ ಜನರ ಮೇಲೆ ಪರೋಕ್ಷ ತೆರಿಗೆಗಳ ಭಾರ ಅತಿಯಾಗಿತ್ತು. ಜಿಎಸ್‌ಟಿ ಜಾರಿಯಿಂದ ಪರೋಕ್ಷ ತೆರಿಗೆಗಳು ನಿಂತಿವೆ. ₹ 400ಕ್ಕೆ ಸಿಗುತ್ತಿದ್ದ ಎಲ್‌ಇಡಿ ಬಲ್ಬ್ ಈಗ ₹ 40ಕ್ಕೆ ಸಿಗುತ್ತಿದೆ. ಈಗ ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ ರೂಪಿಸಲಾಗಿದೆ. ಇದರಿಂದ ಸೌರಶಕ್ತಿ ಬಳಸಿಕೊಂಡು ಉಚಿತ ವಿದ್ಯುತ್ ಪಡೆಯುವ ಜತೆಯಲ್ಲೇ ವಿದ್ಯುತ್ ಮಾರಾಟ ಮಾಡುವ ಅವಕಾಶವೂ ಜನರಿಗೆ ಲಭಿಸಲಿದೆ ಎಂದರು.

ಸಾಮಾಜಿಕ, ಭೌತಿಕ ಮತ್ತು ಡಿಜಿಟಲ್ ಮೂಲಸೌಕರ್ಯ ಅಭಿವೃದ್ಧಿಗೆ ತಮ್ಮ ಸರ್ಕಾರ ವ್ಯಾಪಕ ಹೂಡಿಕೆ ಮಾಡಿದೆ. ದೇಶವನ್ನು ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್, ವಿದ್ಯುತ್ ಚಾಲಿತ ವಾಹನಗಳ ತಯಾರಿಕೆ ಮತ್ತು ತಂತ್ರಜ್ಞಾನದ ಹಬ್ ಮಾಡುವ ಗುರಿ ತಮ್ಮ ಮುಂದಿದೆ ಎಂದು ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಲೋಕಸಭಾ ಚುನಾವಣೆಯ ವಿಜಯ ಸಂಕಲ್ಪ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಜನರತ್ತ ಕೈ ಬೀಸಿದರು. ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ, ಬಿಜೆಪಿಯ ಶೋಭಾ ಕರಂದ್ಲಾಜೆ, ಡಾ. ಸಿ.ಎನ್‌.ಮಂಜುನಾಥ್, ಬಿ.ಎಸ್‌. ಯಡಿಯೂರಪ್ಪ, ಪಿ.ಸಿ, ಮೋಹನ್, ತೇಜಸ್ವಿ ಸೂರ್ಯ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಕರ್ನಾಟಕದಲ್ಲೂ ಬುಲೆಟ್ ರೈಲು ಓಡಲಿದೆ’

‘ಕರ್ನಾಟಕದಲ್ಲೂ ಬುಲೆಟ್ ರೈಲು ಓಡಲಿದೆ. ಅಮೆರಿಕದ ನಂತರ ಕರ್ನಾಟಕದಲ್ಲಿ ಬೋಯಿಂಗ್ ವಿಮಾನಗಳ ತಯಾರಿಕೆ ಆರಂಭವಾಗುತ್ತಿದೆ. ಎಚ್‌ಎಎಲ್ ಇಲ್ಲಿ ಏಷ್ಯಾದ ಅತಿದೊಡ್ಡ ಹೆಲಿಕಾಪ್ಟರ್ ತಯಾರಿಕಾ ಘಟಕವನ್ನು ಆರಂಭಿಸಿದೆ. ಇದೆಲ್ಲವೂ ತಮ್ಮ ಸರ್ಕಾರ ಕರ್ನಾಟಕಕ್ಕೆ ನೀಡಿರುವ ಕೊಡುಗೆ’ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.

‘ಎನ್‌ಡಿಎ ಮತ್ತು ಇಂಡಿ ಎರಡೂ ಮೈತ್ರಿಕೂಟಗಳ ಪ್ರಚಾರ ಅಭಿಯಾನ ನೋಡುತ್ತಿದ್ದೀರಿ. ಕಾಂಗ್ರೆಸ್ ಮತ್ತು ಇಂಡಿ ಮೈತ್ರಿಕೂಟಕ್ಕೆ ಮೋದಿ, ಮೋದಿ ಪರಿವಾರವೇ ಗುರಿ. ಆದರೆ, ಮೋದಿಯ ಗುರಿ 21ನೇ ಶತಮಾನದ ಭಾರತದ ವಿಕಾಸ. ಇಡೀ ಭಾರತವೇ ನನ್ನ ಪರಿವಾರ’ ಎಂದು ಪ್ರಧಾನಿ ಮೋದಿ ಹೇಳಿದರು. ‘ನೀವು ಪ್ರತಿ ಮನೆಗೂ ಹೋಗಿ ಮೋದಿ ನಿಮ್ಮೆಲ್ಲರಿಗೆ ನಮಸ್ಕಾರ ಹೇಳಿದ್ದಾರೆ ಎಂದು ಜನರಿಗೆ ತಿಳಿಸಿ. ಬಿಜೆಪಿ ಅಭ್ಯರ್ಥಿಗಳಾದ ಶೋಭಾ ಕರಂದ್ಲಾಜೆ, ತೇಜಸ್ವಿ ಸೂರ್ಯ ಪಿ.ಸಿ. ಮೋಹನ್ ಮತ್ತು ಡಾ.ಸಿ.ಎನ್. ಮಂಜುನಾಥ್ ಅವರನ್ನು ಗೆಲ್ಲಿಸಿಕೊಂಡು ಬನ್ನಿ’ ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

‘ನನ್ನನ್ನು ಕೆಳಗಿಳಿಸಲು ಸಂಚು’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ದೇಶ ಮತ್ತು ವಿದೇಶಗಳ ಕೆಲವು ಶಕ್ತಿಗಳು ಈ ಮೋದಿಯನ್ನು ಅಧಿಕಾರದಿಂದ ಕೆಳಕ್ಕೆ ಇಳಿಸಲು ಸಂಚು ನಡೆಸಿವೆ. ಆದರೆ ದೇಶದ ಮಹಿಳೆಯರ ಆಶೀರ್ವಾದ ನನಗೆ ಇದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನಗರ ಹೊರವಲಯದ ಚೊಕ್ಕಹಳ್ಳಿ ಬಳಿ ಶನಿವಾರ ಚಿಕ್ಕಬಳ್ಳಾಪುರ ಮತ್ತು ಕೋಲಾರ ಲೋಕಸಭಾ ಅಭ್ಯರ್ಥಿಗಳ ಪರವಾಗಿ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು ‘ಮೋದಿ ಗ್ಯಾರಂಟಿ’ ಹೆಸರಿನಲ್ಲಿ ಮತದಾರರ ಮನತಟ್ಟುವ ಪ್ರಯತ್ನ ಮಾಡಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಟೀಕಿಸುತ್ತಲೇ ‘ಮೋದಿ ಗ್ಯಾರಂಟಿ’ ಪ್ರಯೋಜನಗಳ ಬಗ್ಗೆ ಮಾತನಾಡಿದರು. ವಿಶೇಷವಾಗಿ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿದರು. ಬುಡಕಟ್ಟು ಮಹಿಳೆಯನ್ನು ರಾಷ್ಟ್ರಪತಿ ಮಾಡಿದ್ದೇವೆ ಎಂದರು.

‘ನಮ್ಮ ಹತ್ತು ವರ್ಷಗಳ ಆಡಳಿತದಲ್ಲಿ ಉನ್ನತ ಶಿಕ್ಷಣ ಪಡೆಯುವವರ ಪ್ರಮಾಣ ಹೆಚ್ಚಿದೆ. ಪರಿಶಿಷ್ಟ ಜಾತಿಯಲ್ಲಿ ಶೇ 44, ಪಂಗಡದಲ್ಲಿ ಶೇ 65 ಮತ್ತು ಹಿಂದುಳಿದ ವರ್ಗಗಳಲ್ಲಿ ಶೇ 45ರಷ್ಟು ಉನ್ನತ ಶಿಕ್ಷಣ ಪಡೆಯುವವರು ಹೆಚ್ಚಿದ್ದಾರೆ’ ಎಂದು ಅವರು ಪ್ರತಿಪಾದಿಸಿದರು.

‘ಪರಿಶಿಷ್ಟ ಜಾತಿ, ಪಂಗಡ, ಕೊಳೆಗೇರಿ ನಿವಾಸಿಗಳು ಮತ್ತು ಹಿಂದುಳಿದ ವರ್ಗಗಳ ಜನರೇ ನಮ್ಮ ಸರ್ಕಾರದ ಯೋಜನೆಗಳ ದೊಡ್ಡ ಫಲಾನುಭವಿಗಳು. ಈ ಸಮುದಾಯಗಳಿಗೆ ನೀರು, ವಿದ್ಯುತ್ ಸೇರಿದಂತೆ ಸೌಲಭ್ಯ ದೊರೆಯುತ್ತಿರಲಿಲ್ಲ. ನಮ್ಮ ಸರ್ಕಾರ 25 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತಿದೆ’ ಎಂದು ಹೇಳಿದರು.

ಬಡವರಿಗಾಗಿ ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ಮೂರು ಕೋಟಿ ಮನೆ ನಿರ್ಮಿಸಲಾಗುವುದು. ಆಯುಷ್ಮಾನ್ ಭಾರತ ಯೋಜನೆಯಡಿ ₹ 5 ಲಕ್ಷದವರೆಗೆ ಉಚಿತ ಚಿಕಿತ್ಸೆ, ಬಡವರಿಗೆ ಉಚಿತ ಪಡಿತರ, ಮುಂದಿನ ಐದು ವರ್ಷಗಳಲ್ಲಿ ಮೂರು ಕೋಟಿ ಹೆಣ್ಣು ಮಕ್ಕಳ ವಾರ್ಷಿಕ ಆದಾಯ ₹1 ಲಕ್ಷ ದಾಟುವಂತೆ ಮಾಡುವುದು ‘ಮೋದಿ ಗ್ಯಾರಂಟಿ’ ಎಂದರು.

‘ಗೌಡರ ಮಾರ್ಗದರ್ಶನದಲ್ಲಿ ಮುನ್ನಡೆಯುವೆ’

ಎಚ್.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಡಿ ಹೊಗಳಿದರೆ, ಮೋದಿ ಅವರು ದೇವೇಗೌಡರನ್ನು ಹೊಗಳಿದರು.

‘ಈ ವಯಸ್ಸಿನಲ್ಲಿ ಕರ್ನಾಟಕದ ಬಗ್ಗೆ ದೇವೇಗೌಡರಿಗೆ ಇರುವ ಕಾಳಜಿ, ಬದ್ಧತೆ ಅಪಾರವಾದುದು. ದೇಶದ ಹಿರಿಯ ಮತ್ತು ಅನುಭವಿ ರಾಜಕಾರಣಿಯಾದ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತೇವೆ’ ಎಂದು ಹೇಳಿದರು.

ಮೈಸೂರು ಜಿಲ್ಲೆಯ ಕೆ.ಆರ್‌.ನಗರದಲ್ಲಿ ಶನಿವಾರ ನಡೆದ ಮಂಡ್ಯ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರೈತ–ಸೈನಿಕರ ಚಿತ್ರಪಟ ನೀಡಲಾಯಿತು. ಪಕ್ಷದ ಮೈಸೂರು ಜಿಲ್ಲಾ ಗ್ರಾಮಾಂತರ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಮುಖಂಡ ಬಿ.ಎಸ್‌.ಶಿವಣ್ಣ, ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಸಚಿವ ಎನ್‌.ಚಲುವರಾಯಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಶಾಸಕ ಡಿ.ರವಿಶಂಕರ್ ಪಾಲ್ಗೊಂಡಿದ್ದರು

ಅಪ್ಪ-ಮಗ ಪ್ರಚಾರದ ಕೊನೆ ದಿನ ಅಳ್ತಾರೆ: ಸಿ.ಎಂ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ‘ಪ್ರಚಾರದ ಕಡೆಯ ದಿನ ಎಚ್.ಡಿ.ದೇವೇಗೌಡ ಹಾಗೂ ಕುಮಾರಸ್ವಾಮಿ ಇಬ್ಬರೂ ಅಳುತ್ತಾರೆ. ಅಳುವೇ ಅಪ್ಪ- ಮಕ್ಕಳ ಕೊನೆಯ ಅಸ್ತ್ರ. ಅವರ ಕಣ್ಣೀರಿಗೆ ಈ ಬಾರಿ ಮಂಡ್ಯ ಜನ ಕರಗುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ವ್ಯಂಗ್ಯವಾಡಿದರು.

ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿ, ‘ಜನರನ್ನು ನೋಡಿದರೆ ಸಾಕು ಇಬ್ಬರಿಗೂ ಅಳು ಬಂದುಬಿಡುತ್ತದೆ. ನಮಗ್ಯಾಕೆ ಬರುವುದಿಲ್ಲ? ನರೇಂದ್ರ ಮೋದಿಯಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯವನ್ನು ಒಂದು ದಿನವೂ ಪ್ರಶ್ನಿಸಲಿಲ್ಲ. ಬೆಳೆ ನಷ್ಟ ಪರಿಹಾರ ಕೊಡಿ ಎಂದು ಧೈರ್ಯದಿಂದ ಕೇಳಲಿಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ಮೈತ್ರಿ ಪಕ್ಷದಲ್ಲಿ ಕುರುಬರಿಗೆ, ಮುಸ್ಲಿಮರಿಗೆ ಟಿಕೆಟ್ ಕೊಟ್ಟಿಲ್ಲ, ಪ್ರತಾಪ್ ಸಿಂಹ, ಸಿ.ಟಿ.ರವಿ, ಡಿ.ವಿ. ಸದಾನಂದಗೌಡ ಸೇರಿ ಹಲವು ಒಕ್ಕಲಿಗರಿಗೆ ಅನ್ಯಾಯ ಮಾಡಿದ್ದಾರೆ. ನಾವು ಇಬ್ಬರು ಕುರುಬರಿಗೆ, ಒಬ್ಬರು ಮುಸ್ಲಿಮರಿಗೆ, 8 ಒಕ್ಕಲಿಗರಿಗೆ ಟಿಕೆಟ್ ಕೊಟ್ಟಿದ್ದೇವೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ ‘ತನೆ ಹೊತ್ತ ಹೆಣ್ಣು ಮಗಳನ್ನು ಬಿಜೆಪಿಗೆ ಮಾರಾಟ ಮಾಡಿ, ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಭಾವನನ್ನು ಬಿಜೆಪಿಯಿಂದ ನಿಲ್ಲಿಸಿ, ಮಂಡ್ಯಕ್ಕೆ ಬಂದು ಜೆಡಿಎಸ್‌ಗೆ ಮತ ಕೇಳುತ್ತಿರುವ ಕುಮಾರಸ್ವಾಮಿಗೆ ಏನನ್ನಬೇಕು? ಮಗ, ಅಳಿಯ, ಮೊಮ್ಮಗನಿಗಾಗಿ ಪಕ್ಷವನ್ನೇ ಬಿಜೆಪಿ ಜೊತೆ ಸೇರಿಸಿರುವ ದೇವೇಗೌಡರಿಗೆ ಏನನ್ನಬೇಕು’ ಎಂದು ಪ್ರಶ್ನಿಸಿದರು.

> **ಅಧಿಕಾರ ಇದ್ದಾಗಲೇ ಕುಮಾರಸ್ವಾಮಿ ಮಂಡ್ಯಕ್ಕೆ ಏನೂ ಮಾಡಲಿಲ್ಲ. ಅವನದ್ದು ಬರೀ ಖಾಲಿ ಟ್ರಂಕ್. ಅದರಿಂದ ಶಬ್ದವಷ್ಟೇ ಬರುತ್ತದೆ**
> **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ

‘ಜನರಿಗೆ ಬಿಜೆಪಿ–ಜೆಡಿಎಸ್ ಸರ್ಕಾರ ಬೇಕಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಜನರು ಬಿಜೆಪಿ– ಜೆಡಿಎಸ್ ಸಮ್ಮಿಶ್ರ ಸರ್ಕಾರವನ್ನು ಬಯಸುತ್ತಿದ್ದಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಇಲ್ಲಿ ಶನಿವಾರ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್‌ಗೆ ಅಭಿವೃದ್ಧಿ ಬೇಕಿಲ್ಲ. ಹೀಗಾಗಿ ನಮ್ಮ ಸಮ್ಮಿಶ್ರ ಸರ್ಕಾರ ಬರಲಿ ಎಂಬ ಬಯಕೆ ಜನರಲ್ಲಿದೆ’ ಎಂದರು.

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಒಂದು ಸ್ಥಾನ ಗಳಿಸುವುದು ಕೂಡ ಕಷ್ಟವಿದೆ. ಹಿಂದಿನ ಚುನಾವಣೆಯಲ್ಲಿ ಗೆದ್ದ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಎಲ್ಲ 28 ಕ್ಷೇತ್ರಗಳಲ್ಲೂ ಗೆಲ್ಲಲಿದೆ. ಕಾಂಗ್ರೆಸ್ ಯಾವ ಕ್ಷೇತ್ರದಲ್ಲಿ ಗೆಲ್ಲುತ್ತದೆ ಎಂಬುದನ್ನು ಆ ಪಕ್ಷದ ನಾಯಕರು ಹೇಳಲಿ ಎಂದು ಸವಾಲು ಹಾಕಿದರು.



ಯಡಿಯೂರಪ್ಪ

‘ಕೇಂದ್ರದಿಂದ ಅನ್ಯಾಯ ಆಗಿದೆ ಎಂದು ಆರೋಪ ಮಾಡುತ್ತಿದ್ದಾರೆ. ಏನು ಅನ್ಯಾಯ ಆಗಿದೆ ಎಂಬುದನ್ನು ಒಂದೆರಡು ಉದಾಹರಣೆ ಸಹಿತ ಹೇಳಿ. ಹಣ, ಹೆಂಡ, ತೋಳ್ಬಲ ಮತ್ತು ಜಾತಿಯ ವಿಷ ಬೀಜ ಬಿತ್ತಿ ಚುನಾವಣೆ ಗೆಲ್ಲಲು ಹೊರಟಿದ್ದಾರೆ’ ಎಂದು ಟೀಕಿಸಿದರು.

‘ಇನ್ನು ಐದಾರು ದಿನಗಳ ಕಾಲ ನೀವೆಲ್ಲರೂ ವಿಶ್ರಾಂತಿ ಪಡೆಯದೆ ಕೆಲಸ ಮಾಡಬೇಕು. ನಿಮ್ಮ ನಂಬಿಕೆಯ ಮೇಲೆ 28 ಸ್ಥಾನಗಳನ್ನೂ ಗೆದ್ದು ದೆಹಲಿಗೆ ಕಳಿಸುತ್ತೇವೆ ಎಂಬ ಭರವಸೆಯನ್ನು ಮೋದಿಯವರಿಗೆ ನೀಡುತ್ತೇನೆ’ ಎಂದರು.

‘ಮಂಡ್ಯ ಪ್ರಚಾರಕ್ಕೆ ಆಹ್ವಾನ ಬಂದಿಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನಾನು ಎಲ್ಲಿ ಪ್ರಚಾರ ನಡೆಸಬೇಕೆಂದು ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ಅವರು ಸೂಚಿಸಿದ ಕಡೆಯಲ್ಲಾ ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸುತ್ತಿದ್ದೇನೆ. ಮಂಡ್ಯದಲ್ಲಿ ಪ್ರಚಾರಕ್ಕೆ ಆಹ್ವಾನ ಬಂದಿಲ್ಲ. ನನ್ನ ಬೆಂಬಲಿಗರು ಅಲ್ಲಿ ಎನ್‌ಡಿಎ ಪರ ಪ್ರಚಾರ ನಡೆಸಿದ್ದಾರೆ. ಒಳ ಏಟಿನ ಪ್ರಶ್ನೆಯೇ ಇಲ್ಲ’ ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಮಂಡ್ಯದಲ್ಲಿ ಕುಮಾರಸ್ವಾಮಿ ಪರ ಪ್ರಚಾರದಲ್ಲಿ ಪಾಲ್ಗೊಳ್ಳದಿರುವ ಕುರಿತು ಶನಿವಾರ ನಗರದ ಸುದ್ದಿಗೋಷ್ಠಿಯಲ್ಲಿ ಎದುರಾದ ಪ್ರಶ್ನೆಗೆ ಹೀಗೆ ಪ್ರತಿಕ್ರಿಯಿಸಿದ ಅವರು, ‘ಗೆದ್ದ ಕ್ಷೇತ್ರವನ್ನೇ ಅವರಿಗೆ ಬಿಟ್ಟುಕೊಟ್ಟಿದ್ದೇನೆ. ಅದಕ್ಕಿಂತ ದೊಡ್ಡ ಸಹಕಾರ ಏನು ಬೇಕು’ ಎಂದೂ ಪ್ರಶ್ನಿಸಿದರು. ‘ಎರಡು ವಾರದ ಹಿಂದೆ ಕುಮಾರಸ್ವಾಮಿ ನಮ್ಮ ಮನೆಗೆ ಬಂದು ಸಹಕಾರ ಕೇಳಿದ್ದರು. ನಾನು ಬಿಜೆಪಿಗೆ ಸೇರ್ಪಡೆಗೊಳ್ಳುವುದಲ್ಲದೇ ಮನಃಪೂರ್ವಕವಾಗಿ ನನ್ನ ಸ್ಥಾನವನ್ನೇ ಬಿಟ್ಟು ಕೊಟ್ಟಿದ್ದೇನೆ. ನನ್ನ ಈ ನಿರ್ಧಾರವು ಎನ್‌ಡಿಎ ಅಭ್ಯರ್ಥಿ ಪರವಾಗಿಯೇ ಇದೆ. ಅದನ್ನು ಅನುಮಾನಿಸುವ ಅಗತ್ಯವಿಲ್ಲ’ ಎಂದರು.

ಸುಮಲತಾ ಅಂಬರೀಷ್

‘ದರ್ಶನ್ ಸಣ್ಣ ಮಗುವಲ್ಲ, ಅವರು ನಿರ್ಧಾರ ಕೈಗೊಳ್ಳುವಲ್ಲಿ ಸ್ವತಂತ್ರರು. ಕಳೆದ ಬಾರಿಯೂ ಬೇರೆ ಪಕ್ಷದ ಪರ ಪ್ರಚಾರ ಮಾಡಿದ್ದರು. ನಾನು ಸ್ಪರ್ಧಿಸಿದ್ದರೆ ನನ್ನ ಪರ ಪ್ರಚಾರ ಮಾಡುತ್ತಿದ್ದರು’ ಎಂದರು.

‘ಬಿಜೆಪಿ ಪರ ಪ್ರಚಾರ ನಡೆಸುವ ವಾತಾವರಣ ಇಲ್ಲ’

ಪ್ರಜಾವಾಣಿ ವಾರ್ತೆ

ಶಿರಸಿ: ‘ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮತ ಯಾಚಿಸುವ ವಾತಾವರಣ ಇಲ್ಲ. ಅವರಿಗೆ ನಾವು ಬೇಡ ಆಗಿರುವಾಗ, ಅವರ ಪರ ಯಾಕೆ ಮತ ಕೇಳಬೇಕು?’ ಎಂದು ಬಿಜೆಪಿ ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

'ಜಿಲ್ಲಾ ಪ್ರಚಾರದ ಜಾಹೀರಾತುಗಳಲ್ಲಿ ನನ್ನ ಹಾಗೂ ಶಾಸಕ ದಿನಕರ ಶೆಟ್ಟಿ ಅವರ ಚಿತ್ರಗಳನ್ನು ತೆಗೆಯಲಾಗಿದೆ. ನನಗೆ ಆಗುತ್ತಿರುವ ಸಮಸ್ಯೆಗಳನ್ನು ವರಿಷ್ಠರಿಗೆ ತಿಳಿಸಿದರೂ ಸ್ಪಂದನೆ ಸಿಕ್ಕಿಲ್ಲ. ನೀರು ಹರಿದು ಹೋದ ಬಳಿಕ ಕಟ್ಟೆ ಕಟ್ಟಿ ಏನು ಪ್ರಯೋಜನ? ನೀರು ನಿಲ್ಲಬೇಕೆಂದರೆ, ಮೊದಲೇ ಕಟ್ಟೆ ಹಾಕಬೇಕು. ಹರಿದ ಮೇಲೆ ಕಟ್ಟೆ ಮಾತ್ರ ಉಳಿಯುತ್ತೆ. ಈಗ ಕ್ಷೇತ್ರದಲ್ಲಿ ಬಿಜೆಪಿ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು. ‘ಕ್ಷೇತ್ರದಲ್ಲಿ ಹೆಬ್ಬಾರ್ ಮಾಡಬಾರದ್ದನ್ನು ಮಾಡಿದರು ಎಂದವರಿಗೆ ಸರಿಯಾಗಿ ಉತ್ತರಿಸಿದ್ದೇನೆ. ಅವರ ಸ್ಪಷ್ಟೀಕರಣದ ನಿರೀಕ್ಷೆಯಲ್ಲಿದ್ದೇನೆ.

ರಾಜ್ಯ, ರಾಷ್ಟ್ರೀಯ ನಾಯಕರು ಪ್ರಚಾರಕ್ಕೆ ಬಂದಾಗ, ಸಭೆಯಲ್ಲಿ ಭಾಗವಹಿಸಬೇಕೆ ಅಥವಾ ಬೇಡವೇ ಎಂಬ ಯೋಚಿಸುವೆ’ ಎಂದರು.



ಶಿವರಾಮ ಹೆಬ್ಬಾರ್

ಪುತ್ರ ವಿವೇಕ ಹೆಬ್ಬಾರ್ ಕಾಂಗ್ರೆಸ್ ಸೇರಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, ‘ರಾಜಕಾರಣದಲ್ಲಿ ಇವೆಲ್ಲ ಸಾಮಾನ್ಯ. ಯಾರು ಯಾವ ಪಕ್ಷದಲ್ಲಾದರೂ ಇರಬಹುದು. ರಾಜಕಾರಣದಲ್ಲಿ ಇಂಥ ಘಟನೆಗಳು ನಡೆಯುತ್ತ ಇರುತ್ತವೆ. ಮನೆಯಲ್ಲಿ ಕೂತರೆ ಯಾರೂ ಏನೂ ತಂದುಕೊಡಲ್ಲ. ಶ್ರಮಪಟ್ಟು ದುಡಿದು, ಎತ್ತರಕ್ಕೆ ಹೋಗಬೇಕು’ ಎಂದರು.

ಕ್ಷೇತ್ರ ಸಮೀಕ್ಷೆ

ಜಾತಿಯ ಕಾವಲಿಯಲ್ಲಿ ಬೇಯುತ್ತಿದೆ ಕಣ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 76.78%



ಡಾ.ಕೆ.ಸುಧಾಕರ್ (ಬಿಜೆಪಿ)

ಸಚಿವನಾಗಿ ಎರಡೂ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಸಂಸದನಾದರೆ ಬಯಲು ಸೀಮೆಗೆ ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸುವುದು ಖಚಿತ

- 👍 ಬಿಜೆಪಿ ಸರ್ಕಾರದಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಕೆಲಸ
- 👍 ಜೆಡಿಎಸ್ ಜೊತೆಗಿನ ಮೈತ್ರಿಯ ಬೆಸುಗೆ
- 👎 ಕೋವಿಡ್ ಸಮಯದಲ್ಲಿ ಭ್ರಷ್ಟಾಚಾರದ ಆರೋಪ
- 👎 ಅಧಿಕಾರದಲ್ಲಿ ಇದ್ದಾಗ ವಿರೋಧಿಗಳ ಸೃಷ್ಟಿ

ಎಂ.ಎಸ್‌.ರಕ್ಷಾ ರಾಮಯ್ಯ (ಕಾಂಗ್ರೆಸ್)

ಮತದಾರರು ಆಶೀರ್ವಾದ ಮಾಡಿದರೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಸಂಸತ್ತಿನಲ್ಲಿ ಧ್ವನಿ ಎತ್ತುವೆ

- 👍 ಬಲಿಜ ಸೇರಿದಂತೆ ಅಹಿಂದ ಮತಗಳ ಬಲ. ಬೆನ್ನಿಗೆ ನಿಂತ ಸಿ.ಎಂ ಮತ್ತು ಡಿ.ಸಿ.ಎಂ
- 👍 ಕಾಂಗ್ರೆಸ್ ಶಾಸಕರ ಬಲ, ಗ್ಯಾರಂಟಿಗಳ ಅಲೆ
- 👎 ಅನುಭವದ ಕೊರತೆ. ತಂದೆ ಸೀತಾರಾಮ ಅವರಿಂದ ನಿರ್ವಹಣೆ
- 👎 ಟಿಕೆಟ್ ವಂಚಿತರ ಮುನಿಸು, ಒಳ ಏಟಿನ ಭೀತಿ



ಶಾಸಕರ ಬಲಾಬಲ

- ಕಾಂಗ್ರೆಸ್ 5
- ಬಿಜೆಪಿ 2
- ಪಕ್ಷೇತರ 1

1. ಬಾಗೇಪಲ್ಲಿ
2. ಚಿಕ್ಕಬಳ್ಳಾಪುರ
3. ದೇವನಹಳ್ಳಿ
4. ಹೊಸಕೋಟೆ
5. ಯಲಹಂಕ
6. ನೆಲಮಂಗಲ
7. ದೊಡ್ಡಬಳ್ಳಾಪುರ
8. ಗೌರಿಬಿದನೂರು

ಕ್ಷೇತ್ರವನ್ನು ಕಾಡುವ ವಿಷಯಗಳು

- ಶಾಶ್ವತವಾದ ನೀರಾವರಿ ಯೋಜನೆಗಳಿಲ್ಲ
- ಶಂಕುಸ್ಥಾಪನೆಯಾಗಿ ದಶಕವಾದರೂ ಬಾರದ ಎತ್ತಿನಹೊಳೆ ನೀರು
- ಎಚ್.ಎನ್.ವ್ಯಾಲಿ ಯೋಜನೆ ನೀರು ಮೂರು ಹಂತದ ಶುದ್ಧೀಕರಣವಿಲ್ಲ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಇನ್ನೂ ನನಸಾಗದ ಶಾಶ್ವತ ನೀರಾವರಿ ಯೋಜನೆಯ ಕನಸು, ಕಾಂಗ್ರೆಸ್ ಗ್ಯಾರಂಟಿ, ಮೋದಿ ಅಲೆ, ಭ್ರಷ್ಟಾಚಾರ, ವ್ಯಕ್ತಿಗತ ನಿಂದನೆ– ಹೀಗೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಣವು ನಾನಾ ವಿಚಾರಗಳ ಮೂಲಕ ಕದಡಿದೆ.

ಈ ಎಲ್ಲಕ್ಕಿಂತ ತುಸು ಹೆಚ್ಚು ಪ್ರವಹಿಸಿರುವುದು ಜಾತಿ. ಜಾತಿ ಕಾವಲಿಯಲ್ಲಿ ರಾಜಕಾರಣ ಜೋರಾಗಿಯೇ ಬೇಯುತ್ತಿದೆ. ಮತ ವಿಭಜನೆ ಮತ್ತು ಧ್ರುವೀಕರಣವನ್ನು ಹದಗೊಳಿಸುತ್ತಿದೆ.

ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿ ಮಾಜಿ ಸಚಿವ ಡಾ.ಕೆ.ಸುಧಾಕರ್ ಮತ್ತು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ನಡುವೆಯೇ ಜಿದ್ದಾಜಿದ್ದು. ಸಿಪಿಎಂನ ಎಂ.ಪಿ.ಮುನಿವೆಂಕಟಪ್ಪ ಸೇರಿದಂತೆ ಒಟ್ಟು 29 ಅಭ್ಯರ್ಥಿಗಳು ಕಣದಲ್ಲಿ ಇದ್ದಾರೆ.

ಆಂಧ್ರಪ್ರದೇಶ ಗಡಿಗೆ ಹೊಂದಿಕೊಂಡಿರುವ ಚೇಳೂರು ತಾಲ್ಲೂಕಿನಿಂದ ರಾಮನಗರ ಜಿಲ್ಲೆಯ ಸೋಲೂರಿನವರೆಗೆ ಕ್ಷೇತ್ರ ಹರಡಿದೆ. ಎಂಟೂ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೊಂದು ರೀತಿಯ ಸನ್ನಿವೇಶವಿದೆ.

ಚಿಕ್ಕಬಳ್ಳಾಪುರ

ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದ ತೀರಾ ಸಣ್ಣ ಪುಟ್ಟ ಸಮುದಾಯಗಳ ಅಭ್ಯರ್ಥಿಗಳು ದಾಖಲೆ ಅಂತರದಿಂದ ಗೆಲುವು ಸಾಧಿಸಿರುವ ಇತಿಹಾಸವಿದೆ. ಆದರೆ, ಈಗ ಆ ಸನ್ನಿವೇಶವಿಲ್ಲ.

ಸುಧಾಕರ್ ಒಕ್ಕಲಿಗ ಮತ್ತು ರಕ್ಷಾ ರಾಮಯ್ಯ ಬಲಿಜ ಸಮುದಾಯದವರಾಗಿದ್ದಾರೆ. ‘ನಮ್ಮವ’ ಎನ್ನುವ ಅಭಿಮಾನದ ಮತ ಬ್ಯಾಂಕ್ ಜೋರಾಗಿದೆ.

ಸಚಿವನಾಗಿದ್ದ ವೇಳೆ ಚಿಕ್ಕಬಳ್ಳಾಪುರಕ್ಕೆ ವೈದ್ಯಕೀಯ ಶಿಕ್ಷಣ ಕಾಲೇಜು, ಮಂಚೇನಹಳ್ಳಿ ತಾಲ್ಲೂಕು ರಚನೆ ಸೇರಿದಂತೆ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಜಾತಿ ರಾಜಕೀಯ ಮಾಡಿಲ್ಲ. ಲೋಕಸಭಾ ಕ್ಷೇತ್ರಕ್ಕೆ ‘ಚಿಕ್ಕಬಳ್ಳಾಪುರ ಮಾದರಿ’ ಅಭಿವೃದ್ಧಿ ವಿಸ್ತರಿಸುವೆ, ಮತ ನೀಡಿ ಎಂದು ಡಾ.ಕೆ.ಸುಧಾಕರ್ ಕೋರುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ರಚನೆ ರದ್ದುಗೊಳಿಸಿದ್ದನ್ನು ಸಹ ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ.

‘ಕೋವಿಡ್ ವೇಳೆ ಸುಧಾಕರ್ ಭ್ರಷ್ಟಾಚಾರ ನಡೆಸಿದ್ದಾರೆ. ಮತ್ತೆ ಭ್ರಷ್ಟಾಚಾರಕ್ಕೆ ಅವಕಾಶ ನೀಡಬೇಡಿ. ಚಿಕ್ಕಬಳ್ಳಾಪುರದಲ್ಲಿ ಇದು ಧರ್ಮ ಮತ್ತು ಅಧರ್ಮದ ನಡುವಿನ ಯುದ್ಧ. ನನಗೊಂದು ಅವಕಾಶ ಕೊಡಿ’ ಎಂದು ರಕ್ಷಾ ರಾಮಯ್ಯ ಮನವಿ ಮಾಡುತ್ತಿದ್ದಾರೆ.

ಕಾಂಗ್ರೆಸ್ ಬೇರುಗಳು ಕ್ಷೇತ್ರದಲ್ಲಿ ಗಟ್ಟಿಯಾಗಿವೆ. ಬಲಿಜ ಮತ್ತು ಅಹಿಂದ ಮತಗಳ ಧ್ರುವೀಕರಣ, ಶಾಸಕರ ಬಲ, ಗ್ಯಾರಂಟಿ ಯೋಜನೆಗಳು ‘ಕೈ’ ಹಿಡಿಯುತ್ತವೆ ಎನ್ನುವ ವಿಶ್ವಾಸ ಕಾಂಗ್ರೆಸ್‌ನದ್ದು.

ಕಳೆದ ಮೂರು ಲೋಕಸಭೆ ಚುನಾವಣೆಗಳಿಂದ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಬಿಜೆಪಿ ಬಲ ಹೆಚ್ಚಿಸಿಕೊಳ್ಳುತ್ತಲೇ ಮುನ್ನಡೆದಿದೆ. 2019ರ ಚುನಾವಣೆಯಲ್ಲಿ ಬಿ.ಎನ್.ಬಚ್ಚೇಗೌಡ ಮೂಲಕ ಕಮಲ ಮೊದಲ ಬಾರಿಗೆ ಅರಳಿತು.

ಮೇಲ್ನೋಟಕ್ಕೆ ಬಿಜೆಪಿ–ಜೆಡಿಎಸ್ ‘ಮೈತ್ರಿ’ಯ ಬೆಸುಗೆ ಗಟ್ಟಿಯಾಗಿದೆ. ನೆಲಮಂಗಲ, ದೇವನಹಳ್ಳಿ, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಉತ್ತಮ ನೆಲೆ ಇದೆ. ಆ ಕಾರಣದಿಂದ ಎಚ್.ಡಿ.ಕುಮಾರಸ್ವಾಮಿ ಗಮನ ಕೇಂದ್ರೀಕರಿಸಿ ಪ್ರಚಾರ ನಡೆಸಿರುವುದು ಬಿಜೆಪಿಗೆ ಅನುಕೂಲ. 2014ರ ಚುನಾವಣೆಯಲ್ಲಿ ಎಚ್‌ಡಿಕೆ ಜೆಡಿಎಸ್‌ನಿಂದ ಈ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ಬಹುಸಂಖ್ಯಾತ ಒಕ್ಕಲಿಗ ಮತಗಳ ಜತೆಗೆ ನಿರ್ಣಾಯಕರು ಎನಿಸಿರುವ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಮತಗಳ ಮೇಲೆ ಬಿಜೆಪಿ ಕಣ್ಣಿಟ್ಟಿದೆ.

ಪಕ್ಷ ಮತ್ತು ಸಮುದಾಯ ಎನ್ನುವ ಕಾರಣಕ್ಕೂ ಇಬ್ಬರೂ ಅಭ್ಯರ್ಥಿಗಳಿಗೆ ಇಡುಗಂಟು ಮತಗಳಿವೆ. ಆ ನಂತರದ ಗಳಿಕೆಯೇ ಗೆಲುವನ್ನು ನಿರ್ಧರಿಸುತ್ತದೆ. ❖

ಹೊರಗಿನ ಇಬ್ಬರಲ್ಲಿ ಹಿತವರಿಗೆ ಹುಡುಕಾಟ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ‘ಬರದಿಂದಾಗಿ ಬಿತ್ತಿದ ಶೇಂಗಾ ಜಮೀನಿನಲ್ಲಿಯೇ ಕಮರಿ ಹೋಯಿತು. ಕುರಿ, ಮೇಕೆಗಳಿಗೆ ಕುಡಿಯಲು ನೀರಿಲ್ಲದ ಸ್ಥಿತಿ. ಭದ್ರಾ ಮೇಲ್ದಂಡೆ ಯೋಜನೆ ಜಾರಿಗೊಂಡು, ನೀರಾವರಿ ಸೌಲಭ್ಯ ದೊರಕಲಿದೆ ಎಂಬ ರಾಜಕಾರಣಿಗಳು ನೀಡುವ ಆಶ್ವಾಸನೆಗೆ ಮರುಳಾಗಿ ಮತ ಹಾಕುತ್ತಲೇ ಇದ್ದೇವೆ. ವರ್ಷಗಳು ಕಳೆದರೂ ಜಮೀನಿನತ್ತ ನೀರು ಬರುತ್ತಿಲ್ಲ...’

ಚಳ್ಳಕೆರೆ ತಾಲ್ಲೂಕಿನ ಭರಮಸಾಗರದ ವೀರಭದ್ರಪ್ಪ ‘ಪ್ರಜಾವಾಣಿ’ ಎದುರು ಗೊಣಗುತ್ತಲೇ ತಮ್ಮ ಕುರಿಗಳಿಗೆ ಗದರಿದರು. ಉರಿ ಬಿಸಿಲಿನಲ್ಲಿ ಮೇವು ಅರಸಿ ದಿಕ್ಕು ತೋಚಿದತ್ತ ಹೆಜ್ಜೆ ಹಾಕುತ್ತಿದ್ದ ಕುರಿ ಮಂದೆಗೆ ನೀರುಣಿಸುವ ಧಾವಂತ ಅವರಲ್ಲಿತ್ತು.

ಬೇಸಿಗೆಯಲ್ಲಿ ಕುಡಿಯುವ ನೀರಿಗೂ ತತ್ವಾರ ಉಂಟಾಗಿರುವ ಸಂದರ್ಭದಲ್ಲಿ ಎದುರಾಗಿರುವ ಚುನಾವಣಾ ಕಣದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಚರ್ಚೆ ಮುನ್ನೆಲೆಗೆ ಬಂದಿದೆ. ಇದನ್ನೇ ರಾಜಕೀಯ ದಾಳ ಮಾಡಿಕೊಂಡಿರುವ ಕಾಂಗ್ರೆಸ್ ಮತ್ತು ಬಿಜೆಪಿ ಆರೋಪ–ಪ್ರತ್ಯಾರೋಪದಲ್ಲಿ ತೊಡಗಿವೆ. ಎದುರಾಳಿಯನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದರೆ ಮತ ಕ್ರೋಡೀಕರಣಗೊಳ್ಳುವ ಲೆಕ್ಕಾಚಾರ ರಾಜಕಾರಣಿಗಳದು.

ಕಣದಲ್ಲಿರುವ 20 ಅಭ್ಯರ್ಥಿಗಳಲ್ಲಿ ಕಾಂಗ್ರೆಸ್‌ನ ಬಿ.ಎನ್.ಚಂದ್ರಪ್ಪ ಹಾಗೂ ಬಿಜೆಪಿಯ ಗೋವಿಂದ ಕಾರಜೋಳ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಇಬ್ಬರೂ ದಲಿತ ಎಡಗೈ ಸಮುದಾಯಕ್ಕೆ ಸೇರಿದವರು. ಕ್ಷೇತ್ರ ವ್ಯಾಪ್ತಿಯಲ್ಲಿ ಈ ಸಮುದಾಯ ನಿರ್ಣಾಯಕವಾಗಿದೆ. ಸರಳ, ಸಜ್ಜನಿಕೆಯಿಂದ ವರ್ತಿಸುವ ಇಬ್ಬರು ಅಭ್ಯರ್ಥಿಗಳು ಪ್ರಚಾರ ಸಭೆಯಲ್ಲಿ ಪ್ರಜ್ಞಾಪೂರ್ವಕವಾಗಿ ವಚನಗಳನ್ನು ಪ್ರಸ್ತಾಪಿಸುತ್ತ ಬಸವಣ್ಣನ ಅನುಯಾಯಿಗಳು ಎಂಬುದನ್ನು ಮನವರಿಕೆ ಮಾಡಿಕೊಡುವ ಪ್ರಯತ್ನದಲ್ಲಿ ಪೈಪೋಟಿಗೆ ಇಳಿದಿದ್ದಾರೆ.

ಚಿತ್ರದುರ್ಗ

ತುಮಕೂರು ಜಿಲ್ಲೆಯ ಶಿರಾ ಮತ್ತು ಪಾವಗಡ ಒಳಗೊಂಡಿರುವ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಪ್ರದೇಶದ ಬಹುತೇಕರನ್ನು ಚುನಾವಣೆ ಪ್ರಭಾವಿಸಿದಂತೆ ಕಾಣುತ್ತಿಲ್ಲ. ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಕ್ಷೇತ್ರದ ಅಭ್ಯರ್ಥಿಯಾಗಿ ಹೊರಗಿನವರು ಅತಿಥಿಗಳಂತೆ ಬರುತ್ತಿರುವುದು ಸ್ಥಳೀಯರ ಆಸಕ್ತಿಯನ್ನು ಕುಗ್ಗಿಸಿದಂತೆ ಕಾಣುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿಯ ಇಬ್ಬರು ಹೊರಗಿನವರಲ್ಲಿ ತಮ್ಮ ಹಿತ ಕಾಯುವವರ ಆಯ್ಕೆಗೆ ಮತದಾರ ಲೆಕ್ಕಾಚಾರ ಹಾಕುತ್ತಿದ್ದಾನೆ.

ಬಿಜೆಪಿ–ಜೆಡಿಎಸ್ ಮೈತ್ರಿಯಾಗಿರುವುದು ಎನ್‌ಡಿಎ ಅಭ್ಯರ್ಥಿ ಗೋವಿಂದ ಕಾರಜೋಳ ಅವರ ಉಮೇದು ಹೆಚ್ಚಿಸಿದೆ. ಮೊದಲ ಬಾರಿಗೆ ಲೋಕಸಭೆಗೆ ಸ್ಪರ್ಧಿಸಿರುವ ಕಾರಜೋಳ ಅವರು ಪ್ರಧಾನಿ ನರೇಂದ್ರ ಮೋದಿ ಪ್ರಭಾವವನ್ನು ಅಚಲವಾಗಿ ನಂಬಿಕೊಂಡಿದ್ದಾರೆ. ಅಭ್ಯರ್ಥಿ ಬೆನ್ನಿಗೆ ಕಮಲ ಪಡೆ ಇದೆಯಾದರೂ ಮೂರು ಕ್ಷೇತ್ರಗಳಲ್ಲಿ ‘ತೆನೆಹೊತ್ತ ಮಹಿಳೆ’ಯ ಮೇಲಿನ ಅವಲಂಬನೆ ಅನಿವಾರ್ಯ. ಜೆಡಿಎಸ್–ಬಿಜೆಪಿ ನಾಯಕರಲ್ಲಿ ಹೊಂದಾಣಿಕೆ ಸಮಸ್ಯೆ ಇಣುಕಿದೆ. ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡವರ ಒಳ ಏಟಿನ ಭೀತಿಯೂ ಕಾಡುತ್ತಿದೆ.

ಕ್ಷೇತ್ರಕ್ಕೆ ನಡೆದ 17 ಚುನಾವಣೆಗಳಲ್ಲಿ 11 ಬಾರಿ ಗೆದ್ದಿರುವ ಕಾಂಗ್ರೆಸ್ ಆತ್ಮವಿಶ್ವಾಸದಲ್ಲಿದೆ. ಭದ್ರಕೋಟೆಯನ್ನು ಮತ್ತೆ ಕೈವಶ ಮಾಡಿಕೊಳ್ಳುವ ಬಿ.ಎನ್.ಚಂದ್ರಪ್ಪ ಅವರ ಉತ್ಸಾಹಕ್ಕೆ ಏಳು ಶಾಸಕರು ಜೊತೆಯಾಗಿದ್ದಾರೆ. ರಾಜ್ಯ ಸರ್ಕಾರದ ಗ್ಯಾರಂಟಿಗಳ ಫಲಾನುಭವಿಗಳಾದ ಮಹಿಳೆಯರ ಮತ ಗೆಲುವಿನ ದಡ ಮುಟ್ಟಿಸಲಿದೆ ಎಂಬ ಭರವಸೆ ಪಕ್ಷಕ್ಕಿದೆ. ಕ್ಷೇತ್ರದ ಇತಿಹಾಸ ಗಮನಿಸಿದರೆ ಕಾಂಗ್ರೆಸೇತರರಿಗೂ ಮತದಾರ ಮಣೆ ಹಾಕಿದ್ದಾರೆ. ಟಿಕೆಟ್ ಆಕಾಂಕ್ಷಿಗಳಾಗಿದ್ದ ಸ್ಥಳೀಯ ನಾಯಕರು ಪ್ರಚಾರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ❖

ಕ್ಷೇತ್ರ ಸಮೀಕ್ಷೆ

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 70.71%



ಬಿ.ಎನ್‌.ಚಂದ್ರಪ್ಪ (ಕಾಂಗ್ರೆಸ್)

ಕ್ಷೇತ್ರದಲ್ಲಿ ಮೋದಿ ಅಲೆ, ಪ್ರಭಾವ ಕಾಣುತ್ತಿಲ್ಲ. ಸುಳ್ಳು ಆಶ್ವಾಸನೆಗಳನ್ನು ನೀಡಿ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದ್ದು ಜನರಿಗೆ ಅರ್ಥವಾಗಿದೆ

- 👍 ಮಾಜಿ ಸಂಸದರಾಗಿರುವ ಇವರು ಕ್ಷೇತ್ರದ ಮತದಾರರಿಗೆ ಪರಿಚಿತರು
- 👍 ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ 7ರಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ
- 👎 ಪ್ರಚಾರದಲ್ಲಿ ಕಾಣಿಸಿಕೊಳ್ಳದ ರಾಷ್ಟ್ರೀಯ ನಾಯಕರು
- 👎 ಮಾದಿಗ ಸಮುದಾಯಕ್ಕೆ ಸೇರಿದವರಲ್ಲ ಎಂಬ ವದಂತಿ



ಗೋವಿಂದ ಕಾರಜೋಳ (ಬಿಜೆಪಿ)

ಭದ್ರಾ ಮೇಲ್ದಂಡೆ ಅನುದಾನಕ್ಕೆ ರಾಜ್ಯ ಸರ್ಕಾರ ಸೂಕ್ತ ದಾಖಲೆಗಳನ್ನು ಒದಗಿಸುತ್ತಿಲ್ಲ. ಕೇಂದ್ರ ಸರ್ಕಾರವನ್ನು ಟೀಕಿಸಿ ಕಾಲ ಕಳೆಯುತ್ತಿದೆ

- 👍 ಮೈತ್ರಿಯಿಂದ ಮತ ಒಗ್ಗೂಡುವ ವಿಶ್ವಾಸ
- 👍 ಉಪಮುಖ್ಯಮಂತ್ರಿ, ರಾಜ್ಯ ಸಚಿವ ಸಂಪುಟದಲ್ಲಿ ಹಲವು ಖಾತೆ ನಿಭಾಯಿಸಿದ ಅನುಭವ
- 👎 ಬಾಗಲಕೋಟೆ ಜಿಲ್ಲೆಯ ಇವರು ಚಿತ್ರದುರ್ಗ ಲೋಕಸಭಾ ಕ್ಷೇತ್ರಕ್ಕೆ ಹೊಸಬರು
- 👎 ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ₹ 5,300 ಕೋಟಿ ಅನುದಾನ ಬಿಡುಗಡೆ ಮಾಡದಿರುವುದು



ಶಾಸಕರ ಬಲಾಬಲ

- ಕಾಂಗ್ರೆಸ್ 7
- ಬಿಜೆಪಿ 1

1. ಮೊಳಕಾಲ್ಮುರು
2. ಚಳ್ಳಕೆರೆ
3. ಪಾವಗಡ
4. ಶಿರಾ
5. ಹಿರಿಯೂರು
6. ಹೊಸದುರ್ಗ
7. ಹೊಳಲ್ಕೆರೆ
8. ಚಿತ್ರದುರ್ಗ

ಕ್ಷೇತ್ರವನ್ನು ಕಾಡುವ ವಿಷಯಗಳು

- ತುಮಕೂರು–ಚಿತ್ರದುರ್ಗ–ದಾವಣಗೆರೆ ನೇರ ರೈಲು ಮಾರ್ಗ ನನೆಗುದಿಗೆ
- ಕೈಗಾರಿಕೆಗಳ ಕೊರತೆಯಿಂದ ಉದ್ಯೋಗ ಅರಸಿ ವಲಸೆ ಹೋಗುವ ಜನ
- ಈರುಳ್ಳಿ, ಟೊಮೆಟೊ, ರೇಷ್ಮೆ ಸೇರಿ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಕೊರತೆ
- ಪ್ರವಾಸಿತಾಣಗಳ ಅಭಿವೃದ್ಧಿ ಹಾಗೂ ಪ್ರವಾಸೋದ್ಯಮ ಉತ್ತೇಜನಕ್ಕೆ ಸೂಕ್ತ ಯೋಜನೆಗಳಿಲ್ಲ
- ಬಯಲುಸೀಮೆಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಿದ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ನಿರೀಕ್ಷಿತ ಪ್ರಗತಿ ಕಂಡಿಲ್ಲ



ಪ್ರಜಾ ಮತ 2024
ಜನತಂತ್ರದ ಹಬ್ಬ

ಪ್ರಜಾವಾಣಿ • ಭಾನುವಾರ • ಏಪ್ರಿಲ್ 21, 2024

ವಿಶೇಷ ಸ್ಥಾನಮಾನ ರದ್ದತಿಯ ಸುತ್ತ ಕಾವೇರಿದ 'ಲೋಕಾ'ಕಣ; ಲಾಭ ಪಡೆಯಲು ಬಿಜೆಪಿ ಪಣ

370ನೇ ವಿಧಿಯಿಂದ ಸ್ಥಾನಗಳವರೆಗೆ

ಜವಾಹರಲಾಲ್ ನೆಹರೂ ಅವರಿಂದ ಕಾಶ್ಮೀರ ವಿವಾದ ಹುಟ್ಟಿಕೊಂಡಿತು ಎಂದು ದಶಕಗಳ ಕಾಲದಿಂದಲೂ ಪ್ರತಿಪಾದಿಸುತ್ತಾ ಬಂದಿದ್ದ ಬಿಜೆಪಿ, ನರೇಂದ್ರ ಮೋದಿ ಅವರಿಂದ ಜಮ್ಮು ಕಾಶ್ಮೀರದ ಚಹರೆಯೇ ಬದಲಾಗುತ್ತಿದೆ ಎಂದು ಈಗ ಪ್ರಚಾರ ಮಾಡುತ್ತಿದೆ

• ಬಿ.ವಿ.ಶ್ರೀನಾಥ್

ಜಮ್ಮು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿಯ ನಿಬಂಧನೆಗಳನ್ನು ರದ್ದುಪಡಿಸಿದ ನಂತರ ಮೊದಲ ಸಾರ್ವತ್ರಿಕ ಚುನಾವಣೆ ನಡೆಯುತ್ತಿದೆ. ಇದು ಕೇಂದ್ರಾಡಳಿತ ಪ್ರದೇಶವಾಗಿ ಬದಲಾಗಿರುವ ಜಮ್ಮು ಕಾಶ್ಮೀರ ಮತ್ತು ಲಡಾಖ್ ಮೇಲಷ್ಟೇ ಅಲ್ಲ, ದೇಶದಾದ್ಯಂತ ಲೋಕಸಭಾ ಚುನಾವಣೆಯ ಮೇಲೆ ಪ್ರಭಾವ ಬೀರುತ್ತಿದೆ. ಬಿಜೆಪಿಯು ಈ ಬಗ್ಗೆ ಚುನಾವಣಾ ಸಂಕಥನವನ್ನು ಕಟ್ಟುತ್ತಿದ್ದು, ಅದರ ಸಂಪೂರ್ಣ ಲಾಭ ಪಡೆಯುವ ಹವಣಿಕೆಯಲ್ಲಿದೆ.

ವಿಶೇಷ ಸ್ಥಾನಮಾನ ರದ್ದುಪಡಿಸಿದ ಬಳಿಕ ಜಮ್ಮು ಕಾಶ್ಮೀರ ಅಭಿವೃದ್ಧಿ ಕಾಣುತ್ತಿದೆ ಎಂದು ದೇಶದ ಜನರನ್ನು ನಂಬಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಲೋಕಸಭಾ ಚುನಾವಣೆ ಘೋಷಣೆಯಾಗುವ ಕೆಲವೇ ದಿನಗಳ ಮುಂಚೆ ಪ್ರಧಾನಿ ಮೋದಿ ಜಮ್ಮು ಕಾಶ್ಮೀರದಲ್ಲಿ ₹32 ಸಾವಿರ ಕೋಟಿ ಮೊತ್ತದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಜತೆಗೆ ಭರವಸೆಗಳ ಮಹಾಪೂರವನ್ನೇ ಹರಿಸಿದ್ದರು.

ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ (ಪಿಡಿಪಿ), ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ತಮ್ಮ ರಾಜಕೀಯ ಲಾಭಕ್ಕಾಗಿ ವಿಶೇಷ ಸ್ಥಾನಮಾನವನ್ನು ದುರುಪಯೋಗ-ಪಡಿಸಿಕೊಳ್ಳುತ್ತಿದ್ದವು, ಬಿಜೆಪಿಯು ಅದನ್ನು ತೆಗೆದೊಗೆದು ಜಮ್ಮು ಕಾಶ್ಮೀರವನ್ನು ಇತರೆ ಭಾರತದೊಂದಿಗೆ ಬೆಸೆದಿದೆ ಎಂದು ಕೇಸರಿ ಪಾಳಯ ಪ್ರಚಾರ ಮಾಡುತ್ತಿದೆ. ಸಿಎಎ, ರಾಮಮಂದಿರ ನಿರ್ಮಾಣದ ಜತೆಗೆ ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದುಪಡಿಸುವುದು ಮೋದಿ ಸರ್ಕಾರದ ಭರವಸೆಯಾಗಿತ್ತು; ನಾವು ಅದನ್ನು ಈಡೇರಿಸಿದ್ದೇವೆ ಎಂದು ಬಿಜೆಪಿ ಪ್ರತಿಪಾದಿಸುತ್ತಿದೆ. ಅದು ಕೇವಲ ಒಂದು ರಾಜ್ಯದ ವಿಚಾರವಲ್ಲ, ಭಾರತದ ಸಮಗ್ರತೆಗೆ ಸಂಬಂಧಿಸಿದ ವಿಚಾರ ಎನ್ನುವುದನ್ನು ಬಿಜೆಪಿ ಮತದಾರರಿಗೆ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ.

ಬಿಜೆಪಿಯು ಮೊದಲಿನಿಂದಲೂ 370ನೇ ವಿಧಿಯನ್ನು ಕಾಂಗ್ರೆಸ್ ಪಕ್ಷದೊಂದಿಗೆ ಸಮೀಕರಿಸುತ್ತಲೇ ಬರುತ್ತಿದೆ. ಕಾಶ್ಮೀರ ಸಮಸ್ಯೆಯ ಹುಟ್ಟಿಗೆ ನೆಹರೂ ಅವರೇ ಕಾರಣ ಎನ್ನುವುದು ಪಕ್ಷದ ಹಳೆಯ ವಾದ. ಅದನ್ನು ಬಿಜೆಪಿ ನಾಯಕರು ಸಮಯ ಸಿಕ್ಕಾಗಲೆಲ್ಲ ಪುನರುಚ್ಚರಿಸುತ್ತಲೇ ಬರುತ್ತಿದ್ದಾರೆ.

1992ರ ಗಣರಾಜ್ಯೋತ್ಸವದ ಮುನ್ನಾ ದಿನ ಶ್ರೀನಗರದ ಲಾಲ್ ಚೌಕದಲ್ಲಿ ರಾಷ್ಟ್ರಧ್ವಜ ಹಾರಿಸಿದ್ದ ಬಿಜೆಪಿ ಮುಖಂಡ ಮುರಳಿ ಮನೋಹರ ಜೋಷಿ. ಚಿತ್ರದಲ್ಲಿ ನರೇಂದ್ರ ಮೋದಿ ಇದ್ದಾರೆ. –ಪ್ರಜಾವಾಣಿ ಸಂಗ್ರಹ ಚಿತ್ರ

ಚುನಾವಣಾ ಕಣದಲ್ಲಿ ಸುಳ್ಳುಗಳ ಭರಾಟೆ

ಜಮ್ಮು ಕಾಶ್ಮೀರಕ್ಕೆ 370ನೇ ವಿಧಿಯನ್ವಯ ವಿಶೇಷ ಸ್ಥಾನಮಾನ ನೀಡಿದ್ದಕ್ಕೆ ಒಂದು ಚಾರಿತ್ರಿಕ ಹಿನ್ನೆಲೆ ಇದೆ. ಪ್ರಾಂತ್ಯವು ಭಾರತದಲ್ಲಿ ವಿಲೀನಗೊಳ್ಳುವ ಕಾಲಕ್ಕೆ ಅಲ್ಲಿನ ರಾಜರಿಗೆ ನೀಡಿದ್ದ ಮಾತಿನಂತೆ ಸಂವಿಧಾನ ಬದ್ಧವಾಗಿಯೇ ನೀಡಲಾಗಿದ್ದ ಸವಲತ್ತು ಅದು. ಆದರೆ, ಪ್ರಜ್ಞಾಪೂರ್ವಕವಾಗಿ ಆ ಹಿನ್ನೆಲೆಯನ್ನು ಬದಿಗಿಟ್ಟು ಕಾಶ್ಮೀರ ಸಮಸ್ಯೆಯ ಸುತ್ತ ಸುಳ್ಳುಗಳ ಮಹಾ ಸಾಗರವನ್ನೇ ಸೃಷ್ಟಿಸಲಾಗಿದೆ. ಚುನಾವಣೆ ಸಮಯದಲ್ಲಿಯೂ ಸಾಮಾಜಿಕ ಜಾಲತಾಣಗಳಲ್ಲಿ ಈ ಸಂಬಂಧ ದೊಡ್ಡ ಮಟ್ಟದಲ್ಲಿಯೇ ಸುಳ್ಳುಗಳು ಹರಿದಾಡುತ್ತಿವೆ.

ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಕಾಶ್ಮೀರ ಪ್ರಾಂತ್ಯದಲ್ಲಿ ಭಯೋತ್ಪಾದನೆ ಕಡಿಮೆಯಾಗಿದೆ ಎನ್ನುವುದೂ ಸೇರಿದಂತೆ ವಾಸ್ತವಕ್ಕೆ ವಿರುದ್ಧವಾದ ಅನೇಕ ವಿಚಾರಗಳನ್ನು ವ್ಯವಸ್ಥಿತವಾಗಿ ಹಬ್ಬಿಸಲಾಗುತ್ತಿದೆ. ಚುನಾವಣೆಯಲ್ಲಿ ಅವು ಕೂಡ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ.

ನೆಹರೂ ಮಾಡಿದ 'ಪ್ರಮಾದ'ವನ್ನು ಮೋದಿ ಸರಿಪಡಿಸಿದ್ದಾರೆ ಎನ್ನುವುದು ಅದರ ಈಗಿನ ಪ್ರಚಾರದ ತಿರುಳು.

'ನಾವು ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ್ದೇವೆ. ಆದ್ದರಿಂದ ದೇಶದ ಜನ ಬಿಜೆಪಿಗೆ 370 ಮತ್ತು ಎನ್‌ಡಿಎಗೆ 400 ಸ್ಥಾನಗಳನ್ನು ನೀಡಿ ಆಶೀರ್ವದಿಸುತ್ತಾರೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಫೆಬ್ರುವರಿಯಲ್ಲಿ ಹೇಳಿದ್ದರು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಗುರಿಯಾದ 370 ಸ್ಥಾನ ಬಂದಿದ್ದೇ 370ನೇ ವಿಧಿಯಿಂದ ಎನ್ನುವುದನ್ನು ಶಾ ಅವರ ಮಾತು ಸ್ಪಷ್ಟಪಡಿಸಿತ್ತು.

ಬಿಜೆಪಿಯ ಚುನಾವಣಾ ಕಣದಲ್ಲಿ 370ನೇ ವಿಧಿ ಬಗ್ಗೆ ಪ್ರಸ್ತಾಪಿಸುತ್ತಿರುವ ಭರಾಟೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪಿಸಿದ್ದರು. ಅದಕ್ಕೆ ಪ್ರಧಾನಿ ಮೋದಿ ಸೇರಿದಂತೆ ಅಮಿತ್ ಶಾ, ರಾಜನಾಥ್ ಸಿಂಗ್ ಮುಂತಾದವರು ತೀವ್ರವಾಗಿ ಪ್ರತಿಕ್ರಿಯಿಸಿದ್ದರು. 'ಕಾಶ್ಮೀರ ನಮ್ಮದಲ್ಲವೇ' ಎಂದು ಪ್ರಶ್ನಿಸಿದ್ದ ಶಾ, 'ಮೊರಾದಾಬಾದ್‌ನ ಪ್ರತಿ ಮಗುವೂ ಕಾಶ್ಮೀರಕ್ಕಾಗಿ ಜೀವ ಬಿಡಲು ಸಿದ್ಧವಿದೆ' ಎಂದು ಪ್ರಚೋದನಾತ್ಮಕ-ವಾಗಿ ಮಾತನಾಡಿದ್ದರು. ಇದೇ ಬಿರುಸಿನಲ್ಲಿಯೇ ಬಿಜೆಪಿ ಜಮ್ಮು ಕಾಶ್ಮೀರದ ವಿಚಾರವನ್ನು 'ಲೋಕಾ' ಕಣದಲ್ಲಿ ಪ್ರಸ್ತಾಪಿಸುತ್ತಿದೆ.

ಆರು ಕ್ಷೇತ್ರ, ನಾಲ್ಕು ಪಕ್ಷ

ಜಮ್ಮು ಕಾಶ್ಮೀರ, ಲಡಾಖ್‌ನಲ್ಲಿ ಆರು ಲೋಕಸಭಾ ಕ್ಷೇತ್ರಗಳಿದ್ದು, ಒಂದೊಂದು ಕ್ಷೇತ್ರದ ಚುನಾವಣೆ ಒಂದೊಂದು ಹಂತದಲ್ಲಿ ನಡೆಯುತ್ತಿದೆ. 2019ರಲ್ಲಿ ಮೂರರಲ್ಲಿ ಎನ್‌ಸಿ, ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಉಧಮ್‌ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ-ಯಾಗಿದ್ದ ರಾಜಾ ಹರಿಸಿಂಗ್ ಮೊಮ್ಮಗ ವಿಕ್ರಮಾದಿತ್ಯ ಸಿಂಗ್ ಅವರನ್ನು ಭಾರಿ ಅಂತರದಿಂದ ಸೋಲಿಸುವ ಮೂಲಕ ಜಿತೇಂದ್ರ ಸಿಂಗ್ ಕೇಂದ್ರದಲ್ಲಿ ಮಂತ್ರಿಯಾಗಿದ್ದರು. ಈ ಬಾರಿಯೂ ಜಿತೇಂದ್ರ ಸಿಂಗ್ ಉಧಮ್‌ಪುರದಿಂದ ಕಣಕ್ಕಿಳಿದಿದ್ದಾರೆ.

ಜಮ್ಮು ಕಾಶ್ಮೀರದಲ್ಲಿ 'ಇಂಡಿಯಾ' ಕೂಟದ ಮಿತ್ರ ಪಕ್ಷಗಳಾದ ಎನ್‌ಸಿ ಹಾಗೂ ಕಾಂಗ್ರೆಸ್ ಸ್ಥಾನ ಹೊಂದಾಣಿಕೆ ಮಾಡಿಕೊಂಡಿವೆ. ಪಿಡಿಪಿ ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ.

ರಾಜ್ಯದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಬಿಜೆಪಿ ಸರ್ಕಾರವು ವಿಶೇಷ ಸ್ಥಾನಮಾನ ರದ್ದು ಮಾಡಿದೆ ಎಂಬುದನ್ನೇ ವಿಪಕ್ಷಗಳು ಚುನಾವಣಾ ವಿಷಯವನ್ನಾಗಿಸಿಕೊಂಡು ಜನರನ್ನು ಸೆಳೆಯಲು ನೋಡುತ್ತಿವೆ. ಬಿಜೆಪಿ ಅಭಿವೃದ್ಧಿ ಮಂತ್ರ ಜಪಿಸುತ್ತಿದ್ದು, ಬಂಡವಾಳ ಹೂಡಿಕೆ, ಉದ್ದಿಮೆಗಳ ಸ್ಥಾಪನೆಯಿಂದ ಜಮ್ಮು ಕಾಶ್ಮೀರದ ಚಹರೆಯೇ ಬದಲಾಗಲಿದೆ ಎಂದು ಭರವಸೆ ನೀಡುತ್ತಿದೆ. ಇವರ ನಡುವೆ ಲಡಾಖ್ ಅನ್ನು ಸಂವಿಧಾನದ ಆರನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕು, ಹಿಮಾಲಯದ ಪರಿಸರ ಉಳಿಸಬೇಕು ಎಂದು ಒತ್ತಾಯಿಸಿರುವ ಸೋನಮ್ ವಾಂಗ್ಚುಕ್ ಅವರಂಥವರ ಹೋರಾಟ ಯಾವ ಪಕ್ಷಕ್ಕೂ ಚುನಾವಣೆಯ ವಿಚಾರವೇ ಆಗಿಲ್ಲ.

ಜನಸಂಘ ಕಾಲದ ಕಾರ್ಯಸೂಚಿ

1951ರಲ್ಲಿ ಜನಸಂಘ ಜನ್ಮ ತಳೆದ ಗಳಿಗೆಯಿಂದಲೂ ಏಕರೂಪ ನಾಗರಿಕ ಸಂಹಿತೆ, ಗೋ ಹತ್ಯಾ ನಿಷೇಧದ ಜತೆಗೆ ಜಮ್ಮು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದು ಮಾಡುವುದು ಕೇಸರಿ ಪಾಳಯದ ಪ್ರಮುಖ ಕಾರ್ಯಸೂಚಿಯಾಗಿತ್ತು. ಜನಸಂಘದ ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ 370ನೇ ವಿಧಿ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ 1953ರಲ್ಲಿ ಜಮ್ಮು ಕಾಶ್ಮೀರದಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಸಾವನ್ನಪ್ಪಿದ್ದರು. ಅದನ್ನು 'ಬಲಿದಾನ' ಎಂದೇ ಪ್ರಚಾರ ಮಾಡತೊಡಗಿದ ಬಿಜೆಪಿ, ವಿಶೇಷ ಸ್ಥಾನಮಾನ ರದ್ದತಿಯನ್ನು ಅಯೋಧ್ಯೆ ರಾಮ ಮಂದಿರ ನಿರ್ಮಾಣದಷ್ಟೇ ಪ್ರಮುಖ ವಿಚಾರವನ್ನಾಗಿಸಿಕೊಂಡಿತು.



ಶ್ಯಾಮ್ ಪ್ರಸಾದ್ ಮುಖರ್ಜಿ

ಜಮ್ಮು ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನ ಮತ್ತು ಬಾವುಟ ಇದ್ದ ಬಗ್ಗೆ ದೇಶದ ಒಂದು ವರ್ಗದಲ್ಲಿ ಅಸಹನೆ ಇತ್ತು. ಅದನ್ನು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡದ್ದು ಬಿಜೆಪಿ. 1992ರಲ್ಲಿ ಉದ್ವಿಗ್ನ ಪರಿಸ್ಥಿತಿಯ ನಡುವೆಯೇ ಬಿಜೆಪಿ ಮುಖಂಡ ಮುರಳಿ ಮನೋಹರ ಜೋಷಿ ಶ್ರೀನಗರದ ಲಾಲ್ ಚೌಕದಲ್ಲಿ ತ್ರಿವರ್ಣ ಧ್ವಜ ಹಾರಿಸಿದ್ದರು. 2014 ಮತ್ತು 2019ರ ಚುನಾವಣೆಗಳಲ್ಲಿಯೂ 370ನೇ ವಿಧಿ ಬಿಜೆಪಿ ಪ್ರಣಾಳಿಕೆಯಲ್ಲಿ ಮುಖ್ಯ ಸ್ಥಾನ ಪಡೆದಿತ್ತು. ಜನರಿಗೆ ಕೊಟ್ಟಿದ್ದ ಭರವಸೆ ಈಡೇರಿಸಿದ್ದೇವೆ ಎಂದು ಪಕ್ಷವು ಈಗ ಅದರ ಮೇಲೆ ಮತ ಯಾಚನೆ ಮಾಡುತ್ತಿದೆ. 'ಅಧಿಕಾರಕ್ಕೆ ಬಂದರೆ ಜಮ್ಮು ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನಮಾನ ನೀಡುವ ಧೈರ್ಯ ಮಾಡಬೇಡಿ' ಎಂದು ಅಮಿತ್ ಶಾ ಮೊನ್ನೆ ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದ್ದರು. ಇದೂ ಒಂದು ರೀತಿಯ ಪ್ರಚಾರ ತಂತ್ರ ಎಂದೇ ವಿಶ್ಲೇಷಿಸಲಾಗುತ್ತಿದೆ.

'ಶ್ರೀಮಂತರ ಬಗ್ಗೆ ಮಾತ್ರ ಕಾಳಜಿ'

ಭಾಗಲ್ಪುರ (ಬಿಹಾರ): ದಲಿತರು, ಮುಸ್ಲಿಮರು ಮತ್ತು ಬಡವರ ಪಾಲಿಗೆ ಸರ್ವಸ್ವವೂ ಆಗಿರುವ ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಬಿಜೆಪಿ-ಆರ್‌ಎಸ್‌ಎಸ್ ಕೂಟ ಮತ್ತು ಬೆರಳೆಣಿಕೆಯ ಕುಬೇರರು ಅಪಾಯಕಾರಿಯಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಆರೋಪಿಸಿದ್ದಾರೆ.

ಬಿಹಾರದ ಭಾಗಲ್ಪುರದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, 'ದೇಶದ 22 ಮಂದಿ ಶ್ರೀಮಂತರು, 70 ಕೋಟಿ ಜನರಿಗೆ ಸಮನಾದ ಸಂಪತ್ತು ಹೊಂದಿದ್ದಾರೆ. 70 ಕೋಟಿ ಮಂದಿಯು ದಿನಕ್ಕೆ ಕೇವಲ ₹100 ವೆಚ್ಚದಲ್ಲಿ ಬದುಕುತ್ತಿದ್ದಾರೆ. ಸುಮಾರು 25 ಶ್ರೀಮಂತರ ₹16 ಲಕ್ಷ ಕೋಟಿ ಸಾಲವನ್ನು ಮೋದಿ ಸರ್ಕಾರ ಮನ್ನಾ ಮಾಡಿತು. ಅದು ಕಾಂಗ್ರೆಸ್ ಸರ್ಕಾರ ಮನ್ನಾ ಮಾಡಿದ್ದ ರೈತರ ಸಾಲಕ್ಕಿಂತ 25 ಪಟ್ಟು ಹೆಚ್ಚಿನ ಮೊತ್ತ. ಅದು 25 ವರ್ಷಗಳ ನರೇಗಾ ವೆಚ್ಚಕ್ಕೆ ಸಮ' ಎಂದು ಹೇಳಿದರು.

'ಅವರು ಸಂವಿಧಾನವನ್ನು ಬದಲಾಯಿಸಿದರೆ ಬಡವರು, ತಳಸ್ತರದವರು ಇದುವರೆಗೆ ಏನು ಅಭಿವೃದ್ಧಿ ಹೊಂದಿದ್ದರೋ, ಅದು ಕೊನೆಗೊಳ್ಳಲಿದೆ' ಎಂದರು.

'ಜನಾಂಗೀಯವಾದಿ, ದಬ್ಬಾಳಿಕೆಯ ಸರ್ಕಾರ' (ತ್ರಿಶ್ಯೂರ್ ವರದಿ): ಕೇಂದ್ರದ ಬಿಜೆಪಿ ಸರ್ಕಾರವು ಫ್ಯಾಸಿಸ್ಟ್, ಜನಾಂಗೀಯವಾದಿ ಹಾಗೂ ದಬ್ಬಾಳಿಕೆಯ ಸರ್ಕಾರವಾಗಿದ್ದು, 'ಸ್ವಾತಂತ್ರ್ಯ ಹೋರಾಟಗಾರರ ರಕ್ತದಿಂದ ಬರೆಯಲಾಗಿರುವ' ಸಂವಿಧಾನವನ್ನು ಬದಲಾಯಿಸುವ ಬಗ್ಗೆ ಅಹಂಕಾರದಿಂದ ಮಾತನಾಡುತ್ತಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ವಾಗ್ದಾಳಿ ನಡೆಸಿದರು.

'ಬಿಜೆಪಿ ಸರ್ಕಾರವು ಪ್ರಧಾನಿಯ 'ಏಕಸ್ವಾಮ್ಯ ಹೊಂದಿದ ಸ್ನೇಹಿತರ' ಲಾಭಕ್ಕಾಗಿ ಕೆಲಸ ಮಾಡುತ್ತಿದ್ದು, ಅತ್ಯಾಚಾರಿಗಳು ಮತ್ತು ಮಹಿಳೆಯರ ಮೇಲೆ ದಬ್ಬಾಳಿಕೆ ಮಾಡುವವರನ್ನು ರಕ್ಷಿಸುತ್ತಿದೆ. ಚುನಾವಣಾ ಬಾಂಡ್‌ಗಳಿಂದ ಹಣ ವಸೂಲಿ ಮಾಡುತ್ತಿದ್ದು, ಸರ್ಕಾರದ ಸಂಸ್ಥೆಗಳನ್ನು ಬಳಸಿ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುತ್ತಿದೆ. ನ್ಯಾಯಾಂಗವನ್ನೂ ಬೆದರಿಸುತ್ತಿದೆ' ಎಂದು ಆರೋಪಿಸಿದರು.

ರ‍್ಯಾಲಿ

ಕೋಲ್ಕತ್ತ ದಕ್ಷಿಣ ಲೋಕಸಭಾ ಕ್ಷೇತ್ರದ ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಮಾಲಾ ರಾಯ್ ಪರವಾಗಿ ಬೆಂಬಲಿಗರು ರ‍್ಯಾಲಿ ನಡೆಸಿದರು –ಪಿಟಿಐ ಚಿತ್ರ

ಚುನಾವಣಾ ಕಣದಲ್ಲಿ...

ಮೊರಾದಾಬಾದ್: ಬಿಜೆಪಿ ಅಭ್ಯರ್ಥಿ ನಿಧನ

ಲಖನೌ (ಪಿಟಿಐ): ಮೊರಾದಾಬಾದ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿದ್ದ ಕುನ್ವರ್ ಸರ್ವೇಶ್ ಕುಮಾರ್ (72) ಅವರು ಶನಿವಾರ ನಿಧನರಾಗಿದ್ದಾರೆ.

'ಅವರಿಗೆ ಗಂಟಲಲ್ಲಿ ಕೊಂಚ ಸಮಸ್ಯೆಯಿದ್ದು, ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಶುಕ್ರವಾರ ಅವರು ತಪಾಸಣೆಗಾಗಿ ದೆಹಲಿಯ ಏಮ್ಸ್‌ಗೆ ಹೋಗಿದ್ದವರು, ಅಲ್ಲಿಯೇ ನಿಧನರಾದರು' ಎಂದು ಉತ್ತರ ಪ್ರದೇಶದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಭೂಪೇಂದ್ರ ಚೌಧರಿ ತಿಳಿಸಿದರು. ಮೊರಾದಾಬಾದ್ ಕ್ಷೇತ್ರದಲ್ಲಿ ಮತದಾನವು ಮೊದಲ ಹಂತದಲ್ಲಿ ಶುಕ್ರವಾರ ನಡೆದಿದೆ.

ಮತದಾನ ತಪ್ಪಿಸದಂತೆ ಸಿಜೆಐ ಮನವಿ

ನವದೆಹಲಿ (ಪಿಟಿಐ): ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡುವ ಅವಕಾಶವನ್ನು ತಪ್ಪಿಸಿಕೊಳ್ಳಬೇಡಿ ಎಂದು ಮನವಿ ಮಾಡಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, 'ಅದು ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರ ಆದ್ಯ ಕರ್ತವ್ಯ' ಎಂದು ಹೇಳಿದ್ದಾರೆ.

ಲೋಕಸಭಾ ಚುನಾವಣೆಯ 'ನನ್ನ ಮತ ನನ್ನ ಧ್ವನಿ' ಕಾರ್ಯಕ್ರಮದ ಭಾಗವಾಗಿ ವಿಡಿಯೊ ಸಂದೇಶ ಕಳಿಸಿರುವ ಅವರು, ನಾವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜೆಗಳಾಗಿದ್ದೇವೆ ಎಂದಿದ್ದಾರೆ.

'ಸಂವಿಧಾನವು ನಮಗೆ ಅನೇಕ ಹಕ್ಕುಗಳನ್ನು ನೀಡಿದೆ. ಅದೇ ರೀತಿ ಪ್ರತಿಯೊಬ್ಬರೂ ತಮಗೆ ವಹಿಸಿದ ಕರ್ತವ್ಯ ನಿಭಾಯಿಸಬೇಕೆಂದು ಬಯಸುತ್ತದೆ. ಅದರ ಪೈಕಿ ಮುಖ್ಯವಾದದ್ದು ಮತದಾನ ಮಾಡುವುದು' ಎಂದು ತಿಳಿಸಿದರು.

ಮೊದಲ ಹಂತ: ಶೇ 65.5 ಮತದಾನ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ಪ್ರಮಾಣ ಶೇ 65.5 ತಲುಪುವ ಸಾಧ್ಯತೆಯಿದೆ.

ಮೊದಲ ಹಂತದಲ್ಲಿ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು 102 ಕ್ಷೇತ್ರಗಳಿಗೆ ಶುಕ್ರವಾರ ಮತದಾನ ನಡೆದಿತ್ತು. ಮತದಾನ ಪ್ರಮಾಣದ ಅಧಿಕೃತ ಮಾಹಿತಿಯನ್ನು ಚುನಾವಣಾ ಆಯೋಗವು ಭಾನುವಾರ ಬಿಡುಗಡೆಗೊಳಿ-ಸಲಿದೆ. ಮೊದಲ ಹಂತದ ಮತದಾನ ಪ್ರಕ್ರಿಯೆಯಲ್ಲಿ ಮತ ಚಲಾಯಿಸಲು 16.63 ಕೋಟಿಗೂ ಹೆಚ್ಚು ಮಂದಿ ಅರ್ಹರಾಗಿದ್ದರು.

ಔರಂಗಾಬಾದ್: ಸಂದೀಪನ್ ಸ್ಪರ್ಧೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಸಚಿವ ಸಂದೀಪನ್ ಭೂಮ್ರೆ ಅವರು ಔರಂಗಾಬಾದ್ ಲೋಕಸಭಾ ಕ್ಷೇತ್ರದಿಂದ (ಈಗಿನ ಛತ್ರಪತಿ ಸಂಭಾಜಿನಗರ) ಕಣಕ್ಕಿಳಿಯಲಿದ್ದಾರೆ ಎಂದು ಶಿವಸೇನಾ ಶನಿವಾರ ಘೋಷಿಸಿದೆ.

ಭೂಮ್ರೆ ಅವರು ಶಿವಸೇನಾ (ಯುಬಿಟಿ) ಅಭ್ಯರ್ಥಿ ಚಂದ್ರಕಾಂತ್ ಖೈರೆ ಮತ್ತು ಎಐಎಂಐಎಂ ಅಭ್ಯರ್ಥಿ ಇಮ್ತಿಯಾಜ್ ಜಲೀಲ್ ಅವರ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ಇದರೊಂದಿಗೆ ಶಿವಸೇನಾ ಇದುವರೆಗೆ 11 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ.

ಕೆಲವೆಡೆ ಮರು ಮತದಾನಕ್ಕೆ ಆಗ್ರಹ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಶುಕ್ರವಾರ ಮತದಾನದ ವೇಳೆ ಅಹಿತಕರ ಘಟನೆ ನಡೆದ 47 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸುವಂತೆ ಕಾಂಗ್ರೆಸ್ ಪಕ್ಷ ಆಗ್ರಹಿಸಿದೆ. 'ಇನ್ನರ್ ಮಣಿಪುರದ 36 ಮತಗಟ್ಟೆಗಳು ಮತ್ತು ಔಟರ್ ಮಣಿಪುರದ 11 ಮತಗಟ್ಟೆಗಳಿಗೆ ಮರು ಮತದಾನ ನಡೆಸುವಂತೆ ಕೋರಿ ಚುನಾವಣಾ ಆಯೋಗಕ್ಕೆ ಮನವಿ ಮಾಡಲಾಗಿದೆ' ಎಂದು ಮಣಿಪುರ ಕಾಂಗ್ರೆಸ್ ಘಟಕದ ಅಧ್ಯಕ್ಷರಾದ ಕೆ.ಮೇಘಚಂದ್ರ ಶನಿವಾರ ಹೇಳಿದರು.

102 ಕ್ಷೇತ್ರಗಳಲ್ಲಿ 50ರಿಂದ 60 ಸ್ಥಾನ ಗೆಲ್ಲುವ ವಿಶ್ವಾಸದಲ್ಲಿ 'ಇಂಡಿಯಾ' ಮೈತ್ರಿಕೂಟ

ಮೊದಲ ಹಂತ: ಮೇಲುಗೈ ಸಾಧಿಸಿದ್ದು ಯಾರು?

• ಶೆಮಿನ್ ಜಾಯ್

ರಾಜಸ್ಥಾನದಲ್ಲಿ ಕಳೆದ ಎರಡು ಚುನಾವಣೆಗಳಲ್ಲಿ ಶೂನ್ಯ 'ಸಾಧನೆ' ಮಾಡಿದ್ದ ಕಾಂಗ್ರೆಸ್, ಈ ಬಾರಿ ಮಿತ್ರಪಕ್ಷಗಳಾದ ಆರ್‌ಎಲ್‌ಪಿ ಮತ್ತು ಸಿಪಿಎಂ ಜತೆ ಸೇರಿಕೊಂಡು 10ಕ್ಕೂ ಅಧಿಕ ಸ್ಥಾನಗಳಲ್ಲಿ ಬಿಜೆಪಿಗೆ ಪ್ರಬಲ ಪೈಪೋಟಿ ನೀಡಲಿದೆ. 5 ರಿಂದ 7 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ



ನವದೆಹಲಿ: ಲೋಕಸಭೆ ಚುನಾವಣೆಯ ಮೊದಲ ಹಂತದಲ್ಲಿ ಶುಕ್ರವಾರ 102 ಕ್ಷೇತ್ರಗಳಲ್ಲಿ ಮತದಾನ ನಡೆದಿದೆ. ಚುನಾವಣೆಯ ಮೊದಲ ಹಂತದಲ್ಲಿ ಮತದಾರರು ಎನ್‌ಡಿಎ ಪರವಾಗಿ ತೀರ್ಪು ನೀಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಕೊಂಡಿದ್ದಾರೆ. ಆದರೆ, ಬಿಜೆಪಿಯು 2019 ರಲ್ಲಿ ಉತ್ತರ ಭಾರತದಲ್ಲಿ ಗೆದ್ದಿದ್ದ ಸ್ಥಾನಗಳಲ್ಲಿ ಕೆಲವು ತನ್ನ ಕೈವಶವಾಗಲಿದೆ ಎಂಬ ವಿಶ್ವಾಸವನ್ನು ಕಾಂಗ್ರೆಸ್ ವ್ಯಕ್ತಪಡಿಸಿದೆ.

'ಕಳೆದ ಬಾರಿ ಗೆದ್ದಿದ್ದ ಸ್ಥಾನಗಳನ್ನು ನಾವು ಉಳಿಸಿಕೊಂಡಿದ್ದೇವೆ. ಬಿಜೆಪಿಗೆ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಅವಕಾಶ ನೀಡಿಲ್ಲ' ಎಂದು ಕಾಂಗ್ರೆಸ್‌ನ ಚುನಾವಣೆಯ ಕಾರ್ಯತಂತ್ರ ರೂಪಿಸಿದವರು ಅಂದಾಜು ಮಾಡಿದ್ದಾರೆ. ಮತದಾನ ನಡೆದ 102 ಕ್ಷೇತ್ರಗಳಲ್ಲಿ 50 ರಿಂದ 60 ಸ್ಥಾನಗಳು ಲಭಿಸಬಹುದು ಎಂದು 'ಇಂಡಿಯಾ' ಮೈತ್ರಿಕೂಟದ ನಾಯಕರು ನಿರೀಕ್ಷಿಸಿದ್ದಾರೆ.

'ಬಿಜೆಪಿಯ, ಅದರಲ್ಲೂ ಮುಖ್ಯವಾಗಿ ಮೋದಿ ಅವರ ಚುನಾವಣಾ ಪ್ರಚಾರವನ್ನು ಗಮನಿಸಿದ ಬಳಿಕ ಕಾಂಗ್ರೆಸ್ ನಾಯಕತ್ವವು, ಈ ಚುನಾವಣೆಯಲ್ಲಿ ರಾಮಮಂದಿರ ವಿಚಾರವು ಇನ್ನೂ 'ಟೇಕಾಫ್' ಆಗಿಲ್ಲ ಎಂಬ ನಿರ್ಧಾರಕ್ಕೆ ಬಂದಿದೆ' ಎಂದು ಮೂಲಗಳು ಹೇಳಿವೆ. ಜಾಟ್ ಮತ್ತು ರಜಪೂತ ಸಮುದಾಯದವರು ಬಿಜೆಪಿ ವಿರುದ್ಧ ತಿರುಗಿ ಬಿದ್ದಿರುವುದು ಕಾಂಗ್ರೆಸ್‌ಗೆ ಲಾಭ ಉಂಟುಮಾಡುತ್ತಿದೆ ಎಂದು ನಂಬಿದ್ದಾರೆ.

ರೈತರ ವಿಶ್ವಾಸ ಗಿಟ್ಟಿಸುವ ವಿಚಾರದಲ್ಲೂ ಬಿಜೆಪಿ 'ಹಿನ್ನಡೆ' ಅನುಭವಿಸಿದೆ. ಬಡವರು ಮತ್ತು ದಲಿತರಲ್ಲೂ ಬಿಜೆಪಿ ವಿರೋಧಿ ಭಾವನೆ ಇದೆ. ರಾಹುಲ್ ಗಾಂಧಿ ಅವರ 'ಬಡವರ ಪರ' ಧೋರಣೆ ಮತ್ತು ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಮಾತ್ರ ಮುಂದಿಟ್ಟುಕೊಂಡು ಪ್ರಚಾರ ನಡೆಸುತ್ತಿರುವುದು ಕೂಡಾ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದೆ ಎಂಬ ವಿಶ್ವಾಸ ಅವರದ್ದು.

'ಬಿಜೆಪಿ ನಾಯಕರು ಸಂವಿಧಾನ ಬದಲಾಯಿಸುವ ಬಗ್ಗೆ ಮಾತನಾಡುವಾಗ ಮೌನ ವಹಿಸಿದ್ದ ಮೋದಿ ಅವರು ಇದೀಗ ಒತ್ತಡಕ್ಕೆ ಒಳಗಾಗಿ, ಅಂಬೇಡ್ಕರ್ ಬಂದರೂ ಸಂವಿಧಾನ ಬದಲಾಯಿಸಲು ಸಾಧ್ಯವಿಲ್ಲ ಎಂಬ ಹೇಳಿಕೆ ನೀಡಿದ್ದಾರೆ' ಎಂಬುದು ಕಾಂಗ್ರೆಸ್ ನಾಯಕರ ವಾದ.

'ಈ ಚುನಾವಣೆಯು ಸಂವಿಧಾನವನ್ನು ರಕ್ಷಿಸಲು ಲಭಿಸಿರುವ ಕೊನೆಯ ಅವಕಾಶ ಎಂದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹೇಳುತ್ತಾ ಬಂದಿದ್ದಾರೆ. ಇದರಿಂದಾಗಿ ಮೋದಿ ಅವರಿಗೆ ಈ ಹೇಳಿಕೆ ನೀಡಬೇಕಾಗಿ ಬಂತು' ಎಂದು ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜಸ್ಥಾನ, ಹರಿಯಾಣ, ಜಾರ್ಖಂಡ್, ಗುಜರಾತ್, ಬಿಹಾರ, ಉತ್ತರ ಪ್ರದೇಶ, ಛತ್ತೀಸ್‌ಗಢ ಮತ್ತು ಮಧ್ಯಪ್ರದೇಶದಲ್ಲಿ ಪಕ್ಷಕ್ಕೆ ಅನುಕೂಲಕರ ವಾತಾವರಣವಿದೆ ಎಂಬುದು ಮೂರು ವಾರಗಳ ಪ್ರಚಾರ ಅಭಿಯಾನದ ವೇಳೆ ಗಮನಕ್ಕೆ ಬಂದಿದೆ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

'ಮೋದಿ ಅವರ ವರ್ಚಸ್ಸು ಕಡಿಮೆ-ಯಾಗುತ್ತಿದ್ದು, ಕೆಲವು ಕ್ಷೇತ್ರಗಳಲ್ಲಂತೂ ಸಂಪೂರ್ಣವಾಗಿ ಮರೆಯಾಗಿದೆ. ಕಾಂಗ್ರೆಸ್‌ನ ಗ್ಯಾರಂಟಿ, ನಿರುದ್ಯೋಗ, ಬೆಲೆಯೇರಿಕೆ, ಸಂವಿಧಾನ ರಕ್ಷಣೆ ಮತ್ತು ಜಾತಿಗಣತಿಯು ಈ ಚುನಾವಣೆಯ ಪ್ರಮುಖ ವಿಷಯಗಳು' ಎಂದು ಕಾಂಗ್ರೆಸ್ ಮುಖಂಡ ವೈ.ಬಿ.ಶ್ರೀವಸ್ತ ಹೇಳುವರು.

ಚುಟುಕು

ಶರ್ಮಿಳಾ ನಾಮಪತ್ರ ಸಲ್ಲಿಕೆ

ಕಡಪ (ಆಂಧ್ರ ಪ್ರದೇಶ) (ಪಿಟಿಐ): ಆಂಧ್ರ ಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಅವರು ಕಡಪ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಶನಿವಾರ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ಅವರು ಇಡುಪುಲಪಾಯಕ್ಕೆ ತೆರಳಿ, ತಂದೆ ವೈ.ಎಸ್.ರಾಜಶೇಖರ ರೆಡ್ಡಿ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು. ಶರ್ಮಿಳಾ ಅವರು ವೈಎಸ್‌ಆರ್‌ಸಿಪಿಯ ವೈ.ಎಸ್.ಅವಿನಾಶ್ ರೆಡ್ಡಿ ವಿರುದ್ಧ ಪೈಪೋಟಿ ನಡೆಸುವರು.

ಜಿಗಿ–ನೆಗೆದಾಟ

ತೇಜಿಂದರ್ ಸಿಂಗ್ ಬಿಟ್ಟೂ ಬಿಜೆಪಿಗೆ

ನವದೆಹಲಿ: ಎಐಸಿಸಿ ಹಿಮಾಚಲ ಪ್ರದೇಶ ಉಸ್ತುವಾರಿ ಕಾರ್ಯದರ್ಶಿ ತೇಜಿಂದರ್ ಸಿಂಗ್ ಬಿಟ್ಟೂ ಅವರು ಶನಿವಾರ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರಿದರು.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೆ ಆಪ್ತರಾಗಿದ್ದ ಬಿಟ್ಟೂ ಅವರೊಂದಿಗೆ, ಕಾಂಗ್ರೆಸ್‌ನ ಮಾಜಿ ಸಂಸದ ಸಂತೋಖ್ ಸಿಂಗ್ ಚೌಧರಿ ಅವರ ಪತ್ನಿ ಕರಮ್‌ಜೀತ್ ಕೌರ್ ಚೌಧರಿ ಅವರೂ ಬಿಜೆಪಿಗೆ ಸೇರ್ಪಡೆಗೊಂಡರು. ಕಳೆದ ವರ್ಷ ಸಂತೋಖ್ ಸಿಂಗ್ ಅವರ ನಿಧನದ ಬಳಿಕ ಜಲಂಧರ್ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕರಮ್‌ಜೀತ್ ಅವರು ಎಎಪಿ ಅಭ್ಯರ್ಥಿ ಸುಶೀಲ್ ಕುಮಾರ್ ರಿಂಕು ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದರು.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಮತ್ತು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರು ಇಬ್ಬರನ್ನೂ ಪಕ್ಷಕ್ಕೆ ಬರಮಾಡಿಕೊಂಡರು.

ಕಾಂಗ್ರೆಸ್ ಮುಖಂಡ ಬಿಜೆಪಿಗೆ (ವಯನಾಡ್ ವರದಿ): ಕಾಂಗ್ರೆಸ್‌ನ ವಯನಾಡ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ಎಂ. ಸುಧಾಕರನ್ ಅವರು ಶನಿವಾರ ಪಕ್ಷ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು.

ಬಳಿಕ ಮಾತನಾಡಿದ ಅವರು, 'ವಯನಾಡ್ ಸಂಸದ ರಾಹುಲ್ ಗಾಂಧಿ ಅವರು ಪಕ್ಷದ ಜಿಲ್ಲಾ ಮುಖಂಡರಿಗೂ ಲಭ್ಯರಿರಲಿಲ್ಲ. ಹಾಗಾದರೆ ಸಾಮಾನ್ಯ ಜನರ ಸ್ಥಿತಿ ಏನು? ಅವರಿಗೆ ಕ್ಷೇತ್ರದ ಜನರು ಐದು ವರ್ಷ ಅವಕಾಶ ನೀಡಿದ್ದಾರೆ. ಇನ್ನೊಂದು ಅವಧಿಗೂ ಅವರೇ ಗೆದ್ದರೆ ಕ್ಷೇತ್ರದ ಅಭಿವೃದ್ಧಿ ಕುರಿತ ನಿರೀಕ್ಷೆಗಳು ಹುಸಿಯಾಗಬಹುದು' ಎಂದು ಹೇಳಿದರು.

ಎಂಥಾ ಮಾತು!

ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸಂಪುಟ ಸಹೋದ್ಯೋಗಿಗಳಿಗೆ, ದೇಶದ ಸಂಪನ್ಮೂಲವನ್ನು ಬಳಸಿ ಚುನಾವಣಾ ಪ್ರಚಾರ ನಡೆಸಲು ಅನುಕೂಲ ಕಲ್ಪಿಸುವುದಕ್ಕಾಗಿ ಚುನಾವಣಾ ಆಯೋಗವು ಏಳು ಹಂತಗಳಲ್ಲಿ ಮತದಾನ ನಡೆಸಿದೆ. ಈ ಹಿಂದೆ ಲೋಕಸಭಾ ಚುನಾವಣೆಯು ಮೇ ತಿಂಗಳಿಗೆ ಮುಗಿಯುತ್ತಿತ್ತು. ಈ ಬಾರಿ ಅದನ್ನು ಜೂನ್‌ವರೆಗೂ ವಿಸ್ತರಿಸಲಾಗಿದೆ. ವಿರೋಧ ಪಕ್ಷಗಳ ಒಕ್ಕೂಟಕ್ಕೆ 'ಇಂಡಿಯಾ' ಎಂಬ ಹೆಸರನ್ನು ನಾನು ಸೂಚಿಸಿದ್ದೆ. ಆದರೆ ಅದು ಪಶ್ಚಿಮ ಬಂಗಾಳದಲ್ಲಿ ಅಸ್ತಿತ್ವದಲ್ಲಿಲ್ಲ. ರಾಜ್ಯದ ಹೊರಗಷ್ಟೇ ಇದೆ

ಮಮತಾ ಬ್ಯಾನರ್ಜಿ, ಪಶ್ಚಿಮಬಂಗಾಳ ಮುಖ್ಯಮಂತ್ರಿ

ಮೊದಲ ಹಂತದ ಮತದಾನದ ಫಲಿತಾಂಶವನ್ನು ನಾನು ಹೇಳುತ್ತೇನೆ. ಯಾರಿಗೂ ಹೇಳಬೇಡಿ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷವು ಕೊಚ್ಚಿಕೊಂಡು ಹೋಗಿವೆ. ಈ ಎರಡು ಪಕ್ಷಗಳು ₹ 12 ಲಕ್ಷ ಕೋಟಿಯ ಹಗರಣಗಳಲ್ಲಿ ಭಾಗಿಯಾಗಿವೆ. ಆದರೆ ನರೇಂದ್ರ ಮೋದಿ ಅವರ ವಿರುದ್ಧ ಒಂದೇ ಒಂದು ಭ್ರಷ್ಟಾಚಾರ ಆರೋಪ ಕೇಳಿ ಬಂದಿಲ್ಲ

ಅಮಿತ್ ಶಾ, ಕೇಂದ್ರ ಗೃಹಸಚಿವ

ಕ್ಷೇತ್ರ ಮಹಾತ್ಮೆ

ಕೇರಳದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ವಡಗರ ಲೋಕಸಭಾ ಕ್ಷೇತ್ರವು ಈ ಬಾರಿ ಕದನ ಕಲಿಗಳ ಹಣಾಹಣಿಗೆ ಸಾಕ್ಷಿಯಾಗಲಿದೆ. ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಕೂಟವು ಸಿಪಿಎಂನ ಕೆ.ಕೆ. ಶೈಲಜಾ ಟೀಚರ್ ಅವರನ್ನು ಕಣಕ್ಕಿಳಿಸಿದರೆ, ಯುಡಿಎಫ್ ಮೈತ್ರಿಕೂಟವು ಕಾಂಗ್ರೆಸ್‌ನ ಶಾಫಿ ಪರಂಬಿಲ್ ಅವರನ್ನು ಪ್ರತಿಸ್ಪರ್ಧಿಯಾಗಿಸಿದೆ. ಬಿಜೆಪಿಯು ಸಿ.ಆರ್. ಪ್ರಫುಲ್ ಕೃಷ್ಣನ್ ಅವರನ್ನು ಅಖಾಡಕ್ಕಿಳಿಸಿದೆ. 2019ರಲ್ಲಿ ಮಾಜಿ ಮುಖ್ಯಮಂತ್ರಿ ಕೆ.ಕರುಣಾಕರನ್ ಅವರ ಪುತ್ರ ಕೆ.ಮುರಳೀಧರನ್ ಅವರು ಕಾಂಗ್ರೆಸ್‌ನಿಂದ ಸ್ಪರ್ಧಿಸಿ, 84,663 ಮತಗಳ ಅಂತರದಿಂದ ಸಿಪಿಎಂನ ಪಿ. ಜಯರಾಜನ್ ಅವರನ್ನು ಪರಾಭವಗೊಳಿಸಿದ್ದರು. ಬಿಜೆಪಿಯು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟಿತ್ತು. ಆರೋಗ್ಯ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದ ಶೈಲಜಾ ಟೀಚರ್ ಅವರು, ಕೋವಿಡ್–19 ಮತ್ತು ನಿಪಾ ಸೋಂಕಿನ ವಿರುದ್ಧದ ಹೋರಾಟದ ಚುಕ್ಕಾಣಿ ಹಿಡಿದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸೆಗೆ ಪಾತ್ರರಾಗಿದ್ದರು. ಶಾಫಿ ಪರಂಬಿಲ್ ಅವರು ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದಾರೆ. ಪಕ್ಷ ಸಂಘಟನೆಯ ಮೂಲಕ ರಾಜ್ಯಮಟ್ಟದಲ್ಲಿ ಚಿರಪರಿಚಿತರಾಗಿರುವ ಇವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಕಾಂಗ್ರೆಸ್ ಮುಖಂಡರದ್ದು. ಸಿಪಿಎಂನ ಭದ್ರಕೋಟೆಯಾಗಿದ್ದ ಈ ಕ್ಷೇತ್ರವು 2004ರಿಂದಲೂ ಕಾಂಗ್ರೆಸ್ ಹಿಡಿತದಲ್ಲಿದೆ. ವಡಗರದಲ್ಲಿ ಈ ಬಾರಿ ಕಾಂಗ್ರೆಸ್ ಹಾಗೂ ಸಿಪಿಎಂ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ನಡೆಯಲಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಆಡಳಿತಾರೂಢ ಸಿಪಿಎಂ ಸರ್ಕಾರದ ಲೋಪಗಳನ್ನು ಮುಖ್ಯ ಚುನಾವಣಾ ವಿಚಾರವನ್ನಾಗಿಸಿ ಶಾಫಿ ಅವರು ಜನರ ಬಳಿಗೆ ತೆರಳುತ್ತಿದ್ದಾರೆ.

ಮುಖಾಮುಖಿ

ಹೈದರಾಬಾದ್

ಅಸಾದುದ್ದೀನ್ ಒವೈಸಿ (ಎಐಎಂಐಎಂ)

ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದ್ ಉಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದ ಭದ್ರ-ಕೋಟೆಯಾಗಿರುವ ತೆಲಂಗಾಣದ ಹೈದರಾಬಾದ್ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಪಕ್ಷದ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರೇ ಕಣಕ್ಕಿಳಿದಿದ್ದಾರೆ. 2019ರ ಚುನಾವಣೆಯಲ್ಲಿ ಒವೈಸಿ ಅವರು 2,82,186 ಮತಗಳ ಅಂತರದಿಂದ ಬಿಜೆಪಿಯ ಭಗವಂತ ರಾವ್ ಅವರನ್ನು ಪರಾಭವಗೊಳಿಸಿದ್ದರು. 1994ರಲ್ಲಿ ಆಂಧ್ರಪ್ರದೇಶದ ಮೀನಾರ್ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧೆಗಿಳಿಯುವ ಮೂಲಕ ರಾಜಕೀಯ ಪ್ರವೇಶಿಸಿದ್ದ ಒವೈಸಿ ಅವರು, 2004ರಿಂದಲೂ ಹೈದರಾಬಾದ್ ಲೋಕಸಭಾ ಕ್ಷೇತ್ರದಿಂದ ಸಂಸತ್‌ಗೆ ಆಯ್ಕೆಯಾಗುತ್ತಾ ಬಂದಿದ್ದಾರೆ. ಅದಕ್ಕೂ ಮೊದಲು ಇವರ ತಂದೆ ಸುಲ್ತಾನ್ ಸಲಾಹುದ್ದೀನ್ ಒವೈಸಿ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿ-ದ್ದರು. ಭಾರತ ರಾಷ್ಟ್ರ ಸಮಿತಿಯು (ಬಿಆರ್‌ಎಸ್) ಗದ್ದಂ ಶ್ರೀನಿವಾಸ್ ಯಾದವ್ ಅವರನ್ನು ಇಲ್ಲಿಂದ ಕಣಕ್ಕಿಳಿಸಿದೆ.

V/S

ಮಾಧವಿ ಲತಾ (ಬಿಜೆಪಿ)

ಅಸಾದುದ್ದೀನ್ ಒವೈಸಿ ಅವರನ್ನು ಮಣಿಸಲು ಬಿಜೆಪಿಯು ಹಿಂದುತ್ವದ ಪ್ರಬಲ ಪ್ರತಿಪಾದಕಿ ಮಾಧವಿ ಲತಾ ಅವರನ್ನು ಅಖಾಡಕ್ಕಿಳಿಸಿದೆ. ರಾಜಕೀಯದಲ್ಲಿ ಅನನುಭವಿ-ಯಾದರೂ ಧಾರ್ಮಿಕ ಭಾಷಣಗಳ ಮೂಲಕ ಇವರು ರಾಜ್ಯ ಮಟ್ಟದಲ್ಲಿ ಗಮನ ಸೆಳೆದವರು. ತ್ರಿವಳಿ ತಲಾಖ್ ವಿರುದ್ಧ ನಡೆದ ಹೋರಾಟದಲ್ಲಿ ಮುಂಚೂಣಿ-ಯಲ್ಲಿದ್ದರು. ಹೈದರಾಬಾದ್‌ನ ವಿರಿಂಚಿ ಆಸ್ಪತ್ರೆಯ ಅಧ್ಯಕ್ಷೆಯಾ-ಗಿರುವ ಇವರು ಭರತನಾಟ್ಯ ಕಲಾವಿದೆಯೂ ಹೌದು. ಮಾಧವಿ ಅವರನ್ನು ಬಿಜೆಪಿಯು ಅಭ್ಯರ್ಥಿಯಾಗಿ ಘೋಷಿಸಿದ ಬಳಿಕ ಅವರಿಗೆ ಕೇಂದ್ರ ಸರ್ಕಾರವು ವೈ–ಪ್ಲಸ್ ಭದ್ರತೆ ನೀಡಿತ್ತು. ಮಾಧವಿ ಲತಾ ಅವರು ಮಸೀದಿಯತ್ತ ಬಾಣ ಬಿಡುತ್ತಿರುವಂತೆ ಸನ್ನೆ ಮಾಡಿದ ವಿಡಿಯೊ ಈಚೆಗೆ ಹರಿದಾಡಿ ವಿವಾದಕ್ಕೆ ಕಾರಣವಾಗಿತ್ತು. ಈ ಕ್ಷೇತ್ರದಲ್ಲಿ ಕಳೆದೆರಡು ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿಯು ಎರಡನೇ ಸ್ಥಾನದಲ್ಲಿತ್ತು.

ಕೊನೆಗೂ ಸಿಕ್ಕ ಸುರಸುಂದರಾಂಗ 11

ಊರು ಕಾಡಿಗೆ ನೂರು!

ಹಳಕಾರ ಊರಿನ ಜನರ ಕಾಡಿನ ಪ್ರೀತಿ ಸ್ವಲ್ಪವೂ ಮುಕ್ಕಾಗಿಲ್ಲ. ತಲೆತಲಾಂತರಗಳಿಂದಲೂ ಅನನ್ಯ ಎನ್ನುವ ಕಾಳಜಿ ಮತ್ತು ಕಣ್ಗಾವಲು ಫಲವಾಗಿ ವಿಲೇಜ್ ಫಾರೆಸ್ಟ್‌ಗೆ ಇದೀಗ ನೂರು ವರ್ಷ. ಈ ಕಾಡಿನ ಕಥೆ ಇಲ್ಲಿದೆ

ಚಿತ್ರ: ಸುಜಾತಾ ಕುಮಟಾ

ಎಂ.ಜಿ. ನಾಯ್ಕ

ಹಳಕಾರ ಗ್ರಾಮದ ಮೀನುಗಾರ ಹನುಮಂತ ಗಣಪು ಹರಿಕಂತ್ರ ಹುಟ್ಟಿ ಬೆಳೆದ ಊರು ತೊರೆದು ಪಕ್ಕದೂರು ಕಡ್ಲೆಯಲ್ಲಿ ನೆಲೆ ಕಂಡುಕೊಂಡಿದ್ದಾರೆ. ಅದೇ ಊರಿನ, ಮಂಗಲಾ ಹರಿಕಂತ್ರ, ಯಮುನಾ ಹರಿಕಂತ್ರ, ಇನ್ನೂ ಕೆಲವರು ಪಕ್ಕದ ಮದ್ಗುಣಿ ಗ್ರಾಮಕ್ಕೆ ಹೋಗಿ ಸರ್ಕಾರದ ಆಶ್ರಯ ಮನೆ ಪಡೆಯಲು ಜಾಗ ಖರೀದಿಸಿದ್ದಾರೆ. ಇವರೆಲ್ಲಾ ಊರು ತೊರೆಯಲು ಬಲವಾದ ಕಾರಣವಿದೆ, ಅದು ಕಾಡು! ವರ್ಷಗಳು ಕಳೆದಂತೆ ಪುಟ್ಟ ಊರಲ್ಲಿ ಜನಸಂಖ್ಯೆ ಅಧಿಕವಾಗುತ್ತಾ ಹೋಯಿತು. ಮನೆ ಕಟ್ಟಲು ಜಾಗದ ಅವಶ್ಯಕತೆಯೂ ಹೆಚ್ಚಾಯಿತು. ಅಲ್ಲಿ ಮನೆ ಕಟ್ಟಲು ಕಾಡು ಕಡಿಯಬೇಕು. ಇದು ಊರಿನ ಜನರಿಗೆ ಸ್ವಲ್ಪವೂ ಇಷ್ಟವಿಲ್ಲ. ಏಕೆಂದರೆ, ಇವರಿಗೆ ಬುದ್ಧಿ ತಿಳಿದಾಗಿನಿಂದಲೂ ನೋಡುತ್ತಾ ಬೆಳೆದ ಮರಗಳನ್ನು ಕತ್ತರಿಸಿ ನೆಲೆ ನಿಲ್ಲಲು ಮನಸ್ಸು ಒಪ್ಪಲೇ ಇಲ್ಲ. ಪ್ರತಿಯೊಂದು ಮರದ ಜೊತೆಗೂ ಈ ಊರಿನ ಜನರಿಗೆ ವೈಯಕ್ತಿಕ ಮತ್ತು ಭಾವನಾತ್ಮಕ ಸಂಬಂಧವಿದೆ.

ಉತ್ತರ ಕನ್ನಡ ಜಿಲ್ಲೆಯ ಕುಮಟಾ ಪಟ್ಟಣದಿಂದ ಕೇವಲ ಎರಡು ಕಿ.ಮೀ. ದೂರದಲ್ಲಿ ಹಳಕಾರ ಗ್ರಾಮವಿದೆ. ಇಲ್ಲಿ 219 ಎಕರೆ ಕಾಡಿದೆ. ಇದು ರಾಜ್ಯದ ಏಕೈಕ 'ವಿಲೇಜ್ ಫಾರೆಸ್ಟ್'; ಅಂದರೆ ಊರಿನ ಕಾಡು ಎಂದರ್ಥ. ಇದರ ಮಾಲೀಕರು ಗ್ರಾಮಸ್ಥರೇ ಆಗಿದ್ದಾರೆ. ಅರಣ್ಯ ಇಲಾಖೆಗೆ ಈ ಕಾಡಿನ ಮೇಲೆ ಯಾವ ಹಕ್ಕೂ ಇಲ್ಲ! ಇದೇ ವರ್ಷ ಈ 'ವಿಲೇಜ್ ಫಾರೆಸ್ಟ್' ಗೆ ನೂರು ವರ್ಷ ತುಂಬುತ್ತಿದೆ.

ಹಲವು ದಶಕಗಳಿಂದಲೂ ಹಿರಿಯರು ತುಂಬಾ ಶ್ರದ್ಧೆಯಿಂದ ತಮ್ಮೂರಿನ ಕಾಡನ್ನು ಹೇಗೆ ಉಳಿಸಿಕೊಳ್ಳಬೇಕು, ಬೆಳೆಸಬೇಕು ಎನ್ನುವುದನ್ನು ಕಿರಿಯರಿಗೆ ಅಂತರ್ಗತ ಮಾಡಿಕೊಟ್ಟಿದ್ದಾರೆ. ಇದರ ಪರಿಣಾಮವೇ ಹನುಮಂತ, ಮಂಗಳಾ, ಯಮುನಾ, ಇನ್ನುಳಿದವರು ಅಕ್ಕಪಕ್ಕದ ಊರಿಗೆ ವಲಸೆ ಹೋಗಿರುವುದು.

'ಅಘನಾಶಿನಿ ಹಿನ್ನೀರಿನಲ್ಲಿ ಮೀನುಗಾರಿಕೆ ನಡೆಸುತ್ತಿದ್ದ ನಮ್ಮ ಕುಟುಂಬಕ್ಕೆ ಒಂದು ಮನೆಯಿರುವಷ್ಟು ಜಾಗ ಇತ್ತು. ಅಣ್ಣನ ಮದುವೆಯಾದ ನಂತರ ನಾನು ಭವಿಷ್ಯಕ್ಕಾಗಿ ಪಕ್ಕದ ಕಡ್ಲೆ ಗ್ರಾಮದಲ್ಲಿ ಜಾಗ ಖರೀದಿಸಿ ನೆಲೆ ನಿಂತೆ. ಮನೆ ಕಟ್ಟಲು ಜಾಗ ಇಲ್ಲದವರು ಬೇರೆ ಊರುಗಳಲ್ಲಿ ಕಾಡನ್ನು ಅತಿಕ್ರಮಿಸಿ ಗುಡಿಸಲು ಕಟ್ಟಿಕೊಂಡಿದ್ದಾರೆ. ಆದರೆ ಹಳಕಾರದಲ್ಲಿ ಕಾಡು ನಮ್ಮದು ಎನ್ನುವ ಭಾವನೆ ಹಿಂದಿನಿಂದಲೂ ಇದೆ. ಊರ ಕಾಡನ್ನು ಅತಿಕ್ರಮಿಸಿ ಮನೆ ಕಟ್ಟಿದರೆ ಕೆಲವೇ ವರ್ಷಗಳಲ್ಲಿ ಕಾಡು ಮಾಯವಾಗುತ್ತದೆ' ಎನ್ನುತ್ತಾರೆ ಹನುಮಂತ ಗಣಪು ಹರಿಕಂತ್ರ.

"ವಿಲೇಜ್ ಫಾರೆಸ್ಟ್‌ನ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಕಾಡಿನಲ್ಲಿ ಮುರಿದು ಬಿದ್ದ ಮರಮಟ್ಟು ಹರಾಜು ಮೂಲಕ ಬರುವ ಆದಾಯ ಬಿಟ್ಟರೆ ಸಂಸ್ಥೆಗೆ ಬೇರೆ ಆದಾಯವಿಲ್ಲ. ಆದಾಯ ಬರುವಂತ ಹೊಸ ಯೋಜನೆಗಳನ್ನು ರೂಪಿಸಬೇಕು. ನೂರು ವರ್ಷದಷ್ಟು ಹಳೆಯದಾದ ಊರಿನ ಕಾಡಿಗೆ ಹೊಸರೂಪ ಕೊಡಬೇಕು"

ನಾಗರಾಜ ಭಟ್ಟ ಮಾಜಿ ಅಧ್ಯಕ್ಷ, ವಿಲೇಜ್ ಫಾರೆಸ್ಟ್

ಹಳಕಾರದ ಸುಮಾರು 25 ಮೀನುಗಾರರ ಕುಟುಂಬಗಳು 'ವಿಲೇಜ್ ಫಾರೆಸ್ಟ್' ಉಳಿವಿಗಾಗಿಯೇ ಬೇರೆ ಊರಿಗೆ ಹೋಗಿ ಬದುಕು ಕಟ್ಟಿಕೊಂಡಿವೆ. ಹಿರಿಯರು ಪಾಲಿಸಿಕೊಂಡು ಬಂದ ಊರ ಕಾಡಿನ ನಿಯಮಗಳನ್ನು ಮುರಿಯಬಾರದು ಎಂದು ಅವರೆಲ್ಲ ಊರು ಬಿಟ್ಟು ಹೋಗಿರುವುದನ್ನು ಇಲ್ಲಿನ ಜನರು ನೋವು ಮತ್ತು ಹೆಮ್ಮೆಯಿಂದ ಹೇಳುತ್ತಾರೆ.

ಅಕ್ಕಪಕ್ಕದ ಊರುಗಳಲ್ಲಿ ನೆಲೆ ನಿಂತವರು ಬೆಳಗಾದರೆ ಒಮ್ಮೆಯಾದರೂ ತಮ್ಮ ಮೂಲ ಮನೆಗೆ ಬಂದು ಹೋಗಲೇಬೇಕು. ಅದು ಆಡಿ ಬೆಳೆದ ನೆಲದ ಸೆಳೆತ. 'ರಸ್ತೆಗೆ ಚಾಚಿಕೊಂಡು ನಿಂತ, ನಮ್ಮ ಮನೆಯಿಂದಲೇ ಕಾಣುವ ವಿಲೇಜ್ ಫಾರೆಸ್ಟ್‌ನ ಸುರಗಿ, ಹಳಚರಿ, ಹೊನಗಲು, ಮತ್ತಿ, ಧೂಪ, ನೇರಲು ಮುಂತಾದ ಮರಗಳನ್ನು ನೋಡುವುದೇ ಖುಷಿ. ಊರಿನ ಯಾರೂ ಒಂದೇ ಒಂದು ಮರವನ್ನು ಕಡಿದ ನೆನಪು ಕೆದಕಿದರೂ ಸಿಗುವುದಿಲ್ಲ' ಎಂದು ಹಳಕಾರ ವಿಲೇಜ್ ಫಾರೆಸ್ಟ್ ಉಪಾಧ್ಯಕ್ಷ ನಾಗಪ್ಪ ಹರಿಕಂತ್ರ ಭಾವುಕರಾಗುತ್ತಾರೆ.

ಹಿಂದೆ ಜಿಲ್ಲಾಧಿಕಾರಿ ಆದೇಶ ಹೊರಡಿಸಿ ಎಲ್ಲಾ 'ವಿಲೇಜ್ ಫಾರೆಸ್ಟ್'ಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂದಾಗ ಹಳಕಾರ ಪಕ್ಕದ ಚಿತ್ರಿಗಿ, ಹೊಲನಗದ್ದೆ, ಹೆಗಡೆ, ಮುಂತಾದ ವಿಲೇಜ್ ಫಾರೆಸ್ಟ್ ಸಮಿತಿಗಳು ಅರಣ್ಯ ಇಲಾಖೆಗೆ ದಾಖಲೆ ಒಪ್ಪಿಸಿಬಿಟ್ಟವು. ಕ್ರಮೇಣ ಅಲ್ಲಿದ್ದ ಕಾಡು ನಶಿಸಿದೆ. ಕೆಲ ಪ್ರದೇಶಗಳನ್ನು ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳ ಮೈದಾನ, ವಸತಿಗೃಹ ನಿರ್ಮಾಣದಂತಹ ಮುಂತಾದ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗಿದೆ.

'ಸರ್ಕಾರಕ್ಕೆ ಹಸ್ತಾಂತರವಾದ ಬೇರೆ ಬೇರೆ ವಿಲೇಜ್ ಫಾರೆಸ್ಟ್‌ಗಳು ಅರಣ್ಯ ಇಲಾಖೆಯ ಆಸ್ತಿ ಎಂಬ ಕಾರಣಕ್ಕೆ ಅದರೊಟ್ಟಿಗೆ ಹಿಂದೆ ಇದ್ದ ಜನರ ಭಾವನಾತ್ಮಕ ಸಂಬಂಧ ಕಡಿದು ಹೋದಂತಾಗಿದೆ. ರಾತ್ರಿ ಅಲ್ಲಿ ಯಾರದರೂ ಬಂದು ಮರ ಕಡಿದರೂ ಅರಣ್ಯ ಇಲಾಖೆ ಅಧಿಕಾರಿಗಳೇ ಬಂದು ನೋಡುವಂಥ ಸ್ಥಿತಿ ನಿರ್ಮಾಣವಾಗಿದೆ' ಎಂದು ವಿಲೇಜ್ ಫಾರೆಸ್ಟ್ ಕಾರ್ಯದರ್ಶಿ ಶಾಂತಾರಾಂ ಹರಿಕಂತ್ರ ಬೇಸರಿಸುತ್ತಾರೆ.

ಸ್ಥಾಪನೆ ಹೇಗೆ?

1920 ರಲ್ಲಿ ಅಂದಿನ ಮುಂಬೈ ಪ್ರಾಂತ್ಯ ಸರ್ಕಾರ ಉತ್ತರ ಕನ್ನಡ ಜಿಲ್ಲೆಯ ಅನುಪಯುಕ್ತ ಅರಣ್ಯ ನಿರ್ವಹಣೆ ಕಷ್ಟಕರ ಎಂದು ಮನಗಂಡು ಅವುಗಳನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲು ನಿರ್ಧರಿಸಿತು. ಇದಕ್ಕಾಗಿ ವೈಜ್ಞಾನಿಕ ವರದಿ ನೀಡುವಂತೆ ಜಿ.ಎಸ್. ಎಫ್ ಕಾಲಿನ್ ಎನ್ನುವ ಬ್ರಿಟಿಷ್ ಅಧಿಕಾರಿಯೊಬ್ಬರನ್ನು ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್ ಎಂದು ನೇಮಕ ಮಾಡಿತು. ಜಿಲ್ಲೆಯ ಕುಮಟಾ, ಹೊನ್ನಾವರ, ಭಟ್ಕಳ, ಅಂಕೋಲಾ ಹಾಗೂ ಹಳಿಯಾಳ ತಾಲ್ಲೂಕುಗಳ ಕಾಡನ್ನು ಅಲೆದ ಜಿ.ಎಸ್.ಎಫ್. ಕಾಲಿನ್ ಅವುಗಳನ್ನು 'ವಿಲೇಜ್ ಫಾರೆಸ್ಟ್' ಎಂದು ಗುರುತಿಸಿ ವರದಿ ನೀಡಿದರು. ಆ ವರದಿ ಆಧರಿಸಿ ಬ್ರಿಟಿಷ್ ಸರ್ಕಾರ 'ಮ್ಯಾನುವಲ್ ಫಾರೆಸ್ಟ್ ಆಕ್ಟ್' ಅಡಿಯಲ್ಲಿ ಜನರೇ ಮುಂದೆ ಈ ಅರಣ್ಯ ನೋಡಿಕೊಂಡು ಹೋಗುವಂತೆ ಆದೇಶಿಸಿತು.

12ನೇ ಪುಟಕ್ಕೆ...

ಹಳಕಾರ ವಿಲೇಜ್ ಫಾರೆಸ್ಟ್‌ನ ಪಕ್ಷಿನೋಟ... ಚಿತ್ರ: ಗೋಪಿ ಜಾಲಿ

ಕಾವಲಿಗೊಂದು ಸಮಿತಿ

1934 ರಲ್ಲಿ ಹಳಕಾರ ಗ್ರಾಮಸ್ಥರ ಕೃಷಿ ಕಾರ್ಯಕ್ಕೆ ಅನುಕೂಲವಾಗುವ ಸೊಪ್ಪು, ತರಗೆಲೆ, ಹುಲ್ಲು ಹಾಗೂ ಮನೆ ನಿರ್ಮಾಣ, ಉರುವಲು ಕಟ್ಟಿಗಾಗಿ ಉದ್ದೇಶಕ್ಕಾಗಿ ವಿಲೇಜ್ ಫಾರೆಸ್ಟ್ ಜಾರಿಗೆ ಬಂದಿತು. ಗ್ರಾಮದ ಎಲ್ಲ ಜಾತಿಯಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ತಹಶೀಲ್ದಾರ್ ಸಮ್ಮುಖದಲ್ಲಿ ಪಂಚಾಯ್ತಿಯ ಆಡಳಿತ ಮಂಡಳಿಗೆ ಆಯ್ಕೆ ಮಾಡಲಾಗುತ್ತದೆ. ಪ್ರತಿ ಮನೆಯ ರೈತರು ಇಲ್ಲಿ ಸದಸ್ಯರು, ಅವರೆಲ್ಲರಿಗೂ ಮತದಾನದ ಹಕ್ಕಿದೆ. ಒಬ್ಬ ಕಾರ್ಯದರ್ಶಿ, ಒಬ್ಬ ಕಾವಲುಗಾರರು ಕಾರ್ಯನಿರ್ವಹಿಸುತ್ತಾರೆ. ಗ್ರಾಮದಲ್ಲಿ ಕುಟುಂಬಗಳು ಬೆಳೆದರೂ ಯಾರೂ ಕಾಡನ್ನು ಅತಿಕ್ರಮಿಸದೆ ಜತನದಿಂದ ಕಾಪಾಡಿಕೊಂಡು ಬಂದ ಸಂಸ್ಥೆಯ ಶಿಸ್ತು ಮಾದರಿ.

ಲ..ಲ..ಲಸ್ಸಿ...

ಬೇಸಿಗೆಯ ಬೇಗೆಗೆ ಹಾಲ್ನೊರೆಯ ನಡುವೆ ಖೊವಾದ ಮಂದ ರಚಿಯುಳ್ಳ ತಣ್ಣನೆಯ ಲಸ್ಸಿ ಹೊಟ್ಟೆಗಿಳಿಯುತ್ತಿದ್ದರೆ ಬೆಳದಿಂಗಳಂತಹ ಅನುಭವ...

ರಶ್ಮಿ ಎಸ್

'ಆಹಹಹಾ...' ಆ ಗಾಜಿನ ಗ್ಲಾಸು ತುಟಿಗಿರಿಸಿ, ಮೊದಲ ಗುಟುಕು ಗುಟುಕರಿಸಿದ ನಂತರದ ಉದ್ಗಾರವಿದು... ಹಾಲ್ನೊರೆಯ ನಡುವೆ, ಖೊವಾದ ಮಂದ ರುಚಿ, ಮೊಸರಿನ ರುಚಿಯೊಂದಿಗೆ ಕರಗದ ಸಕ್ಕರೆಯ ಕಣ. ಗಂಟಲಿನಿಂದ ಹೊಟ್ಟೆಗಿಳಿಯುವವರೆಗೂ ಈ ಹಾಲ್ಮೊಸರಿನ ರುಚಿ ತಂಪನ್ನೀಯುತ್ತ ಹೋಗುತ್ತದೆ. ಒಂದು ಲೋಟ ಹೊಟ್ಟೆಗಿಳಿಯುವಲ್ಲಿ, ಹೊರಗಿನ ತಾಪವನ್ನೆಲ್ಲ ಈ ಬೆಳದಿಂಗಳಂತಹ ಪೇಯ, ತನ್ನೊಳಗೆಳೆದುಕೊಳ್ಳುತ್ತದೆ.

ಇದು ಲಸ್ಸಿ. ಇದೇ ಲಸ್ಸಿ. ಹಾಲ್ನೊರೆಯೊಳಗೆ, ಬೆಳ್ಮುಗಿಲಿನಂಥ ಮೊಸರಿನ ಕಣಗಳು ಒಂದಾಗುತ್ತ ಹೋಗುತ್ತವೆ. ಸಕ್ಕರೆ ಕಣವೂ ಕರಗುವಾಗಲೇ ಗರಗರನೆ ತಿರುಗಿದ ಸುಳಿಯೊಳಗೆ ಒಂದೆರಡು ಐಸ್ ಕ್ಯೂಬ್ ಹಾಕಿ, ಲೋಟಕ್ಕೆ ಸುರಿದು, ಚಮಚದಿಂದ ಕೆಳಗಿಳಿಯಲಾರೆ ಎಂದು ಹಟ ಹಿಡಿದ ಖೊವಾವನ್ನು ಗ್ಲಾಸಿನ ಅಂಚಿಗೆ ಇಳಿಸಿ ಕೊಡುತ್ತಾರೆ. ಮೂವತ್ತು ರೂಪಾಯಿಯ ಈ ಲಸ್ಸಿ, ಹಸಿದವರ, ಶ್ರಮಿಕರಿಗೆ ಆಸರೆ. ಸಂತೆಗೆಂದು ಮಧ್ಯಾಹ್ನ ಬಜಾರ್‌ಗೆ ತಲುಪುವ ಹಳ್ಳಿ ಜನ, ಒಂದು ಲಸ್ಸಿ ಕುಡಿದು, ದಿನವಿಡೀ ದುಡಿದು ಮನೆಗೆ ಮರಳುತ್ತಾರೆ.

ನಲ್ವತ್ತು ವರ್ಷಗಳ ಹಿಂದೆ ಬೀದರಿನಲ್ಲಿ ಲಸ್ಸಿ ಮಾರಾಟದಲ್ಲಿ ತೊಡಗಿರುವ ಕುಟುಂಬ ಮೊಹಮ್ಮದ್ ಮೊಯಿಸ್ ಅವರದ್ದು. ಅವರ ಸಹೋದರ ಮೊಹಮ್ಮದ್ ವಾಜೀದ್ ಈಗ ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಹಿಂದೆಲ್ಲ ಬೇಸಿಗೆಯಲ್ಲಿ ಮಾತ್ರ ಲಸ್ಸಿ ಮಳಿಗೆ ಹಾಕುತ್ತಿದ್ದರು. ಇದೀಗ ವರ್ಷಪೂರ್ತಿ ನಡೆಸಿಕೊಂಡು ಬರುತ್ತಿದ್ದಾರೆ. ಬಂಗಾರ ತೊಲಕ್ಕೆ (ಹತ್ತು ಗ್ರಾಂ) ಎರಡೂವರೆ ಸಾವಿರ ರೂಪಾಯಿ ಇದ್ದ ಕಾಲದಲ್ಲಿ ಲಸ್ಸಿ ಬೆಲೆ ಒಂದು ರೂಪಾಯಿ ಇತ್ತು. ಇದೀಗ ಎರಡೂ ಹೆಚ್ಚಾಗಿವೆ ಎನ್ನುವುದು ಗಾಂಧಿಗಂಜ್‌ನಲ್ಲಿರುವ ಬೆಲ್ಲದ ಬಾಬು ಅವರ ಮಾತು. ಬಂಗಾರದಲ್ಲಿ ಹೇಗೆ ಹೆಚ್ಚು ಮಿಶ್ರಣ ಮಾಡಲಾಗುವುದಿಲ್ಲವೋ ಲಸ್ಸಿಯಲ್ಲಿಯೂ ಏನನ್ನೂ ಬೆರೆಸಬಾರದು ಎನ್ನುವುದೂ ಅವರ ಅಭಿಪ್ರಾಯ.

ಲಸ್ಸಿ ಅಂದ ತಕ್ಷಣ ನೆನಪಾಗುವುದು ಕಂಚಿನ ಲೋಟ, ಪಂಜಾಬಿನ ಸರದಾರ್‌ಜಿಗಳು. ಅವರ ಲಸ್ಸಿ ಬೀದರ್‌ವರೆಗೂ ಪಯಣ ಮಾಡಿದ್ದು, ರೂಪಾಂತರವಾಗಿದ್ದು ಒಂದು ಹೊಸ ಕಥೆ. ಹೊಟ್ಟೆಗೆ ತಂಪೆರೆಯುವ ಪಿತ್ತನಾಶಕ ಲಸ್ಸಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಡಕೆಯಲ್ಲಿ ಹೆಪ್ಪಿಟ್ಟ ಹಾಲು ಹಾಕಿ, ಗಟ್ಟಿ ಮೊಸರಿಗೆ ಇನ್ನಷ್ಟು ಹಾಲು ಸೇರಿಸಿ, ಚೇತೋಹಾರಿ ಪೇಯ ಸಿಂಧೂ ನಾಗರಿಕತೆಯ ದಿನಗಳಿಂದಲೂ ಬಳಕೆಯಲ್ಲಿದೆ. ಮೊದಲು ಇದಕ್ಕೆ ಕೆಂಪು ಸಕ್ಕರೆ ಬೆರೆಸುತ್ತಿದ್ದರಂತೆ.

ಬೀದರ್‌ನ ಉಸ್ಮಾನ್ ಗಂಜ್‌ನಲ್ಲಿರುವ ಈ ಲಸ್ಸಿ ಮಳಿಗೆ ಕಳೆದ ಮೂರು ದಶಕಗಳಿಂದಲೂ ಸಿರಿಮಂಡಲ ಗ್ರಾಮದಿಂದ ಒಂದೂವರೆ ಕ್ವಿಂಟಲ್‌ನಷ್ಟು ಹಾಲು ಖರೀದಿಸುತ್ತದೆ. ಒಂದು ಭಾಗ ಹಾಲನ್ನು ಹಿತೋಷ್ಣದಲ್ಲಿ ಕಾಯಿಸಿ, ಕೆನೆತೆಗೆದು, ಇನ್ನೊಂದು ಭಾಗ ಹಾಲಿಗೆ ಹೆಪ್ಪು ಹಾಕಿ, ಬೆಳ್ಮೊಸರು ತಯಾರಿಸುತ್ತಾರೆ. ಮತ್ತೊಂದು ಭಾಗ ಹಾಲನ್ನು ಕಾಯಿಸುತ್ತ, ಕಾಯಿಸುತ್ತ, ಕೈ ಆಡಿಸುತ್ತ ಖೊವಾ ತಯಾರಿಸುತ್ತಾರೆ. ಇಂದಿಗೂ ಸಾಂಪ್ರದಾಯಿಕ ಭಟ್ಟಿ ಒಲೆಗಳಲ್ಲಿಯೇ ಹಾಲು ಕಾಯಿಸುವ ಕೆಲಸ ಸಾಗುತ್ತಿದೆ.

ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಕಾಯಿಸಲು ಸೌದೆ ಒಲೆಗಳಂಥ ಭಟ್ಟಿಗಳೇ ಬೇಕು. ಇಲ್ಲದಿದ್ದಲ್ಲಿ ತಳದಲ್ಲಿ ಚೂರೆ ಚೂರು ಹಾಲು ಹೊತ್ತಿದರೂ ಇಡೀ ಲಸ್ಸಿಯ ಸ್ವಾದದಲ್ಲಿ ಸುಟ್ಟ ವಾಸನೆ ಬರುತ್ತದೆ. ಮೊಸರು ಹುಳಿಯಾಗುತ್ತದೆ. ಖೊವಾ ಸಹ ಕಡುಕಂದು ಬಣ್ಣದೊಂದಿಗೆ ಸುಟ್ಟ ಅಡ್ಡ ವಾಸನೆ ಬರುತ್ತದೆ. ಆ ಕಾರಣಕ್ಕೆ ಇವರು ಹಾಲು ಕಾಯಿಸುವ ಪ್ರಕ್ರಿಯೆಯಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳುವುದಿಲ್ಲ.

75 ವರ್ಷಗಳಿಂದಲೂ ಹಸನ್‌ಪಾಶಾ ಲಸ್ಸಿ ಮಳಿಗೆ ಬೇಸಿಗೆಯಲ್ಲಿ ಜನರ ದಾಹಕಳೆಯಲೆಂದೇ ಕಾರ್ಯನಿರ್ವಹಿಸುತ್ತಿದೆ. ಲಸ್ಸಿ ಬೇಕೆಂದರೆ ಉಸ್ಮಾನ್ ಗಂಜ್‌ಗೆ ಜನ ಬರುತ್ತಿದ್ದರು. ಇದೀಗ ಅಲ್ಲಲ್ಲಿ ಇಂಥ ಕೇಂದ್ರಗಳು ಆಗಿವೆ. ಲಸ್ಸಿಗೆ ಒಂದಿನಿತು ಏಲಕ್ಕಿ ಪುಡಿ ಹಾಕುವುದು ಕೆಲವು ಕಡೆ ರೂಢಿಯಲ್ಲಿದೆ. ಇನ್ನೂ ಕೆಲವೆಡೆ ಸೂಪರ್ ಡಿಲಕ್ಸ್ ಹೆಸರಿನಲ್ಲಿ ಗೋಡಂಬಿ ಮತ್ತು ಬಾದಾಮಿಯ ಚೂರುಗಳನ್ನು ಬೆರೆಸಿ ಕೊಡುತ್ತಾರೆ.

11ನೇ ಪುಟಕ್ಕೆ...

ಬೇಸಿಗೆಯ ಬೇಗೆ ತಣಿಸುವ ಬಗೆ

ಲಸ್ಸಿ ಪಂಜಾಬಿಗಳಿಗೇಕೆ ಇಷ್ಟ...

ಗೋದಿ ಮತ್ತು ಸಾಸಿವೆಯನ್ನೇ ಹೆಚ್ಚು ಬೆಳೆಯುವ ಪಂಜಾಬ್‌ನಲ್ಲಿ ಉಳುಮೆ ಮಾಡುವ ಮೊದಲು ಜಮೀನನ್ನು ಹುಲ್ಲುಗಾವಲಾಗಿ ಬಿಡುತ್ತಿದ್ದರಂತೆ. ಆ ಹುಲ್ಲನ್ನು ಮೇವಿಗೆ ಬಳಸಲಾರಂಭಿಸಿದರು. ಮೇವು ಹೆಚ್ಚಿರುವಾಗ ಹೈನು ಸಮೃದ್ಧವಾಗುತ್ತದೆ. ಹೀಗೆ ಸಮೃದ್ಧವಾದ ಹಾಲು ಮೊಸರಿನಿಂದ ಖಾದ್ಯಗಳನ್ನು ತಯಾರಿಸತೊಡಗಿದರು. ಮಡಕೆಯಲ್ಲಿ ಹಾಲು ಹೆಪ್ಪು ಹಾಕಿಟ್ಟರೆ ಗಟ್ಟಿ ಮೊಸರು ಸಿಗುತ್ತದೆ. ತಿನ್ನಲು ರುಚಿಯಾಗಿರುತ್ತದೆ. ಹಾಲಿನೊಂದಿಗೆ ಬೆರೆಸಿ ಕುಡಿದರೆ ಚೈತನ್ಯಪೂರ್ಣವಾಗಿರುತ್ತದೆ ಎಂಬುದು, ಹಳೆಯ ತಲೆಮಾರುಗಳು ಕಂಡುಕೊಂಡ ಸತ್ಯ. ಅದು ತಲೆಮಾರುಗಳಿಂದಾಚೆ ವರ್ಗವಾಗುತ್ತಲೇ ಬಂದು ಈ ಸಾಂಪ್ರದಾಯಿಕ ಜ್ಞಾನ ಈಗ ಪಂಜಾಬಿಗಳು ನೆಲೆಸಿದೆಡೆಯೆಲ್ಲ ಜನಪ್ರಿಯವಾಗಿವೆ. ಆಯಾ ನೆಲದ ಸಂಸ್ಕೃತಿಯೊಂದಿಗೆ ಬೆರೆತು ಹೊಸ ರೂಪವನ್ನೂ ಪಡೆಯುತ್ತಿದೆ.

ಕಾಲಕ್ಕೆ ತಕ್ಕಂತೆ ಬದಲು...

ಮಕ್ಕಳನ್ನು ಲಸ್ಸಿ ರುಚಿಗೆ ಸೆಳೆಯಲು ಇದೀಗ ಲಸ್ಸಿಗೆ ವೆನಿಲಾ ಐಸ್‌ಕ್ರೀಂ ಬೆರೆಸಿ, ಚಾಕ್ಲೆಟ್ ಸಿರಪ್ ಸುರಿದು ನೀಡಲಾಗುತ್ತದೆ. ಜಿಮ್‌ಗೆ ಹೋಗಿ ಬರುವ ಯುವಜನಾಂಗ ಬಾದಾಮಿ ಹೇರಳವಾಗಿರಬೇಕು ಎಂದು ಬಯಸುತ್ತಾರೆ. ಒಣಹಣ್ಣುಗಳಿರುವ ಪ್ರೀಮಿಯಂ ಲಸ್ಸಿ, ಐಸ್‌ಕ್ರೀಂ ಇರುವ ಲಸ್ಸಿಗಳೆಲ್ಲ ಮೂವತ್ತರಿಂದ ಎಂಬತ್ತು ರೂಪಾಯಿಗಳವರೆಗೂ ಸಿಗುತ್ತವೆ.

ಆದರೆ ಈಗಲೂ ಲಸ್ಸಿ ಪ್ರಿಯರು ಲಸ್ಸಿ ಅಂದ ತಕ್ಷಣ, ಉಸ್ಮಾನ್ ಗಂಜಿನತ್ತಲೇ ಪಯಣ ಬೆಳೆಸುವುದು, ಸಿರಿಮಂಡಲದ ಸಿರಿಯಂತಿರುವ ಹಾಲಿನ ಲಸ್ಸಿಗೆ.

ಮತದಾರರಿಗೆ ವ್ಯಂಗ್ಯದ ಪಾಠ

ವ್ಯಂಗ್ಯಚಿತ್ರಗಳು, ಬರಹ: **ಈರಣ್ಣ ಬೆಂಗಾಲಿ**

ಎಷ್ಟೋ ಸಲ ಒಳ್ಳೆಯ ಮಾತು, ಬೋಧನೆ, ಪ್ರವಚನ ಪರಿಣಾಮ ಬೀರದೆಯೂ ಇರಬಹುದು. ಆದರೆ ಒಂದೇ ಒಂದು ಚುಚ್ಚುಮಾತು ದೊಡ್ಡ ಬದಲಾವಣೆಯನ್ನೇ ತರಬಹುದು. ಪ್ರತಿ ಚುನಾವಣೆ ಸಮಯದಲ್ಲಿ ಮತದಾನ ಹೆಚ್ಚಳ ಮತ್ತು ನಿಷ್ಪಕ್ಷಪಾತ ಮತ್ತು ನಿರ್ಭೀತ ವಾತಾವರಣ ಸೃಷ್ಟಿಗೆ ಚುನಾವಣಾ ಆಯೋಗವು ಹಲವು ಬಗೆಯ ಕಸರತ್ತುಗಳನ್ನು ಮಾಡುತ್ತದೆ. ಅದರ ಮತ್ತೊಂದು ಭಾಗ ವ್ಯಂಗ್ಯಚಿತ್ರಗಳ ಬಳಕೆ.

ವ್ಯಂಗ್ಯಭರಿತ ಚಿತ್ರಗಳು ತತ್‌ಕ್ಷಣಕ್ಕೆ ಮುಖದ ಮೇಲೆ ನಗೆ ತರಿಸುತ್ತವೆ. ತನ್ನ ಡೊಂಕುರೇಖೆಗಳಿಂದ ವಿಷಯದ ಮಗ್ಗಲುಗಳನ್ನು ಅನಾವರಣ ಮಾಡುತ್ತವೆ. ಮನಸ್ಸಿಗೆ ಆಳವಾಗಿ ನಾಟುವ ಮೂಲಕ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸುತ್ತವೆ. ಜನರಲ್ಲಿ ಅರಿವು ಮೂಡಿಸಲು ವ್ಯಂಗ್ಯಚಿತ್ರವೂ ಪ್ರಬಲ ಮಾಧ್ಯಮವಾಗಿದೆ. ಜನನಿಬಿಡ ಪ್ರದೇಶಗಳಲ್ಲಿ ಡಿಜಿಟಲ್ ರೂಪದಲ್ಲಿ ಅಥವಾ ಮುದ್ರಣ ಮಾಧ್ಯಮದಲ್ಲಿ ವ್ಯವಸ್ಥಿತವಾಗಿ ಇರಿಸಿ, ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ.

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಚುನಾವಣಾ ಆಯೋಗವು ಅರ್ಹ ಮತದಾರರು ಮತದಾನ ಮಾಡುವಂತೆ ಪ್ರೇರೇಪಿಸಲು ಹಲವು ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು, ಮತದಾನದ ಮಹತ್ವ ಸಾರುವ ವ್ಯಂಗ್ಯಚಿತ್ರಗಳು ಪ್ರಮುಖ ಪಾತ್ರ ವಹಿಸುತ್ತವೆ. ವಿಭಿನ್ನವಾಗಿ ಯೋಚಿಸಿ ವ್ಯಂಗ್ಯಚಿತ್ರ ರಚಿಸುವ ವ್ಯಂಗ್ಯಚಿತ್ರಕಾರರ ಕೌಶಲ, ಚಾಕಚಕ್ಯತೆಯನ್ನು ಮೆಚ್ಚಲೇಬೇಕು.

ನಾವು ಮೊದಲು ವೋಟ್ ಹಾಕಿ ಬರೋಣ, ನಂತರ ಧಾರಾವಾಹಿಗಳ ಬಗ್ಗೆ ಮಾತಾಡೋಣ.

ಹಲೋ.. ಅಂಕಲ್ ಅಪ್ಪ, ಅಮ್ಮ ವೋಟ್ ಹಾಕೋಕೆ ಹೋಗಿದ್ದಾರೆ ನೀವು ವೋಟ್ ಹಾಕಿದ್ರಾ?

ಮತ ಮಾರಿಕೊಳ್ಳದಿರಿ – ಸುದ್ದಿ

ಚುನಾವಣೆ ವ್ಯಾಪಾರವಲ್ಲ. ನಾನು ಮಾರಾಟಕ್ಕೆ ಇಲ್ಲ

ಕರಿಮಣಿ ಮಾಲೀಕ ಹಾಡು ಫುಲ್ ವೈರಲ್ –ಸುದ್ದಿ

ನಮ್ಮ ನಮ್ಮ ವೋಟಿಗೆ ನಾವೇ ಮಾಲೀಕರು. ನಾವು ತಪ್ಪದೇ ವೋಟ್ ಮಾಡಲೇ ಬೇಕು...

ಕೊನೆಗೂ ಸಿಕ್ಕ ಸುಂದರಾಂಗ

ಬಾಲದಂಡೆ ಹಕ್ಕಿಯನ್ನು ನೋಡುವುದೇ ಸೊಗಸು. ಇಂಥ ಹಕ್ಕಿಯನ್ನು ಅರಸಿ ಹಲವು ವರ್ಷಗಳ ಅಲೆದಾಡಿದ ಲೇಖಕರು ತುಮ್ಕೂರಿನ ನೀಲಗಿರಿ ನೆಡುತೋಪಿನಲ್ಲಿ ಕಂಡು ರೋಮಾಂಚನಗೊಂಡ ಅನುಭವ ಕಥನವಿದು.



ಬಾಲದಂಡೆ ಗಂಡು ಹಕ್ಕಿ

ಕೆ.ಎಸ್. ಮುರುಗೇಂದ್ರ

ಡಾ. ಸಲೀಂ ಅಲಿ ಅವರ 'ದ ಬುಕ್ ಆಫ್ ಇಂಡಿಯನ್ ಬರ್ಡ್ಸ್' ಪುಸ್ತಕದ ಮುಖಪುಟದಲ್ಲಿ ಈ ಸುರಸುಂದರಾಂಗ ರಾಜನ ಚಿತ್ರವೇ ರಾರಾಜಿಸುತ್ತಿದೆ. ಅಲ್ಲದೇ ಈಗಿನ ಜನಪ್ರಿಯ ಸಾಮಾಜಿಕ ಮಾಧ್ಯಮದಲ್ಲೂ ಇದರದೇ ರಾಜ್ಯಭಾರ!

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಹೆಸರಾಂತ ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರನ್ನು ಮೂಡಿಗೆರೆ ಸಮೀಪವಿರುವ ಅವರ 'ನಿರುತ್ತರ' ಮನೆಯಲ್ಲಿ ಭೇಟಿ ಮಾಡಿ ನಾನು ತೆಗೆದಿದ್ದ ಪಕ್ಷಿಗಳ ಚಿತ್ರಗಳನ್ನು ತೋರಿಸಿದೆ. ಆಗ ಅವರು ಕಂದುಬಣ್ಣದ ಬಾಲದಂಡೆ ಹಕ್ಕಿ(ಪ್ಯಾರಡೈಸ್ ಫ್ಲೈ ಕ್ಯಾಚರ್)ಅನ್ನು ನೋಡಿದವರು 'ಬಿಳಿಯ ಬಣ್ಣದ ಸುಂದರ ಪಕ್ಷಿಯನ್ನು ನೋಡಿದ್ದೀರಾ' ಎಂದು ಕೇಳಿದ್ದರು. ಕೊಂಡಜ್ಜಿಯ ಕಾಡಲ್ಲಿ ಮತ್ತು ದೃಶ್ಯ ಕಲಾ ಮಹಾವಿದ್ಯಾಲಯದ ಆವರಣದಲ್ಲಿ ಮಿಂಚಿನಂತೆ ಹಾರಿ ಹೋಗಿದ್ದನ್ನು ದೂರದಿಂದ ಗಮನಿಸಿದ್ದೆವು. ಅಂದಿನಿಂದ ಅದನ್ನು ಹುಡುಕುತ್ತಲೇ ಇದ್ದೆವು.

ಕಳೆದುಕೊಂಡ ಜಾಗದಲ್ಲೇ ಹುಡುಕಬೇಕು ಎಂಬಂತೆ, ಅಂದು ಕಂದುಬಣ್ಣದ ಹಕ್ಕಿಚಿತ್ರ ತೆಗೆದಿದ್ದ ಜಾಗದಲ್ಲೇ ಹುಡುಕಲು ನಿರ್ಧರಿಸಿ, ದಾವಣಗೆರೆಯಿಂದ ಸುಮಾರು 60 ಕಿಲೊಮೀಟರ್ ದೂರದ ಹೊಳೆಹೊನ್ನೂರು ಬಳಿಯ ಕನಸಿನಕಟ್ಟೆ ಗ್ರಾಮದ (ಪೂರ್ಣಚಂದ್ರ ತೇಜಸ್ವಿಯವರ ಗೆಳೆಯರಾದ ರೈತ ಮುಖಂಡ ಕಡಿದಾಳು ಶಾಮಣ್ಣನವರ ಊರು) ಸುತ್ತಮುತ್ತಲೂ ಹಲವು ಬಾರಿ ಅಲೆದಾಡಿದರೂ, ಕಂದುಬಣ್ಣದ ಹಕ್ಕಿ ಕಂಡಿತ್ತೇ ಹೊರತು ಈ ಸುಂದರ ಮಹಾರಾಜ ದರ್ಶನವನ್ನು ಕರುಣಿಸಲೇ ಇಲ್ಲ.

ದಾವಣಗೆರೆ ಬಳಿಯ ಕೊಂಡಜ್ಜಿ ಕಾಡಲ್ಲಿ ಆಗಾಗ ತಿರುಗಾಡಿದರೂ ಈ ಹಕ್ಕಿ ಕಾಣಿಸಿರಲಿಲ್ಲ. ಹೀಗೆ ಹುಡುಕುತ್ತಿರುವಾಗ, ಅಲ್ಲೇ ಹಾದು ಹೋಗುತ್ತಿದ್ದ ವ್ಯಕ್ತಿಯೊಬ್ಬರು 'ಏನ್ ಮಾಡ್ತಾ ಇದ್ದೀರಿ' ಎಂದು ಕೇಳಿದರು. 'ಹಕ್ಕಿ ಫೋಟೊ ತೆಗೀತಿದ್ದೀವಿ...' ಎಂದೆ. ಅವರು 'ಯಾವ ಹಕ್ಕಿ...' ಎಂದಾಗ ಸ್ವಲ್ಪ ಅಸಡ್ಡೆಯಿಂದ ಉತ್ತರಿಸುತ್ತಿರುವಾಗ, 'ಬಿಳಿ ಗುಬ್ಬೀನಾ...' ಅಂದರು. ಕೂಡಲೇ ನಾವು ಅಲರ್ಟ್ ಆಗಿ, 'ಹೌದೌದು...' ಎಂದೆವು. 'ಹೇ... ಅಲ್ಲಿ ಇದಾವೆ...' ಎಂದಾಗ 'ನಮಗೆ ಕುತೂಹಲ ಹೆಚ್ಚಾಯಿತು. ಕೂಡಲೇ ಮೊಬೈಲ್ ಫೋನ್‌ನಲ್ಲಿದ್ದ ಆ ಹಕ್ಕಿಯ ಚಿತ್ರವನ್ನು ತೋರಿಸಿದೆವು. 'ಹೌದು... ಇದೇ...' ಅಂದಕೂಡಲೇ ಆ ವ್ಯಕ್ತಿಯನ್ನು ಕರೆದುಕೊಂಡು ಆ ಜಾಗಕ್ಕೆ ಹೋದೆವು. ಅಲ್ಲಿ ಹುಡುಕಿದರೆ ಎಲ್ಲಿಯೂ ಕಾಣಿಸಲಿಲ್ಲ. 'ಈಗ ನೋಡಿದ್ದೆ, ಬೆಳಿಗ್ಗೆ ಬನ್ನಿ' ಅಂದರು. ನಾವು ನಿರಾಶೆಯಿಂದ ಹಿಂದಿರುಗಿದ್ದೆವು.

ಕೆಲಸದ ನಿಮಿತ್ತ, ಮಾರನೇ ದಿನ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಕೆಲವು ದಿನಗಳ ನಂತರ ಆ ಸ್ಥಳಕ್ಕೆ ಹೋದಾಗ, ಅದೇ ವ್ಯಕ್ತಿ ನಮ್ಮನ್ನು ನೋಡಿ, 'ರ್ರೀ..ರ್ರೀ..ಈಗ ಇಲ್ಲೇ ಇತ್ತು...ಅದೋ ಅಲ್ಲಿ' ಎಂದು ಕೈ ತೋರಿಸಿದರು. ನಾವು ಅವರು ತೋರಿಸಿದ ದಿಕ್ಕಿನಡೆ ನೋಡತೊಡಗಿದೆವು. ನೀಲಗಿರಿ ಮರಗಳ ನೆಡುತೋಪಿನ ನೆರಳಿನ ನಡುವೆ, ಹಸಿರು ಹಿನ್ನೆಲೆಯಲ್ಲಿ ಮಿಂಚಿನಂತೆ ಹಾರಾಡುತ್ತಿದ್ದ, ಬಿಳಿಬಣ್ಣದ ಹಕ್ಕಿಯನ್ನು ನೋಡಿ ರೋಮಾಂಚನವಾಯಿತು. ಕೂಡಲೇ ಆಕರ್ಷಣ್ ಚಕಚಕನೇ ಫೋಟೊ ತೆಗೆಯತೊಡಗಿದ. ಕಣ್ಣುಮುಚ್ಚಿ ತೆಗೆಯುವುದರಲ್ಲಿ, ಬಿಳಿಸೀರೆ ಉಟ್ಟ ಪುಟ್ಟ ಹುಡುಗಿ ನಿಂತ ಕಡೆ ನಿಲ್ಲಲಾರದೆ ಸೆರಗನ್ನು ಗಾಳಿಪಟದಂತೆ ಹಾರಿಸುತ್ತಾ ಚಂಗಚಂಗನೇ ಕುಣಿಯುತ್ತಾ, ನೆಗೆಯುತ್ತಾ ಇರುವಂತೆ ಕೊಂಬೆಯಿಂದ ಕೊಂಬೆಗೆ ಹಾರುತ್ತಿರುವುದನ್ನು ನೋಡುವುದೇ ಬಲು ಸೊಗಸು.

ಇದಕ್ಕೆ ರಾಜ ಹಕ್ಕಿಯಂತಲೂ ಕರೆಯುತ್ತಾರೆ. ಹಿಂದಿಯಲ್ಲಿ ದೂಧ್‌ರಾಜ್, ಸುಲ್ತಾನ ಎಂತಲೂ, ಸಂಸ್ಕೃತದಲ್ಲಿ ಅರ್ಜುನಕ, ರಜ್ಜುವಾಲ ಎನ್ನುತ್ತಾರೆ.

ಬುಲ್ ಬುಲ್ ಗಾತ್ರದ ಹೊಳೆಯುವ ನೀಲಿಗಪ್ಪು ಬಣ್ಣದ ಮುಖಕ್ಕೆ, ಅದೇ ಬಣ್ಣದ ಕಿರೀಟ (ಚೊಟ್ಟಿ) ಹೊಂದಿರುವ ಈ ಹಕ್ಕಿಯ ಉಳಿದ ಭಾಗ ಬಿಳಿಬಣ್ಣದಿಂದ ಕೂಡಿರುತ್ತದೆ. ಇದರ ವಿಶೇಷತೆ ಅಂದರೆ ದೇಹ ಗಾತ್ರದ ಮೂರಷ್ಟು ಉದ್ದದ ನೀಳವಾದ ಎರಡು ಬಾಲದ ಪುಕ್ಕಗಳು ಇರುತ್ತವೆ. ಆದರೆ ಮರಿ ಮಾಡಲು ಶಕ್ಯತೆ ಹೊಂದಿರುವ ಉಪವಯಸ್ಕ(Sub-adult) ಗಂಡು ಹಕ್ಕಿ ಹೊಟ್ಟೆ ಭಾಗ ಬಿಳಿ ಬಣ್ಣದಿಂದ ಕೂಡಿದ್ದು, ಮುಖ, ಚೊಟ್ಟಿಯನ್ನು ಹೊರತುಪಡಿಸಿ ಉಳಿದದ್ದು ಕಂದು ಬಣ್ಣವಿರುತ್ತದೆ. ಹೆಣ್ಣು ಬಣ್ಣದಲ್ಲಿ Sub-adult ಗಂಡಿನಂತೆ ಇದ್ದು, ನೀಳವಾದ ಬಾಲವನ್ನು ಹೊಂದಿರುವುದಿಲ್ಲ.

ಈ ಹಕ್ಕಿಗಳು ಭಾರತ, ಬರ್ಮಾ, ಪಾಕಿಸ್ತಾನ, ಸಿಲೋನ್ ಬಂಗ್ಲಾದೇಶಗಳಲ್ಲಿ ಕಾಣಸಿಗುತ್ತವೆ. ಪ್ರಧಾನವಾಗಿ ಹೊರಗಿನಿಂದ ವಲಸೆ ಬರುತ್ತವೆ. ಭಾರತದಲ್ಲಿರುವ ಈ ಹಕ್ಕಿಯು ಕಂದುಬಣ್ಣದಿಂದ ಬಿಳಿಬಣ್ಣಕ್ಕೆ ಬದಲಾಗುತ್ತದೆ. ಆದರೆ ಕೆಲವು ಪ್ರದೇಶಗಳಲ್ಲಿ ಕಂದುಬಣ್ಣದಿಂದ ಬಿಳಿಬಣ್ಣಕ್ಕೆ ಬದಲಾಗುವುದಿಲ್ಲ. ಸ್ಥಳೀಯವಾಗಿ ಬಂಡಿಪುರ, ನಂದಿಬೆಟ್ಟ, ಸಾವನದುರ್ಗ, ದೇವರಾಯನದುರ್ಗ, ಬನ್ನೇರುಘಟ್ಟದಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ.

ಇವುಗಳು ನೀರು ಹತ್ತಿರ ಇರುವಂತಹ ನೆಡುತೋಪು, ಬಿದಿರುಮೆಳೆ, ತೋಟ, ಜನವಸತಿ ಪ್ರದೇಶದ ಬಳಿ ಕಂಡು ಬರುತ್ತವೆ. ಇವು ನೊಣ, ಹುಳು, ಚಿಟ್ಟೆಗಳನ್ನು ತಿನ್ನುತ್ತವೆ. ಫೆಬ್ರುವರಿಯಿಂದ ಜುಲೈವರೆಗೆ ಸುಮಾರು ಆರು ಅಡಿ ಎತ್ತರದ ಮರದ ಬೆರಳು ಗಾತ್ರದ ಕೊಂಬೆಗಳ ಕವಲುಗಳಲ್ಲಿ ಹುಲ್ಲು, ನಾರುಗಳಿಂದ ಜೇಡರಬಲೆಯನ್ನು ಬಳಸಿ ಬಟ್ಟಲಿನಾಕಾರದ ಗೂಡು ಕಟ್ಟಿ, ಎರಡರಿಂದ ಐದು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ. ಗಂಡು-ಹೆಣ್ಣು ಎರಡೂ ಹಕ್ಕಿಗಳು ಮೊಟ್ಟೆ-ಮರಿಗಳನ್ನು ಪೋಷಿಸುತ್ತವೆ.

ಬಾಲದಂಡೆ ಹೆಣ್ಣುಹಕ್ಕಿ ಚಿತ್ರಗಳು - ಆಕರ್ಷಣ್

ವೃದ್ಧರ ಬದುಕಿನ ನೋವಿನ ಹಾಡು

ಕೆ.ನರಸಿಂಹಮೂರ್ತಿ

ವೃದ್ಧರ ಬದುಕಿನ ಏಕಾಂಗಿತನ, ಅನಾಥಪ್ರಜ್ಞೆ, ಕಿವಿ ಕೇಳದ, ಕಣ್ಣು ಕಾಣದ, ಸರಿಯಾಗಿ ನಡೆಯಲೂ ಆಗದೆ ಬಾಧಿಸುವ ಅನಾರೋಗ್ಯ, ಮಕ್ಕಳ ಬರುವಿಕೆಗಾಗಿ ಕಾದು ಪ್ರಾಣಬಿಡುವ ಜೀವಗಳು.. ಇಂಥ ಸಮಸ್ಯೆಗಳ ಬಗ್ಗೆ ಹಿರಿಯರೇ ನಾಟಕ ಬರೆದು, ತಾಲೀಮು ನಡೆಸಿ ಅಭಿನಯಿಸಿದರೆ ಹೇಗಿರುತ್ತದೆ ಎಂಬ ಕಲ್ಪನೆಯ ಸ್ಪಷ್ಟ ಚಿತ್ರವೇ 'ಅಯಾನ್ ಶಾಂತಿ ಕುಟೀರ'

ಮೈಸೂರಿನ ಕಿರು ರಂಗಮಂದಿರದಲ್ಲಿ 'ಸರಸ್ವತಿಪುರಂ ಮಧ್ಯದಲ್ಲಿರುವ ತೆಂಗಿನತೋಪಿನ ಹವ್ಯಾಸಿಗಳ ತಂಡ' ಪ್ರದರ್ಶಿಸಿದ ಈ ನಾಟಕದಲ್ಲಿ ವೃದ್ಧಾಶ್ರಮ ಮತ್ತು ವೃದ್ಧಾಪ್ಯವೇ ಪ್ರಧಾನ ಪಾತ್ರಗಳು. ಉಳಿದ ಪಾತ್ರಗಳೆಲ್ಲವೂ ಅವುಗಳನ್ನು ಅನುಸರಿಸುತ್ತವಷ್ಟೇ. ಇದು ವೃದ್ಧಾಪ್ಯವೇ ಮೈವೆತ್ತ ನಾಟಕ.

ಅಲ್ಲಿ, ನಡೆಯಲು ಆಗದೆ ಗಾಲಿ ಕುರ್ಚಿ ಅವಲಂಬಿಸಿದ ವೃದ್ಧ ಶ್ರೀನಾಥ, ಮಗನಿಗಾಗಿ ಕಾದು ನಿರಾಶೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುವ ವೃದ್ಧೆ ನವೀನಮ್ಮನಿಂದ, ವೃದ್ಧರ ಆರೈಕೆ ಮಾಡುವ 25ರ ಮೋಹಕ ನಿಲುವಿನ, ಸುಂದರ ತರುಣಿ ಶೋಭಾವರೆಗೆ ಎಲ್ಲ ಪಾತ್ರಗಳೂ ವೃದ್ಧಾಪ್ಯದ ಸಮಸ್ಯೆಗಳಿಗೆ ವೈವಿಧ್ಯಮಯ ಕನ್ನಡಿ ಹಿಡಿಯುತ್ತವೆ. ಆದರೆ ಬದುಕು ಸಾಕೆನಿಸುವಂತೆ ಮಾಡುವ ವೃದ್ಧಾಪ್ಯ, ಸಾವು-ನೋವಿನ ನಡುವೆಯೇ 'ಸರ್ವೇಜನಾ ಸುಖಿನೋಭವಂತು' ಸಂದೇಶವೂ ಹೊರಬೀಳುತ್ತದೆ.

ಇದು ವೃದ್ಧಾಪ್ಯದ ಎಲ್ಲ ಸಂಕಟಗಳನ್ನೂ ಮೀರಿ ನಿಂತಾಗ ಮೂಡುವ ಲೋಕದೃಷ್ಟಿ. ವೃದ್ಧರ ಲವಲವಿಕೆಯ ದೃಷ್ಟಿಕೋನ, ನಿರಾಶೆಯ ನಿಲುವುಗಳೆರಡಕ್ಕೂ ನಾಟಕ ಸಾಕ್ಷಿಯಾಗಿದೆ.

ಸರ್ವರಿಗೂ ಸುಖ-ಶಾಂತಿ ಕೋರುವ ವೃದ್ಧಪಾತ್ರಗಳೆಲ್ಲವೂ ಕುಟೀರದಲ್ಲಿ ದುಃಖ ಕ್ಷೋಭೆಯ ಮಡುವಿನಲ್ಲಿವೆ. ನಾಟಕ ಪ್ರೇಕ್ಷಕರನ್ನು ನೇರವಾಗಿ ಆ ಮಡುವಿಗೇ ಕರೆದೊಯ್ದು ನಿಲ್ಲಿಸುತ್ತದೆ. ರಂಗ ಸಜ್ಜಿಕೆ ವೃದ್ಧರ ನಿಲುವಿನಂತೆ ಸರಳ. ಅವರ ಓಡಾಟಕ್ಕೆ ತಕ್ಕಂತೆ ಅನುಕೂಲಕರವಾಗಿಯೇ ಇದೆ. ಸಂಭಾಷಣೆ ನೇರ ನಿಷ್ಠುರ. ಹಿತಕರವಾದ ನೆರಳು-ಬೆಳಕು. ಆಗಾಗ ಕಣ್ಣು ಕುಕ್ಕುವುದನ್ನು ತಪ್ಪಿಸಬಹುದಿತ್ತು.

90ಕ್ಕೆ ಒಂದು ಕಡಿಮೆ ಎಂಬ ವಯಸ್ಸಿನಲ್ಲಿ, ಗಾಲಿ ಕುರ್ಚಿಯಲ್ಲಿ ಕುಳಿತು ಅಭಿನಯಿಸುವುದರ ಜೊತೆಗೆ ನ.ರತ್ನ ಅವರು ನಾಟಕವನ್ನೂ ಬರೆದಿರುವುದು ವಿಶೇಷ. ಪ್ರದರ್ಶನಕ್ಕೂ ಮುನ್ನ, ನಾಟಕದ ಓದು-ವಿಶ್ಲೇಷಣೆಯೂ ನಡೆದಿದ್ದರ ಪರಿಣಾಮವಾಗಿಯೇ, ಇಡೀ ನಾಟಕ ವೃದ್ಧರ ಸ್ನೇಹಿಯಾಗಿ ರೂಪಗೊಂಡಿದೆ.

ನಾಟಕದ ಹದಿನೆಂಟು ಪಾತ್ರಗಳ ಪೈಕಿ ಬಹುತೇಕ ವೃದ್ಧಪಾತ್ರಗಳು. ಅಭಿನಯಿಸಿದವರೆಲ್ಲರೂ ಮೈ-ಮನ, ತಲೆಗೂದಲು ಹಣ್ಣಾದವರೇ. ರಂಗಭೂಮಿಯ ಹಲವು ನೆಲೆಗಳಲ್ಲಿ ದಶಕಗಳನ್ನು ಕಳೆದವರು.

ಹೀಗಾಗಿ ಇಲ್ಲಿ ಮಾಗಿದ ಅಭಿನಯವೂ ಉಂಟು. ಜೊತೆಗೇ ಒಮ್ಮೊಮ್ಮೆ ಸಂಭಾಷಣೆ ಮರೆಯುವ, ಮರೆತದ್ದನ್ನು ನೆನಪಿಸಿಕೊಂಡು ಮತ್ತೆ ಹೇಳುವುದೂ ಉಂಟು. ಕೆಲವೊಮ್ಮೆ ಇನ್ನೊಂದು ಪಾತ್ರದ ಮಾತು ಮುಗಿಯುವ ಮುನ್ನವೇ ಮುಂದಿನ ಮಾತನ್ನು ಆಡಿ, ಮೌನಕ್ಕೆ ಮೊರೆಹೋಗುವುದೂ ಉಂಟು. ಇಂಥ ಸನ್ನಿವೇಶಗಳನ್ನು ಮುಜುಗರಕ್ಕೆಡೆ ಮಾಡದಂತೆ ನಿಭಾಯಿಸುವಲ್ಲಿ ಸಹ ಪಾತ್ರಧಾರಿಗಳ ಜಾಣ್ಮೆ, ಅನುಭವವೂ ಹೊಳೆಯುತ್ತದೆ. ಆದರೂ, ತಾಲೀಮು ಇನ್ನಷ್ಟು ಚೆನ್ನಾಗಿ ನಡೆಯಬೇಕಿತ್ತು ಎಂದೆನಿಸದೇ ಇರದು. ಮುಕುಂದನ್ ಪಾತ್ರದ ತುಂಟ, ನಡೆ-ನುಡಿಗಳಿಂದ ನಾಟಕವನ್ನು ಆವರಿಸುವ ಬಿ.ಆರ್.ರವೀಶ್ ಸಂಗೀತವೂ ಅವರಂತೆಯೇ ಇದೆ.

ವಿಷಾದವೇ ವೃದ್ಧಾಪ್ಯದ ಸ್ಥಾಯಿಭಾವ. ವೃದ್ಧರ ಎಲ್ಲ ಕಷ್ಟ, ನಷ್ಟ, ಸಂಕಟಗಳಿಗೂ ಈ ಭಾವವೇ ಆಶ್ರಯ ನೀಡುತ್ತದೆ. ನಾಟಕದಲ್ಲೂ ಸಹಜವಾಗಿ ಇದು ಒಡಮೂಡಿದೆ. ಅದಕ್ಕೆ ತಕ್ಕಂತೆ ಕಥಾಹಂದರ, ಪಾತ್ರಗಳ ಆಯ್ಕೆಯೂ ಆಗಿದೆ. ಹೀಗಾಗಿ ನಾಟಕ ನಡೆಯುವ ಅಷ್ಟೂ ಹೊತ್ತು ರಂಗಸಜ್ಜಿಕೆಯಲ್ಲಿರುವವರಷ್ಟೇ ಪ್ರಮಾಣದಲ್ಲಿ ಪ್ರೇಕ್ಷಕರು ವಿಷಾದದಲ್ಲಿ ಮುಳುಗೇಳಲೇಬೇಕು.

ರಾಮೇಶ್ವರಿ ವರ್ಮ, ಶ್ರೀಮತಿ ಹರಿಪ್ರಸಾದ್ ಅವರಂಥ ಹಣ್ಣಾದ ವೃದ್ಧ ಪಾತ್ರಧಾರಿಗಳು ಮೈಸೂರಿನ ರಂಗಪ್ರಿಯರಿಗೆ, ಅದನ್ನೂ ಮೀರಿ ಸಾಂಸ್ಕೃತಿಕ ವಲಯದಲ್ಲಿ ಬಹುತೇಕರಿಗೆ ಪರಿಚಿತರೂ, ಕೆಲವರಿಗೆ ಅತ್ಯಾಪ್ತರೂ ಆಗಿರುವುದರಿಂದ, ಅವರ ನಟನೆಯನ್ನೂ ನೋಡುವ ಪ್ರೇಕ್ಷಕರ ನೋಟದಲ್ಲೂ ಆಪ್ತತೆ ಮೂಡುವುದು ನಾಟಕದ ವಿಶೇಷ. ನಿರ್ದೇಶಕ ಎಚ್.ಎಸ್.ಉಮೇಶ್ ಅವರು ಈ ಎಲ್ಲ ಹಿರಿಯರಿಂದ ಅಭಿನಯದ ಕಲಾ ಕಸರತ್ತು ಮಾಡಿಸಿರುವುದು ಒಂದು ಸಾಹಸವೇ ಎನ್ನಬೇಕು.

ಪ್ರಯೋಗಶೀಲತೆ ಎಂದರೇನು ಎಂಬುದಕ್ಕೂ ಈ ನಾಟಕ ಒಂದು ಉತ್ತಮ ನಿದರ್ಶನ. ವೃದ್ಧರಿಂದ ರಚನೆಗೊಂಡು, ವೃದ್ಧರೇ ಅಭಿನಯಿಸಿದ ನಾಟಕ, ವೃದ್ಧರಿಗೋಸ್ಕರ ಮಾತ್ರ ಅಲ್ಲ. ಏಕೆಂದರೆ, ವೃದ್ಧರ ಸಮಸ್ಯೆಗಳನ್ನು ಅರಿಯಬೇಕಾದ ಇನ್ನಿತರ ಎಲ್ಲ ವಯಸ್ಸಿನವರಿಗೂ ಈ ನಾಟಕ ಒಂದು ಜೀವನಪಾಠದಂತೆಯೂ ಕಾಣುತ್ತದೆ.

ತೆಂಗಿನತೋಪಿನ ಹವ್ಯಾಸಿಗಳು

ಮೈಸೂರಿನ 'ಸರಸ್ವತಿಪುರಂ ಮಧ್ಯದಲ್ಲಿರುವ ತೆಂಗಿನತೋಪಿನ ಹವ್ಯಾಸಿಗಳ ತಂಡ'ವೇ- ಸಮತೆಂತೋ. ಈ ಹೆಸರಿನಲ್ಲಿ ಹವ್ಯಾಸಿಗಳು ನಾಟಕವಾಡಲು 1967ರಲ್ಲಿ ಶುರುವಾದ ಗೆಳೆಯರ ತಂಡ. ಸ್ಥಾಪಕರಲ್ಲಿ ಒಬ್ಬರಾದ ನ.ರತ್ನ ಮತ್ತು ರಾಮೇಶ್ವರಿ ವರ್ಮ ತೊಂಬತ್ತರ ಆಸುಪಾಸಿನಲ್ಲೂ ತಂಡವನ್ನು ಮುನ್ನಡೆಸುತ್ತಿರುವುದು ವಿಶೇಷ. ಹೊಸ ನಟ, ನಿರ್ದೇಶಕರು, ನಾಟಕಕಾರರನ್ನು ಪರಿಚಯಿಸುತ್ತಾ ಹಲವು ಪ್ರಯೋಗಗಳನ್ನೂ ಮಾಡಿ ಈ ತಂಡ ಗಮನ ಸೆಳೆದಿದೆ.

'ಅಯಾನ್ ಶಾಂತಿ ಕುಟೀರ' ನಾಟಕದ ದೃಶ್ಯ

ರಂಗಭೂಮಿ

ಲ..ಲ.. ಲಸ್ಸಿ...

10ನೇ ಪುಟದಿಂದ...

ಬೀದರ್, ಕಲಬುರಗಿ ಮತ್ತು ರಾಯಚೂರಿನ ಕೆಲವು ಕಡೆಯಲ್ಲಿ ಹಾಲಿಗೆ ಪನ್ನೀರನ್ನೂ (ರೋಸ್ ವಾಟರ್) ಬೆರೆಸುತ್ತಾರೆ. ಈ ಸಾಂಪ್ರದಾಯಿಕ ರುಚಿಗೆ ಆಹ್ಲಾದಕರ ಅನುಭವ ಬರಲಿ ಎಂದೇ ರೂಹ್ ಅಫ್ಜಾದಂತಹ ಪಾನೀಯಗಳನ್ನೂ ಬೆರೆಸುತ್ತಾರೆ.

ಆದರೆ, ಬೇಸಿಗೆಯಲ್ಲಿ ಬಾಯಾರದಂಥ, ಬೇಗ ಹಸಿವಾಗದಂಥ, ಹೊಟ್ಟೆಯನ್ನೂ, ತಲೆಯನ್ನೂ ತಂಪಾಗಿಸುವಂಥ ಪಾನೀಯವಾಗಿರುವ ಸಾಂಪ್ರದಾಯಿಕ ಲಸ್ಸಿಗೆ ಈಗಲೂ ಬೇಡಿಕೆ ಕುಂದದೇ ಇರುವುದು, ಅದರ ಗುಣಗಳಿಂದಾಗಿಯೇ. ಸುಲಭವಾಗಿ ಜೀರ್ಣವಾಗುತ್ತದೆ. ಪಿತ್ತವಾಗುವುದಿಲ್ಲ. ಕಣ್ಣುರಿಬರುವುದಿಲ್ಲ. ಅದೇ ಕಾರಣಕ್ಕೆ ಮಧ್ಯಾಹ್ನ ಒಂದು ಲಸ್ಸಿ ಕುಡಿದು ಹೋಗುವುದು, ಮನೆಗೂ ತೆಗೆದುಕೊಂಡು ಹೋಗುವುದು ಈ ಕಡೆ ಸಹಜ ಅಭ್ಯಾಸ.

ಬಿಸಿಲಿನ ತಾಪ ಲಸ್ಸಿ ನೀಗಿಸಿದಂತೆಯೇ ಬದುಕಿನ ತಾಪವನ್ನೂ ಕಷ್ಟಗಳನ್ನೂ ಗುಟುಕರಿಸಿ ನಗಬೇಕು. ಲಸ್ಸಿ ಈಗಲೂ ರುಚಿಕರವಾಗಿ ಬದುಕು ಸವೆಯುವಂತೆ, ಸವಿಯುವಂತೆ ಮಾಡುವುದು ಇದೇ ಗುಣದಿಂದ.

ಲಸ್ಸಿ ತಯಾರಿಸುವ ಪರಿ

ಮುನ್ನೋಟ 21-04-2024 ರಿಂದ -27-04-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಸರ್ಕಾರಿ ಅಧಿಕಾರಿಗಳಿಗೆ ವಿಶೇಷ ಸವಲತ್ತುಗಳು ಸಿಗುವ ಸಾಧ್ಯತೆಗಳಿವೆ. ಆದಾಯವು ತೃಪ್ತಿಕರವಾಗಿರುವುದಿಲ್ಲ. ನಿಮ್ಮ ಕೆಲಸಕಾರ್ಯಗಳಿಗೆ ಆತಂಕ ಎದುರಾಗಬಹುದು. ಸ್ಥಿರಾಸ್ತಿಗಾಗಿ ಕೂಡಿಸಿ ಇಟ್ಟಿದ್ದ ಹಣ ಬೇರೊಂದು ಕಾರ್ಯಕ್ಕಾಗಿ ಖರ್ಚಾಗುವ ಸಾಧ್ಯತೆಯಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ವಿದ್ಯುತ್ ಉಪಕರಣಗಳನ್ನು ತಯಾರಿಸುವವರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಆಗಬಹುದು.

ವೃಷಭ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಬಹಳ ಚುರುಕಾಗಿ ಕೆಲಸಮಾಡಿ ಎಲ್ಲರ ಗಮನ ಸೆಳೆಯುವಿರಿ. ಕೃಷಿಭೂಮಿಯನ್ನು ಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಉಷ್ಣಾಂಶ ವ್ಯತ್ಯಾಸದಿಂದ ಕೆಲವರಿಗೆ ಬಾಯಿ ಹುಣ್ಣು ಕಾಣಿಸಬಹುದು. ಸಂಗಾತಿಯಿಂದ ನಿಮ್ಮ ವ್ಯವಹಾರಗಳಿಗೆ ಪೂರಕ ಸಹಕಾರ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆದಾಯವು ಅವಶ್ಯಕತೆಯನ್ನು ಪೂರೈಸುವಷ್ಟಿರುತ್ತದೆ. ನಿಮ್ಮ ನಡವಳಿಕೆಗಳಿಂದ ಹಿರಿಯರ ಬಳಿ ಗೌರವ ಸಂಪಾದಿಸುವಿರಿ. ಸಂಸಾರದಲ್ಲಿ ಸ್ವಲ್ಪ ಸಂತೋಷ, ಸ್ವಲ್ಪ ಕಾವು ಇರುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಎಚ್ಚರವಾಗಿರಿ, ಸ್ವಲ್ಪ ಮೋಸವಾಗುವ ಸಾಧ್ಯತೆಯಿದೆ. ಸಂಗಾತಿಯಿಂದ ನಿಮಗೆ ಸಾಕಷ್ಟು ಸಹಾಯ ದೊರೆಯುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಈಗ ಹೆಚ್ಚಿನ ವ್ಯಾಪಾರವಾಗಿ ಲಾಭ ಬರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಹಣದ ಒಳಹರಿವು ನಿಮ್ಮ ಅವಶ್ಯಕತೆ ಪೂರೈಸುತ್ತದೆ. ಸ್ವಲ್ಪ ಆಲಸಿ ನಡವಳಿಕೆಗಳಿದ್ದರೂ ಕೂಡ ಎಚ್ಚೆತ್ತು ಕೆಲಸ ಮಾಡುವಿರಿ. ಆಸ್ತಿ ವಿಚಾರದಲ್ಲಿ ಹಿರಿಯರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಮಕ್ಕಳ ಏಳಿಗೆಯ ಬಗ್ಗೆ ಚಿಂತೆ ಇರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಕಣ್ಣಿನ ತೊಂದರೆಗಳು ಕೆಲವರಿಗೆ ಕಾಣಿಸಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಹಿರಿಯರ ನಡವಳಿಕೆಗಳನ್ನು ಅನುಸರಿಸಲು ಪ್ರಯತ್ನ ಪಡುವಿರಿ. ಹಣದ ಒಳಹರಿವು ನಿಮ್ಮ ಅವಶ್ಯಕತೆ ಪೂರೈಸುತ್ತದೆ. ಸ್ತ್ರೀಯರಿಂದ ಅಥವಾ ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ತೊಂದರೆಯಾಗಬಹುದು. ಕೃಷಿಭೂಮಿಯನ್ನು ಕೊಳ್ಳಬಹುದು. ನಿವೇಶನ ಅಥವಾ ಕಟ್ಟಡಗಳನ್ನು ಕೊಳ್ಳುವಾಗ ಹೆಚ್ಚು ಎಚ್ಚರ ವಹಿಸಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲಿ ಬಹಳ ದ್ವಂದ್ವ ಮನಸಿರುತ್ತದೆ. ಆದಾಯವು ಅಗತ್ಯವನ್ನು ಪೂರೈಸುತ್ತದೆ. ಬಂಧುಗಳು ನಿಮ್ಮ ನಡವಳಿಕೆಯನ್ನು ಕಂಡು ನಿಮ್ಮ ವಿರುದ್ಧ ಕೆಲಸ ಮಾಡುವರು. ಮಕ್ಕಳು ನಿಮ್ಮ ಮಾತನ್ನು ಕೇಳದಿರಬಹುದು ಅಥವಾ ಅಗೌರವ ತೋರುವ ಸಾಧ್ಯತೆ ಇದೆ. ಸಂಗಾತಿಯ ಅಧಿಕ ವೆಚ್ಚಗಳು ಸ್ವಲ್ಪ ತಲೆಬಿಸಿ ಮಾಡಬಹುದು. ಅಧ್ಯಾಪಕರಿಗೆ ನಿರೀಕ್ಷಿತ ವರಮಾನ ಬರದಿರಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭದಲ್ಲಿ ಹಣ ಗಳಿಕೆಯ ಬಗ್ಗೆ ಸಾಕಷ್ಟು ಆಲೋಚನೆ ಮಾಡುವಿರಿ. ಆದರೆ ನಿಮ್ಮ ನಿರೀಕ್ಷೆಯಷ್ಟು ಹಣ ಬರುವುದಿಲ್ಲ. ಸ್ಥಿರಾಸ್ತಿಗಳಲ್ಲಿ ಸಾಕಷ್ಟು ಸಮಸ್ಯೆ ಬರುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಕೀಲು ನೋವು ಇರುವವರು ಹೆಚ್ಚು ಎಚ್ಚರ ವಹಿಸಿರ. ಅವಿವಾಹಿತರಿಗೆ ವಿವಾಹವಾಗುವ ಯೋಗವಿದೆ. ಗರ್ಭಿಣಿಯರು ಹೆಚ್ಚು ಎಚ್ಚರದಿಂದಿರುವುದು ಒಳ್ಳೆಯದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ದೃಢ ನಿರ್ಧಾರಗಳನ್ನು ತೆಗೆದು ಕೊಳ್ಳುವ ಬಗ್ಗೆ ಬಹಳ ಗೊಂದಲಗಳಿರುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಶತ್ರುಗಳನ್ನು ಸಂಹರಿಸಲು ಬಳಸುವ ತಂತ್ರಗಳು ಕೈಕೊಡಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುತ್ತದೆ. ಕಣ್ಣು ಮತ್ತು ಹೊಟ್ಟೆಯ ಬಗ್ಗೆ ಹೆಚ್ಚು ಎಚ್ಚರವಹಿಸಿ. ಸರ್ಕಾರಿ ಸಾಲಗಳು ದುಬಾರಿಯಾಗಿ ಪರಿಣಮಿಸಬಹುದು. ಸಂಗಾತಿಯಿಂದ ನಿರೀಕ್ಷಿತ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವಾರದ ಆರಂಭ ಸ್ವಲ್ಪ ಜಿಜ್ಞಾಸೆಗಳಿಂದ ಕೂಡಿರುತ್ತದೆ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ಕೆಲಸಗಳಿಗೆ ಬಂಧುಗಳಿಂದ ಅಡ್ಡಿಯಾಗಬಹುದು. ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿಮಾಡುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ. ಮಕ್ಕಳಿಂದ ಗೌರವ ಪಡೆಯುವ ಯೋಗವಿದೆ. ಮೂತ್ರ ಸಂಬಂಧಿ ಕಾಯಿಲೆಗಳು ಕಾಡಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಕೆಲಸ ಕಾರ್ಯಗಳನ್ನು ಯೋಜನಾ ಬದ್ಧವಾಗಿ ಮಾಡಿಕೊಳ್ಳುವುದು ಒಳ್ಳೆಯದು. ಹಣದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಆಸ್ತಿ ವಿಚಾರದಲ್ಲಿ ತ್ವರಿತವಾಗಿ ಮುಂದುವರೆಯಬಹುದು. ಈಗ ವಿದ್ಯಾರ್ಥಿಗಳು ತಮ್ಮ ಶ್ರಮದಿಂದ ಹೆಚ್ಚಿನ ಫಲಿತಾಂಶವನ್ನು ಪಡೆಯಬಹುದು. ವ್ಯವಹಾರದಲ್ಲಿ ಹೆಚ್ಚು ಎಚ್ಚರವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರಲ್ಲಿ ಹೆಚ್ಚು ಸಮಾಧಾನವಿರುತ್ತದೆ. ಹಣದ ಒಳಹರಿವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಸಂಪಾದನೆ ಆಗುತ್ತದೆ. ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ಕೆಲವರಿಗೆ ಮಕ್ಕಳಿಂದ ಧನಸಹಾಯವಿರುತ್ತದೆ. ಶೀತಬಾಧೆ ಇರುವವರು ಹೆಚ್ಚು ಎಚ್ಚರವಾಗಿರಿ. ಸಂಗಾತಿಯು ನಿಮ್ಮ ಕೆಲಸ ಕಾರ್ಯಗಳಿಗೆ ಹೆಚ್ಚು ಸಹಾಯ ಮಾಡುವರು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ರಿಯಲ್ ಎಸ್ಟೇಟ್ ಉದ್ಯಮ ಮಾಡುವವರಿಗೆ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಫಲಿತಾಂಶಗಳು ದೊರೆಯುತ್ತದೆ. ಸ್ವಂತ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ.

ಪದಬಂಧ 2838



ಮೇಲಿನಿಂದ ಕೆಳಕ್ಕೆ
1. ಚೈತ್ರ ಶುದ್ಧ ಒಂಬತ್ತನೇ ದಿನದ ಹಬ್ಬ 5
2. ಜೇನಿನಂತಹ ಸವಿ 3
3. ರಾಜನ ಆಸ್ಥಾನದ ಹಾಸ್ಯಗಾರ ತೆನಾಲಿ ರಾಮಕೃಷ್ಣನಂತೆ 4
4. ಕವಿ ಕಲ್ಪನೆಯಲ್ಲಿ ಅಲುವ ಕಡಲಲಿ ತೇಲಿ ಬರುವ ಖುಷಿಯ ನೌಕೆ 4
5. ಪ್ರತ್ಯಕ್ಷವಾಗಿ ಅಲ್ಲ, ಹಿಂದಿನಿಂದ ಕಾಣಸಿಗುವುದು 3
6. ದಾಸವರೇಣ್ಯರೊಬ್ಬರ ಆರಾಧ್ಯ ದೈವ 7
8. ಮಗನ ಮಗನ ಮಗ 4
10. ಶಾಶ್ವತವಾದುದಲ್ಲ ಇದು ಸದ್ಯದ ವ್ಯವಸ್ಥೆ 4
11. ತಲೆಕೆಳಕಾದ ಹಾರ ದ್ರವವಾಗಿ ಹರಿಯುತ್ತದೆ 2
13. ಪ್ರವಾಹದಂತೆ ಸಾಗುವ ವಿಷ್ಣು 2
15. ನೀರಿಲ್ಲದಂತಾದ ಮರಳು ದಂಡೆ 3
16. ಹುಟ್ಟಿನ ಜೊತೆ ಮೂಡುವ ತಾರೆ 5
17. ಮೇಲೆ ಹೋಗು ಮತ್ತೆ ಕೆಳಗೆ ಬಂದಾಗ ಸರಿಸಮವಿಲ್ಲದ ವ್ಯತ್ಯಾಸ 4
18. ಪಕ್ಕದಲ್ಲಿರುವವರಿಗೆ ಒತ್ತುಕೊಡದೆ ನಗುವ ಒಂದು ಪರಿ 4
20. ಗ್ರಾಮೀಣ ಪ್ರದೇಶದಲ್ಲಿ ಮಾಡುವ ವ್ಯವಹಾರ 3

ಎಡದಿಂದ ಬಲಕ್ಕೆ
1. ಮನೆ, ಮಂದಿರದಿಂದ ರಾಜಕೀಯದವರೆಗೆ ಎಲ್ಲರೂ ಜಪಿಸುತ್ತಿರುವ ದಶರಥಾತ್ಮಜನ ಹೆಸರು 4
3. ವಿಶೇಷವಾಗಿ ಹೊಸದು 4
5. ರಾಮ, ಕೃಷ್ಣ ಯಾರೇ ಆದರೂ ಶ್ರೇಷ್ಠ ವ್ಯಕ್ತಿ 6
7. ಏನಿಲ್ಲ ಏನಿಲ್ಲ ಎಂದು ಜನ ಹುಡುಕುತ್ತಿರುವ ಕಪ್ಪು ಪೂಸು 4
9. ಲಿಪಿಯ ಮೂಲವನ್ನು ಹೆಚ್ಚು ಬಳಸದೆ ಎಲ್ಲವನ್ನೂ ಹೇಳುವ ಕಲೆ 4
12. ಯುದ್ಧದಲ್ಲಿ ಕೇಸರಿಯಂತೆ ಘರ್ಜಿಸಿ ಹೋರಾಡಿದವ 5
14. ಶತೃಗಳಿಗೆ ಸೇರಿದ ಆನೆ 4
17. ವಿನ್ಯಾಸದಲ್ಲಿ ಒಂದೇ ಆಕಾರವನ್ನು ಪಡೆದದ್ದು 4
19. ತಾವರೆಯಂತಹ ಕಣ್ಣುಗಳು 6
21. ನಾಲಿಗೆಯಲ್ಲಿ ನೀರೂರಿಸುವ ಅಡುಗೆ 4
22. ಯಮಾಗ್ರಜನಾದ ಸೂರ್ಯ ತನಯ 4

ಪದಬಂಧ ಉತ್ತರ -2837

ಮೇಲಿಂದ ಕೆಳಕ್ಕೆ
2.ವೈಷ್ಣವಿ 4.ಸಕಲ 5.ಜಯಿಸು 6.ಕುಟಿಲ 7.ರಥ 8.ಲವಣ 9.ಕವಿ 11.ಪಶ್ಚಿಮದೇಶ 13.ಮಹಾಮಹಿಮ 14.ಸೆಳೆತ 15.ಸುಜನ 19.ನಮಾಸ 20.ಪಾನಕ 21.ವೀಸಾ 22.ದನ 23.ನಿರಾಳ 25.ಹಿತೈಷಿ 26.ಆಬಸಂ

ಎಡದಿಂದ ಬಲಕ್ಕೆ
1. ಮನೋವೈದ್ಯ 3.ರಸಬಾಳೆ 7.ರವಿಕುಲತಿಲಕ 10ಸುಪಥ 12.ವಿಮಲ 14.ಸೆಣಸು 16.ಮಹಾಮಳೆ 17.ಜನಸ್ತೋಮ 18.ತನನ 20.ಪಾಶವೀ 22.ದಮನಿ 24.ಸಾಹಿತ್ಯಸಮ್ಮೇಳನ 27.ಕಲುಷಿತ 28.ಅಸಂಖ್ಯಾತ

ನಾಡಗೀತೆ ಭ್ರೂಣರೂಪಕ್ಕೆ ಶತಮಾನ

ರಹಮತ್ ತರೀಕೆರೆ

ಕುವೆಂಪು 'ನೆನಪಿನ ದೋಣಿಯಲ್ಲಿ' ನಾಡಗೀತೆಗೆ ಸಂಬಂಧಿಸಿದ ಒಂದು ಸಂಗತಿ ಹಂಚಿಕೊಂಡಿದ್ದಾರೆ:

'1924-25ರ ನನ್ನೊಂದು ಹಸ್ತಪ್ರತಿಯಲ್ಲಿ 'ಕರ್ಣಾಟಕ ರಾಷ್ಟ್ರಗೀತೆ' ಎಂಬ ಕವನವಿದೆ. ಅದು ನನ್ನ 'ಜಯಹೇ ಕರ್ಣಾಟಕ ಮಾತೆ' ಎಂಬ ನಾಡಗೀತೆಯ ಪ್ರಪಿತಾಹಮನೊ ಪ್ರಪ್ರಪಿತಾಹಮನೊ ಆಗಿರಬೇಕು. ಟಾಗೂರರ 'ಜನಗಣಮನ'ದಂತೆ ನಮ್ಮ ಕನ್ನಡನಾಡಿಗೂ ಒಂದು ರಾಷ್ಟ್ರಗೀತೆಯನ್ನು ನೀಡುವ ಪ್ರಯತ್ನದ ಭ್ರೂಣಸ್ಥಿತಿಯಂತಿದೆ ಅದು. ಅದರ ರಚನೆಯ ರೂಪಾಂಶ ನಾನು ಬೆಳೆದಂತೆಲ್ಲ ಬದಲಾವಣೆ ಹೊಂದುತ್ತಾ (ಭಾವ ಮತ್ತು ಭಾಷೆ ಎರಡರಲ್ಲಿಯೂ) ಕಡೆಗೆ 'ಕೊಳಲು' ಕವನ ಸಂಗ್ರಹ ಅಚ್ಚಾದಾಗ ಒಂದು ಸ್ತಿಮಿತಕ್ಕೆ ನಿಂತಿತು'

ಕುವೆಂಪು

ಈ ಭ್ರೂಣರೂಪವು ಪೂರ್ಣರೂಪ (1928) ಪಡೆಯಲು ನಾಲ್ಕು ವರ್ಷ ಹಿಡಿದಿವೆ. ಇವೆರಡಕ್ಕೂ ಇರುವ ಫರಕು ಕುತೂಹಲಕರವಾಗಿವೆ. ಮೊದಲಿನ ತಲೆಬರೆಹ 'ಕರ್ಣಾಟಕ ರಾಷ್ಟ್ರಗೀತೆ'ಯು ಬಳಿಕ 'ಜಯಯೇ ಕರ್ಣಾಟಕ ಮಾತೆ'ಯಾಗಿದೆ. ಕವಿ ಕರ್ನಾಟಕವನ್ನು 'ರಾಷ್ಟ್ರ'ವೆನ್ನಲು ಹಿಂಜರಿದಂತಿದೆ. ಟಾಗೂರರ ಗೀತೆಯ ಕೇಂದ್ರ ಅಧಿನಾಯಕನಾದರೆ, ಇಲ್ಲಿ ಕರ್ನಾಟಕ ಮಾತೆ. ನಾಡಿನ ಏಕೀಕರಣ ಮತ್ತು ಕರ್ನಾಟಕ ನಾಮಕರಣಕ್ಕೆ ಮುನ್ನವೇ 'ಕರ್ಣಾಟಕ' ದೇಶವಾಚಕವನ್ನು ಕವಿ ಬಳಸಿದ್ದಾರೆ. ಇದು ಏಕೀಕರಣಕ್ಕೆ ಬಿತ್ತಲಾದ ಬೀಜದಂತಿದೆ. ಇಷ್ಟಕ್ಕೂ ಕರ್ಣಾಟಕ-ಕರ್ನಾಟಕ ಮೊದಲಿಂದಲೂ ಬಳಕೆಯಾಗಿಕೊಂಡು ಬಂದಿದ್ದ ಪರಿಭಾಷೆಗಳೇ.

ಕರಡುಪದ್ಯ 'ಭುವನವಿನುತ ವರ ಪಾವನತರ ಭಾರತ' ಎಂದು ಶುರುವಾಗುತ್ತದೆ. ಇಲ್ಲಿ ಭಾರತವನ್ನು ಭುವನದ ಭಿತ್ತಿಯಲ್ಲೂ ಕರ್ನಾಟಕವನ್ನು ಭಾರತದ ಭಿತ್ತಿಯಲ್ಲೂ ಇಡಲಾಗಿದೆ. ಕನ್ನಡನಾಡನ್ನು 'ಕವಿರಾಜಮಾರ್ಗ'ವೂ 'ವಸುಧಾವಲಯ ವಿಲೀನ ವಿಷಯ ವಿಶದ ವಿಶೇಷಂ' ಎಂಬ ಭಿತ್ತಿಯಲ್ಲಿಡುತ್ತದೆ. ಪರಿಷ್ಕೃತದಲ್ಲಿ ಭುವನದ ಭಿತ್ತಿಯಿಲ್ಲ. ಬದಲಿಗೆ 'ಭಾರತ ಜನನಿಯ ತನುಜಾತೆ ಜಯಹೇ ಕರ್ಣಾಟಕ ಮಾತೆ' ಎಂದು ಆರಂಭವಾಗುತ್ತದೆ. ಇಲ್ಲಿ ದೇಶ-ನಾಡುಗಳನ್ನು ತಾಯಿ-ಮಗಳ ನಂಟಿನ ಚೌಕಟ್ಟಿನಲ್ಲಿ ಇಡಲಾಗಿದೆ. ತಾಯಿಗಿಂತ ಮಗಳ ಬಾಳು ವಿಶಿಷ್ಟವೂ ಸ್ವತಂತ್ರವೂ ಆಗಿರಬಹುದು ಎಂಬ ದನಿಯೂ ಇಲ್ಲಿದೆ. ಇದು ಒಕ್ಕೂಟದ ಚುಕ್ಕಾಣಿ ಹಿಡಿಯುವ ಸರ್ಕಾರಕ್ಕೂ ರಾಜ್ಯಗಳಿಗೂ ಇರಬೇಕಾದ ಫೆಡರಲ್ ಸಂಬಂಧದ ಮುನ್ನುಡಿಯಂತಿದೆ.

'ಜನಗಣಮನ'ದ ಎರಡನೇ ಭಾಗದಲ್ಲಿ 'ಹಿಂದೂ ಬೌದ್ಧ ಸಿಖ ಜೈನ ಪಾರಸಿಕ ಮುಸಲ್ಮಾನ ಕ್ರಿಸ್ತಾನಿ'ಯ ಉಲ್ಲೇಖವಿದೆ. ಅದುವೇ ಕುವೆಂಪು ಅವರಲ್ಲಿ 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಬೌದ್ಧರುದ್ಯಾನ'ವಾಯಿತು; ಪರಿಷ್ಕಾರದಲ್ಲಿ 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ'ವಾಯಿತು. ಈ ಬದಲಿನಲ್ಲಿ ಬೌದ್ಧರು ಕೈಬಿಟ್ಟುಹೋದರು. ಕುವೆಂಪು ಕರ್ನಾಟಕದಲ್ಲಿ ಸಮುದಾಯವಾಗಿ ಬೌದ್ಧರು ಇಲ್ಲವೆಂದು ಭಾವಿಸಿದರೇ? ಹಾಗೆ ಕಂಡರೆ ಅವರ ಗುರು ವೆಂಕಣ್ಣಯ್ಯನವರು ಕನ್ನಡ ಸಾಹಿತ್ಯದ ಆದಿಮ ಲೇಖಕರೇ ಬೌದ್ಧರು ಎಂದು ವಾದ ಮಂಡಿಸಿದ್ದರು. ಕರಡಿನಲ್ಲಿ 'ಶಂಕರ ರಾಮಾನುಜ ಮಾಧವ ಮಾ ತತ್ವಜ್ಞರ ವರಮಾತೆ, ಹೈದರ ಟೀಪು ಶಿವಾಜಿ ಸುಭಟರ ಪಡೆದ ರಣರಾಮನ ಸೀತೆ' ಎಂಬ ಸಾಲಿದೆ. ಶಂಕರ ರಾಮಾನುಜರು ಉಳಿದುಕೊಂಡರು. ಮಾಧವ-ವಿದ್ಯಾರಣ್ಯವಾಗಿ ಬದಲಾಯಿತು. ಮೂಲದಲ್ಲಿ 'ಕಪಿಲ ಪತಂಜಲ ಗೌತಮನುತ' ಇದ್ದುದು, 'ಕಪಿಲ ಪತಂಜಲ ಗೌತಮ ಜಿನನುತ' ಆಯಿತು. ಮೊದಲಿಗಿಲ್ಲದ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಹೆಸರು ಪರಿಷ್ಕೃತದಲ್ಲಿ ಸೇರ್ಪಡೆಗೊಂಡಿತು. ಆರಂಭದಲ್ಲಿದ್ದ 'ಸರ್ವಜನಾಂಗದ ಶಾಂತಿನಿಕೇತನ, ಸರ್ವ ಮತಗಳಾರಾಮ'ವು, 'ಸರ್ವಜನಾಂಗದ ಶಾಂತಿಯ ತೋಟ'ವಾಗಿದೆ. ಕೂಡುಬಾಳಿನ ಈ ಆಶಯವು ಇಕ್ಬಾಲರ 'ಸಾರೆ ಜಹಾಂಸೆ ಅಚ್ಛಾ', ಟಾಗೂರರ 'ಜನಗಣಮನ'ದ ಎರಡನೇ ಭಾಗದಲ್ಲೂ ಕಾಣಿಸಿತ್ತು. ರಾಷ್ಟ್ರೀಯ ಚಳವಳಿ ಹುಟ್ಟಿಸಿದ್ದ ಸಾಂಸ್ಕೃತಿಕ ಏಕತೆಯ ಭಾವವಿದು. ಕುವೆಂಪು, ಟಾಗೂರರಿಂದ ಗಾಢವಾಗಿ ಪ್ರಭಾವಿತರಾಗಿದ್ದರು. ಮಹಾರಾಜ ಕಾಲೇಜಿನ ಗುರುಗಳು ಅವರನ್ನು ಜೂನಿಯರ್ ಟಾಗೂರ್ ಎನ್ನುತ್ತಿದ್ದರು. 'ಗೀತಾಂಜಲಿ'ಯ ನೆರಳುಗಳು ಅವರ ಮೊದಲ ಘಟ್ಟದ ಪದ್ಯಗಳಲ್ಲಿವೆ ಕೂಡ.

ಕಚ್ಚಾಪ್ರತಿಯಲ್ಲಿದ್ದ ಹೈದರ್ ಟೀಪು ಶಿವಾಜಿ, ಪರಿಷ್ಕರಣದಲ್ಲಿ ಯಾಕೊ ಕಾಣೆಯಾಗಿದ್ದಾರೆ. ಮೂಲದಲ್ಲಿದ್ದ 'ಪುಲಕೇಶೀ ಯದು ಕಂಠೀರವ ಕೆಂಪೇನೃಪಶೇಖರ ಭೂಮಿ' ಪರಿಷ್ಕೃತದಲ್ಲಿ 'ತೈಲಪ ಹೊಯ್ಸಳರಾಳಿದ ನಾಡೇ' ಆಗಿದೆ. ಕದಂಬ ಚಾಲುಕ್ಯ ರಾಷ್ಟ್ರಕೂಟ ವಿಜಯನಗರ ಆದಿಲಶಾಹಿ ಬಹಮನಿಗಳು ಹೊರಗುಳಿದಿವೆ. ಕುವೆಂಪುರವರ ಮತ್ತೊಬ್ಬ ಗುರು ಬಿಎಂಶ್ರೀ, ರಾಜಭಕ್ತಿಗೆ ಹೆಸರಾದವರು. ಆದರೂ ಕುವೆಂಪು ಒಡೆಯರನ್ನು ಸೂಚಿಸುವ 'ಯದು'ವನ್ನು ಬಿಟ್ಟುಕೊಟ್ಟಿದ್ದಾರೆ. ಆದರೆ ಅವರಿಗೆ ನಾಲ್ವಡಿಯವರ ಮೇಲೆ ಗೌರವವಿತ್ತು. ಅವರ ಸಿಂಹಾಸನಾರೋಹಣದ ಬೆಳ್ಳಿಹಬ್ಬಕ್ಕೆ ಸ್ತುತಿಗೀತೆಯನ್ನೂ ರಚಿಸಿದ್ದರು.

ಯಾವುದೇ ಪದ್ಯ ರಾಷ್ಟ್ರಗೀತೆ-ನಾಡಗೀತೆ ಆದೊಡನೆ ಅಧಿಕೃತತೆ ಪಡೆಯುತ್ತದೆ. ಆಗ ಸಮುದಾಯಗಳು ತಮ್ಮ ಪ್ರಾತಿನಿಧ್ಯದ ಗುರುತುಗಳ ಹಾಜರಾತಿ –ಗೈರುಹಾಜರಾತಿಯನ್ನು ಪ್ರಜ್ಞಾಪೂರ್ವಕವಾಗಿ ಹುಡುಕತೊಡಗುತ್ತವೆ. ಈ ತರ್ಕದಲ್ಲೆ ಮುಂದೆ ಮಧ್ವರ ಹೆಸರು ಸೇರ್ಪಡೆಯಾಯಿತು. ಇಲ್ಲಿನ ವ್ಯಕ್ತಿ ಮತ್ತು ರಾಜವಂಶಗಳ ಬಿಡುವಿಕೆ-ಸೇರ್ಪಡೆಗಳ ಹಿಂದೆ, ಕವಿಯ ಸ್ಥೂಲವಾದ ಆಲೋಚನಕ್ರಮ ಇದ್ದೀತು. ಆದರೆ ಪ್ರಾತಿನಿಧಿಕತೆಯ ಬಗ್ಗೆ ಬಹಳ ಲೆಕ್ಕಾಚಾರವಿದ್ದಂತೆ ತೋರುವುದಿಲ್ಲ. ಕೆಲವು ಹೆಸರು ಗೀತೆಯ ಪ್ರಾಸ-ಲಯಗಳಿಗೆ ಬೇಕಾಗಿ ಲೋಪ-ಆಗಮ ಆಗಿರುವ ಸಾಧ್ಯತೆಯೇ ಹೆಚ್ಚು. ಮುಖ್ಯವಾಗಿ ಯುವಕವಿಗೆ ತನ್ನ ರಚನೆ ಟಾಗೂರರ ಗೀತೆಯಂತೆ 'ರಾಷ್ಟ್ರಗೀತೆ' ಆಗಬೇಕೆಂಬ ಮಹತ್ವಾಕಾಂಕ್ಷೆಯಿತ್ತು. 'ಜನಗಣಮನ'ವನ್ನು 1911ರಲ್ಲೇ ರಾಷ್ಟ್ರೀಯ ಚಳವಳಿಯ ಗೀತೆಯನ್ನಾಗಿ ಅಂಗೀಕರಿಸಿದ್ದು ನದರಿನಲ್ಲಿತ್ತು. ವಿಶೇಷವೆಂದರೆ, ಟಾಗೂರರು 'ಜನಗಣಮನ'ವನ್ನು 50ನೇ ವಯಸ್ಸಿನಲ್ಲಿ ರಚಿಸಿದರು. ಕುವೆಂಪು ಅವರಿಗೆ ನಾಡಗೀತೆಯ ಕರಡು ರಚಿಸುವಾಗ 20; ಅಂತಿಮಗೊಳಿಸುವಾಗ 24.

ರಾಷ್ಟ್ರ-ನಾಡಗೀತೆಗಳಲ್ಲಿರುವ ಚಾರಿತ್ರಿಕ ಮತ್ತು ಭೌಗೋಳಿಕ ವಿವರಗಳು ಕವಿಕಾಣ್ಕೆಯ ಭಾಗಗಳು. ಈ ಅರ್ಥದಲ್ಲಿ 'ಜನಗಣಮನ'ದಲ್ಲಿ ರಾಜಮನೆತನಗಳ ಅರ್ಥಾತ್ ರಾಜಕೀಯ ಚರಿತ್ರೆಯ ಭಾರವಿಲ್ಲ. ಬದಲಿಗೆ ಭವಿಷ್ಯದ ಭಾರತದ ಮುಂಗಾಣ್ಕೆ ಹೆಚ್ಚು ಸ್ಪಷ್ಟವಾಗಿದೆ. ಪ್ರಕೃತಿಪ್ರಿಯರೂ ಮಲೆನಾಡಿಗರೂ ಆದ ಕುವೆಂಪುರವರ ಎರಡೂ ಪ್ರತಿಗಳಲ್ಲಿ 'ಹಸಿರಿನ ವನಗಳ ಮಾಲೆ'ಯ ಉಲ್ಲೇಖವಿದೆ. ಕರ್ನಾಟಕದ ಕರಾವಳಿ ಬಯಲುಸೀಮೆಗಳ ಚಿತ್ರಗಳಿಲ್ಲ. ನಾಡನ್ನು ಅದರೆಲ್ಲ ಭೌಗೋಳಿಕ ವಿವರಗಳ, ಕಸುಬು, ಬೆಳೆ, ಆಹಾರಗಳ ಮೂಲಕ ನೋಡಿದರೆ ಬೇರೆಯೇ ಚಿತ್ರ ರೂಪುಗೊಂಡೀತು. ಆದರೆ ಎಲ್ಲ ನಾಡಗೀತೆಗಳಲ್ಲಿ ನಾಡವರಲ್ಲಿ ಅಭಿಮಾನ ಮೂಡಿಸಲು, ದೊರೆಗಳ ಸಂತರ ಕಲಾವಿದರ ಹಾಗೂ ಪ್ರಕೃತಿಯ ರಮ್ಯ ವಿವರಗಳ ವೈಭವೀಕರಣವೇ ಪ್ರಧಾನ. ನಿಸಾರರಲ್ಲಿ ದೇವಿಗೆ 'ನಿತ್ಯೋತ್ಸವ'ವ ಜರುಗುವುದು ಸಹ್ಯಾದ್ರಿ ಶಿಖರದಲ್ಲಿ; ತುಂಗೆಯ ತೆನೆ ಬಳುಕಿನಲ್ಲಿ. 'ವಂದೇಮಾತರಂ'ನಲ್ಲೂ ದೇವಿ ಸಸ್ಯಶ್ಯಾಮಲೆ.

ಆದರೆ ನಾಡಗೀತೆಗಳಲ್ಲಿ ತರಲಾಗದ ನಾಡಿನ ವಾಸ್ತವಿಕ ಚಿತ್ರಗಳನ್ನು ಇದೇ ಲೇಖಕರು, ತಮ್ಮ ಬೇರೆ ಬರೆಹಗಳಲ್ಲಿ ಕಟ್ಟಿಕೊಡಬಲ್ಲರು. ಕುವೆಂಪುರವರ 'ವಿಚಾರಕ್ರಾಂತಿಗೆ ಆಹ್ವಾನ' 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಭಾಷಣಗಳು ಅಥವಾ ಕಾದಂಬರಿಗಳು, ಟಾಗೂರರ 'ಗೋರಾ', ನಿಸಾರರ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಇನ್ನೊಂದೇ ಸತ್ಯದ ನಿರೂಪಣೆಗಳು.

ನಾಡಗೀತೆಯ ಭ್ರೂಣರೂಪಕ್ಕೀಗ ಶತಮಾನ ತುಂಬಿದೆ. ಈ ಗೀತೆಯನ್ನು ಕನ್ನಡಿಗರು ಎಷ್ಟೊಂದು ಸಲ ಹಾಡಿದ್ದಾರೆ? ಕೆಲವು ಸಾಲುಗಳು ಎಷ್ಟೊಂದು ಸಲ ಉಲ್ಲೇಖಗೊಳ್ಳುತ್ತಿವೆ? ಈಚಿನ ವರ್ಷಗಲ್ಲಿ ಅತಿಹೆಚ್ಚು ಪ್ರಸ್ತಾಪಗೊಂಡಿದ್ದು: 'ಸರ್ವಜನಾಂಗದ ಶಾಂತಿಯ ತೋಟ'. ಇದರಂತೆ 'ಕವಿರಾಜಮಾರ್ಗ'ದ 'ನೆರೆ ಸೈರಿಸಲಾರ್ಪೊಡೆ ಪರವಿಚಾರಮುಂ ಧರ್ಮಮುಂ' ಕೂಡ. ವರ್ತಮಾನವು ಯಾವ ವಿಷಯದಲ್ಲಿ ಅರಕೆ ಅನುಭವಿಸುತ್ತದೆಯೊ, ಅದಕ್ಕೆ ತಕ್ಕದ್ದನ್ನು ಚರಿತ್ರೆಯಿಂದ ಆಯ್ದು ಪುನರುಕ್ತಿಸುತ್ತದೆ- ಗಾಯಕ್ಕೆ ಮದ್ದು ಹುಡುಕುವಂತೆ. ಇದು ಅದರ ಬಿಕ್ಕಟ್ಟನ್ನೂ ಕನಸಿನ ಸಮಾಜದ ಆಶಯವನ್ನೂ ಒಟ್ಟಿಗೆ ಪ್ರತಿಫಲಿಸುತ್ತಿರುತ್ತದೆ. ❖

> ಯುವಕವಿ ಕುವೆಂಪು ಅವರಿಗೆ ತಮ್ಮ ರಚನೆ ಟಾಗೂರರ ಗೀತೆಯಂತೆ 'ರಾಷ್ಟ್ರಗೀತೆ' ಆಗಬೇಕೆಂಬ ಮಹತ್ವಾಕಾಂಕ್ಷೆಯಿತ್ತು. 'ಜನಗಣಮನ'ವನ್ನು ರಾಷ್ಟ್ರೀಯ ಚಳವಳಿಯ ಗೀತೆಯನ್ನಾಗಿ ಅಂಗೀಕರಿಸಿದ್ದು ನದರಿನಲ್ಲಿತ್ತು. ಟಾಗೂರರು 'ಜನಗಣಮನ'ವನ್ನು 50ನೇ ವಯಸ್ಸಿನಲ್ಲಿ ರಚಿಸಿದರು. ಕುವೆಂಪು ಅವರಿಗೆ ನಾಡಗೀತೆಯ ಕರಡು ರಚಿಸುವಾಗ 20; ಅಂತಿಮಗೊಳಿಸುವಾಗ 24 ವರ್ಷ!

ಮೊದಲ ಓದು

ಮೀಸಲಾತಿ ಅರಿವಿನ ಕೈಪಿಡಿ

ಪು: 216
₹220

ಮೀಸಲಾತಿ ಅಂತರಂಗ
ಲೇ: ಕೆ.ಎನ್. ಲಿಂಗಪ್ಪ
ಪ್ರ: ಅಭಿರುಚಿ ಪ್ರಕಾಶನ
ಸಂ:99454 99588.

ಜಾತಿ ಮತ್ತು ಅದರ ಸಂರಚನೆಯನ್ನು ಹೊರತುಪಡಿಸಿ ಭಾರತವನ್ನು ಕಲ್ಪಿಸಿಕೊಳ್ಳಲಾಗದು. ಸಾಮಾಜಿಕ ಶ್ರೇಣೀಕರಣವನ್ನು ಹುಟ್ಟುಹಾಕಿರುವ ಜಾತಿ ವ್ಯವಸ್ಥೆಯು ಮೇಲು–ಕೀಳು ಭಾವನೆ ಸೃಷ್ಟಿಸಿ ಅಸಮಾನತೆಗೆ ಕಾರಣವಾಗಿದೆ. ಈ ಅಸಮಾನತೆಯ ಪರಿಹಾರಕ್ಕಾಗಿ ಸಂವಿಧಾನದ ಮೂಲಕ ರೂಪುಗೊಂಡಿದ್ದು ಮೀಸಲಾತಿ ವ್ಯವಸ್ಥೆ. ವಿಸ್ತಾರವಾದ ವ್ಯಾಪ್ತಿ ಹೊಂದಿರುವ ಮೀಸಲಾತಿಯ ಕುರಿತು ಕನ್ನಡದಲ್ಲಿ ಬಂದಿರುವ ಕೃತಿಗಳು ವಿರಳ. ಆ ಕೊರತೆಯನ್ನು ನೀಗಿಸುವಂತಿದೆ 'ಮೀಸಲಾತಿ ಅಂತರಂಗ' ಕೃತಿ. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರೂ ಆಗಿರುವ ಲೇಖಕ ಕೆ.ಎನ್. ಲಿಂಗಪ್ಪ ಅವರ ಅನುಭವ ಹಾಗೂ ಆಳವಾದ ಅಧ್ಯಯನದ ಫಲಿತವಾಗಿರುವ 'ಮೀಸಲಾತಿ ಅಂತರಂಗ' ಕೃತಿಯು ಮೀಸಲಾತಿ ಕುರಿತು ಇರುವ ಗೊಂದಲಗಳ ನಿವಾರಣೆಯ ಜೊತೆಗೆ ಖಚಿತವಾದ, ಸ್ಪಷ್ಟವಾದ ಅರಿವು ಮೂಡಿಸುತ್ತದೆ.

ರಾಜ್ಯದಲ್ಲಿ ಕೆಲವು ವರ್ಷಗಳಿಂದ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗದವರು ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳನ್ನು ಆಧರಿಸಿದ ಹಾಗೂ ಆಯಾ ಸಂದರ್ಭಕ್ಕೆ ಅನುಗುಣವಾಗಿ ಬರೆದಿರುವ ಒಟ್ಟು 36 ಲೇಖನಗಳು ಇಲ್ಲಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೀಸಲಾತಿ ಅನುಷ್ಠಾನದ ಕುರಿತು ಹೊಂದಿರುವ ಧೋರಣೆಗಳೂ ಇಲ್ಲಿ ಅನಾವರಣವಾಗಿವೆ. ಅಂತೆಯೇ ಮುಸ್ಲಿಮರ ಮೀಸಲಾತಿ, ಮಹಿಳಾ ಮೀಸಲಾತಿ, ಇಡಬ್ಲ್ಯುಎಸ್ ಕುರಿತಂತೆ ಕೃತಿ ಒಳನೋಟ ಬೀರುತ್ತದೆ. ಮುಖ್ಯವಾಗಿ ರಾಜಕೀಯವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಇರುವ ಮಾನದಂಡಗಳನ್ನು ಈಗ ಸ್ಪಷ್ಟಪಡಿಸಿಕೊಳ್ಳಬೇಕಾದ ಅಗತ್ಯದ ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ.

'ರಾಜಕೀಯ ಪಕ್ಷಗಳ ಸ್ಥಾನ ಹಂಚಿಕೆಯೂ, ಸಾಮಾಜಿಕ ನ್ಯಾಯವೂ' ಲೇಖನದಲ್ಲಿ, 'ಸಾಮಾಜಿಕ ಅನ್ಯಾಯವನ್ನು ತೊಲಗಿಸಬೇಕೆಂದರೆ, ಬಲಾಢ್ಯ ಜಾತಿಗಳ ಸಹಕಾರ– ಕಾರುಣ್ಯ ಬೇಕೇ ಬೇಕು. ಇಲ್ಲವಾದರೆ ಶತಶತಮಾನಗಳೇ ಸಂದು ಹೋದರೂ ಅಸಮಾನತೆ ಎಂಬುದು ಅಳಿಯದೆ, ಸಾಮಾಜಿಕ ನ್ಯಾಯದ ಕನಸಿನ ದಾರಿ ದೂರದಲ್ಲೆಲ್ಲೋ ಉಳಿದುಬಿಡುತ್ತದೆ' ಎನ್ನುವ ಲೇಖಕರ ಮಾತು ಮೀಸಲಾತಿಯ ಅಗತ್ಯವನ್ನು ಮನಗಾಣಿಸುತ್ತದೆ.

ಮೀಸಲಾತಿಯ ಆಳ–ಅಗಲ, ಅದರ ಹಿಂದಿನ ಉದ್ದೇಶ, ಕಾಲಕಾಲಕ್ಕೆ ರೂಪುಗೊಂಡ ಆಯೋಗಗಳ ವರದಿಗಳಷ್ಟೇ ಅಲ್ಲ, ಇತರ ರಾಜ್ಯ ಮತ್ತು ವಿದೇಶಗಳಲ್ಲಿನ ಮೀಸಲಾತಿಯ ಬಗೆಗಿನ ಮಾಹಿತಿಯೂ ಇಲ್ಲಿದೆ. ಅಧ್ಯಯನಕಾರರಿಗಷ್ಟೇ ಅಲ್ಲ, ಜನಸಾಮಾನ್ಯರೂ ಮೀಸಲಾತಿಯ ಕುರಿತು ಅರಿಯಲು ಈ ಕೃತಿ ಕೈಪಿಡಿಯಂತಿದೆ. ❖

ಕ್ಷೇತ್ರಕಾರ್ಯ ಹವ್ಯಾಸಿಯ ಚಿತ್ರ



ಪು: 269
₹275

ಮತಿಘಟ್ಟ ಕೃಷ್ಣಮೂರ್ತಿ ಬದುಕು ಬರಹ
ಲೇ: ಐಚನಹಳ್ಳಿ ಕೃಷ್ಣಪ್ಪ
ಪ್ರ. ಚೇ ಪುಸ್ತಕ
ಸಂ. 9845495475

ಚಲನಶೀಲ ವ್ಯಕ್ತಿತ್ವದ ಮತಿಘಟ್ಟ ಕೃಷ್ಣಮೂರ್ತಿ ಅವರ ಬದುಕು ಹಲವು ಘಟ್ಟಗಳನ್ನು ಆಕ್ರಮಿಸಿದೆ. ಮಹಾತ್ಮಗಾಂಧಿ ಅನುಯಾಯಿಯಾದ ಅವರು ಸ್ವಾಂತಂತ್ರ್ಯ ಚಳವಳಿಯಲ್ಲಿ ಸೆರೆವಾಸವನ್ನೂ ಅನುಭವಿಸುತ್ತಾರೆ. ಕಾಲೇಜು ಶಿಕ್ಷಣವನ್ನು ಬಿಟ್ಟು ಕೃಷಿಯಲ್ಲಿ ತೊಡಗುತ್ತಾರೆ. ಜಾನಪದ ಸಾಹಿತ್ಯ ಅಧ್ಯಯನವನ್ನು ಅದಮ್ಯ ಅಭಿಲಾಷೆಯಿಂದ ಚಿಕ್ಕವಯಸ್ಸಿನಲ್ಲಿಯೇ ಮೈಗೂಡಿಸಿಕೊಂಡಿದ್ದರು ಎನ್ನುವುದನ್ನು ಲೇಖಕ ಗುರುತಿಸಿದ್ದಾರೆ. ಬೆಂಗಳೂರು ಮತ್ತು ಮೈಸೂರು ಆಕಾಶವಾಣಿ ಕೇಂದ್ರದಿಂದ ಮೊದಲಬಾರಿಗೆ ಜನಪದ ಗೀತೆಗಳನ್ನು ಹಾಡಿದ ಹಿರಿಮೆ ಕೃಷ್ಣಮೂರ್ತಿ ಅವರಿಗೆ ಸಲ್ಲುತ್ತದೆ.

ರೈತ ಕೃಷ್ಣಮೂರ್ತಿ ಪತ್ರಕರ್ತ ವೃತ್ತಿಗೆ ಬಂದಿದ್ದು ಆಕಸ್ಮಿಕ. ಮೊದಲು ಆರ್. ಕಲ್ಯಾಣಮ್ಮ ಅವರ 'ಸರಸ್ವತಿ' ಪತ್ರಿಕೆಗೆ ಲೇಖನಗಳನ್ನು ಬರೆಯಲು ಆರಂಭಿಸುತ್ತಾರೆ. ನಂತರ 'ವಿಮಾವಾಣಿಜ್ಯ' ಪತ್ರಿಕೆ ಸಂಪಾದಕರ ಸಹಾಯಕರಾಗಿ ಪತ್ರಿಕಾ ಉದ್ಯೋಗ ಆರಂಭಿಸಿದರು. ಅದಾಗಿ ಕೆಲವೇ ದಿನಗಳಲ್ಲಿ ಟಿ.ಟಿ. ಶರ್ಮ ಅವರ 'ವಿಶ್ವಕರ್ನಾಟಕ' ವಾರ ಪತ್ರಿಕೆಗೆ ಉಪಸಂಪಾದಕರಾಗಿ ಸೇರುತ್ತಾರೆ. ನಂತರ ಸ್ವಂತ ಪತ್ರಿಕೆಯನ್ನು ಆರಂಭಿಸಿ ಪತ್ರಿಕೋದ್ಯಮದ ಏರಿಳಿತಗಳನ್ನು ಅನುಭವಿಸುತ್ತಾರೆ.

ಕೃಷ್ಣಮೂರ್ತಿ ಜಾನಪದ ಕ್ಷೇತ್ರಕಾರ್ಯದಲ್ಲಿ ಗಂಭೀರವಾಗಿ ತೊಡಗಿದ್ದು ವಿಚಿತ್ರ ಸಂದರ್ಭ. 1960ರಲ್ಲಿ ಗಂಡು ಮಗುವಿನ ತಂದೆಯಾಗುತ್ತಾರೆ. ಆಗ ಜಾತಕ ನೋಡಿದ ಜ್ಯೋತಿಷಿ 'ಒಂದು ವರ್ಷ ಮಗುವಿನ ಜೊತೆ ತಂದೆ ಇರಬಾರದು. ತಪ್ಪಿದರೆ ಕಷ್ಟ ತಪ್ಪುವುದಿಲ್ಲ' ಎಂದು ಹೇಳುತ್ತಾರೆ. ಆ ಸಮಯವನ್ನು ಜಾನಪದ ಸಾಹಿತ್ಯ ಸಂಗ್ರಹಕ್ಕೆ ಉಪಯೋಗಿಸುತ್ತಾರೆ. ಸೃಜನಶೀಲ ಸಾಹಿತ್ಯದಲ್ಲೂ ಕೆಲಸ ಮಾಡಿರುವ ವಿವರವನ್ನು 'ಕೃಷ್ಣಮೂರ್ತಿ ಬದುಕು ಬರಹ' ಕೃತಿಯಲ್ಲಿ ಕೃಷ್ಣಪ್ಪ ಪರಿಚಯಿಸಿದ್ದಾರೆ.

ಈ ಕೃತಿ ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದ್ದು, ಮೊದಲ ಅಧ್ಯಾಯ ಮತಿಘಟ್ಟ ಕೃಷ್ಣಮೂರ್ತಿ ಅವರ ಸಾಹಿತ್ಯದ ಪ್ರಕಾರಗಳ ಮಾಹಿತಿಯ ವಿವರವನ್ನು ಒಳಗೊಂಡಿದೆ. ಎರಡನೇ ಅಧ್ಯಾಯದಲ್ಲಿ ಅವರ ಸಾಹಿತ್ಯದ ವೈವಿಧ್ಯ ಚಿತ್ರಗಳ ಕುರಿತು ಚರ್ಚಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಜಾನಪದ ಕ್ಷೇತ್ರಕ್ಕೆ ಮತಿಘಟ್ಟ ಅವರ ಕೊಡುಗೆಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ನಾಲ್ಕನೇ ಅಧ್ಯಾಯ ಜನಪದರ ಅಧ್ಯಾತ್ಮ ಚಿಂತನೆಯ ಒಳನೋಟಗಳನ್ನು ಕೃಷ್ಣಮೂರ್ತಿ ಹೇಗೆ ವಿವೇಚಿಸಿದ್ದಾರೆ ಎಂಬ ಅಂಶವನ್ನು ಲೇಖಕ ನಿರೂಪಿಸಿದ್ದಾರೆ. ❖

ಕಾಡು ಹಾದಿಯ ಬೆಳಕಿನ ಜಾಡು

ಪು: 188
₹200

ಕಾಡು ಹಾದಿಯ ಬೆಳಕಿನ ಜಾಡು
ಲೇ: ಆರ್. ಜಯಕುಮಾರ್
ಪ್ರಕಾಶನ: ಪ್ರಜಾ ಪುಸ್ತಕ
ಸಂ:9632836949

ಇದೊಂದು ಮೂರು ತಲೆಮಾರುಗಳ ಸಂಕ್ಷಿಪ್ತ ಕಥನ. ಕಾವ್ಯಗಳಲ್ಲಿ ಕಾಣುವ ಜೀವಪ್ರವಾಹ ಸಂಕ್ಷಿಪ್ತ ಎಳೆಗಳು ಈ ಹೊತ್ತಗೆಯಲ್ಲಿ ಚಿತ್ರಿತವಾಗಿರುವುದು ವಿಶೇಷ. ಪುಸ್ತಕದ ಆರಂಭದಲ್ಲಿ ಕಾಣಿಸಿಕೊಳ್ಳುವ ಸಂವೇದನಾತ್ಮಕ ಭಾವನೆ ಸೂಚಿಸುವ ಪಾತ್ರ ಲೇಖಕರ ಹೆತ್ತಮ್ಮನೂ ಆಗಿರುವ ಕೊಟ್ಯಾಡಿಯ ಕುಞ್ಞಮ್ಮ ಅವರದು. ಈಕೆ ಹೊಟ್ಟೆಪಾಡಿಗಾಗಿ ಕೊಡಗಿನ ತೋಟವೊಂದರಲ್ಲಿ ಕೂಲಿ ಮಾಡುತ್ತಾ, ಶೋಷಣೆಗೆ ಒಳಗಾಗಿರುವ ತಿಯಾ ಜಾತಿಗೆ ಸೇರಿದ ಹೆಣ್ಣುಮಗಳು. ಕುಞ್ಞಮ್ಮ ಕೆಲಸದಲ್ಲಿ ಪ್ರಾಮಾಣಿಕ ಹಾಗೂ ನಿಷ್ಠಾವಂತೆ. ಹೀಗಾಗಿಯೇ ಈಕೆ ತೋಟದ ವ್ಯವಸ್ಥಾಪಕ ಕೃಷ್ಣನ್ ನಾಯರ್ ಅವರ ಮನಗೆಲ್ಲುವುದಷ್ಟೇ ಅಲ್ಲದೆ ಅವರನ್ನೇ ಮದುವೆಯೂ ಆಗುತ್ತಾಳೆ.

ಕೂಲಿ ಮಾಡುತ್ತಿದ್ದ ಕುಞ್ಞಮ್ಮ ಮುಂದೆ ಕೇರಳದ ಪಾಲ್ಘಾಟಿನಲ್ಲಿನ ಶ್ರೀಮಂತರ ಮನೆಗೆ ಸೇರುವುದು ಆಕೆಯ ಜೀವನದಲ್ಲಿ ಆದ ಮಹತ್ವದ ತಿರುವು. ಬಳಿಕ ಇಬ್ಬರು ಮಕ್ಕಳ ತಾಯಿಯಾಗುತ್ತಾಳೆ. ದುರದೃಷ್ಟವಶಾತ್ ಗಂಡನಿಗೆ ಯಾವುದೋ ಕಾಯಿಲೆ ಬಂದು ಮೃತಪಡುತ್ತಾನೆ. ಗಂಡ ತೀರಿಹೋದ ಬಳಿಕ ಮನೆಯಲ್ಲಿ ಕುಞ್ಞಮ್ಮನ ಬಗ್ಗೆ ಅಸಮಾಧಾನ ಭುಗಿಲೇಳುತ್ತದೆ. ಜೊತೆಗೆ ಇಬ್ಬರು ಮಕ್ಕಳ ಸಹಿತ ಈಕೆಯನ್ನು ಕೊಂದುಹಾಕುವ ಸಂಚೂ ನಡೆಯುತ್ತದೆ. ಈ ವಿದ್ಯಮಾನವನ್ನು ಗಮನಿಸಿದ ಈಕೆಯ ಗಂಡನ ಗೆಳೆಯ ದಾಮೋದರ ಮೆನನ್ ಈ ಸಂಚಿನಿಂದ ಪಾರುಮಾಡುವ ಘಟನೆಯೂ ನಡೆಯುತ್ತದೆ. ಇದರಿಂದ ವಿಪರೀತ ಮನನೊಂದ ಕುಞ್ಞಮ್ಮ ಮನೆಯನ್ನು ಬಿಟ್ಟು ತಾನು ಹಿಂದೆ ಕೆಲಸ ಮಾಡುತ್ತಿದ್ದ ತೋಟದ ಮನೆಗೆ ಪುನಃ ಕೂಲಿಯಾಳಾಗಿ ಸೇರಿಕೊಳ್ಳುವ ಪ್ರಸಂಗವೂ ನಡೆಯುತ್ತದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಕುಞ್ಞಮ್ಮ ನೆರವಿಗೆ ಬರುವುದು ಜೇವಿಯರ್ ಮತ್ತು ಪಡಿವೇಲು ಅವರ ಕುಟುಂಬ. ತೋಟದಲ್ಲಿ ಕಷ್ಟಪಟ್ಟು ದುಡಿಮೆ ಸಾಗಿಸುತ್ತಿದ್ದಾಗ ಕುಞ್ಞಮ್ಮನ ಬದುಕಿನಲ್ಲಿ ಮತ್ತೊಂದು ಆಘಾತ ಸಂಭವಿಸುತ್ತದೆ. ಅದುವೇ ಈಕೆಯ ಮಗುವಿನ ಸಾವು. ಈ ನೋವಿನ ಮಧ್ಯೆಯೂ ಕುಞ್ಞಮ್ಮನ ಬದುಕು ಮತ್ತೊಂದು ತಿರುವು ಪಡೆದುಕೊಳ್ಳುವುದು ರಾಘವ ಎಂಬ ವ್ಯಕ್ತಿಯ ಪ್ರವೇಶ, ಈಕೆ ಮತ್ತೆ ಗರ್ಭಿಣಿಯಾಗಿ ಹುಟ್ಟಿದ ಮಗುವೇ ಈ ಪುಸ್ತಕದ ಕರ್ತೃ ಜಯಕುಮಾರ್! ವಿಪರ್ಯಾಸ ಎಂದರೆ ಈ ಮಗು ಹುಟ್ಟಿದಾಗ ರಾಘವ ತಾಯಿ–ಮಗುವನ್ನು ಬಿಟ್ಟು ಪರಾರಿಯಾಗಿರುವುದು. ಈ ಸನ್ನಿವೇಶ ಹೊತ್ತಗೆಯನ್ನು ರೋಚಕವಾಗಿಸುತ್ತದೆ.

ಇನ್ನೊಂದು ವಿಶೇಷ ಎಂದರೆ ಮನೆಯಲ್ಲಿ ಕುಮಾರ್ ಎಂದು ಕರೆಸಿಕೊಳ್ಳುತ್ತಿದ್ದ ಬಾಲಕ ಶಾಲೆ ಸೇರಿದ ಬಳಿಕ ಆರ್. ಜಯಕುಮಾರ್ ಆದ. ಈ 'ಆರ್' ಎಂಬ ಇನಿಶಿಯಲ್ ರಾಘವ ಎಂಬ ಹೆಸರನ್ನು ಸೂಚಿಸುತ್ತದೆ ಎಂಬುದು ಗಮನಾರ್ಹ.

ಪುಸ್ತಕದ ಮುಂದಿನ ಪ್ರಮುಖ ಪಾತ್ರ ಜಯಕುಮಾರ್ ಅವರ ಅಣ್ಣ ಪಿ.ಕೆ. ಚಂದ್ರಶೇಖರ್ ಅವರದು. ಮೂರನೇ ಪಾತ್ರ ಆರ್. ಜಯಕುಮಾರ್ ಅವರದೇ. ಬದುಕಿನ ಹಲವು ಕವಲುಗಳನ್ನು, ಏಳುಬೀಳುಗಳನ್ನು, ರೋಚಕ ತಿರುವುಗಳನ್ನು ಪಡೆಯುವ ಈ ಪುಸ್ತಕವನ್ನು ಕಾದಂಬರಿ ಎನ್ನಬಹುದೇ? ಅನುಭವ ಕಥನ ಎನ್ನಬಹುದೇ ಎಂಬುದನ್ನು ಓದುಗರೇ ನಿರ್ಧರಿಸಬೇಕು. ಆದರೆ ಒಂದೇ ಉಸಿರಿಗೆ ಓದಿ ಮುಗಿಸುವಂಥ ಆಕರ್ಷಣೆಯನ್ನು ಹೊತ್ತಗೆ ಪಡೆದುಕೊಂಡಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ❖



ಊರು ಕಾಡಿಗೆ ನೂರು!

ಹಳಕಾರ ಗ್ರಾಮದ ಕಟ್ಟೆಯಲ್ಲಿ ಹಳೆ ಬೇರು ಹೊಸ ಚಿಗುರು...

10ನೇ ಪುಟದಿಂದ...

ಅದರಂತೆ ಜಿಲ್ಲೆಯಲ್ಲಿ ಸುಮಾರು 50ಕ್ಕೂ ಹೆಚ್ಚು, ಕುಮಟಾ ತಾಲ್ಲೂಕಿನಲ್ಲಿ ಚಿತ್ರಿಗಿ, ಹಳಕಾರ, ಹೊಲನಗದ್ದೆ, ಮೂರೂರು, ಕಲ್ಲಬ್ಬೆ, ಹಟ್ಟಿಕೇರಿ ಅರಣ್ಯಗಳಿಗೆ ಒಂದೊಂದು ಸಮಿತಿ ರಚಿಸಿ 'ವಿಲೇಜ್ ಫಾರೆಸ್ಟ್' ಎಂದು ಹೆಸರಿಟ್ಟು ಅರಣ್ಯ ಅಧಿಕಾರವನ್ನು ಜನರಿಗೆ ಹಸ್ತಾಂತರಿಸಿತು. ಅವುಗಳಿಗೆ ಕಾಲಿನ್ ಕಟ್ಟುನಿಟ್ಟಿನ ಉಪ ನಿಯಮ ರಚಿಸಿ ಅದನ್ನು ಅಕ್ಷರಶಃ ಪಾಲಿಸುವಂತೆ ಸೂಚಿಸಿದ್ದರು.

ಕಾಲಿನ್ ರಚಿಸಿದ ನಿಯಮ ಪ್ರಕಾರ ಪ್ರತಿ ವಿಲೇಜ್ ಫಾರೆಸ್ಟ್ ಸದಸ್ಯರ ಸಮಿತಿ ಸದಸ್ಯರ ಪಟ್ಟಿಯನ್ನು ಮೂರು ವರ್ಷಗಳಿಗೊಮ್ಮೆ ತಹಶೀಲ್ದಾರ್ ದೃಢೀಕರಿಸಬೇಕು. ಪಟ್ಟಿಯಲ್ಲಿರುವ ಮೂರನೇ ಒಂದು ಭಾಗದ ಸದಸ್ಯರು ಅರಣ್ಯ ಪಂಚಾಯ್ತಿ ಸಾಮಾನ್ಯ ಸಭೆಗೆ ಹಾಜರಿದ್ದರೆ ಮಾತ್ರ ಸಭೆ ಊರ್ಜಿತ. ಕಾಡಿನಿಂದ ಯಾವ ವಸ್ತುಗಳನ್ನು ಹೊರಗೆ ಒಯ್ಯಬಹುದು ಎಂಬುದನ್ನು ಠರಾವಿನಲ್ಲಿ ನಮೂದಿಸಬೇಕು. ಅವುಗಳ ಹೊರತಾಗಿ ಬೇರೆ ಯಾವುದೇ ಮರಗಳನ್ನು ಸದಸ್ಯರು ಒಯ್ಯುವಂತಿಲ್ಲ. ಅರಣ್ಯದೊಳಗೆ ಪ್ರತಿ ವರ್ಷ ಶ್ರಮದಾನದ ಮೂಲಕ ಶುಚಿ ಕಾರ್ಯ ನಡೆಸಿ, ಗಿಡ ನೆಡುವುದು ಸದಸ್ಯರ ಕರ್ತವ್ಯ. ವಾರ್ಷಿಕ ಹಣಕಾಸು ಲೆಕ್ಕಾಚಾರವನ್ನು ತಹಶೀಲ್ದಾರ್‌ಗೆ ದೃಢೀಕರಣಕ್ಕಾಗಿ ಕಳುಹಿಸಿಕೊಡಬೇಕು. ಆಗಾಗ ತಹಶೀಲ್ದಾರ್ ನೇತೃತ್ವದಲ್ಲಿ ಅರಣ್ಯದ ಗಡಿಕಲ್ಲುಗಳನ್ನು ದುರಸ್ತಿ ಮಾಡಿಸಿಕೊಳ್ಳಲು ಸಮಿತಿಗೆ ಅವಕಾಶವಿದೆ.

ಎರಗಿದ ಸಿಡಿಲು

ಸ್ವಾತಂತ್ರ್ಯ ನಂತರ 1960 ರಲ್ಲಿ ಬಂದ ಹೊಸ ಅರಣ್ಯ ಕಾಯ್ದೆ ಪ್ರಕಾರ ಎಲ್ಲ 'ವಿಲೇಜ್ ಫಾರೆಸ್ಟ್'ಗಳು ರದ್ದಾಗಿವೆ. ಎಲ್ಲ ಅರಣ್ಯವನ್ನು ಸರ್ಕಾರಕ್ಕೆ ವಾಪಸ್ ಕೊಡಬೇಕು ಎಂದು ಅಂದಿನ ಜಿಲ್ಲಾಧಿಕಾರಿ ಆದೇಶ ಹೊರಡಿಸಿದರು. ಎಲ್ಲ ವಿಲೇಜ್ ಫಾರೆಸ್ಟ್ ಸಮಿತಿಗಳು ತಮ್ಮ ಅರಣ್ಯವನ್ನು ಸರ್ಕಾರಕ್ಕೆ ವಾಪಸ್ ಮಾಡಿದವು. ಹಳಕಾರ, ಮೂರೂರು-ಕಲ್ಲಬ್ಬೆ-ಬೊಗರಿಬೈಲ ವಿಲೇಜ್ ಫಾರೆಸ್ಟ್ ಸಮಿತಿ ಸದಸ್ಯರು ಮಾತ್ರ ಹತ್ತು ವರ್ಷ ನ್ಯಾಯಾಲಯದಲ್ಲಿ ಹೋರಾಟ ನಡೆಸಿದರು. 1989 ರಲ್ಲಿ ವಿಲೇಜ್ ಫಾರೆಸ್ಟ್ ಅನ್ನು ಜಿ.ಎಸ್. ಎಫ್ ಕಾಲಿನ್ ಪರಿಕಲ್ಪನೆಯಂತೆ ಜನರ ಬಳಿಯೇ ಇರಬೇಕು ಎಂದು ವಿಲೇಜ್ ಫಾರೆಸ್ಟ್ ಪರ ತೀರ್ಪು ಬಂದಿತು. ಸರ್ಕಾರಕ್ಕೆ ಹಸ್ತಾಂತರಗೊಂಡ ಎಲ್ಲ ವಿಲೇಜ್ ಫಾರೆಸ್ಟ್‌ಗಳಲ್ಲಿ ನಂತರ ಅರಣ್ಯ ಮಾಯವಾಗಿ ಕ್ರಮೇಣ ಅಲ್ಲಿ ಜನವಸತಿ, ಉದ್ಯಮ ಬೆಳೆಯಿತು.

ಈ ಕಾಡಿನೊಳಗಿನ ಗಿಡಮರಗಳನ್ನು ಕಡಿಯುವುದು ಹಾಗಿರಲಿ, ಕಾಡು ಪ್ರವೇಶಿಸುವ ಯಾರೂ ಆಯುಧ ತೆಗೆದುಕೊಂಡು ಹೋಗುವಂತಿಲ್ಲ. ಉರುವಲು ಬಳಕೆಗೆ ಕೈಯಲ್ಲಿ ಮುರಿದುಕೊಂಡು ಬರುವಂಥ ಒಣ ಜಿಗ್ಗು, ಕೃಷಿ ಬಳಕೆಗಾಗಿ ತರಗೆಲೆ ಮಾತ್ರ ತರಬಹುದು. ಈ ಕಾಡಿನ ಸುಸ್ಥಿರ ಬಳಕೆ ಮಾಡುವ ಹಕ್ಕಿರುವುದು ಊರಿನ ಕಾಡಿನ ಸದಸ್ಯತ್ವ ಹೊಂದಿರುವ ರೈತ ಕುಟುಂಬಗಳಿಗೆ ಮಾತ್ರ. ಈ ಕಾಡಿನ ಸಂರಕ್ಷಣೆ ಬಗ್ಗೆ ಎಂಥ ಕಟ್ಟುನಿಟ್ಟಿನ ನಿಯಮ ನೋಡಿ? ಊರಿನವರೇ ಮಾಡಿಕೊಂಡು ಪಾಲಿಸುತ್ತಾ ಬಂದಿರುವ ನಿಯಮ. ಕುಮಟಾ ಪಟ್ಟಣದ ಮಧ್ಯೆ ಇರುವ ಈ ಕಾಡಿನಿಂದಾಗಿ ಸುತ್ತಲಿನ ಜನವಸತಿ ಪ್ರದೇಶದಲ್ಲಿ ಯಾವಾಗಲೂ ಕುಡಿಯುವ ನೀರಿನ ಬರವಿಲ್ಲ, ಸದಾ ತಂಪಾದ ವಾತಾವಾರಣ ಇಲ್ಲಿಯ ವಿಶೇಷ.

ಊರಲ್ಲಿ ಕೊಡಿಯಾ, ಪಟಗಾರ, ಮಡಿವಾಳ, ಮುಕ್ರಿ, ನಾಮಧಾರಿ, ಗುನಗಾ, ಶಾನಭಾಗ, ಹವ್ಯಕ ಬ್ರಾಹ್ಮಣ, ಹುಲಸ್ವಾರ, ಹರಿಕಂತ್ರ ಮುಂತಾದ ಸಮಾಜದವರು ಇದ್ದಾರೆ. ಗ್ರಾಮಸ್ಥರಲ್ಲಿ ಜಮೀನು, ರಾಜಕೀಯ ವಿಚಾರವಾಗಿ ಹೊಂದಾಣಿಕೆ ಇಲ್ಲದಿದ್ದರೂ ವಿಲೇಜ್ ಫಾರೆಸ್ಟ್ ವಿಚಾರ ಬಂದಾಗ ಎಲ್ಲವನ್ನೂ ಮರೆತು ಒಂದಾಗುತ್ತಾರೆ. ಒಬ್ಬರ ಮುಖ ಇನ್ನೊಬ್ಬರು ನೋಡದವರನ್ನು ವಿಲೇಜ್ ಫಾರೆಸ್ಟ್‌ನ ವಿಷಯ ಪರಸ್ಪರ ಒಂದು ಮಾಡಿದ ಎಷ್ಟೋ ಸಂದರ್ಭಗಳಿವೆ ಎನ್ನುವುದು ಗ್ರಾಮಸ್ಥರ ಮಾತು.

ಹೀಗಾಗಿಯೇ ಊರು ಕಾಡು ಇನ್ನೂ ನಳನಳಿಸುತ್ತಿದೆ. ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಜತುಮುದ್ರೆ

ಜತುಮುದ್ರೆ (ನಾ). 1. ಅರಗಿನ ಮುದ್ರೆ 2. (ಆಲಂ) ಮುಚ್ಚಿಡುವಿಕೆ, ರಹಸ್ಯ

(ಜತು + ಮುದ್ರೆ)

ಕೈಕೆ ತನ್ನ ಕೆಲಸ ಸಾಧನೆಗೆ ಕಾಮಾಕಾಂಕ್ಷಿಯಾದ ದಶರಥನಿಗೆ 'ನಾನು ಕೇಳುವುದನ್ನು ಕೊಡುವೆಯೆಂದು ಚುಂಬನದ ಜುತುಮುದ್ರೆಯೊತ್ತಿ, ಆಣೆಯಿಟ್ಟು ಹೇಳುವಾಗ, ನಾನು ಮನದಾಸೆ ಕೋರಿಕೆಯನ್ನು ನಿನಗೆ ಹೇಳದಿರುವೆನೆ?' ಎಂದು ಪ್ರಶ್ನಿಸುತ್ತಾಳೆ.

ಕವಿ ದಾಂಪತ್ಯದ ಆಂತರ್ಯ ಭಾವಾಭಿವ್ಯಕ್ತಿಗೆ ಕಾವ್ಯ ತೊಡಿಗೆ ಇಟ್ಟಂತೆ, ಅರಗಿನ ಮುದ್ರೆ ತೆಗೆಯಲಾಗದು ಎಂಬ ಅರ್ಥದಲ್ಲಿ 'ಜತುಮುದ್ರೆ' ಪದವನ್ನು ಟಂಕಿಸಿದ್ದಾರೆ. ಗುಟ್ಟಾದ ಚುಂಬನದ ಜತುಮುದ್ರೆಯಲ್ಲಿ ಅವನು ತನ್ನ ನುಡಿಯನ್ನು ಅಡಗಿಸಬೇಕಾದ ಆಲಂಕಾರಿಕ ಚಾತುರ್ಯವು; ಕೈಕೆಯು ಅವನನ್ನು ಅಡಕದಲ್ಲಿಟ್ಟುಕೊಳ್ಳುವ ವ್ಯವಹಾರ ಜಾಣ್ಮೆಯು ಏಕತ್ರಗೊಂಡಿದೆ.

ಮನವನೊರೆಯನೆ ನಿನಗೆ, ಮನದನ್ನ,
ಕೋರ್ದುದಂ ಕೊಡುವೆನೆಂದಾ ಣೆಯಿಟ್ಟಾಡಿದೊಡೆ,
ಚುಂಬನದ ಜತುಮುದ್ರೆಯೊತ್ತಿ?

ತಣ್ಬೂಳಿಗ

ತಣ್ಬೂಳಿಗ (ನಾ). ತಂಪನ್ನುಂಟುಮಾಡುವ ಸೇವೆ; ಶೈತ್ಯೋಪಚಾರ

(ತಣ್ಪು + ಊಳಿಗ)

ಭರತನು ಮಾವನ ಮನೆಯಿಂದ ಶತ್ರುಘ್ನನೊಡನೆ ಹಿಂತಿರುಗಿ ಬಂದನು. ತನ್ನ ತಾಯಿಯ ಕಾರಣದಿಂದ ಅಣ್ಣ ರಾಮಚಂದ್ರನು ವನವಾಸಕ್ಕೆ ಹೋದುದನ್ನು, ತಂದೆ ಮಡಿದುದನ್ನು ತಿಳಿದು ದುಃಖಿತನಾದನು. ತಾಯಿಯಿಂದ ಎಲ್ಲ ವಿಷಯವನ್ನು ಅರಿತು ಮಂಥರೆಯನ್ನು ಹಳಿದನು. ಪತಿ,ಪುತ್ರ ಹೀನೆಯಾದ ದೊಡ್ಡಮ್ಮ ಕೌಸಲ್ಯೆಯನ್ನು ಕಾಣಲು ಹೋದನು.

ಅವಳು ಕೈಕೆಯ ಕುಮಾರನನ್ನು ಕಂಡು ದುಃಖ ಮರುಕೊಳಿಸಿ ಪ್ರಜ್ಞೆ ತಪ್ಪಿ ಒರಗಿದಳು. ಆಗ ಭರತನು ಆ ತಾಯಿಗೆ ಮಾಡಿದ ಶೈತ್ಯೋಪಚಾರವನ್ನು ಕವಿಯು ಆ ಸಂದರ್ಭಕ್ಕೆ ಅನುಸರಿಸಿ ಹೊಸನುಡಿ 'ತಣ್ಬೂಳಿಗ' ನೇಯ್ದು ಪ್ರಯೋಗಿಸಿದ್ದಾರೆ.

ಕೈಕೆಯ ಕುಮಾರನಂ ಕಾಣುತಂ
ಮರುಕೊಳಿಸಿದಳಲ ಹೊಡೆತವನಾನಲಾರದೆಯೆ
ಮೈಮರೆತೊರಗಲಾಕೆ, ಪಿಡಿದೆತ್ತಿ ಕುಳ್ಳಿರಿಸಿ
ತಣ್ಬೂಳಿಗವನೆಸಗಿ, ಕರ್ಚಿದನ್ ಕಣ್ಬನಿ ವೊನಲ್ಗಳಿಂ
ಭರತನಾ ರಘುರಾಮನಂಬಿಕೆಯ ಪುಣ್ಯಮಯ
ಪದ್ಮಪಾದಂಗಳಂ.

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಮೂಲ: ವಂದನಾ ಶಾಂತುಇಂದು
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ
ವಂಶಜ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ನಿವೇದಿತಾ ಎಚ್. ಮೈಸೂರು
ಅವರ
ನಾವಿಬ್ಬರೇ ಅಲ್ಲ!

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸುಂದರ ನಗರ ಪ್ರಾಗ್ ಪ್ರದಕ್ಷಿಣೆ

ನವೋಲ್ಲಾಸ

ಈಚೆಗೆ ನಾನು ಮತ್ತು ಪತ್ನಿ ಝೆಕ್ ರಿಪಬ್ಲಿಕ್ ದೇಶದ ರಾಜಧಾನಿ ಪ್ರಾಗ್ ಪ್ರವಾಸ ಮಾಡಿದೆವು. ಇದು ನಮ್ಮ ಮೊದಲ ವಿದೇಶ ಪ್ರವಾಸವೇನೂ ಅಲ್ಲ, ಈಗಾಗಲೇ ಹತ್ತಕ್ಕೂ ಹೆಚ್ಚು ದೇಶಗಳನ್ನು ಸುತ್ತಿದ್ದೇವೆ. ಆದರೆ, ಪ್ರಾಗ್‌ನಷ್ಟು ಮೋಡಿ ಮಾಡಿದ ದೇಶ ಇನ್ನೊಂದಿಲ್ಲ!

ಪ್ರಾಗ್ ನಗರ ಮೂಲದಲ್ಲಿ ಬೊಹೆಮಿಯಾ ರಾಜರ ಐತಿಹಾಸಿಕ ರಾಜಧಾನಿ. ವ್ಲಾತಾವಾ ನದಿಯ ಎರಡೂ ದಡಗಳಲ್ಲೂ ಪಸರಿಸಿದೆ. ಇದು ಯುರೋಪ್‌ನ ಹೃದಯಭಾಗದಲ್ಲಿರುವ ಅತ್ಯಂತ ಸುಂದರ ನಗರ. ಶ್ರೀಮಂತ ರೋಮನೆಸ್ಕ್, ಗೋಥಿಕ್, ನವೋದಯ ಮತ್ತು ಬರೋಕ್ ವಾಸ್ತುಶಿಲ್ಪಗಳೊಂದಿಗೆ ಮಧ್ಯಯುರೋಪ್‌ನ ಅತಿಮುಖ್ಯ ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಕೇಂದ್ರ.

ಪ್ರಾಗ್‌ನ ಕೋಟೆ, ಚಾರ್ಲ್ಸ್ ಸೇತುವೆ, ಹಳೆ ನಗರದ ವೃತ್ತ, ಖಗೋಳ ಗಡಿಯಾರ, ಯಹೂದಿ ಕ್ವಾಟರ್ಸ್, ಪೆಟ್ರಿನ್ ಹಿಲ್ಸ್-ಅಲ್ಲಿರುವ ಕಬ್ಬಿಣದ ಗೋಪುರ ಮತ್ತು ವೈಸ್‌ಹ್ರಾಡ್ ಪ್ರಮುಖವಾಗಿವೆ. 1992ರಲ್ಲಿ ಐತಿಹಾಸಿಕ ಪ್ರಾಗ್ ನಗರವನ್ನು ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸೇರಿಸಲಾಯಿತು. ನಗರದಲ್ಲಿ ಹಲವಾರು ಕಲಾ ಗ್ಯಾಲರಿಗಳು ಮತ್ತು ಐತಿಹಾಸಿಕ ಪ್ರದರ್ಶನಗಳೊಂದಿಗೆ ಹತ್ತಕ್ಕೂ ಹೆಚ್ಚು ಉನ್ನತ ದರ್ಜೆಯ ವಸ್ತುಸಂಗ್ರಹಾಲಯಗಳಿವೆ. ಅತ್ಯಾಧುನಿಕ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಎಲ್ಲಾ ಕಡೆಗಳಿಂದಲೂ ವ್ಯಾಪಕವಾಗಿ ನಗರವನ್ನು ಸಂಪರ್ಕಿಸುತ್ತದೆ.

ಪ್ರಾಗ್, ಬೊಹೆಮಿಯಾ ಸಾಮ್ರಾಜ್ಯದ ಕಾಲದಲ್ಲಿ ಪವಿತ್ರ ರೋಮನ್ ಚಕ್ರವರ್ತಿಗಳ ನೆಲೆಯಾಗಿತ್ತು. ಮುಖ್ಯವಾಗಿ ಚಾರ್ಲ್ಸ್-4 (1346-1378) ಮತ್ತು ರುಡಾಲ್ಫ್-2 (1575-1611). ಜೊತೆಗೆ ಹ್ಯಾಬ್ಸ್‌ಬರ್ಗ್ ರಾಜಪ್ರಭುತ್ವ ಮತ್ತು ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯದ ಪ್ರಮುಖ ನಗರವೂ ಆಗಿತ್ತು. ಇದು ಬೊಹೆಮಿಯನ್ ಮತ್ತು ಪ್ರೊಟೆಸ್ಟಂಟ್ ಸುಧಾರಣೆಗಳು, 30 ವರ್ಷಗಳ ಸುದೀರ್ಘ ಯುದ್ಧ (ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್‌ರ ನಡುವೆ), ಎರಡು ವಿಶ್ವ ಮಹಾಯುದ್ಧಗಳು ಹಾಗೂ ಕಮ್ಯುನಿಸ್ಟ್ ಅವಧಿಯಲ್ಲಿ ಝೆಕೊಸ್ಲೊವಾಕಿಯಾದ (ಜೆಕ್ ಮತ್ತು ಯುಗೊಸ್ಲಾವಿಯಾ) ರಾಜಧಾನಿಯಾಗಿ ಪ್ರಮುಖ ಪಾತ್ರ ವಹಿಸಿತ್ತು. ಪ್ರಾಗ್ ಹಲವಾರು ಪ್ರಸಿದ್ಧ ಕಲೆ-ಸಾಂಸ್ಕೃತಿಕ ಆಕರ್ಷಣೆಗಳ ನೆಲೆಯಾಗಿದ್ದು 20ನೇ ಶತಮಾನದಲ್ಲಿ ನಡೆದ ಹಿಂಸೆ ಮತ್ತು ವಿನಾಶವನ್ನು ಮೆಟ್ಟಿ ಉಳಿದುಕೊಂಡಿದೆ.

ಮೊದಲ ದಿನ ಪ್ರಾಗ್ ಮಧ್ಯಭಾಗದ ವೆನ್ಸೆಸ್ಲಾಸ್ ಸ್ಕ್ವೇರ್ ತಲುಪಿದಾಗ ಜನರು ತುಂಬಿಹೋಗಿದ್ದರು. ಅಲ್ಲಿಂದ ಪ್ರಾಗ್ ಕ್ಯಾಸೆಲ್ ನೋಡಲು ಹೊರಟೆವು. ದೂರದಿಂದಲೇ ವೈಭವವಾಗಿ ವಿಶಾಲವಾದ ಪ್ರಾಂಗಣ, ನಾಲ್ಕಾರು ಚರ್ಚ್‌ಗಳು ಮತ್ತು ಅರಮನೆಗಳ ಸಂಕೀರ್ಣ ಕಾಣಿಸುತ್ತಿದ್ದವು. ಈ ಪುರಾತನ ಕೋಟೆ ಗಿನ್ನಿಸ್ ಪುಸ್ತಕದಲ್ಲಿ ವಿಶ್ವದ ಅತಿದೊಡ್ಡ ಪ್ರಾಚೀನ ಕೋಟೆ ಎಂದು ದಾಖಲಾಗಿದೆ. ಪ್ರತಿ ವರ್ಷ 1.8 ದಶಲಕ್ಷ ಜನರು ಕೋಟೆಯನ್ನು ವೀಕ್ಷಿಸಲು ಬರುತ್ತಾರೆ.

ಕ್ರಿ.ಶ. 870ರಲ್ಲಿ ಇಲ್ಲಿ ವರ್ಜಿನ್ ಮೇರಿ ಚರ್ಚ್ ಅನ್ನು ಕಟ್ಟಲಾಯಿತು. 10ನೇ ಶತಮಾನದ ಮೊದಲಾರ್ಧದಲ್ಲಿ ರಾಜ ವ್ರಟಿಕಾಸ್-1, ಡ್ಯೂಕ್ ಆಫ್ ಬೊಹೆಮಿಯಾ ಮತ್ತು ಅವರ ಮಗ ಸೇಂಟ್ ವೆನ್ಸೆಸ್ಲಾಸ್ ಆಳ್ವಿಕೆಯಲ್ಲಿ ಸೇಂಟ್ ಬೆಸಿಲಿಕಾ ಮತ್ತು ಸೇಂಟ್ ವಿಟಸ್ ಬೆಸಿಲಿಕಾ ಕಟ್ಟಲಾಯಿತು. ಇದರ ಜೊತೆಗೆ 12ನೇ ಶತಮಾನದಲ್ಲಿ ರೋಮನೆಸ್ಕ್ ಅರಮನೆಯನ್ನು ನಿರ್ಮಿಸಲಾಯಿತು. ವೈಭವದಿಂದ ಕೂಡಿದ ಚರ್ಚ್‌ಗಳು ಮತ್ತು ಅರಮನೆಗಳು ನಮ್ಮಲ್ಲಿ ಬೆರಗು ಹುಟ್ಟಿಸಿದವು.

ಚಾರ್ಲ್ಸ್ ಬ್ರಿಜ್

ಪ್ರಾಗ್‌ನ ಮಧ್ಯಭಾಗದಲ್ಲಿ ಹರಿಯುವ ವ್ಲಾತಾವಾ ನದಿಯ ಮೇಲೆ ಗ್ರಾನೈಟ್ ಕಲ್ಲುಗಳಲ್ಲಿ ಚಾರ್ಲ್ಸ್ ಸೇತುವೆಯನ್ನು ಕಟ್ಟಲಾಗಿದೆ. ಸೇತುವೆ ಮೇಲೆ 30 ಶಿಲ್ಪಕಲಾಕೃತಿಗಳನ್ನು ಇರಿಸಲಾಗಿದೆ. ಹೆಚ್ಚಿನ ಶಿಲ್ಪಗಳು ಬರೋಕ್ ಶೈಲಿಯಿಂದ ಕೂಡಿದ್ದು ಕ್ರಿ.ಶ.1700ರ ಸುಮಾರಿಗೆ ಇವುಗಳನ್ನು ಕೆತ್ತಲಾಗಿದೆ. ಆನಂತರ ಶಿಥಿಲಗೊಂಡ ಕಾರಣ ಮರುರೂಪಿಸಲಾಗಿದೆ. ಆದರೆ ಈಗ ಅವೆಲ್ಲ ಮತ್ತೆ ಬಣ್ಣ ಕಳೆದುಕೊಂಡಿವೆ. 30 ಶಿಲ್ಪಕಲಾಕೃತಿಗಳ ಬಗೆಗಿನ ಮಾಹಿತಿಯನ್ನು ಕೆದಕಿದಾಗ ವಿವರಣೆ ಮತ್ತು ಅವುಗಳನ್ನು ಕೆತ್ತಿದ ಕಲಾವಿದರ ಹೆಸರು ಮತ್ತು ಕಾಲವನ್ನು ಕರಾರುವಕ್ಕಾಗಿ ದಾಖಲಿಸಿರುವುದು ಕಾಣಿಸುತ್ತದೆ. ಇದೊಂದು ಅಪರೂಪದ ಪ್ರಾಚೀನ ಸೇತುವೆ.

ಮ್ಯೂಸಿಯಂ ಆಫ್ ಕಮ್ಯುನಿಸಂ: 1968ರ ಆಗಸ್ಟ್ 20ರಂದು ರಷ್ಯನ್ ಸೈನ್ಯವು ಯಾವುದೇ ಸೂಚನೆಗಳಿಲ್ಲದೆ ಟ್ಯಾಂಕರುಗಳ ಸಮೇತ ಝೆಕೊಸ್ಲೊವಾಕಿಯಾ (ಝೆಕಿಯಾ ಮತ್ತು ಸ್ಲೊವಾಕಿಯಾ) ಒಳಕ್ಕೆ ನುಗ್ಗಿ ಬಂದಿತ್ತು. ಝೆಕೊಸ್ಲೊವಾಕಿಯಾ ಸರ್ಕಾರ ಯಾವುದೇ ತಯಾರಿ ಇಲ್ಲದ ಕಾರಣ ಸಂಪೂರ್ಣವಾಗಿ ಶರಣಾಗಬೇಕಾಯಿತು. ಪರಿಣಾಮ ಪ್ರಾಗ್‌ನ ಯಾವುದೇ ಪಾರಂಪರಿಕ ಕಟ್ಟಡಗಳು ನಾಶವಾಗಲಿಲ್ಲ. ಎರಡು ದಶಕಗಳ ಕಮ್ಯುನಿಸ್ಟ್ ಹಿಂಸೆಯ ನಂತರ 1991ರಲ್ಲಿ ರಷ್ಯಾ ಹೊರನಡೆದಾಗ 1992ರಲ್ಲಿ ಝೆಕಿಯಾ ಮತ್ತು ಸ್ಲೊವಾಕಿಯಾ ಎರಡೂ ದೇಶಗಳು ಬೇರ್ಪಟ್ಟವು. ಈ ಮ್ಯೂಸಿಯಂನಲ್ಲಿ ರಾಜಕೀಯ ನಾಯಕರ ಕಪ್ಪುಬಿಳುಪು ಬಣ್ಣದ ಚಿತ್ರಗಳಿವೆ. ಅದರಲ್ಲಿ 1979ರಲ್ಲಿ ಜರ್ಮನ್ ಡೆಮಾಕ್ರಟಿಕ್ ರಿಪಬ್ಲಿಕ್ ಸ್ಥಾಪನೆಯ 30ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರ ವಿಶೇಷವಾಗಿದೆ. ಅದು ಸಮಾಜವಾದಿ ಸಹೋದರರ ಚುಂಬನವಾಗಿದ್ದು ಲಿಯೊನಿಡ್ ಬ್ರೆಜ್ನೇವ್ (ಯುಎಸ್‌ಎಸ್‌ಆರ್) ಮತ್ತು ಎರಿಕ್ ಹೊನೆಕರ್ (ಜರ್ಮನ್ ಡೆಮಾಕ್ರಟಿಕ್ ಆಫ್ ಈಸ್ಟ್ ಜರ್ಮನಿ) ಅವರದು. ಇದು ಎರಡನೇ ವಿಶ್ವ ಮಹಾಯುದ್ಧದ ನಂತರದ ಕಮ್ಯುನಿಸ್ಟ್ ಆಡಳಿತದ ಕರಾಳಕಥೆಗಳನ್ನು ಪ್ರಸ್ತುತಪಡಿಸಲು ಮೀಸಲಿಟ್ಟಿರುವ ವಸ್ತು ಸಂಗ್ರಹಾಲಯವಾಗಿದೆ. ಕಮ್ಯುನಿಸಂನ ಕಬ್ಬಿಣದ ಪರದೆಯ ಹಿಂದಿನ ಭೀಕರ ದೃಶ್ಯಗಳನ್ನು ಅನಾವರಣಗೊಳಿಸಿರುವ ಕಲಾಕೃತಿಗಳು, ಸಂದರ್ಶನಗಳು, ಆರ್ಕೈವ್ ಛಾಯಾಚಿತ್ರಗಳು, ಐತಿಹಾಸಿಕ ದಾಖಲೆಗಳನ್ನು ಇಲ್ಲಿ ಇಡಲಾಗಿದೆ. ನಗರದಲ್ಲಿ ಇನ್ನೂ ಹಲವಾರು ಮ್ಯೂಸಿಯಂಗಳಿದ್ದು ಅದರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮ್ಯೂಸಿಯಂ ಅತ್ಯದ್ಭುತ.

ಇಲ್ಲಿನ ಜನರ ತುಟಿಗಳ ಮೇಲೆ ಸದಾ ಕಿರುನಗೆ ಕಾಣಿಸುತ್ತದೆ. ಅದನ್ನು ಕಂಡ ನಾವೂ ಕೂಡ ತುಟಿಗಳ ಮೇಲೆ ನಗು ತರಿಸಿಕೊಂಡೆವು. ಈ ಜನರು ಮೆಲುಧ್ವನಿಯಲ್ಲಿ ಮಾತನಾಡುತ್ತಾರೆ. ಒಮ್ಮೆ ಹೀಗಾಯಿತು, ಆ ಪರಿಸರದಲ್ಲಿ ನಾವೇ ಜೋರುಧ್ವನಿಯಲ್ಲಿ ಮಾತನಾಡುತ್ತಿರುವುದು ನಮ್ಮದೇ ಗಮನಕ್ಕೆ ಬಂದಿತು. ಸ್ವಲ್ಪ ಸಂಕೋಚವಾಯಿತು. ಆನಂತರ ನಾವೂ ಮೆಲ್ಲಗೆ ಮಾತನಾಡತೊಡಗಿದೆವು. ಅವರಲ್ಲಿನ ಶಿಸ್ತು ಮತ್ತು ಸಂಯಮ ನನಗೆ ತುಂಬಾ ಇಷ್ಟವಾಯಿತು. ವಿಶೇಷವೆಂದರೆ ಶೇಕಡ 48 ರಷ್ಟು ಚೆಕ್ ಪ್ರಜೆಗಳು ಧರ್ಮ ಇಲ್ಲದವರು ಅಥವಾ ಧರ್ಮವನ್ನು ನೋಂದಾಯಿಸಿಕೊಳ್ಳದವರು!

ಪ್ರಾಗ್ ನಗರವನ್ನು ವಿಶ್ವದ 69ನೇ ವಾಸಯೋಗ್ಯ ನಗರವೆಂದು ಗುರುತಿಸಲಾಗಿದೆ. ಲಂಡನ್, ಪ್ಯಾರಿಸ್, ರೋಮ್ ಮತ್ತು ಇಸ್ತಾನ್‌ಬುಲ್ ನಂತರ ಪ್ರಾಗ್ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಯುರೋಪ್‌ನ ಐದನೇ ನಗರವಾಗಿದೆ.

ಜೊತೆಗಿದ್ದ ಮಗ 'ನೀವು ಏಪ್ರಿಲ್-ಮೇ ತಿಂಗಳಲ್ಲಿ ಬಂದಿದ್ದರೆ ವಸಂತನ ಆಗಮನವಾಗಿರುತ್ತಿತ್ತು. ಆಗ ಇಡೀ ನಗರ ಹೂವಿನಿಂದ ಸಿಂಗರಿಸಿಕೊಂಡ ಸುಂದರಿಯಂತೆ ಕಾಣಿಸುತ್ತದೆ. ರಸ್ತೆಗಳ ಮೇಲೆ ಹೂಮಳೆ. ಆಗ ಪ್ರಾಗ್ ನೋಡುವುದೇ ಬಲುಚಂದ' ಎಂದು ಹೇಳಿದ. ನಮಗೆ ವಸಂತ ಕಾಲದಲ್ಲಿ ಪ್ರಾಗ್ ನೋಡುವುದು ಮಿಸ್ ಆಗಿದ್ದಕ್ಕೆ ಬೇಸರವಾಯಿತು.

ಹತ್ತು ದಿನಗಳ ಪ್ರವಾಸದ ನಂತರ ಬೆಂಗಳೂರಿಗೆ ಹೊರಟು ನಿಂತಾಗ ಪದೇ ಪದೇ ಅಲ್ಲಿಯ ಜನರ ನಗು, ಮೆಲುಧ್ವನಿ, ತಮ್ಮ ನಗರದ ಮೇಲಿರುವ ಅಪಾರ ಪ್ರೀತಿ ಮತ್ತು ಕಾಳಜಿ, ಸಾವಧಾನದ ಬದುಕು, ಪ್ರವಾಸಿಗರಿಗೆ ಕೊಡುವ ಗೌರವ ಎಲ್ಲವೂ ನೆನಪಾಗುತ್ತಲೇ ಇದ್ದವು.

ಪ್ರಾಗ್ ಮಧ್ಯಭಾಗದಲ್ಲಿರುವ ವೆನ್ಸೆಸ್ಲಾಸ್ ಸ್ಕ್ವೇರ್‌ನ ಮೋಹಕ ನೋಟ

ಸೂರ್ಯಾಸ್ತದ ಸಂದರ್ಭದಲ್ಲಿ ಚಾರ್ಲ್ಸ್ ಸೇತುವೆ ಮುನ್ನೆಲೆಯಲ್ಲಿ ಪ್ರಾಗ್ ನಗರದ ವಿಹಂಗಮ ನೋಟ

ಪ್ರಾಗ್ ನಗರದಲ್ಲಿ ಹೆಜ್ಜೆ ಹಾಕುತ್ತಿದ್ದರೆ ಇಂತಹ ಕಲಾಕೃತಿಗಳು ಸೆಳೆಯುತ್ತವೆ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಬ್ಬ ಚಿಕ್ಕ ಶೀರ್ಷಿಕೆ ಕಥೆಯ | ಜೀವ ಪಡೆದ ಮರಗುದುರೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ರಾಕಿಂಗ್ ಹಾರ್ಸ್ ಮೇಲೆ ಕುಳಿತು ಆಟವಾಡುತ್ತಿದ್ದ. ಗುಂಡನ ಸ್ನೇಹಿತ ರವಿ ನರ್ಸರಿಯಿಂದ ಹೂಕುಂಡವೊಂದನ್ನು ತರುತ್ತಿದ್ದ. ಹೂಕುಂಡವನ್ನು ಅಲ್ಲೇ ಇಟ್ಟು ರವಿ ಮನೆಯೊಳಗೆ ಹೋದ. ಅಷ್ಟರಲ್ಲೇ ಗುಂಡ ಆಡುತ್ತಿದ್ದ ಕುದುರೆಯು, ಆ ಹೂಕುಂಡವನ್ನು ಬಾಯಲ್ಲಿ ಕಚ್ಚಿ ಎಳೆಯಿತು. ಇದನ್ನು ಕಂಡ ಗುಂಡ ಒಂದು ಕ್ಷಣ ಅವಾಕ್ಕಾದ...



ಜಾಣಪದ ಆಟ

ಕೆಳಗೆ ನೀಡಲಾಗಿರುವ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆರಿಸಿ, ನೀಡಲಾಗಿರುವ ಅಕ್ಷರದ ಹಿಂದೆ-ಮುಂದೆ ಸೇರಿಸಿ ಅರ್ಥಬದ್ಧ ಪದ ರಚಿಸಿ.

ಅಕ್ಷರ ಪಟ್ಟಿ

ನರ	ಹುಳ್ಳಿ	ಶರ	ಮನ	ದರ
ಸಾರ	ಮರ	ಹಣ	ಗತಿ	ಮಗು

1		ಕ	
2		ರ	
3		ಗ	
4		ಹ	
5		ಬ್ಬ	
6		ದ	
7		ಸ	
8		ಡ	
9		ಗ	
10		ರ	

ಗಣಿತದಲ್ಲಿ ಗರ್ದಿ ಗಮ್ಮತ್ತು

1.ಗುಣಾಕಾರದಲ್ಲಿ 'ಭಲೇ ಜೋಡಿ'

99 x 12 = 1188
99 x 23 = 2277
99 x 34 = 3366
99 x 45 = 4455
99 x 56 = 5544
99 x 67 = 6633
99 x 78 = 7722
99 x 89 = 8811

2.ಗುಣಾಕಾರದಲ್ಲಿ ಚಿರುಚುಳಿ-ಮುರುಚುಳಿ ಸಂಖ್ಯೆಗಳು

99 x 19 = 1881
99 x 28 = 2772
99 x 37 = 3663
99 x 46 = 4554
99 x 55 = 5445
99 x 64 = 6336
99 x 73 = 7227
99 x 82 = 8118

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಶಿ	ಮ	ವಿ	ತೆ
ಅ	ಹೇ	ಪ್ರ	ತೋ
ಕಾ	ಜ	ಕೇ	ಸ

1

	ಲ	ಗು
	ಲ	ಗು

2

	ವ	ಳಿ
	ವ	ಳಿ

3

	ರ	ಳ
	ರ	ಳ

4

	ಕ	ಲ
	ಕ	ಲ

5

	ಖ	ರ
	ಖ	ರ

6

	ರ	ಣ
	ರ	ಣ

ರಜಾ-ಮಜಾ ಆಟ | ರದ್ದಿಯೇ ಸುದ್ದಿಯಾದಾಗ...

ಮಕ್ಕಳೇ, ಈಗ ರಜಾ ಕಾಲ. ರಜೆಯಲ್ಲಿ ಮನೆಯಲ್ಲಿ ಕುಳಿತು ಕೆಲವು ಆಟಗಳನ್ನು ಆಡಬಹುದು. ಈಗ ನಿನ್ನಲ್ಲಿ ವರ್ಷವಿಡೀ ಬರೆದ ನೋಟು ಬುಕ್ಕುಗಳಿವೆ. ಹಾಗೇ ಮನೆಗೆ ತರಿಸಿರುವ ಸುದ್ದಿ ಪತ್ರಿಕೆಗಳಿವೆ. ಈಗ ಅವು ರದ್ದಿ ಎಂದು ಗುಜರಿಗೆ ಹಾಕಿದರೆ ಹತ್ತಿಪ್ಪತ್ತು ರೂಪಾಯಿ ಬಂದೀತು. ಆದರೆ ಆ ರದ್ದಿಗಳನ್ನೇ ನಿನ್ನ ಇಚ್ಛಾನುಸಾರ ಬಳಸಿಕೊಂಡು ಸುದ್ದಿ ಪೇಪರ್‌ನಲ್ಲಿ ಬರುವ ಕೆಲವು ಅಪರೂಪದ ಸಂಗತಿಗಳು, ಚಿತ್ರ-ವಿಚಿತ್ರ ಸಂಗತಿಗಳನ್ನು ಸಂಗ್ರಹಿಸಿ, ಅವುಗಳನ್ನು ಕತ್ತರಿಸಿ ನಿನ್ನ ರದ್ದಿ ನೋಟ್‌ಬುಕ್ಕುಗಳ ಪುಟಗಳಿಗೆ ಹಚ್ಚುತ್ತಾ ಹೋದರೆ ನಿನ್ನಲ್ಲಿ ಒಂದು ಅದ್ಭುತ ಆಕರ ಗ್ರಂಥವಿರುತ್ತದೆ. ಅದನ್ನು ನಿನ್ನ ಗೆಳೆಯರಿಗೆ ತೋರಿಸು. ಅವರಲ್ಲಿ ಇಲ್ಲದ ಇಂತಹ ಸಂಗ್ರಹ ನಿನ್ನಲ್ಲಷ್ಟೇ ಇದೆ ಎಂದು ಹೆಮ್ಮೆಪಡು. ಉದಾಹರಣೆಗೆ 560 ಬಾಳೆಕಾಯಿಗಳಿರುವ ಗೊನೆಯ ಚಿತ್ರವೊಂದನ್ನು ನೀಡಿದ್ದೇನೆ. ನೋಡಿ...

ಚೂರು-ಮರಿ

0 ಭಾರತದಲ್ಲಿ ಸೊನ್ನೆ(0)ಯು ಪಿಂಗಳನ ಛಂದಸೂತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಣಸಿಗುತ್ತದೆ.

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸ ಪದಬಂಧ: 1.ದಿವಸ-ದವಸ 2.ಕೌರವ-ಗೌರವ 3.ಕಡಿಮೆ-ದುಡಿಮೆ 4.ಹಸಿರು-ಉಸಿರು 5.ಹಲಸು-ಹೊಲಸು 6.ಹೆಸರು-ಮೊಸರು

ಜಾಣಪದ ಆಟ: ಕವನ, ಚವನ, ಹವನ, ಪವನ, ಪಾವನ, ಜೀವನ, ಭವನ, ಭುವನ, ಯೌವನ, ದವನ

ಗಾದೆ ನಿನಗೆಷ್ಟು ಗೊತ್ತು?

1.ಅಚ್ಚೇರು 2.ನದಿ 3.ಅಕ್ಕ 4.ಹಚಡ 5.ಆನೆ 6.ಜಾಣ 7.ಅಂಬಲಿ 8.ನಾಲಿಗೆ 9.ಲತ್ತೆ 10.ಮಗ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಪ್ರಿಯಾಂಶು ಕೃಷ್ಣ
ಮೈಸೂರು

ಗಗನ್ ಜಗದೀಶ್ ಜಿ.
ಗದಗ

ಅರವಳ್ಳಿ ಭಾವನಾ
ಹೂವಿನಹಡಗಲಿ

ನವೀನ ತಳವಾರ
ಗೊರನಾಳ

ಸಂಜಯ್ ಬಿ.ಸಿ.
ಹರಿಹರ

ಸಂಘವಿ ಪಿ.ಬಣಕಾರ್
ಹರಪನಹಳ್ಳಿ

ಐ.ಟಿ ಕಂಪನಿಗಳಲ್ಲಿ 64 ಸಾವಿರ ಸಿಬ್ಬಂದಿ ಕಡಿತ

ಬೆಂಗಳೂರು (ಪಿಟಿಐ): ದೇಶದ ಪ್ರಮುಖ ಐ.ಟಿ ಕಂಪನಿಗಳಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), ಇನ್ಫೊಸಿಸ್ ಮತ್ತು ವಿಪ್ರೊದ ಉದ್ಯೋಗಿಗಳ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದೆ.

2023–24ರ ಆರ್ಥಿಕ ವರ್ಷದಲ್ಲಿ ಮೂರು ಕಂಪನಿಗಳ ಒಟ್ಟು ಉದ್ಯೋಗಿಗಳ ಸಂಖ್ಯೆ 64 ಸಾವಿರದಷ್ಟು ಕಡಿಮೆ ಆಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಐ.ಟಿ ಸೇವೆಗಳಿಗೆ ಬೇಡಿಕೆ ಕಡಿಮೆ ಆಗಿರುವುದು, ಗ್ರಾಹಕರು ವೆಚ್ಚದ ನಿಯಂತ್ರಣ ಅನುಸರಿಸುತ್ತಿರುವುದರಿಂದ ಐ.ಟಿ ಕಂಪನಿಯ ಸಿಬ್ಬಂದಿ ಸಂಖ್ಯೆ ಇಳಿಕೆಗೆ ಕಾರಣವಾಗಿದೆ ಎಂದು ಹೇಳಲಾಗಿದೆ.

ಏಪ್ರಿಲ್ 19ರಂದು ವಿಪ್ರೊ ತನ್ನ ನಾಲ್ಕನೇ ತ್ರೈಮಾಸಿಕದ ವರದಿ ಪ್ರಕಟಿಸಿತ್ತು. ಇದರಲ್ಲಿ ಕಂಪನಿಯ ಸಿಬ್ಬಂದಿ ಸಂಖ್ಯೆಯು ಮಾರ್ಚ್ ತ್ರೈಮಾಸಿಕದಲ್ಲಿ 2.34 ಲಕ್ಷ ಇದೆ ಎಂದು ತಿಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯಲ್ಲಿ 2.58 ಲಕ್ಷ ಉದ್ಯೋಗಿಗಳಿದ್ದರು. ಇದಕ್ಕೆ ಹೋಲಿಸಿದರೆ, 24,516 ಮಂದಿ ಕಡಿಮೆ ಆಗಿದ್ದಾರೆ.

ಇನ್ಫೊಸಿಸ್‌ನಲ್ಲಿ ಉದ್ಯೋಗಿಗಳ ಸಂಖ್ಯೆ 3.43 ಲಕ್ಷದಿಂದ 3.17 ಲಕ್ಷಕ್ಕೆ ಇಳಿದಿದೆ. 25,994 ಸಿಬ್ಬಂದಿ ಸಂಖ್ಯೆ ಕಡಿಮೆಯಾಗಿದೆ. ಟಿಸಿಎಸ್‌ನ 6 ಲಕ್ಷ ಸಿಬ್ಬಂದಿಯಲ್ಲಿ 13,249 ಮಂದಿ ಕಡಿಮೆಯಾಗಿದ್ದಾರೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ₹17,622 ಕೋಟಿ ಲಾಭ

ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್ 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹17,622 ಕೋಟಿ ನಿವ್ವಳ ಲಾಭ ಗಳಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹17,257 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 2.11ರಷ್ಟು ಏರಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬಡ್ಡಿ ವರಮಾನವು ₹29,080 ಕೋಟಿಗೆ ಹೆಚ್ಚಳವಾಗಿದೆ. ಇತರೆ ವರಮಾನವು ₹18,170 ಕೋಟಿಯಾಗಿದೆ.

ಒಟ್ಟು ಸ್ವತ್ತುಗಳ ಮೇಲೆ ನಿವ್ವಳ ಬಡ್ಡಿ ಲಾಭವು ಶೇ 3.44ರಷ್ಟು ದಾಖಲಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 1.24ರಷ್ಟಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)		ರಾಶಿ	50139-50569	ರಾಶಿ	46699-48929
ಕೋಕ	18000-28500	ಪುತ್ತೂರು		ತಟ್ಟಿಬೆಟ್ಟೆ	34700-35600
ಹೊಸತು	28500-36500	ಹೊಸತು	26500-36500	ಶಿರಸಿ	
ಹಳತು	36500-44500	ಸಿದ್ದಾಪುರ		ಬೆಟ್ಟೆ	34099-44499
ಚಿತ್ರದುರ್ಗ		ಬಿಳಿಗೋಟು	26419-28709	ಬಿಳಿಗೋಟು	24699-32299
ಅಪಿ	50619-51059	ಚಾಲಿ	32919-28709	ಚಾಲಿ	32050-35938
ಬೆಟ್ಟೆ	35629-36099	ಕೋಕ	25099-29469	ಕೆಂಪುಗೋಟು	25650-31600
ಕೆಂಪುಗೋಟು	30609-31010	ಹಳೆಚಾಲಿ	35699-36099	ರಾಶಿ	43299-48698
		ಕೆಂಪುಗೋಟು	27000-33889		

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹485
12 ಕ್ಕೆ	₹65
ಮೈಸೂರು	
100ಕ್ಕೆ	₹487

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹930 (935)
ಪಾಮೋಲಿನ್	₹932 (935)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹255-445
ದ್ವಿತಳಿ (ಬಿ.ವಿ) ₹325-598

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹177
ಆರ್‌ಎಸ್‌ಎಸ್-5 ₹171
ಗುಡ್ ಲಾಟ್ ₹161
(ಪ್ರತಿ ಕೆ.ಜಿಗೆ)

ಬೆಲ್ಗೊರೊಡ್ ಪ್ರದೇಶದಲ್ಲಿ ಮನೆ ಬೆಂಕಿಗಾಹುತಿ, ಇಬ್ಬರ ಸಾವು: ರಷ್ಯಾ

ಉಕ್ರೇನ್‌ನ 50 ಡ್ರೋನ್ ನಾಶ

ಕೀವ್ (ಎಪಿ): 'ಉಕ್ರೇನ್ ಪಡೆಗಳು ದೇಶದ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ರಾತ್ರಿಯಿಡಿ ಭಾರಿ ಸಂಖ್ಯೆಯ ಡ್ರೋನ್‌ಗಳಿಂದ ದಾಳಿ ನಡೆಸಿದೆ. ದಾಳಿ ಪರಿಣಾಮ ಮನೆಯೊಂದು ಹೊತ್ತಿ ಉರಿದು ಇಬ್ಬರು ಮೃತಪಟ್ಟಿದ್ದಾರೆ' ಎಂದು ರಷ್ಯಾ ಶನಿವಾರ ತಿಳಿಸಿದೆ.

'ಉಕ್ರೇನ್ ಗಡಿಗೆ ಸಮೀಪದಲ್ಲಿರುವ ಬೆಲ್ಗೊರೊಡ್‌ನ ಪಶ್ಚಿಮ ಭಾಗದಲ್ಲಿ 26 ಡ್ರೋನ್‌ಗಳು ಸೇರಿದಂತೆ ದೇಶದ ಎಂಟು ಪ್ರದೇಶಗಳಲ್ಲಿ ಒಟ್ಟು 50 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ' ಎಂದು ಸಚಿವಾಲಯ ತಿಳಿಸಿದೆ.

'ಡ್ರೋನ್‌ಗಳ ನಿರಂತರ ದಾಳಿ ಪರಿಣಾಮ ಮನೆಯೊಂದು ಹೊತ್ತಿ ಉರಿದಿದೆ. ಕಾಲು ಮುರಿತದಿಂದ ಬಳಲುತ್ತಿದ್ದ ಮಹಿಳೆ ಹಾಗೂ ಆಕೆಯ ಆರೈಕೆ ಮಾಡುತ್ತಿದ್ದ ವ್ಯಕ್ತಿ ಈ ಘಟನೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಬೆಲ್ಗೊರೊಡ್ ಗವರ್ನರ್ ವ್ಯಾಚೆಸ್ಲಾವ್ ಗ್ಲಾಡ್ಕೋವ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ಬರೆದುಕೊಂಡಿದ್ದಾರೆ.

ಮಾಸ್ಕೊ ಪ್ರದೇಶ, ಬ್ರ್ಯಾನ್ಸ್ಕ್, ಕುರ್ಸ್ಕ್, ಸ್ಮೊಲೆನ್ಸ್ಕ್, ರ್‍ಯಾಝುನ್, ಕಲುಗಾ ಸೇರಿದಂತೆ ದೇಶದ ಪಶ್ಚಿಮ ಮತ್ತು ದಕ್ಷಿಣ ಭಾಗದ ವಿವಿಧೆಡೆಯೂ ಉಕ್ರೇನ್‌ನ ಡ್ರೋನ್‌ಗಳನ್ನು ನಾಶಪಡಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರಷ್ಯಾ ಮೇಲೆ ಡ್ರೋನ್ ದಾಳಿ ನಡೆಸಿರುವ ಕುರಿತು ಉಕ್ರೇನ್ ಅಧಿಕಾರಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ದಾಳಿ ಭೀತಿ: ರಷ್ಯಾ ದಾಳಿ ನಡೆಸುವ ಸಾಧ್ಯತೆ ದಟ್ಟವಾಗಿರುವ ಕಾರಣ, ಆತಂಕಗೊಂಡಿರುವ ಉಕ್ರೇನ್‌ನ ಹಾರ್ಕಿವ್ ಹಾಗೂ ಸುತ್ತಲಿನ ಪ್ರದೇಶಗಳ ನಿವಾಸಿಗಳು ಮನೆಗಳನ್ನು ತೊರೆಯುತ್ತಿದ್ದಾರೆ. ಉಕ್ರೇನ್‌ನ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿ ಈಗಾಗಲೇ ರಷ್ಯಾ ದಾಳಿ ನಡೆಸಿದ್ದರಿಂದ, ದೇಶದ ಎರಡನೇ ದೊಡ್ಡ ನಗರವಾಗಿರುವ ಹಾರ್ಕಿವ್‌ನ ಬಹುತೇಕ ಪ್ರದೇಶಗಳು ಕತ್ತಲೆಯಲ್ಲಿ ಮುಳುಗಿವೆ. ಇನ್ನೂ, ಕೆಲವೆಡೆ ವಿದ್ಯುತ್ ನಿಲುಗಡೆಯಿಂದಾಗಿ ಜನರು ಸಮಸ್ಯೆ ಎದುರಿಸುವಂತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಸ್ರೇಲ್ ವೈಮಾನಿಕ ದಾಳಿ: 9 ಸಾವು

ರಫಾ (ಗಾಜಾ ಪಟ್ಟಿ) (ಎಪಿ): ಗಾಜಾದಲ್ಲಿ ಮನೆಯೊಂದರ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 6 ಮಕ್ಕಳು ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ.

'ರಫಾ ಸಮೀಪದಲ್ಲಿರುವ ಟೆಲ್ ಸುಲ್ತಾನ್‌ನಲ್ಲಿನ ವಸತಿ ಸಮುಚ್ಚಯದ ಮೇಲೆ ಶುಕ್ರವಾರ ದಾಳಿ ನಡೆದಿದೆ' ಎಂದು ಗಾಜಾದ ರಕ್ಷಣಾ ಪಡೆ ಶನಿವಾರ ತಿಳಿಸಿದೆ.

ರಫಾದ ಆಸ್ಪತ್ರೆಯೊಂದರ ದಾಖಲೆಗಳ ಪ್ರಕಾರ, 6 ಮಕ್ಕಳು, ಇಬ್ಬರು ಮಹಿಳೆಯರು ಮತ್ತು ಪುರುಷರೊಬ್ಬರ ಮೃತದೇಹ ಪತ್ತೆಯಾಗಿದೆ

'ಕಳೆದ 24 ಗಂಟೆಗಳಲ್ಲಿ ಇಸ್ರೇಲ್ ದಾಳಿಯಿಂದಾಗಿ 37 ಮಂದಿ ಮೃತಪಟ್ಟಿದ್ದು, 68 ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇತ್ತೀಚಿನ ಲೆಕ್ಕಾಚಾರದ ಪ್ರಕಾರ ಇಸ್ರೇಲ್–ಹಮಾಸ್ ಯುದ್ಧದಲ್ಲಿ ಈವರೆಗೆ ಪ್ಯಾಲೆಸ್ಟೀನ್‌ನ 34,049 ಮಂದಿ ಮೃತಪಟ್ಟಿದ್ದು, 76,901 ಮಂದಿ ಗಾಯಗೊಂಡಿದ್ದಾರೆ ' ಎಂದು ಗಾಜಾದ ಆರೋಗ್ಯ ಇಲಾಖೆ ಶನಿವಾರ ತಿಳಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹16200
ಎಸಿ	₹9800
ಆರ್‌ಪಿ	₹16300
ಆರ್‌ಸಿ	₹10030

ಹರಳು, ಚಿನ್ನಾಭರಣ ರಫ್ತು ಇಳಿಕೆ

ಮುಂಬೈ (ಪಿಟಿಐ): ದೇಶದಲ್ಲಿ 2023–24ರ ಹಣಕಾಸು ವರ್ಷದಲ್ಲಿ ಹರಳು ಮತ್ತು ಚಿನ್ನಾಭರಣ ರಫ್ತು ಶೇ 12.17ರಷ್ಟು ಇಳಿಕೆ ಕಂಡಿದೆ.

2022–23ರಲ್ಲಿ ₹3 ಲಕ್ಷ ಕೋಟಿ ಮೌಲ್ಯದ ಹರಳು ಮತ್ತು ಚಿನ್ನಾಭರಣ ರಫ್ತಾಗಿತ್ತು. ಅದು ಕಳೆದ ಹಣಕಾಸು ವರ್ಷದಲ್ಲಿ ಒಟ್ಟು ₹2.65 ಲಕ್ಷ ಕೋಟಿಯಷ್ಟು ಆಗಿದೆ. ಅಮೆರಿಕದಲ್ಲಿ ಹೆಚ್ಚಿನ ಬಡ್ಡಿ ದರ ಮತ್ತು ಚೀನಾದ ನಿಧಾನ ಗತಿಯ ಚೇತರಿಕೆಯೇ ಇಳಿಕೆಗೆ ಕಾರಣವಾಗಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ತಿಳಿಸಿದೆ.

ಕಳೆದ ಹಣಕಾಸು ವರ್ಷವು ಎಲ್ಲ ವರ್ಗದ ಉತ್ಪನ್ನಗಳಿಗೆ ಸವಾಲಾಗಿತ್ತು. ಅಮೆರಿಕದಲ್ಲಿ ಹೆಚ್ಚಿನ ಬಡ್ಡಿ ದರ ಮತ್ತು ಕೊರೊನಾ ನಂತರ ಚೀನಾದಲ್ಲಿ ನಿಧಾನಗತಿಯ ಚೇತರಿಕೆ ಭಾರತದ ರಫ್ತು ಇಳಿಕೆಗೆ ಕಾರಣವಾಯಿತು ಎಂದು ಜಿಜೆಇಪಿಸಿ ಅಧ್ಯಕ್ಷ ವಿಪುಲ್ ಶಾ ತಿಳಿಸಿದ್ದಾರೆ.

ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ರಫ್ತು ಶೇ 25ರಷ್ಟು ಕುಸಿತವಾಗಿ, ₹1.76 ಲಕ್ಷ ಕೋಟಿಗೆ ಮುಟ್ಟಿದೆ. ಹಿಂದಿನ ಇದೇ ಅವಧಿಯಲ್ಲಿ ₹1.32 ಲಕ್ಷ ಕೋಟಿ ಆಗಿತ್ತು. ಲ್ಯಾಬ್‌ನಲ್ಲಿ ತಯಾರಿಸಿದ ವಜ್ರಗಳ ರಫ್ತು ಮೌಲ್ಯ ₹13,468 ಕೋಟಿಯಿಂದ ₹11,611 ಕೋಟಿಗೆ ಮುಟ್ಟಿದೆ. ಶೇ 13ರಷ್ಟು ಕುಸಿದಿದೆ.

ಒಟ್ಟು ಚಿನ್ನಾಭರಣಗಳ ರಫ್ತು ಶೇ20ರಷ್ಟು ಹೆಚ್ಚಳವಾಗಿದ್ದು, ₹76,589 ಕೋಟಿಯಿಂದ ₹92,346 ಕೋಟಿಗೆ ಮುಟ್ಟಿದೆ.

ಬೆಳ್ಳಿ ಆಭರಣದ ರಫ್ತು ₹23,556 ಕೋಟಿಯಿಂದ ₹13,406 ಕೋಟಿಗೆ ಕುಸಿತವಾಗಿದೆ ಎಂದು ಜಿಜೆಇಪಿಸಿ ತಿಳಿಸಿದೆ.

ಸುದ್ದಿ 2 ನಿಮಿಷ

ಇಪಿಎಫ್‌ಒ: 27 ಲಕ್ಷ ಸದಸ್ಯರ ಸೇರ್ಪಡೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) 2023–24ರ ಹಣಕಾಸು ವರ್ಷದಲ್ಲಿ 27 ಲಕ್ಷ ಸದಸ್ಯರು ಸೇರ್ಪಡೆಯಾಗಿದ್ದಾರೆ.

2022–23ರ ಹಣಕಾಸು ವರ್ಷದಲ್ಲಿ 1.38 ಕೋಟಿ ಸದಸ್ಯರಿದ್ದರು. ಅದು ಕಳೆದ ಹಣಕಾಸು ವರ್ಷದಲ್ಲಿ 1.65 ಕೋಟಿಗೆ ಹೆಚ್ಚಳವಾಗಿದ್ದು, ಶೇ 19ರಷ್ಟು ಏರಿಕೆಯಾಗಿದೆ. ಇದು ದೇಶದಲ್ಲಿ ಉದ್ಯೋಗ ಪರಿಸ್ಥಿತಿಯ ಸುಧಾರಣೆಯನ್ನು ತೋರಿಸುತ್ತಿದೆ ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ.

ಇಪಿಎಫ್‌ಒಗೆ 2018–19ರಲ್ಲಿ 61.12 ಲಕ್ಷ, 2019–20ರಲ್ಲಿ 78.58 ಲಕ್ಷ ನಿವ್ವಳ ಸೇರ್ಪಡೆಯಾಗಿದ್ದಾರೆ. ಆದರೆ, ಕೊರೊನಾ ನಿರ್ಬಂಧದಿಂದಾಗಿ 2020–21ರಲ್ಲಿ 77.08 ಲಕ್ಷಕ್ಕೆ ಇಳಿಯಿತು. ನಂತರ ಸುಧಾರಣೆ ಕಂಡು 2021–22ರಲ್ಲಿ 1.22 ಕೋಟಿ ಮತ್ತು 2022–23ರಲ್ಲಿ 1.38 ಕೋಟಿ ಸೇರ್ಪಡೆ ಆಗಿದ್ದಾರೆ ಎಂದು ತಿಳಿಸಿದೆ.

ಕಳೆದ ಆರೂವರೆ ವರ್ಷದಲ್ಲಿ 6.1 ಕೋಟಿಗೂ ಅಧಿಕ ಸದಸ್ಯರು ಇಪಿಎಫ್‌ಒಗೆ ಸೇರ್ಪಡೆಯಾಗಿದ್ದಾರೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದೇಶದಲ್ಲಿ ಕಾರ್ಮಿಕರ ಸಹಭಾಗಿತ್ವವು 2017-18ರಲ್ಲಿ ಶೇ.49.8 ರಿಂದ 2022-23ರಲ್ಲಿ ಶೇ.57.9ಕ್ಕೆ ಏರಿಕೆಯಾಗಿದೆ. ನಿರುದ್ಯೋಗ ದರವು ಶೇ 6 ರಿಂದ ಶೇ 3.2ಕ್ಕೆ ಕಡಿಮೆಯಾಗಿದೆ ಎಂದಿದ್ದಾರೆ.

ಐಆರ್‌ಇಡಿಎ ಲಾಭ ಶೇ 33ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಿನಿವೆಬಲ್ ಎನರ್ಜಿ ಡೆವಲಪ್‌ಮೆಂಟ್ ಏಜೆನ್ಸಿ (ಐಆರ್‌ಇಡಿಎ), 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹337 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ತ್ರೈಮಾಸಿಕದಲ್ಲಿ ₹253 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 33ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ಒಟ್ಟು ವರಮಾನವು ₹1,036 ಕೋಟಿಯಿಂದ ₹1,391 ಕೋಟಿಗೆ ಹೆಚ್ಚಳವಾಗಿದೆ. ವೆಚ್ಚವು ₹747 ಕೋಟಿಯಿಂದ ₹911 ಕೋಟಿಗೆ ಮುಟ್ಟಿದೆ. ತೆರಿಗೆ ನಂತರ ವಾರ್ಷಿಕ ಲಾಭವು ಶೇ 44ರಷ್ಟು ಹೆಚ್ಚಳವಾಗಿದ್ದು, ₹864 ಕೋಟಿಯಿಂದ ₹1,252 ಕೋಟಿಗೆ ಮುಟ್ಟಿದೆ. ಮಾರ್ಚ್ 31ರಂತೆ ಸಾಲದ ಪ್ರಮಾಣವು ₹59,698 ಕೋಟಿಯಾಗಿದೆ. ಹಿಂದಿನ ಇದೇ ಅವಧಿಗಿಂತ ಶೇ 26ರಷ್ಟು ಏರಿಕೆಯಾಗಿದೆ.

ಸಾಲದ ಮಂಜೂರಾತಿಯು ₹37,353 ಕೋಟಿ ಮತ್ತು ವಿತರಣೆಯು ₹25,089 ಕೋಟಿಯಾಗಿದೆ. ಇದು ಕಂಪನಿಯ ಇತಿಹಾಸದಲ್ಲಿ ಅತ್ಯಧಿಕ ವಾರ್ಷಿಕ ಸಾಲ ವಿತರಣೆ ಮತ್ತು ಮಂಜೂರಾತಿಯಾಗಿದೆ. ಕಂಪನಿಯ ನಿವ್ವಳ ಸಂಪತ್ತು ಶೇ 44ರಷ್ಟು ಏರಿಕೆಯಾಗಿ, ₹8,559 ಕೋಟಿಯಾಗಿದೆ ಎಂದು ಕಂಪನಿ ತಿಳಿಸಿದೆ. ಐಆರ್‌ಇಡಿಎ ಬ್ಯಾಂಕೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಆಗಿದೆ.

ಮಸ್ಕ್ ಭಾರತ ಭೇಟಿ ಮುಂದಕ್ಕೆ

ಇಲಾನ್ ಮಸ್ಕ್

ನವದೆಹಲಿ (ಪಿಟಿಐ): ಕಂಪನಿಯ ಜವಾಬ್ದಾರಿಗಳನ್ನು ನಿಭಾಯಿಸಬೇಕಾಗಿರುವುದರಿಂದ ಭಾರತದ ಭೇಟಿ ಮುಂದೂಡಿರುವುದಾಗಿ ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾದ ಸಿಇಒ ಇಲಾನ್ ಮಸ್ಕ್ ಶನಿವಾರ ತಿಳಿಸಿದ್ದಾರೆ.

ಏಪ್ರಿಲ್ 21 ಮತ್ತು 22ರಂದು ಭಾರತಕ್ಕೆ ಭೇಟಿ ನೀಡಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ವರದಿಯಾಗಿತ್ತು. ಅಲ್ಲದೇ ಭಾರತದಲ್ಲಿ ಟೆಸ್ಲಾ ಕಂಪನಿಯ ಘಟಕದ ಸ್ಥಾಪನೆ ಬಗ್ಗೆ ಅಧಿಕೃತ ಘೋಷಣೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿತ್ತು.

ಭೇಟಿ ವಿಳಂಬದ ಕುರಿತು ಎಕ್ಸ್‌ನಲ್ಲಿ ಬರೆದುಕೊಂಡಿರುವ ಮಸ್ಕ್, 'ಕಂಪನಿಯ ಕೆಲಸದಲ್ಲಿ ನಿರತರಾಗಿರುವುದರಿಂದ ಭಾರತಕ್ಕೆ ಭೇಟಿ ನೀಡಲಾಗುತ್ತಿಲ್ಲ. ಆದರೆ ಇದೇ ವರ್ಷ ಭಾರತಕ್ಕೆ ಭೇಟಿ ನೀಡುತ್ತೇನೆ' ಎಂದು ತಿಳಿಸಿದ್ದಾರೆ.

ಕಳೆದ ವರ್ಷದ ಜೂನ್‌ನಲ್ಲಿ ಪ್ರಧಾನಿ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದ ವೇಳೆ ಮಸ್ಕ್ ಅವರನ್ನು ಭೇಟಿ ಮಾಡಿದ್ದರು. 2024ರಲ್ಲಿ ಭಾರತಕ್ಕೆ ಭೇಟಿ ನೀಡುವುದಾಗಿ ಮಾತುಕತೆ ವೇಳೆ ಮಸ್ಕ್ ಪ್ರಕಟಿಸಿದ್ದರು.

ಕೇಂದ್ರವು ಇತ್ತೀಚೆಗೆ ಹೊಸ ಎಲೆಕ್ಟ್ರಿಕ್ ವಾಹನ ನೀತಿಗೆ ಅನುಮೋದನೆ ನೀಡಿದೆ. ದೇಶದಲ್ಲಿ ಕನಿಷ್ಠ ₹4,168 ಕೋಟಿ ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಘೋಷಿಸಿದೆ. ಭಾರತದ ಮಾರುಕಟ್ಟೆ ಪ್ರವೇಶಿಸಲು ಮುಂದಾಗಿರುವ ಟೆಸ್ಲಾಗೆ ಇದು ವರದಾನವಾಗಲಿದೆ ಎಂದು ಹೇಳಲಾಗಿದೆ.

ಇಂಡೊನೇಷ್ಯಾದಲ್ಲಿ ಜ್ವಾಲಾಮುಖಿ 2100 ಮಂದಿ ಸುರಕ್ಷಿತ ಸ್ಥಳಕ್ಕೆ



ಇಂಡೊನೇಷ್ಯಾದ ಸಿತಾರೊ ದ್ವೀಪ ಪ್ರದೇಶದಲ್ಲಿ ಜ್ವಾಲಾಮುಖಿಯ ದಟ್ಟ ಬೂದಿ ವ್ಯಾಪಿಸಿರುವುದು —ಎಎಫ್‌ಪಿ ಚಿತ್ರ

ಮನಾಡೊ (ಎಪಿ): ಇಂಡೊನೇಷ್ಯಾದ ಸುಲವೆಸಿ ದ್ವೀಪ ಪ್ರದೇಶದಲ್ಲಿ 'ಮೌಂಟ್ ರಾಂಗ್' ಜ್ವಾಲಾಮುಖಿಯ ಕಾರಣದಿಂದಾಗಿ ಈ ಪ್ರದೇಶದಲ್ಲಿದ್ದ 2,100ಕ್ಕೂ ಹೆಚ್ಚು ಮಂದಿಯನ್ನು ಶುಕ್ರವಾರ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ.

ಜ್ವಾಲಾಮುಖಿಯ ಪರಿಣಾಮ ಸುನಾಮಿ ಸಂಭವಿಸಬಹುದು ಎಂದು ಎಚ್ಚರಿಸಲಾಗಿದೆ.

ಶುಕ್ರವಾರ ಮಧ್ಯಾಹ್ನದಿಂದ ಗರಿಷ್ಠ 3,900 ಅಡಿ ಎತ್ತರದವರೆಗೆ ಕನಿಷ್ಠ ಮೂರು ಬಾರಿ ಸ್ಫೋಟಗಳು ಸಂಭವಿಸಿರುವುದು ಇಂಡೊನೇಷ್ಯಾದ ಜ್ವಾಲಾಮುಖಿ ಕೇಂದ್ರ ಮತ್ತು ಭೂ ವೈಜ್ಞಾನಿಕ ಹಾನಿ ತಡೆಯ ಕೇಂದ್ರದಲ್ಲಿ ದಾಖಲಾಗಿದೆ ಎಂದು ವರದಿಯಾಗಿದೆ.

ಜ್ವಾಲಾಮುಖಿಯ ಬೂದಿಯು ಪಶ್ಚಿಮ, ಆಗ್ನೇಯ, ಈಶಾನ್ಯ, ವಾಯುವ್ಯ ಭಾಗದಲ್ಲಿ ವ್ಯಾಪಿಸುತ್ತಿರುವುದು ಹವಾಮಾನ ಇಲಾಖೆ, ಹವಾಮಾನ ಶಾಸ್ತ್ರ, ಭೌತಶಾಸ್ತ್ರ ಏಜೆನ್ಸಿಗಳಲ್ಲಿ ದಾಖಲಾಗಿರುವುದು ಸ್ಯಾಟಲೈಟ್ ಚಿತ್ರಗಳಲ್ಲಿ ಕಂಡುಬಂದಿದೆ ಎಂದು ಇಂಡೊನೇಷ್ಯಾ ಸಾರಿಗೆ ಇಲಾಖೆ ತಿಳಿಸಿದೆ.

'ಮೌಂಟ್ ರಾಂಗ್' ಜ್ವಾಲಮುಖಿಯ ಬೂದಿ ಗಾಳಿಯಿಂದ ವ್ಯಾಪಿಸುವ ಸಾಧ್ಯತೆ ಇರುವ ಕಾರಣ ಈ ಸ್ಥಳದಿಂದ 100 ಕಿ.ಮೀ. ಗೂ ಕಡಿಮೆ ಅಂತರದಲ್ಲಿರುವ ಮನಡೊ ನಗರದಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಐಎಂಎಫ್‌ನಿಂದ ಹೆಚ್ಚುವರಿ ನೆರವು ಕೋರಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಹವಾಮಾನ ನಿಧಿಯ ಮೂಲಕ ಮುಂದಿನ ಬಾರಿ ಪಾಕಿಸ್ತಾನಕ್ಕೆ ₹50 ಸಾವಿರ ಕೋಟಿಯಿಂದ ₹60 ಸಾವಿರ ಕೋಟಿಯವರೆಗೆ ಆರ್ಥಿಕ ನೆರವು ನೀಡುವಂತೆ ಪಾಕಿಸ್ತಾನವು ಅಂತರರಾಷ್ಟ್ರೀಯ ಹಣಕಾಸು ನಿಧಿಗೆ (ಐಎಂಎಫ್) ಮನವಿ ಮಾಡಿದೆ ಎಂದು ಮಾಧ್ಯಮ ವರದಿ ತಿಳಿಸಿದೆ.

ವಿಶ್ವಬ್ಯಾಂಕ್‌ನ ಮಾಸಿಕ ಸಭೆಯಲ್ಲಿ ಭಾಗಿಯಾಗಿರುವ ಪಾಕಿಸ್ತಾನದ ವಿತ್ತ ಸಚಿವ ಮೊಹಮ್ಮದ್ ಔರಂಗಜೇಬ್ ಅವರನ್ನು ಒಳಗೊಂಡ ಉನ್ನತ ಸಮಿತಿಯು, 'ವಿಸ್ತರಿತ ನಿಧಿ ಸೌಲಭ್ಯದಡಿ ಮುಂದಿನ 3 ವರ್ಷ ನೆರವು ನೀಡಲು ಅಗತ್ಯವಾದ ಮಾಹಿತಿ ಪಡೆಯಲು ಮುಂದಿನ ತಿಂಗಳು ಪರಿಶೀಲನಾ ತಂಡವನ್ನು ಕಳುಹಿಸುವಂತೆ' ಐಎಂಎಫ್‌ಗೆ ಮನವಿ ಮಾಡಿದೆ.

'ಹೆಚ್ಚುವರಿ ನೆರವಿನ ಪ್ರಮಾಣ ಮತ್ತು ಅವಧಿಯ ಬಗ್ಗೆ ಮೇ ತಿಂಗಳಿನ ಬಳಿಕ ನಿರ್ಧಾರವಾಗಲಿದೆ' ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

ಆರ್ಥಿಕವಾಗಿ ದಿವಾಳಿಯಾಗಿರುವ ಪಾಕಿಸ್ತಾನ ಐಎಂಎಫ್‌ನೊಂದಿಗೆ ಮಾಡಿಕೊಂಡಿರುವ ಸುಮಾರು ₹25 ಸಾವಿರ ಕೋಟಿ ನೆರವಿನ ಒಪ್ಪಂದವು ಏಪ್ರಿಲ್‌ನಲ್ಲಿ ಕೊನೆಗೊಳ್ಳಲಿದ್ದು, ಪಾಕಿಸ್ತಾನ ಹೆಚ್ಚುವರಿ ನೆರವನ್ನು ಬಯಸುತ್ತಿದೆ.

ಮುಂಬೈ ಧಾರಣೆ

ಶೇಂಗಾ

20-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	905 (900)
ಪಾಮ್ ವಾರದ ಡೆಲಿವರಿ	932 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	865(865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹73,500 (73,000)
ಬೆಳ್ಳಿ ಕೆ.ಜಿ ₹83,100 (82,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹5000-8800
ಕೆ.ಆರ್.ಪೇಟೆ	₹8500-9350
ತಿಪಟೂರು	₹8200-9000

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ

ದಿ. ಕೆ.ಜಿ ಹನುಮಂತರಾಯಪ್ಪರವರು
ಮಾತೃಶ್ರೀ ಡೆವಲಪರ್ಸ್ ಟಿ. ದಾಸರಹಳ್ಳಿ
ನಿಧನ : 21.4.2019
ನೀವು ನಮ್ಮನ್ನು ಅಗಲಿ ಇಂದಿಗೆ ಐದು ವರ್ಷಗಳು ಸಂದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ
ಸಿ.ಎನ್.ಆರ್ ಗ್ರೂಪ್ ಹಾಗೂ ಕುಟುಂಬದವರು.

ಮೂರನೇ ವರ್ಷದ ಪುಣ್ಯ ಸ್ಮರಣೆ

ಶ್ರೀ ಪಿ.ರಾಮು
ಮಾವಳ್ಳಿ ರಾಮಣ್ಣ
(Retd. BDA Class-I Contractor)
ಜನನ: 09.11.1941 – ಮರಣ :21.04.2021
ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ತಮ್ಮ ಸ್ಮರಣೆಯಲ್ಲಿರುವ
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

IN REVERENCE & REMEMBRANCE

05-09-1910 21-04-1976
PROF. N. ANANTHACHAR
Founder Secretary
ACHARYA PATHASHALA EDUCATIONAL TRUST,
N.R.Colony, Bengaluru-560019
Established in 1935
His Memories of Strong Leadership and Hardwork will Continue to Guide us
EVER REMEMBERING HIS SERVICES
Students, Faculties, Staff Members & Board of Trustees of APSET.
CA Dr. Vishnu Bharath Alampalli, President
Prof.A.Prakash, General Secretary

ಪುಣ್ಯಸ್ಮರಣೆ

ಶ್ರೀ ಜಿ. ಹೆಚ್. ಮುನಿರೆಡ್ಡಿ
ದಿ. ಗೌಡರ ಹನುಮರೆಡ್ಡಿರವರ ಮಗ (ಗೋಣಿಘಟ್ಟಪುರ)
ನಿಧನ : 11-03-2018

ಶ್ರೀಮತಿ ಗೌರಮ್ಮ
ದಿ. ಜಿ. ಹೆಚ್. ಮುನಿರೆಡ್ಡಿಯವರ ಧರ್ಮಪತ್ನಿ
ನಿಧನ : 21-04-2018
ನೀವು ನಮ್ಮನ್ನಗಲಿ 6 ವರ್ಷ ಕಳೆದರೂ ಹಾಗೂ ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ನಿಮ್ಮಿಬ್ಬರ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ.
ನಿಮ್ಮಿಬ್ಬರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ನಿಮ್ಮ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

LOOKING FOR JOB OPPORTUNITY
Refer Classifieds on Wednesday

ಐದನೇ ವರ್ಷದ ಚಿರಸ್ಮರಣೆ

ಡಾ|| ಎಸ್. ಆರ್. ನಾಗರಾಜ ರೆಡ್ಡಿ
ಛೇರ್ಮನ್: ಜೆ.ಆರ್. ಗ್ರೂಪ್ ಆಫ್ ಕಂಪನೀಸ್
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷವಾಯಿತು,
ನಿಮ್ಮ ಇರುವಿಕೆಯ ನೆನಪಿನ ನಿಶಬ್ದದ ಕಣ್ಣೀರಿನ ಹನಿಯಲ್ಲಿ, ನಿಮ್ಮ ಸ್ವರ್ಗೀಯ
ನೆನಪು ಸದಾ ವಸಂತ, ನಿಮ್ಮ ಸ್ಮರಣೆಯೇ ನಮ್ಮ ಜೀವನದ ದಾರಿದೀಪ
ಸದಾ ಸ್ಮರಿಸುವ
ಧರ್ಮಪತ್ನಿ ಶ್ರೀಮತಿ ಕೆ. ಜೆ. ಯಶೋದ ಮತ್ತು ಮಕ್ಕಳು, ಶ್ರೀಮತಿ. ರತ್ನಮ್ಮ. ಕೆ, ಡಾ|| ಕೆ. ಜೆ. ಪುರುಷೋತ್ತಮ್, ಡಾ||ಕೆ. ಜೆ. ಚಂದ್ರಶೇಖರ್, ಕುಟುಂಬದವರು, ಬಂಧುಗಳು ಮತ್ತು ಮಿತ್ರರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors
NOBLE HIGH School Kottigepalya Magadi Main Road Bangalore 91 Is hiring Primary, Middle school & High school Teachers. Degree, Masters would be added advantage. NTT, D.ed or B.ed would be preferred with 2yrs of experience. Contact 9449152947 with your Resume & Originals any time between 9 am - 3 pm Email - noblehighschoolblr@gmail.com

General
ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿ ಇದೆ. ಊಟ ವಸತಿಯೊಂದಿಗೆ ವೇತನ ತಿಂಗಳಿಗೆ 20000/-ರಿಂದ 25000/-ವರೆಗೆ. ಮಂಡಿ ನೋವು ಬೆನ್ನು ನೋವು ಕೀಲು ನೋವು. ಪಾರ್ಶ್ವವಾಯು ಪೀಡಿತರಿಗೆ ದೇಶಿಯ ಚಿಕಿತ್ಸೆ ಉಚಿತವಾಗಿ ಕೊಡಲಾಗುವುದು. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್ : 7349494852

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Drivers
ಹೊರಗುತ್ತಿಗೆ ಆದರದ ಮೇಲೆ ಬೆಂಗಳೂರಿನಲ್ಲಿ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳ ಕಾರು ಚಾಲನೆ ಮಾಡಲು ಚಾಲಕರು ಬೇಕಾಗಿದ್ದಾರೆ. 2ವರ್ಷ ಅನುಭವ ಇರಬೇಕು. ವಿದ್ಯಾರ್ಹತೆ ಕನಿಷ್ಠ 7ನೇ ತರಗತಿ ಪಾಸ್ ಆಗಿರಬೇಕು. ಸಂಪರ್ಕಿಸಿ: 9148983520

TRAVEL CORNER

Kashmir ladakh
10 days in border
Srinagar-Kargil-Leh-Nubra-Pangong
₹88000/-
ಕನ್ನಡದವರೊಂದಿಗೆ ಕನ್ನಡದಲ್ಲಿ
Call: 9448073129 9449984859
raise www.raise.in

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಮತ್ತು ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ. 4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001/ 9886683188

ಡ್ರೈವರ್ಸ್‌ಗಳು ಬೇಕಾಗಿದ್ದಾರೆ. ಟಿ.ಆರ್.ಲೈಸೆನ್ಸ್ ಹೊಂದಿರುವ ಡ್ರೈವರ್ಸ್ ಗಳು ಕಾರ್ ರೆಂಟಲ್ ಕಂಪನಿಗೆ ಬೇಕಾಗಿದ್ದಾರೆ. Phadke Cars, Ulsoor. ಸಂಪರ್ಕಿಸಿ: 9372059191

ವ್ಯಾಪಾರ

Business to Business

Business
ಕಾರ್ ವೆಂಡರ್ಸ್ ಗಳು ಬೇಕಾಗಿದ್ದಾರೆ;ಡ್ರೈವರ್ ಕಮ್ ಓನರ್ ವುಳ್ಳ ಟೂರಿಸ್ಟ್ ಕಾರ್‌ಗಳು ಟೂರಿಸ್ಟ್ ಕಂಪನಿಗೆ ಬೇಕಾಗಿದೆ. ಕಾರ್ ಮಾಡೆಲ್:2019ರ ನಂತರದ ಕಾರುಗಳು ಮಾತ್ರ ಬೇಕಾಗಿದೆ. Phadke Cars, Ulsoor. ಸಂಪರ್ಕಿಸಿ: 9372059191.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Out-Station
ಮಾರಾಟಕ್ಕಿದೆ
ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಮನಿಕಟ್ಟಿ ಗ್ರಾಮಕ್ಕೆ ಲೇಔಟ್ ಅವಶ್ಯಕತೆ ಇದ್ದ ಜಮೀನು 15 ಎಕರೆ 31 ಗುಂಟೆ ಮಾರುವದಿದೆ. ಚಕಬಂದಿ : ಪೂರ್ವಕ್ಕೆ: ಮನಿಕಟ್ಟಿ ಗ್ರಾಮ ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಸ್ತೆ ಪಶ್ಚಿಮಕ್ಕೆ: ಬೇರೆ ಸರ್ವೆ ನಂ. ಆ ಜಮೀನಿನಲ್ಲಿ 2 ಬೋರವೆಲ್ಲ 1 ಆರ್.ಸಿ.ಸಿ ಬಿಲ್ಡಿಂಗ್ ಇರುತ್ತದೆ.
94481 50895
96635 76757
94491 06767

Residential/ Commercial

Udupi
BASAVESHWARANAGAR KHB colony 18x26 North facing four floors House 1.15Cr 9611396977

ಪ್ರವಾಸ

Travel
ಅಗಸ್ಟ್ ಸಪ್ಟೆಂಬರನಲ್ಲಿ 7 ದಿನಗಳು ಕಾಶಿ,ಅಯೋಧ್ಯ. 12ದಿನಗಳು ಚಾರ್‌ಧಾಮ್. 13 ದಿನಗಳು ಅಷ್ಟಜ್ಯೋತಿರ್ಲಿಂಗ. ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಟ್ರಾವಿಸ್–ಅಭಿಷೇಕ್ ಮಿಂಚಿನ ಬ್ಯಾಟಿಂಗ್ • ನಟರಾಜನ್‌ಗೆ ನಾಲ್ಕು ವಿಕೆಟ್ • ಡೆಲ್ಲಿ ಕ್ಯಾಪಿಟಲ್ಸ್‌ಗೆ 67 ರನ್‌ಗಳ ಸೋಲು

ಮತ್ತೊಮ್ಮೆ ಅಬ್ಬರಿಸಿದ ಸನ್‌ರೈಸರ್ಸ್

ನವದೆಹಲಿ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್‌ಗಳು ಮತ್ತೊಮ್ಮೆ ಹರಿಸಿದ ರನ್ ಪ್ರವಾಹಕ್ಕೆ ಉತ್ತರವಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಆರಂಭದಲ್ಲಿ ಹೋರಾಟ ನೀಡುವಂತೆ ಕಂಡಿತು. ಆದರೆ, ಆತಿಥೇಯ ತಂಡದ ಓಟಕ್ಕೆ ಸನ್‌ರೈಸರ್ಸ್ ಬೌಲರ್‌ಗಳು ಕಡಿವಾಣ ಹಾಕಿ 67 ರನ್‌ಗಳ ಗೆಲುವು ತಂದುಕೊಟ್ಟರು.

ಶನಿವಾರ ರಾತ್ರಿ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್‌ನ ಪಂದ್ಯದಲ್ಲಿ ಆರಂಭಿಕ ಜೋಡಿ ಟ್ರಾವಿಸ್ ಹೆಡ್ (89; 32ಎ, 4X11, 6X6) ಮತ್ತು ಅಭಿಷೇಕ್ ಶರ್ಮಾ (46; 12ಎ, 4X2, 6X6) ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್ ರಂಗೇರಿತು. ಪವರ್ ಪ್ಲೇ ಓವರ್‌ಗಳಲ್ಲಿಯೇ ದಾಖಲೆಯ 125 ರನ್ ಕಲೆಹಾಕಿದರು. ಅವರ ಬಿರುಸಿನ ಆಟದ ಬಲದಿಂದ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 266 ರನ್ ಗಳಿಸಿತು.

ಈ ಬೃಹತ್ ಗುರಿಯನ್ನು ಬೆನ್ನತ್ತಿದ ಡೆಲ್ಲಿ ತಂಡಕ್ಕೆ ಎದುರಾಳಿ ಬೌಲರ್‌ಗಳು ಆರಂಭದಲ್ಲೇ ಆಘಾತ ನೀಡಿದರು. ಆರಂಭಿಕ ಓವರ್‌ನಲ್ಲಿ ಸತತ ನಾಲ್ಕು ಬೌಂಡರಿ ಬಾರಿಸಿದ ಪೃಥ್ವಿ ಶಾ (16; 5ಎ) ಮತ್ತು ಡೇವಿಡ್ ವಾರ್ನರ್ (1) ಬೇಗನೇ ನಿರ್ಗಮಿಸಿದರು. ನಂತರದಲ್ಲಿ ಜೇಕ್ ಫ್ರೇಸರ್ ಮೆಕ್‌ಗುರ್ಕ್ (65; 18ಎ, 4x5, 6x7) ಮತ್ತು (ಅಭಿಷೇಕ್ ಪೊರೆಲ್ (42; 22ಎ, 4x7, 6x1) ಸ್ಫೋಟಕ ಬ್ಯಾಟಿಂಗ್ ನಡೆಸಿದರು. ವಾಷಿಂಗ್ಟನ್ ಸುಂದರ್ ಹಾಕಿದ ಮೂರನೇ ಓವರ್‌ನಲ್ಲಿ ಮೆಕ್‌ಗುರ್ಕ್ ಮೂರು ಸಿಕ್ಸರ್ ಮತ್ತು ಮೂರು ಬೌಂಡರಿ ಸೇರಿದಂತೆ ಒಟ್ಟು 30 ರನ್ ಸೂರೆಗೈದರು. ಅವರು ಕೇವಲ 15 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಇದು ಐಪಿಎಲ್‌ನ ನಾಲ್ಕನೇ ವೇಗದ ಅರ್ಧಶತಕವಾಗಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡದ ಟ್ರಾವಿಸ್ ಹೆಡ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಐಪಿಎಲ್: ಪವರ್ ಪ್ಲೇನಲ್ಲಿ ದಾಖಲಾದ ಗರಿಷ್ಠ ರನ್

ತಂಡ	ರನ್	ಎದುರಾಳಿ	ವರ್ಷ
ಸನ್‌ರೈಸರ್ಸ್ ಹೈದರಾಬಾದ್	125/0	ಡೆಲ್ಲಿ ಕ್ಯಾಪಿಟಲ್ಸ್	2024
ಕೋಲ್ಕತ್ತ ನೈಟ್ ರೈಸರ್ಸ್	105/0	ಆರ್‌ಸಿಬಿ	2017
ಚೆನ್ನೈ ಸೂಪರ್ ಕಿಂಗ್ಸ್	100/2	ಪಂಜಾಬ್ ಕಿಂಗ್ಸ್	2014

ಮೂರನೇ ವಿಕೆಟ್ ಜೊತೆಯಾಟದಲ್ಲಿ ಮೆಕ್‌ಗುರ್ಕ್ ಮತ್ತು ಅಭಿಷೇಕ್ 30 ಎಸೆತಗಳಲ್ಲಿ 80 ರನ್ ಸೇರಿಸಿದರು. ಹೀಗಾಗಿ, ಪವರ್‌ಪ್ಲೇ ಅವಧಿಯಲ್ಲಿ 88 ರನ್‌ಗಳು ಹರಿದುಬಂದವು. ಅವರು ನಿರ್ಗಮಿಸಿದ ನಂತರ ನಾಯಕ ರಿಷಭ್ ಪಂತ್ (44; 35ಎ, 4x5, 6x1) ಕೊಂಚ ಹೋರಾಟ ತೋರಿದರು. ಉಳಿದಂತೆ ಟ್ರಿಸ್ಟನ್ ಸ್ಟಬ್ಸ್ (10), ಲಲಿತ್ ಯಾದವ್ (7) ನಿರಾಸೆ ಅನುಭವಿಸಿದರು. ತಂಡವು 19.1 ಓವರ್‌ಗಳಲ್ಲಿ 199 ರನ್‌ಗೆ ಕುಸಿಯಿತು. ಟಿ. ನಟರಾಜನ್ 4 ವಿಕೆಟ್ ಪಡೆದರೆ, ಮಯಂಕ್ ಮಾರ್ಕಂಡೆ ಮತ್ತು ನಿತೀಶ್ ರೆಡ್ಡಿ ತಲಾ ಎರಡು ವಿಕೆಟ್ ಪಡೆದರು.

ಈ ಗೆಲುವಿನೊಂದಿಗೆ ಹೈದರಾಬಾದ್ ತಂಡವು 10 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಡೆಲ್ಲಿ ತಂಡವು 6ರಿಂದ 7ನೇ ಸ್ಥಾನಕ್ಕೆ ಕುಸಿಯಿತು.

ಇದಕ್ಕೂ ಮೊದಲು ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆದರೆ, ಅವರ ನಿರ್ಧಾರ ತಪ್ಪು ಎಂಬುದನ್ನು ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ತೋರಿಸಿಕೊಟ್ಟರು. ಮೊದಲ 3 ಓವರ್‌ಗಳಲ್ಲಿಯೇ ತಂಡದ ಮೊತ್ತವು 62 ರನ್‌ಗಳಾಯಿತು. ಅದರಲ್ಲಿ ಹೆಡ್ 16 ಎಸೆತಗಳಲ್ಲಿ 54 ರನ್ ಗಳಿಸಿದರು. ಅದರಲ್ಲಿ ಏಳು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಬಾರಿಸಿದರು. ಅಭಿಷೇಕ್ 2 ಎಸೆತಗಳಲ್ಲಿ 8 ರನ್ ಗಳಿಸಿದ್ದರು.

ಅವರ ಆಟದ ರಭಸಕ್ಕೆ ಎಡಗೈ ವೇಗಿ ಖಲೀಲ್ ಅಹಮದ್, ಲಲಿತ್ ಯಾದವ್ ಮತ್ತು ಹೆನ್ರಿಚ್ ನಾಕಿಯಾ ಕನಲಿ ಹೋದರು. ನಂತರದ ಮೂರು ಓವರ್‌ಗಳಲ್ಲಿ ಹೆಡ್ ಜೊತೆಗೆ ಅಭಿಷೇಕ್ ಕೂಡ ಅಬ್ಬರಿಸಿದರು. ಐದು ಓವರ್ ಗಳಲ್ಲಿಯೇ ತಂಡವು ಶತಕದ ಗಡಿ ದಾಟಿತು.

ಮುಂಬೈ ಎದುರಿನ ಪಂದ್ಯದಲ್ಲಿ 16 ಎಸೆತಗಳಲ್ಲಿ ಅರ್ಧಶತಕ ಹೊಡೆದಿದ್ದ ಅಭಿಷೇಕ್ ಇಲ್ಲಿ 12 ಎಸೆತಗಳಲ್ಲಿ 46 ರನ್ ಗಳಿಸಿದರು. ಮುಂದಡಿಯಿಟ್ಟು ಸಿಕ್ಸರ್‌ಗಳನ್ನು ಸಿಡಿಸಿದರು. ಇವರಿಬ್ಬರ ಆಟದ ಭರಾಟೆ ನೋಡಿದರೆ ತಂಡವು 300 ರನ್‌ಗಳ ಮೊತ್ತದ ಗಡಿ ದಾಟಿ ದಾಖಲೆ ಬರೆಯುವ ಸಾಧ್ಯತೆ ಇತ್ತು.

ಆದರೆ, ಡೆಲ್ಲಿ ತಂಡದ ಎಡಗೈ ಸ್ಪಿನ್ ಜೋಡಿ ಕುಲದೀಪ್ ಯಾದವ್ (55ಕ್ಕೆ4) ಮತ್ತು ಅಕ್ಷರ್ ಪಟೇಲ್ (29ಕ್ಕೆ1) ಸನ್‌ರೈಸರ್ಸ್ ಓಟಕ್ಕೆ ತಡೆಯೊಡ್ಡಿದರು. ಟೂರ್ನಿಯಲ್ಲಿ ಎರಡನೇ ಶತಕ ಗಳಿಸುವ ಹಾದಿಯಲ್ಲಿದ್ದ ಹೆಡ್ ಅವರ ಆಟಕ್ಕೆ ಕುಲದೀಪ್ ತಡೆಯೊಡ್ಡಿದರು. ಟ್ರಿಸ್ಟನ್ ಸ್ಟಬ್ಸ್ ಪಡೆದ ಕ್ಯಾಚ್‌ಗೆ ಹೆಡ್ ನಿರ್ಗಮಿಸಿದರು.

ಕೊನೆಯ ಹಂತದಲ್ಲಿ ರನ್ ಗಳಿಸುವ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಶಾಬಾಜ್ ಅಹಮದ್ (ಔಟಾಗದೇ 59; 29ಎ, 4X2, 6X5) ತಂಡದ ಮೊತ್ತ ಹೆಚ್ಚಿಸಿದರು.

ಈ ಬಾರಿಯ ಟೂರ್ನಿಯಲ್ಲಿ ಸನ್‌ರೈಸರ್ಸ್ ತಂಡವು ಮೂರನೇ ಸಲ 250 ರನ್‌ಗಳಿಗಿಂತಲೂ ಹೆಚ್ಚಿನ ಮೊತ್ತ ಕಲೆಹಾಕಿತು. ಈ ಮೊದಲು ತಂಡವು ಆರ್‌ಸಿಬಿ ಎದುರು 3ಕ್ಕೆ287, ಮುಂಬೈ ಎದುರು 3ಕ್ಕೆ277 ರನ್ ಗಳಿಸಿ ದಾಖಲೆ ಬರೆದಿತ್ತು.

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 7ಕ್ಕೆ266 (20 ಓವರುಗಳಲ್ಲಿ)
ಹೆಡ್ ಸಿ ಸ್ಟಬ್ಸ್ ಬಿ ಕುಲದೀಪ್ 89 (32ಎ, 4x11, 6x6)
ಅಭಿಷೇಕ್ ಸಿ ಅಕ್ಷರ್ ಬಿ ಕುಲದೀಪ್ 46 (12ಎ, 4x2, 6x6)
ಮರ್ಕರಂ ಸಿ ಅಕ್ಷರ್ ಬಿ ಕುಲದೀಪ್ 1 (3ಎ)
ಕ್ಲಾಸೆನ್ ಬಿ ಅಕ್ಷರ್ 15 (8ಎ, 6x2)
ನಿತೀಶ್ ಸಿ ವಾರ್ನರ್ ಬಿ ಕುಲದೀಪ್ 37 (27ಎ, 4x2, 6x2)
ಶಾಬಾಜ್ ಔಟಾಗದೇ 59 (29ಎ, 4x2, 6x5)
ಸಮದ್ ಸಿ ನಾಕಿಯಾ ಬಿ ಸಮದ್ 13 (8ಎ, 4x1, 6x1)
ಕಮಿನ್ಸ್ ರನ್‌ಔಟ್ (ಸ್ಟಬ್ಸ್/ ಮುಕೇಶ್) 1 (1)
ಸುಂದರ್ ಔಟಾಗದೇ 0
ಇತರೆ: 5 (ಬೈ 1, ಲೆಗ್‌ಬೈ 1, ವೈಡ್ 3)
ವಿಕೆಟ್ ಪತನ: 1–131 (ಅಭಿಷೇಕ್ ಶರ್ಮಾ, 6.2), 2–133 (ಏಡನ್ ಮರ್ಕರಂ, 6.6), 3–154 (ಟ್ರಾವಿಸ್ ಹೆಡ್, 8.6), 4–154 (ಹಿನ್ರಿಚ್ ಕ್ಲಾಸೆನ್, 9.1), 5–221 (ನಿತೀಶ್ ಕುಮಾರ್ ರೆಡ್ಡಿ, 16.6), 6–250 (ಅಬ್ದುಲ್ ಸಮದ್, 19.1), 7–256 (ಪ್ಯಾಟ್ ಕಮಿನ್ಸ್, 19.4
ಬೌಲಿಂಗ್: ಖಲೀಲ್ ಅಹ್ಮದ್ 3–0–51–0; ಲಲಿತ್ ಯಾದವ್ 2–0–41–0; ಆ್ಯನ್ರಿಚ್ ನಾಕಿಯಾ 3–0–31–0; ಕುಲದೀಪ್ ಯಾದವ್ 4–0–55–4; ಮುಕೇಶ್ ಕುಮಾರ್ 4–0–57–1; ಅಕ್ಷರ್ ಪಟೇಲ್ 4–0–29–1.

ಡೆಲ್ಲಿ ಕ್ಯಾಪಿಟಲ್ಸ್ 199 (19.1 ಓವರ್‌ಗಳಲ್ಲಿ)
ಪೃಥ್ವಿ ಸಿ ಸಮದ್ ಬಿ ಸುಂದರ್ 16 (5ಎ, 4x4)
ವಾರ್ನರ್ ಸಿ ಕಮಿನ್ಸ್ ಬಿ ಕುಮಾರ್ 1 (3ಎ)
ಮೆಕ್‌ಗುರ್ಕ್ ಸಿ ಕ್ಲಾಸೆನ್ ಬಿ ಮಾರ್ಕಂಡೆ 65 (18ಎ, 4x5, 6x7)
ಪೊರೆಲ್ ಸ್ಟಂ ಕ್ಲಾಸೆನ್ ಬಿ ಮಾರ್ಕಂಡೆ 42 (22ಎ, 4x7, 6x1)
ಸ್ಟಬ್ಸ್ ಸಿ ಶಾಬಾಜ್ ಬಿ ನಿತೀಶ್ ರೆಡ್ಡಿ 10 (11ಎ)
ರಿಷಬ್ ಪಂತ್ ಸಿ ನಟರಾಜನ್ ಬಿ ನಿತೇಶ್ ರೆಡ್ಡಿ 44 (35ಎ, 4x5, 6x1)
ಲಲಿತ್ ಬಿ ನಟರಾಜನ್ 7 (8ಎ, 4x1)
ಅಕ್ಷರ್ ಸಿ ಕಮಿನ್ಸ್ ಬಿ ನಟರಾಜನ್ 6 (8ಎ)'
ಆ್ಯನ್ರಿಚ್ ಬಿ ನಟರಾಜನ್ 0 (2ಎ)
ಕುಲದೀಪ್ ಎಲ್‌ಬಿಡಬ್ಲ್ಯು ಬಿ ನಟರಾಜನ್ 0 (1ಎ)
ಮುಕೇಶ್ ಔಟಾಗದೇ 0 (2ಎ)
ಇತರೆ: 8 (ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–16 (ಪೃಥ್ವಿ ಶಾ, 0.5), 2–25 (ಡೇವಿಡ್ ವಾರ್ನರ್, 1.6), 3–109 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 6.6), 4–135 (ಅಭಿಷೇಕ್ ಪೊರೆಲ್, 8.4), 5–154 (ಟ್ರಿಸ್ಟನ್ ಸ್ಟಬ್ಸ್, 12.2), 6–166 (ಲಲಿತ್ ಯಾದವ್, 14.6), 7-199 (ಅಕ್ಷರ್ ಪಟೇಲ್; 18.1), 8-199 (ಆ್ಯನ್ರಿಚ್ ನಾಕಿಯಾ; 18.3), 9-199 (ಕುಲದೀಪ್ ಯಾದವ್; 18.4), 10-199 (ರಿಷಭ್ ಪಂತ್; 19.1)
ಬೌಲಿಂಗ್: ವಾಷಿಂಗ್ಟನ್ ಸುಂದರ್ 2–0–46–1; ಭುವನೇಶ್ವರ್ ಕುಮಾರ್ 4–0–33–1; ಪ್ಯಾಟ್ ಕಮಿನ್ಸ್ 4–0–35–0; ಟಿ.ನಟರಾಜನ್ 4–1–19–4; ಮಯಂಕ್ ಮಾರ್ಕಂಡೆ 2–0–26–2; ಶಾಬಾಜ್ ಅಹ್ಮದ್ 1–0–22–0; ನಿತೀಶ್ ಕುಮಾರ್ ರೆಡ್ಡಿ 2.1–0–17–2.
ಪಂದ್ಯದ ಆಟಗಾರ: ಟ್ರಾವಿಸ್ ಹೆಡ್

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 67 ರನ್ ಜಯ

ಗಿಲ್ ಬಳಗಕ್ಕೆ ಇಂದು ಪಂಜಾಬ್ ಸವಾಲು

ಮುಲ್ಲನಪುರ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಎರಡನೇ ಹಂತ ಈಗ ಆರಂಭವಾಗಿದೆ.

ಅಂಕಪಟ್ಟಿಯಲ್ಲಿ ಕೆಳಗಿನ ಸ್ಥಾನಗಳಲ್ಲಿರುವ ತಂಡಗಳಿಗೆ ಪ್ಲೇಆಫ್ ಪ್ರವೇಶಿಸಲು ಕಠಿಣ ಸವಾಲು ಇದೆ. ಅದರಲ್ಲಿ ಕ್ರಮವಾಗಿ ಎಂಟು ಹಾಗೂ ಒಂಬತ್ತನೇ ಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳೂ ಮುಂದೆ ಆಡುವ ಪ್ರತಿಯೊಂದು ಪಂದ್ಯವನ್ನೂ ಗೆಲ್ಲುವ ಒತ್ತಡದಲ್ಲಿವೆ.

ಭಾನುವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಲಿವೆ. ಗುಜರಾತ್ ತಂಡವು ತನ್ನ ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸೋತಿತ್ತು. ಉತ್ತಮ ಬ್ಯಾಟಿಂಗ್ ಪಡೆ ಇದ್ದರೂ ಕೇವಲ 89 ರನ್‌ಗಳ ಮೊತ್ತ ಪೇರಿಸಿತ್ತು. ಅದರೊಂದಿಗೆ ತಂಡವು ಆಡಿದ ಕಳೆದ ನಾಲ್ಕು ಪಂದ್ಯಗಳಲ್ಲಿ ಮೂರರಲ್ಲಿ ಸೋತಂತಾಗಿತ್ತು. ಇದೀಗ ಜಯದ ಹಾದಿಗೆ ಮರಳುವ ಛಲದಲ್ಲಿದೆ.

ಶುಭಮನ್ ಗಿಲ್ ನಾಯಕತ್ವದ ಗುಜರಾತ್ ತಂಡದ ಬ್ಯಾಟರ್‌ಗಳಾದ ವೃದ್ಧಿಮಾನ್ ಸಹಾ, ಅಭಿನವ್ ಮನೋಹರ್, ಡೇವಿಡ್ ಮಿಲ್ಲರ್ ಹಾಗೂ ಶಾರೂಖ್ ಖಾನ್, ರಾಹುಲ್ ತೆವಾಟಿಯಾ ಹಾಗೂ ಸಾಯಿ ಸುದರ್ಶನ್ ಅವರು ತಮ್ಮ ನೈಜ ಲಯಕ್ಕೆ ಮರಳಬೇಕಿದೆ. ಪಂಜಾಬ್ ತಂಡದ ಬೌಲಿಂಗ್ ಪಡೆಯು ಬಲಿಷ್ಠವಾಗಿದೆ. ಹಂಗಾಮಿ ನಾಯಕ ಸ್ಯಾಮ್ ಕರನ್, ಕಗಿಸೊ ರಬಾಡ, ರಾಹುಲ್ ಚಾಹರ್, ಹರ್ಷಲ್ ಪಟೇಲ್ ಮತ್ತು ಹರಪ್ರೀತ್ ಬ್ರಾರ್ ಅವರು ಕಠಿಣ ಸವಾಲೊಡ್ಡಬಲ್ಲ ಬೌಲರ್‌ಗಳು.

ಗುಜರಾತ್ ತಂಡದಲ್ಲಿ ರಶೀದ್ ಖಾನ್ ಅವರೊಬ್ಬರೇ ನಿರಂತರವಾಗಿ ಆಲ್‌ರೌಂಡ್ ಆಟ ಆಡುತ್ತಿದ್ದಾರೆ. ಉಳಿದವರಿಂದ ಸ್ಥಿರ ಪ್ರದರ್ಶನ ಮೂಡಿ ಬರುತ್ತಿಲ್ಲ. ಬೌಲರ್‌ಗಳು ಕಳೆದ ಪಂದ್ಯದಲ್ಲಿ ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದ್ದರು. ಮೋಹಿತ್ ಶರ್ಮಾ, ಸ್ಪೆನ್ಸರ್ ಜಾನ್ಸನ್, ಉಮೇಶ್ ಯಾದವ್ ಅವರು ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ರಶೀದ್ ಖಾನ್

ಆದರೆ ಪಂಜಾಬ್ ತಂಡದ ಬ್ಯಾಟಿಂಗ್ ತುಸು ದುರ್ಬಲವಾಗಿದೆ. ಆರಂಭಿಕ ಬ್ಯಾಟರ್‌ಗಳು ಮಿಂಚುತ್ತಿಲ್ಲ. ಗಾಯಗೊಂಡಿರುವ ಶಿಖರ್ ಧವನ್ ಮರಳುವ ಬಗ್ಗೆ ಖಚಿತವಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಆಶುತೋಷ್ ಶರ್ಮಾ ಮತ್ತು ಶಶಾಂಕ್ ಸಿಂಗ್ ಅವರು ಭರವಸೆ ಮೂಡಿಸಿರುವ ಆಟಗಾರರು. ಅವರು ಕೆಲವು ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದರು. ಆದರೂ ಸತತ ಮೂರು ಪಂದ್ಯಗಳಲ್ಲಿ ಸೋತಿರುವ ತಂಡವು ಜಯದ ಹಾದಿಗೆ ಮರಳಲು ಎಲ್ಲ ವಿಭಾಗಗಳಲ್ಲಿಯೂ ಮಿಂಚಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	7	6	1	12	0.677
ಸನ್‌ರೈಸರ್ಸ್ ಹೈದರಾಬಾದ್	7	5	2	10	0.914
ಕೋಲ್ಕತ್ತ ನೈಟ್ ರೈಡರ್ಸ್	6	4	2	8	1.399
ಚೆನ್ನೈ ಸೂಪರ್ ಕಿಂಗ್ಸ್	7	4	3	8	0.529
ಲಖನೌ ಸೂಪರ್ ಜೈಂಟ್ಸ್	7	4	3	8	0.123
ಮುಂಬೈ ಇಂಡಿಯನ್ಸ್	7	3	4	6	-0.133
ಡೆಲ್ಲಿ ಕ್ಯಾಪಿಟಲ್ಸ್	8	3	5	6	-0.477
ಗುಜರಾತ್ ಟೈಟನ್ಸ್	7	3	4	6	-1.303
ಪಂಜಾಬ್ ಕಿಂಗ್ಸ್	7	2	5	4	-0.251
ಆರ್‌ಸಿಬಿ (ಬೆಂಗಳೂರು)	7	1	6	2	-1.185

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (361 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (13 ವಿಕೆಟ್)

ಈಡನ್ ಗಾರ್ಡನ್‌ನಲ್ಲಿ ಡುಪ್ಲೆಸಿ ಪಡೆಗೆ ಕೋಲ್ಕತ್ತ ನೈಟ್‌ರೈಡರ್ಸ್ ಸವಾಲು

ಸೋಲುಗಳ ಸರಪಳಿ ಕಳಚುವುದೇ ಆರ್‌ಸಿಬಿ?

ಪಂದ್ಯ ಆರಂಭ: ಮಧ್ಯಾಹ್ನ 3.30
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ನೆಟ್ ಅಭ್ಯಾಸದಲ್ಲಿ ಸುನಿಲ್ ನಾರಾಯಣ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ದುರ್ಗಮ ಹಾದಿಗೆ ಬಂದು ನಿಂತಿದೆ.

ಇದುವರೆಗೆ ಆಡಿರುವ ಏಳು ಪಂದ್ಯಗಳಲ್ಲಿ ಅರ್ಧಡಜನ್ ಸೋಲುಂಡಿರುವ ಫಫ್ ಡುಪ್ಲೆಸಿ ಬಳಗಕ್ಕೆ ಪ್ಲೇಆಫ್ ಹಾದಿ ಕಠಿಣವಾಗಿದೆ. ಆದರೂ ಉಳಿದಿರುವ ಏಳು ಪಂದ್ಯಗಳಲ್ಲಿಯೂ ಗೆದ್ದರೆ ಒಂದು ಸಣ್ಣ ಅವಕಾಶ ಸೃಷ್ಟಿಯಾಗಬಹುದು ಎಂಬಂತಹ ಲೆಕ್ಕಾಚಾರವೂ ಇದೆ. ಆದರೆ ಈ ಹಾದಿಯಲ್ಲಿ ಒಂದೇ ಒಂದು ಸೋಲಿನಿಂದ ಕೂಡ ಆರ್‌ಸಿಬಿ ಟೂರ್ನಿಯಿಂದ ಹೊರಬೀಳುತ್ತದೆ.

ಐದು ದಿನಗಳ ವಿಶ್ರಾಂತಿಯ ನಂತರ ಕಣಕ್ಕಿಳಿಯುತ್ತಿರುವ ಬೆಂಗಳೂರು ತಂಡಕ್ಕೆ ಟೂರ್ನಿಯ ದ್ವಿತೀಯಾರ್ಧದ ಮೊದಲ ಸವಾಲು ಭಾನುವಾರ ಎದುರಾಗಲಿದೆ. ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಫಫ್ ಬಳಗವು ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಎದುರಿಸಲಿದೆ. ಬೆಂಗಳೂರು ಬಳಗಕ್ಕೆ ಸೇಡು ತೀರಿಸಿಕೊಳ್ಳುವ ಅವಕಾಶವಿದೆ. ಎಂಟು ಅಂಕ ಗಳಿಸಿರುವ ಕೋಲ್ಕತ್ತ ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಆರ್‌ಸಿಬಿ ಕೊನೆ ಸ್ಥಾನದಲ್ಲಿದೆ.

ತಂಡದ ಈ ಹೀನಾಯ ಸ್ಥಿತಿಗೆ ಪ್ರಮುಖವಾಗಿ ಕಾರಣವಾಗಿದ್ದು ದುರ್ಬಲ ಬೌಲಿಂಗ್ ಪಡೆ. ಅನುಭವಿ ಮೊಹಮ್ಮದ್ ಸಿರಾಜ್, ರೀಸ್ ಟಾಪ್ಲಿ, ವೈಶಾಖ ವಿಜಯಕುಮಾರ್, ಯಶ್ ದಯಾಳ್, ಅಲ್ಜರಿ ಜೋಸೆಫ್, ಲಾಕಿ ಫರ್ಗ್ಯುಸನ್, ಮಯಂಕ್ ದಾಗರ್ ಅವರೆಲ್ಲರೂ ದುಬಾರಿಯಾಗಿದ್ದಾರೆ.

ವಿರಾಟ್ ಕೊಹ್ಲಿ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ಬೆಂಗಳೂರು ಎದುರು 287 ರನ್‌ಗಳ ದಾಖಲೆಯ ಮೊತ್ತ ಪೇರಿಸಿತ್ತು. ಆ ಪಂದ್ಯದಲ್ಲಿ ವಿರಾಟ್, ಫಫ್ ಮತ್ತು ದಿನೇಶ್ ಮಿಂಚಿದ್ದರಿಂದ ಬೆಂಗಳೂರು ತಂಡವು ಕಡಿಮೆ ಅಂತರದಿಂದ ಸೋತಿತ್ತು. ಈ ಮೂವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳು ಭರವಸೆಯ ಆಟವಾಡಿಲ್ಲ. ಅದರಲ್ಲೂ ಗ್ಲೆನ್ ಮ್ಯಾಕ್ಸ್‌ವೆಲ್ ಸತತ ವೈಫಲ್ಯಗಳ ನಂತರ ವಿರಾಮ ಪಡೆದಿದ್ದಾರೆ. ಯುವ ಆಟಗಾರರಾದ ರಜತ್ ಪಾಟೀದಾರ್,ಅನುಜ್ ರಾವತ್, ವಿಲ್ ಜ್ಯಾಕ್ಸ್ ತಮಗೆ ಸಿಕ್ಕ ಅವಕಾಶ ಬಳಸಿಕೊಂಡಿಲ್ಲ. ತಂಡದ ಆಟದಲ್ಲಿ ಸುಧಾರಣೆ ಕಾಣದಿದ್ದರೆ ಗೆಲುವಿನ ಫಲಿತಾಂಶ ಸಿಗುವುದು ಕಡುಕಷ್ಟ.

